ವಿಜಯನಗರ ಅಧ್ಯಯನ

ಸಂಪುಟ 4

ಹಂಪಿ ಉತ್ಸವ 1998ರಲ್ಲಿ ಮಂಡಿಸಿದ ಪ್ರಬಂಧಗಳು

ಸಂಪಾದಕರು

ಪ್ರೊ. ಎಂ.ವಿ. ಕೃಷ್ಣಪ್ಪ

ಚನ್ನಬಸಪ್ಪ ಎಸ್. ಪಾಟೀಲ



1999

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

ವಿಜಯನಗರ ಅಧ್ಯಯನ

ಸಂಪುಟ 4

ಹಂಪಿ ಉತ್ಸವ 1998ರಲ್ಲಿ ಮಂಡಿಸಿದ ಪ್ರಬಂಧಗಳು

ಕರ್ನಾಟಕ ಸರ್ಕಾರ

ವಿಜಯನಗರ ಅಧ್ಯಯನ

ಸಂಪುಟ 4

ಹಂಪಿ ಉತ್ಸವ 1998ರಲ್ಲಿ ಮಂಡಿಸಿದ ಪ್ರಬಂಧಗಳು

ಸಂಪಾದಕರು

ಪ್ರೊ. ಎಂ.ವಿ. ಕೃಷ್ಣಪ್ಪ

ಚನ್ನಬಸಪ್ಪ ಎಸ್. ಪಾಟೀಲ

1999

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

ಪ್ರಥಮ ಮುದ್ರಣ : 500 ಪ್ರತಿಗಳು
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು
© 1999
ಬೆಲೆ : ರೂ. 105/-

ಡಿ.ಟಿ.ಪಿ. ಅಕ್ಷರ ಜೋಡಣೆ : ಕಾಂಪ್ಟೆಕ್ ಕಂಪ್ಯೂಟರ್ ಸಿಸ್ಟಮ್ಸ್, ಮೈಸೂರು
ಮುದ್ರಣ : ಅಕ್ಷರ ಮುದ್ರಿಕ, ಲಕ್ಷ್ಮಿವಿಲಾಸ ರಸ್ತೆ, ಮೈಸೂರು - 24

ಪ್ರಸ್ತಾವನೆ

ಉತ್ತರದಲ್ಲಿ ಕೃಷ್ಣಾನದಿಯಿಂದ ಪೂರ್ವ, ದಕ್ಷಿಣ, ಪಶ್ಚಿಮ ದಿಕ್ಕುಗಳಲ್ಲಿ ಸಮುದ್ರದವರೆಗೆ ವ್ಯಾಪಿಸಿದ್ದ ಸಾಮ್ರಾಜ್ಯದ ರಾಜಧಾನಿಯಾಗಿದ್ದ ಹಂಪಿ-ವಿಜಯನಗರ ಪಟ್ಟಣವು ಸುಮಾರು ಎರಡು ನೂರು ವರ್ಷಗಳವರೆಗೆ ಪ್ರಮುಖ ಸಾಂಸ್ಕೃತಿಕ ಕೇಂದ್ರವಾಗಿ ದೇಶ ವಿದೇಶಗಳ ಪ್ರವಾಸಿಗರನ್ನು ಆಕರ್ಷಿಸುತ್ತಿತ್ತು. ಈ ಸುಪ್ರಸಿದ್ಧ ಪಟ್ಟಣದ ಅವಶೇಷಗಳು ವಿಶ್ವ ಪರಂಪರೆಯ ಪಟ್ಟಿಯಲ್ಲಿ ಸೇರಿ ಇಂದಿಗೂ ದೇಶ ವಿದೇಶಗಳ ವಿದ್ವಾಂಸರನ್ನು, ಸಂಶೋಧಕರನ್ನು, ಆಸಕ್ತರನ್ನು ಮತ್ತು ಪ್ರವಾಸಿಗರನ್ನು ಆಕರ್ಷಿಸುತ್ತಿವೆ.

ಇತಿಹಾಸದ ಗರ್ಭದಲ್ಲಿ ಅಡಗಿಹೋಗಿರುವ ವಿಜಯನಗರ ಪಟ್ಟಣದ ಗತವೈಭವವು ಮರುಕಣಿಸುವಂತೆ ಮಾಡಲು ಕರ್ನಾಟಕ ಸರ್ಕಾರವು ಹಂಪಿ ಪುನರುತ್ಥಾನ ಯೋಜನೆಯನ್ನು ಪ್ರಾರಂಭಿಸಿ, ವ್ಯಾಪಕವಾದ ಉತ್ಖನನ, ಸಂರಕ್ಷಣೆ ಮತ್ತು ಸಂಶೋಧನೆಗಳನ್ನು ಕೈಗೊಂಡಿದೆ. ಹಂಪಿಯ ಸ್ಮಾರಕಗಳ ಪುನರುಜ್ಜೀವನವಾಗುತ್ತಿರುವಂತೆ ಸಾಂಸ್ಕೃತಿಕ ಪುನರುಜ್ಜೀವನಗೊಳಿಸುವುದಕ್ಕಾಗಿ ಪ್ರತಿ ವರ್ಷ ನವೆಂಬರ್ 3, 4, ಮತ್ತು 5ರಂದು ಮೂರು ದಿನಗಳ ಹಂಪಿ ಉತ್ಸವವನ್ನು ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯವು ವಿಜಯನಗರ ಇತಿಹಾಸ ಮತ್ತು ಸಂಸ್ಕೃತಿಯ ಬಗ್ಗೆ ವಿಚಾರ ಸಂಕಿರಣವನ್ನು ನಡೆಸಿ ಅಲ್ಲಿ ಮಂಡಿತವಾದ ಪ್ರಬಂಧಗಳನ್ನು ವಿಜಯನಗರ ಅಧ್ಯಯನ ಸಂಪುಟಗಳಲ್ಲಿ ಪ್ರಕಟಿಸುತ್ತ ಬಂದಿದೆ. ಕಳೆದ ವರ್ಷ ಅಂದರೆ 1998ರಲ್ಲಿ ಮಂಡಿಸಿದ 19 ಪ್ರಬಂಧಗಳನ್ನು ಪ್ರಸ್ತುತ "ವಿಜಯನಗರ ಅಧ್ಯಯನ: ಸಂಪುಟ 4"ರಲ್ಲಿ ಪ್ರಕಟಿಸಲಾಗಿದೆ. ಈ ಸಂಪುಟವು ವಿದ್ವಾಂಸರಿಗೆ, ವಿದ್ಯಾರ್ಥಿಗಳಿಗೆ ಮತ್ತು ಆಸಕ್ತರಿಗೆ ಉಪಯುಕ್ತ ಮಾಹಿತಿ ನೀಡುವುದೆಂದು ಆಶಿಸುತ್ತೇನೆ.

ಮೈಸೂರು
20-10-1999

ಪ್ರೊ. ಎಂ.ವಿ. ಕೃಷ್ಣಪ್ಪ
ನಿರ್ದೇಶಕರು
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ
ನಿರ್ದೇಶನಾಲಯ

ಪ್ರಬಂಧ ಮಂಡಿಸಿದವರು

1. ಡಾ. ಚನ್ನಬಸಪ್ಪ ಎಸ್. ಪಾಟೀಲ
ಉಪ ನಿರ್ದೇಶಕರು
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ
ಅರಮನೆ ಆವರಣ
ಮೈಸೂರು-570 001

2. ಡಾ. ಕೆ.ಎಂ. ಸುರೇಶ್
ಮುಖ್ಯಸ್ಥರು/ನಿರ್ದೇಶಕರು
ವಸ್ತು ಸಂಗ್ರಹಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ಕಮಲಾಪುರ-583 221
ಬಳ್ಳಾರಿ ಜಿಲ್ಲೆ

3. ಶ್ರೀ ಬಾಲಸುಬ್ರಹ್ಮಣ್ಯ
ನಿರ್ದೇಶಕರು, ಅಧ್ಯಯನಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ಕಮಲಾಪುರ-583 221
ಬಳ್ಳಾರಿ ಜಿಲ್ಲೆ

4. ಶ್ರೀಮತಿ ವಿನೋದಾ ಪಾಟೀಲ
161, ಹತ್ತನೇ ತಿರುವು,
ಮೊದಲನೇ ಮುಖ್ಯರಸ್ತೆ
ಅರವಿಂದ ನಗರ
ಮೈಸೂರು-570 023

5. ಶ್ರೀ ಹೆಚ್.ಟಿ. ತಳವಾರ್
ಉಪ ನಿರ್ದೇಶಕರು
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ
ಕಮಲಾಪುರ-583 221
ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ

6. ಶ್ರೀ ಶರಣಬಸಪ್ಪ ಕೋಲ್ಕಾರ
ಸಂಶೋಧನಾ ವಿದ್ಯಾರ್ಥಿ
ಪುರಾತತ್ವ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ಕಮಲಾಪುರ-583 221
ಬಳ್ಳಾರಿ ಜಿಲ್ಲೆ

7. ಶ್ರೀ ಸಿ.ಟಿ.ಎಂ. ಕೊಟ್ರಯ್ಯ
340, ಎಂ ಬ್ಲಾಕ್, ಕುವೆಂಪುನಗರ
ಮೈಸೂರು-570 023

8. ಶ್ರೀ ಟಿ.ಎಂ. ಮಂಜುನಾಥಯ್ಯ
ಪುರಾತತ್ವ ಸಹಾಯಕರು
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ
ಕಮಲಾಪುರ-583 221, ಬಳ್ಳಾರಿ ಜಿಲ್ಲೆ

9. ಶ್ರೀಮತಿ ಸುಜಾತಾ ಪಾಟೀಲ್
ಆಶ್ರಯ ಶ್ರೀ ಹಂಪನಗೌಡ ಬಾದರ್ಲಿ
ಶಾಸಕರು, ಸಿಂಧನೂರು
ರಾಯಚೂರು ಜಿಲ್ಲೆ

10. ಡಾ. ಶ್ರೀನಿವಾಸ ವಿ. ಪಾಡಿಗಾರ
ಪ್ರವಾಚಕರು
ಪ್ರಾಚೀನ ಭಾರತೀಯ ಇತಿಹಾಸ ಮತ್ತು
ಶಾಸನಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ
ಪಾವಟೆನಗರ, ಧಾರವಾಡ-580 003

11. ಶ್ರೀ ಮಾಡಲಗೇರಿ ಕೊಟ್ರೇಶ್
ಯೋಜನಾ ಸಹಾಯಕರು
ವಸ್ತು ಸಂಗ್ರಹಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ಕಮಲಾಪುರ-583 221
ಬಳ್ಳಾರಿ ಜಿಲ್ಲೆ

12. ಶ್ರೀ ಜಯದೇವಪ್ಪ ಜೈನಕೇರಿ
ನಂ.87, ಶಾಂತಲಾ
ಕುವೆಂಪು ರಸ್ತೆ, ಜಿಲ್ಲಾ ಪಂಚಾಯತ್ ಎದುರು
ಶಿವಮೊಗ್ಗ-577 201

13. ಡಾ. ಕೆ. ವೆಂಕಟೇಶ್
ಕ್ಯೂರೇಟರ್
ಕೆಳದಿ ವಸ್ತು ಸಂಗ್ರಹಾಲಯ
ಕೆಳದಿ-577 401, ಸಾಗರ ತಾಲೂಕ, ಶಿವಮೊಗ್ಗ ಜಿಲ್ಲೆ

14. ಡಾ. ಆರ್. ಗೋಪಾಲ್
ಉಪ ನಿರ್ದೇಶಕರು
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ
ಅರಮನೆ ಆವರಣ, ಮೈಸೂರು-570 001

15. ಶ್ರೀ ಕೆಳದಿ ಗುಂಡಾಜೋಯಿಸ್
ಕೆಳದಿ ವಸ್ತು ಸಂಗ್ರಹಾಲಯ ಮತ್ತು ಸಂಶೋಧನಾ ಕೇಂದ್ರ
ಕೆಳದಿ-577 401
ಸಾಗರ ತಾಲೂಕ, ಶಿವಮೊಗ್ಗ ಜಿಲ್ಲೆ

16. ಡಾ. ಬಸವರಾಜ ಮಲಶೆಟ್ಟಿ
ವಿಜಯನಗರ ಕಾಲೇಜ್
ಹೊಸಪೇಟೆ-583 201
ಬಳ್ಳಾರಿ ಜಿಲ್ಲೆ

17. ಡಾ. ದೇವರಕೊಂಡಾರೆಡ್ಡಿ
ಪ್ರವಾಚಕರು, ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ಕಮಲಾಪುರ-583 221
ಬಳ್ಳಾರಿ ಜಿಲ್ಲೆ

18. ಡಾ. ಮೃತ್ಯುಂಜಯ ರುಮಾಲೆ
ವಿಜಯನಗರ ಕಾಲೇಜ್
ಹೊಸಪೇಟೆ-583 201
ಬಳ್ಳಾರಿ ಜಿಲ್ಲೆ

19. ಶ್ರೀ ಸೀತಾರಾಮ ಜಾಗೀರ್‌ದಾರ್
'ಕಲ್ಪ', 106/ಬಿ, 3ನೇ ಮುಖ್ಯರಸ್ತೆ
ಸರಸ್ವತಿಪುರಂ, ಮೈಸೂರು-570 009

ಪರಿವಿಡಿ

ಸಂಕ್ಷೇಪಗಳು

ಆರಿಇಂಎ	:	ಆನುವಲ್ ರಿಪೋರ್ಟ್ ಆನ್ ಇಂಡಿಯನ್ ಎಪಿಗ್ರಾಫಿ
ಇಂಎಂ	:	ಇಂಡಿಯನ್ ಎಂಟಿಕ್ವೇರಿ
ಎಕ	:	ಎಪಿಗ್ರಾಫಿಯ ಕರ್ನಾಟಿಕ
ಜಓರೀ	:	ಜರ್ನಲ್ ಆಫ್ ಓರಿಯಂಟಲ್ ರೀಸರ್ಚ್
ಸೌಇಂಇ	:	ಸೌತ್ ಇಂಡಿಯನ್ ಇನ್ಸ್‌ಕ್ರಿಪ್‌ಶನ್ಸ್
ARIE	:	Annual Report on Indian Epigraphy
ARSIE	:	Annual Report on South Indian Epigraphy
EC	:	Epigraphia Carnatica
Ep.Car	:	Epigraphia Carnatica
EI	:	Epigraphia Indica
MAR	:	Annual Report of the Mysore Archaeological Department
QJMS	:	Quarterly Journal of the Mythic Society
SII	:	South Indian Inscriptions
VI	:	Vijayanagara Inscriptions

1. ಶ್ರೀ ವಿರೂಪಾಕ್ಷ

ಚನ್ನಬಸಪ್ಪ ಎಸ್. ಪಾಟೀಲ

ಹಂಪಾದೇವಿ ಅಥವಾ ಪಂಪಾದೇವಿ ಹಂಪೆಯ ಅತಿ ಪ್ರಾಚೀನ ದೇವತೆ. ದೇವಿಯ ಹೆಸರೇ ಊರಿಗೆ ಬಂದಿದೆ. ಹಂಪೆಯನ್ನು ಪಂಪಾಪುರವೆಂದೂ ಕರೆಯಲಾಗುತ್ತಿತ್ತು. ಇಲ್ಲಿ ಹರಿಯುವ ತುಂಗಭದ್ರಾ ನದಿಯನ್ನು ಸಹ ಪಂಪಾನದಿಯೆಂದು ಕರೆಯಲಾಗುತ್ತಿತ್ತು. ಪಂಪಾಪುರವು ಪಂಪಾನದಿಯ ದಕ್ಷಣ ದಂಡೆಯ ಮೇಲಿರುವುದೆಂದು ಪಂಪಾಮಹಾತ್ಮೆ ತಿಳಿಸುತ್ತದೆ.[1] ಪಾರ್ವತಿಯ ಅವತಾರವಾದ ಪಂಪಾದೇವಿಯು ಹಂಪೆಯ ಹತ್ತಿರವಿರುವ ಪಂಪಾಸರಸ್ಸಿನ ದಡದಲ್ಲಿ ಕಠಿಣವಾದ ತಪಸ್ಸನ್ನು ಆಚರಿಸಿ ಶಿವನ ಅವತಾರವಾದ ವಿರೂಪಾಕ್ಷನನ್ನು ವರಿಸಿದಳು.[2] ಆದುದರಿಂದ ವಿರೂಪಾಕ್ಷನು ಪಂಪಾ-ವಿರೂಪಾಕ್ಷ ಅಥವಾ ಪಂಪಾಪತಿ ಹೆಸರುಗಳನ್ನು ಪಡೆದ.

ಐತಿಹಾಸಿಕವಾಗಿ ಹಂಪೆಯ ಪ್ರಾಚೀನತೆ ಕ್ರಿ.ಶ. 7ನೇ ಶತಮಾನದಷ್ಟು ಹಿಂದಕ್ಕೆ ಹೋಗುತ್ತದೆ. ಬಾದಾಮಿ ಚಾಲುಕ್ಯ ಅರಸ ವಿನಯಾದಿತ್ಯ ಕ್ರಿ.ಶ. 691ರಲ್ಲಿ ಪಂಪಾನದಿಯ ದಡದಲ್ಲಿ ಬೀಡುಬಿಟ್ಟಿದ್ದ.[3] ಅಲ್ಲಿಂದ ಮುಂದೆ ಈ ಸ್ಥಳವು ಪುಣ್ಯಕ್ಷೇತ್ರವಾಗಿ ಸತತವಾಗಿ ಜನರನ್ನು ಆಕರ್ಷಿಸುತ್ತಿದ್ದರೂ ನಮಗೆ ಇದಕ್ಕೆ ಆಧಾರ ಸಿಗುವುದು 11ನೇ ಶತಮಾನದಲ್ಲಿ. ನೊಳಂಬ-ಪಲ್ಲವ ಅರಸ ಉದಯಾದಿತ್ಯ ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲೂಕಿನ ಬಾಗಳಿಯ ಕಲಿದೇವರಿಗೆ ಲೋಗೇಶ್ವರದ ಹೊಲವನ್ನು ದಾನ ಮಾಡಲು ಈ ಸ್ಥಳವನ್ನು ಆಯ್ಕೆ ಮಾಡುತ್ತಾನೆ. ಕ್ರಿ.ಶ. 1018ರಲ್ಲಿ ಪಂಪಾಪುರದ ತೀರ್ಥಕ್ಕೆ ಬಂದು ಸೋಮಸಿಂಘಭಟಾರರ ಪಾದ ತೊಳೆದು ಬಾಗಳಿಯ ಕಲಿದೇವರಿಗೆ ದಾನ ಮಾಡುತ್ತಾನೆ.[4] ಉದಯಾದಿತ್ಯನ ಆದೇಶದ ಮೇರೆಗೆ ಪೆರ್ಗಡೆ ನರಸಿಂಘಯ್ಯನು ಸೋಮಸಿಂಘಭಟಾರರೊಂದಿಗೆ ಬಾಗಳಿಗೆ ಬಂದು ಬಾಗಳಿಯ ಮಹಾಜನರ ಅಧ್ಯಕ್ಷತೆಯಲ್ಲಿ ಸೋಮಸಿಂಘಭಟಾರರ ಪಾದ ತೊಳೆದು ಅದೇ ಲೋಗೇಶ್ವರದ ಭೂಮಿಯನ್ನು ಕಲಿದೇವರಿಗೆ ದಾನ ಮಾಡಿದನು. ಪಂಪಾಪುರದ ತೀರ್ಥದಲ್ಲಿ ಅರಸನು ಮಾಡಿದ ದಾನವನ್ನೇ ಈ ಅಧಿಕಾರಿಯು ಬಾಗಳಿಯಲ್ಲಿ ಮಾಡುವುದರ ಉದ್ದೇಶ ಸ್ಥಳೀಯರಿಗೆ ದಾನದ ಅರಿವನ್ನುಂಟು ಮಾಡುವುದಾಗಿತ್ತು.

ಮೇಲಿನ ಎರಡು ಸಂದರ್ಭಗಳಲ್ಲಿ ಪಂಪಾ ನದಿಯ ಮತ್ತು ಪಂಪಾಪುರದ ಅಧಿದೇವತೆಯಾದ ವಿರೂಪಾಕ್ಷನ ಉಲ್ಲೇಖವಿಲ್ಲ. ವಿರೂಪಾಕ್ಷನ ಉಲ್ಲೇಖ ಸಿಗುವುದು 12ನೇ ಶತಮಾನದ ಶಾಸನದಲ್ಲಿ. ಕಳಚುರಿ ಅರಸ ಬಿಜ್ಜಳನು ಕ್ರಿ.ಶ. 1163ರಲ್ಲಿ ಹಂಪೆಯ ವಿರೂಪಾಕ್ಷನ ಸನ್ನಿಧಾನದಲ್ಲಿ ಮಹಾದಾನಗಳನ್ನು ಮಾಡುತ್ತಿದ್ದ ಸಂದರ್ಭದಲ್ಲಿ ಬೆಳ್ವೊಲನಾಡು ಮತ್ತು ವತ್ಸೆಯನಾಡಿನ ಅಧಿಕಾರಿ ದಂಡನಾಯಕ ಅಮ್ಮಣಯ್ಯನು ಅರಸನ ಅನುಮತಿ ಪಡೆದು ಎಡೆಯಹಳ್ಳಿಯನ್ನು ಕುಕ್ಕನೂರ ಮಲ್ಲಿಕಾರ್ಜುನ ದೇವರಿಗೆ ದಾನವಾಗಿ ಕೊಟ್ಟನು.[5] ಹಂಪೆಯ ಕ್ರಿ.ಶ. 1199ರ ಶಾಸನದಲ್ಲಿ ಹಂಪೆಯನ್ನು ಪಂಪಾತೀರ್ಥ, ಪಂಪಾವರಕ್ಷೇತ್ರ, ವಿರೂಪಾಕ್ಷತೀರ್ಥ ಮತ್ತು ಹಂಪಾತೀರ್ಥವೆಂದು ಉಲ್ಲೇಖಿಸಿ, ಅದು ಗಂಗಾನದಿಯಿಂದ, ಹಲವು ತೀರ್ಥಗಳಿಂದ, ಉತ್ತಮವಾದ ದೇವಾಲಯ ಸಮೂಹದಿಂದ ಮತ್ತು ತಪಸ್ವಿಗಳಿಂದ ಕೂಡಿತ್ತೆಂದು ವಿವರಿಸಿ, ಮೈದುನ ಜೌಡಯ್ಯನು ಪಂಪಾದೇವಿಗೆ ಚಿಂಬೊನ್ನಿನ ಕಳಶವನ್ನು ಮಾಡಿಸಿ, ವಿರೂಪಾಕ್ಷ ಮತ್ತು ಪಂಪಾದೇವಿಯ ದೇವಾಲಯಗಳಿಗೆ ಸುಣ್ಣವನ್ನು ಬಳಿಸಿ, ಆ ದೇವಾಲಯಗಳಿಗೆ ಘಂಟೆ, ಅಡ್ಡಣಿಗೆ, ಆರತಿ, ಧೂಪಘಟ, ಪರ್ಯಾಣ, ಕಳಶ, ತಿಳಿವಟ್ಟಲು, ಚಂದನ, ಸುಗಂಧದ ಸಿಪ್ಪು ಮತ್ತು ಅನೇಕ ವಸ್ತ್ರಭೂಷಣಗಳನ್ನು ಕೊಟ್ಟನು, ಅಲ್ಲದೆ ವಿರೂಪಾಕ್ಷದೇವರ ಮತ್ತು ಪಂಪಾದೇವಿಯ ನೈವೇದ್ಯಕ್ಕೆ ಅಕ್ಕಿ ಮತ್ತು ಭೂಮಿಯನ್ನು ದಾನ ಮಾಡಿದನೆಂದು ಉಲ್ಲೇಖಿಸಲಾಗಿದೆ.[6]

12ನೇ ಶತಮಾನದ ಹೊತ್ತಿಗೆ ಹಂಪೆಯು ಧಾರ್ಮಿಕ ಕೇಂದ್ರವಾಗಿ ಬೆಳೆದಿತ್ತು. ವಿರೂಪಾಕ್ಷನು ಹಂಪೆಯ ಅಧಿದೇವತೆಯಾಗಿದ್ದನು. ಈ ಕಾಲದಲ್ಲಿ ಇಲ್ಲಿ ನೆಲೆಸಿದ ಕನ್ನಡ ಕವಿಗಳಾದ ಹರಿಹರ ಮತ್ತು ರಾಘವಾಂಕರು ತಮ್ಮ ಪ್ರಸಿದ್ಧ ಕೃತಿಗಳನ್ನು ರಚಿಸಿದರು. ಹರಿಹರನ ಮಹಾಕಾವ್ಯ ಗಿರಿಜಾಕಲ್ಯಾಣದಲ್ಲಿ ಶಿವ ಮತ್ತು ಪಾರ್ವತಿಯರ ಮದುವೆಯೇ ಕಾವ್ಯವಸ್ತುವಾಗಿದೆ.[7] ಈ ಕೃತಿಯು ಪಂಪಾ-ವಿರೂಪಾಕ್ಷನಿಗೆ ವಂದಿಸುವುದರಿಂದ ಪ್ರಾರಂಭವಾಗಿ ಪುನಃ ವಂದನೆಗಳೊಂದಿಗೆ ಮುಕ್ತಾಯವಾಗುತ್ತದೆ. ಇದೇ ಕವಿಯ ಪಂಪಾಶತಕದಲ್ಲಿ ವಿರೂಪಾಕ್ಷನನ್ನು ಸ್ತುತಿಸುವ 101 ಪದ್ಯಗಳಿವೆ.[8] ಅನೇಕ ಪದ್ಯಗಳಲ್ಲಿ ವಿರೂಪಾಕ್ಷನನ್ನು ಹಂಪೆಯಾಳ್ದ ಅಥವಾ ಹಂಪೆಯರಸ ಎಂದು ಸಂಬೋಧಿಸಲಾಗಿದೆ. ಇದೇ ಕವಿಯ ರಕ್ಷಾಶತಕವು ಭಕ್ತಿ ವೈರಾಗ್ಯವನ್ನು ಬೋಧಿಸುತ್ತದೆ. ಇದರಲ್ಲಿಯ 101 ಪದ್ಯಗಳಲ್ಲಿ ಪ್ರತಿ ಪದ್ಯವೂ "ಪಂಪಾಪುರದರಸ ವಿರೂಪಾಕ್ಷ ರಕ್ಷಿಪುದೆನ್ನಂ" ಎಂದು ಅಂತ್ಯಗೊಳ್ಳುತ್ತದೆ.[9] ಈ ಎರಡು ಕೃತಿಗಳಲ್ಲಿ ವಿರೂಪಾಕ್ಷನಿಗೆ ಪಂಪಾಪುರದ ಅಥವಾ ಹಂಪೆಯ ಅರಸನ ಸ್ಥಾನ ನೀಡಲಾಗಿದೆ. ರಾಘವಾಂಕನು ತನ್ನ ಹರಿಶ್ಚಂದ್ರ ಕಾವ್ಯದ ಪ್ರಾರಂಭದಲ್ಲಿ ಪಂಪಾವಿರೂಪಾಕ್ಷ ಮತ್ತು ಪಂಪಾಂಬಿಕೆಯರನ್ನು ಸ್ತುತಿಸುತ್ತಾನೆ.[10]

ಹೊಯ್ಸಳ ಅರಸ ಸೋಮೇಶ್ವರನು ಕ್ರಿ.ಶ. 1236ರಲ್ಲಿ ಪಂಪಾಕ್ಷೇತ್ರದ ವಿರೂಪಾಕ್ಷನಿಗೆ ಒಂದು ಹಳ್ಳಿಯನ್ನು ದಾನಮಾಡಿದನು.[11] ಇದೇ ಅರಸನ ಹಾಸನ ಜಿಲ್ಲೆಯ ಯಲ್ಲೇಶ್ವರದ ಕ್ರಿ.ಶ. 1238ರ ಶಾಸನದಲ್ಲಿ ಬಮ್ಮಣ್ಣನನ್ನು ಹೇಮಕೂಟ ವಿರೂಪಾಕ್ಷದೇವರ ಪಾದ

ಪದ್ಮಾರಾಧಕನೆಂದು ಬಣ್ಣಿಸಲಾಗಿದೆ.[12] ದೋರಸಮುದ್ರವು ಮುಸ್ಲಿಮರ ದಾಳಿಯಿಂದ ನಾಶವಾದ ಮೇಲೆ ಮೂರನೇ ಬಲ್ಲಾಳನು ಹಂಪೆಯನ್ನು ವಿರೂಪಾಕ್ಷ ಹೊಸದುರ್ಗವೆಂದು ಕರೆದು, ಕ್ರಿ.ಶ. 1331ರಲ್ಲಿ ಅಲ್ಲಿಂದ ಆಳುತ್ತಿದ್ದನು.[13] ಮೂರನೇ ಬಲ್ಲಾಳನ ಮಗನ ಹೆಸರು ವಿರೂಪಾಕ್ಷ ಬಲ್ಲಾಳ. ಈತನ ಯುವರಾಜ ಪಟ್ಟಾಭಿಷೇಕವು ಹಂಪೆಯಲ್ಲಿ ನಡೆಯಿತು.[14] ಇವೆಲ್ಲವನ್ನು ಗಮನಿಸಿದಾಗ ಹೊಯ್ಸಳ ವಂಶದ ಕೊನೆ ಅರಸರು ಹಂಪೆ ವಿರೂಪಾಕ್ಷನಲ್ಲಿ ಆಶ್ರಯ ಪಡೆದದ್ದು ವ್ಯಕ್ತವಾಗುತ್ತದೆ. ವಿಜಯನಗರಪೂರ್ವ ಕಾಲದಲ್ಲಾಗಲೆ ಹಂಪೆಯು ಧಾರ್ಮಿಕವಾಗಿ ಮತ್ತು ರಾಜಕೀಯವಾಗಿ ಸಾಕಷ್ಟು ಅಭಿವೃದ್ಧಿ ಹೊಂದಿತ್ತು. ಇದಕ್ಕೆ ಕಾರಣ ಹಂಪೆಯ ಕೇಂದ್ರ ಬಿಂದುವಾದ ವಿರೂಪಾಕ್ಷದೇವರು.

14ನೇ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯೊಂದಿಗೆ ವಿರೂಪಾಕ್ಷನ ಮಹತ್ವ ಇನ್ನೂ ಹೆಚ್ಚಾಯಿತು. ವಿರೂಪಾಕ್ಷನು ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾದ ವಿಜಯನಗರ ಪಟ್ಟಣದ ರಕ್ಷಕ ಮತ್ತು ವಿಜಯನಗರ ಅರಸರ ಆರಾಧ್ಯ ದೈವವಾದನು. ಸಂಗಮ ವಂಶದ ಎರಡನೇ ಹರಿಹರನು ವಿಜಯನಗರ ಪಟ್ಟಣದ ಜೊತೆಗೆ ವಿರೂಪಾಕ್ಷನನ್ನೂ ವಂಶಪಾರಂಪರ್ಯವಾಗಿ ಪಡೆದನೆಂದು ಶಾಸನವೊಂದು ತಿಳಿಸುತ್ತದೆ.[15] ಈ ಅರಸನ ಶಾಸನಗಳು ವಿರೂಪಾಕ್ಷನು ವಿಜಯನಗರ ಪಟ್ಟಣದ ರಕ್ಷಕನೆಂದು,[16] ಅರಸನನ್ನು ವಿರೂಪಾಕ್ಷ ಚರಣಕಮಲ ರಾಜಭೃಂಗ[17] ಮತ್ತು ವಿರೂಪಾಕ್ಷದೇವ ದಿವ್ಯಭಕ್ತಾಂಕಿತನೆಂದು[18] ತಿಳಿಸುತ್ತವೆ. ಹರಿಹರನು ವಿರೂಪಾಕ್ಷನ ಕರುಣೆಯಿಂದ ರಾಜ್ಯಭಾರ ಮಾಡುತ್ತಿದ್ದನು.[19] ಈತನು ಹೊರಡಿಸಿದ ತಾಮ್ರ ಶಾಸನಗಳ ಕೊನೆಯಲ್ಲಿ "ರಾಜಾಧಿರಾಜ ವೀರಹರಿಹರರಾಯರ ಹಸ್ತ ಮುಟ್ಟಿದ ವೊಪ್ಪಿತಾ ॥ ರಾಜ್ಞೋ ಹರಿಹರೇಶಸ್ಯ ಆಜ್ಞಯಾ ತಾಮ್ರ ಶಾಸನಂ ॥" ಎಂದು ಇರುವುದಲ್ಲದೆ, ಹಸ್ತಾಕ್ಷರವು "ಶ್ರೀ ವಿರೂಪಾಕ್ಷ" ಎಂದಿದೆ.[20] "ಶ್ರೀ ವಿರೂಪಾಕ್ಷ" ಎಂದು ಹಸ್ತಾಕ್ಷರ ಹಾಕುವ ಪದ್ಧತಿಯನ್ನು ಅರವೀಡು ವಂಶದ ಒಂದನೇ ಶ್ರೀರಂಗನವರೆಗೆ ಎಲ್ಲ ಅರಸರು ಮುಂದುವರಿಸಿಕೊಂಡು ಬಂದರು. ಎರಡನೇ ಶ್ರೀರಂಗನು "ಶ್ರೀ ವಿರೂಪಾಕ್ಷ"ನ ಬದಲು "ಶ್ರೀ ವೆಂಕಟೇಶ" ಎಂದು ಹಸ್ತಾಕ್ಷರ ಹಾಕಲು ಪ್ರಾರಂಭಿಸಿದನು.[21]

ಒಂದನೇ ದೇವರಾಯನು ವಿಜಯನಗರದಲ್ಲಿ ವಿರೂಪಾಕ್ಷದೇವರ ಸನ್ನಿಧಿಯಲ್ಲಿ ರಾಜ್ಯಭಾರ ಮಾಡುತ್ತಿದ್ದನೆಂದು ಅವನ ಶಾಸನಗಳು ತಿಳಿಸುತ್ತವೆ.[22] ಎರಡನೇ ದೇವರಾಯನು ಸಹ ವಿಜಯನಗರಿಯಲ್ಲಿ ಸಿಂಹಾಸನಸ್ಥನಾಗಿ ವಿರೂಪಾಕ್ಷ ದೇವರ ಸನ್ನಿಧಿಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದನು.[23] ದೊಡ್ಡಗಾತ್ರದ ಆನೆಗಳನ್ನು ಬೇಟೆಯಾಡುತ್ತಿದ್ದುದಕ್ಕಾಗಿ ಈ ಅರಸನು ಗಜಬೇಂಟೆಕಾರನೆಂಬ ಬಿರುದು ಹೊಂದಿದ್ದನು. ಈತನು ಒಮ್ಮೆ ಹೃದ್ರೋಗ ಪೀಡಿತನಾದಾಗ ನಾಗನಾಥಾರ್ಯ ಸೂರಿ ಎಂಬ ಪಂಡಿತನು ಚಿಕಿತ್ಸೆ ನೀಡಿದನು. ಚಿಕಿತ್ಸೆಯಿಂದ ಸಂತುಷ್ಟನಾದ ಅರಸನು ಆತನಿಗೆ ಹಲವು ಹಳ್ಳಿಗಳನ್ನು ದಾನವಾಗಿ ಕೊಟ್ಟನು. ನಾಗನಾಥಾರ್ಯನು ಪಂಪಾತಟದ ಭಾಸ್ಕರಕ್ಷೇತ್ರದಲ್ಲಿಯ ವಿರೂಪಾಕ್ಷನ ಸನ್ನಿಧಿಯಲ್ಲಿ ಎಲ್ಲ ತೀರ್ಥಕ್ಷೇತ್ರಗಳಿಗೆ ಹೋಗುವುದಾಗಿ ಸಂಕಲ್ಪ ಮಾಡಿದನು. ತೀರ್ಥಯಾತ್ರೆಯಲ್ಲಿ ಜಿತೇಂದ್ರಿಯನಾಗಿ ಹಾಲನ್ನಲ್ಲದೆ ಬೇರೆಯಾವುದೇ ಆಹಾರವನ್ನು ಸ್ವೀಕರಿಸದೆ ಯಶಸ್ವಿಯಾಗಿ ತೀರ್ಥಯಾತ್ರೆಯನ್ನು ಮುಗಿಸಿ ಹಿಂದಿರುಗಿದನು.[24] ದೇವರಾಯನು ವಿರೂಪಾಕ್ಷ ಸನ್ನಿಧಿಯಲ್ಲಿಯ ದಾನ ಮಂಟಪದಲ್ಲಿ ಕಲ್ಪಲತಾ ಮತ್ತು ಇತರ ದಾನಗಳನ್ನು ಮಾಡಿದನು. ಕಲ್ಪಲತಾ ದಾನವು ತುಲಾಪುರುಷ ದಾನಕ್ಕೆ ಸಮನಾದುದೆಂದು ಶಾಸ್ತ್ರಗಳು ಹೇಳುವುದನ್ನು ತಿಳಿದವರಿಂದ ದೃಢಪಡಿಸಿಕೊಂಡನು.[25]

ತುಳುವ ವಂಶದ ವೀರನರಸಿಂಹನು ಶ್ರೀರಂಗ, ಹಸ್ತಿಶೈಲ, ಗರುಡಗಿರಿ, ಕುಂಭಘೋಣ, ವೃಷಾದ್ರಿ, ಶ್ರೀಶೈಲ, ರಾಮಸೇತು, ಹರಿಹರ, ಸಂಗಮ, ನಂದಿತೀರ್ಥ, ಗೋಕರ್ಣ, ಕಾಳಹಸ್ತಿ, ಈಶ್ವರಸದಸ್ ಮತ್ತು (ಹಂಪೆಯ) ವಿರೂಪಾಕ್ಷ ದೇವಸ್ಥಾನದಲ್ಲಿ ಷೋಡಶ ಮಹಾದಾನಗಳನ್ನು ಮಾಡಿದನೆಂದು ಕ್ರಿ.ಶ. 1505ರ ಶಾಸನವು ತಿಳಿಸುತ್ತದೆ.[26] ಕಾಂಚಿ, ಶ್ರೀರಂಗ, ಶೇಷಾಚಲ, ಗರುಡಗಿರಿ, ಗೋಕರ್ಣ, ಶ್ರೀನಾಗೇಂದ್ರ, ಅರುಣಶಿಖರಿ ಮತ್ತು ವಿರೂಪಾಕ್ಷ ದೇವಸ್ಥಾನದಲ್ಲಿ ಬ್ರಹ್ಮಾಂಡ, ಸ್ವರ್ಣಮೇರು, ತ್ರಿದಶತರುಲತ, ಕಾಮಧೇನು ಮತ್ತು ಇತರ ಮಹಾದಾನಗಳನ್ನು ಪುನಃ ಪುನಃ ಮಾಡಿದನೆಂದು ಅದೇ ಶಾಸನ ತಿಳಿಸುತ್ತದೆ. ಇದೇ ಅರಸನ ಕ್ರಿ.ಶ. 1506ರ ಶಾಸನವು ಮೇಲೆ ತಿಳಿಸಿದ ಸ್ಥಳಗಳಲ್ಲಿ ಬ್ರಹ್ಮಾಂಡ, ವಿಶ್ವಚಕ್ರ, ಮಹಾಭೂತಘಟ, ರತ್ನಧೇನು, ಸಪ್ತಾಂಬೋದಿ (ಸಪ್ತಸಾಗರ), ಕಲ್ಪಲತಾ, ಕಾಂಚನೀಂ (ಸ್ವರ್ಣ) ಕಾಮಧೇನು, ಸ್ವರ್ಣಕ್ಷ್ಮಾ (ಭೂ), ಹಿರಣ್ಯಾಶ್ವರಥ, ತುಲಾಪುರುಷ, ಗೋಸಹಸ್ರ, ಹೇಮಾಶ್ವ, ಹೇಮಗರ್ಭ, ಕನಕಕರಿರಥ ಮತ್ತು ಪಂಚಲಾಂಗಲ (ಐದು ನೇಗಿಲು) ಮಹಾದಾನಗಳನ್ನು ಮಾಡಿದನೆಂದು ತಿಳಿಸುತ್ತದೆ.[27] ಕೃಷ್ಣದೇವರಾಯ,[28] ಅಚ್ಯುತರಾಯ[29] ಮತ್ತು ಸದಾಶಿವರಾಯರ[30] ಶಾಸನಗಳು ವಿಜಯನಗರ ಅರಸರ ವಂಶಾವಳಿಯನ್ನು ಹೇಳುವಾಗ ವೀರನರಸಿಂಹನ ಈ ಮಹಾದಾನಗಳ ಬಗ್ಗೆ ಪದೇ ಪದೇ ಪ್ರಸ್ತಾಪಿಸುತ್ತವೆ. ಈ ಮಹಾದಾನಗಳನ್ನು ಕನಕಸದಸ್ (ಚಿದಂಬರಂ), (ಹಂಪೆಯ) ವಿರೂಪಾಕ್ಷ ದೇವಾಲಯ, ಕಾಳಹಸ್ತಿ, ವೆಂಕಟಾದ್ರಿ (ತಿರುಪತಿ), ಕಾಂಚಿ, ಶ್ರೀಶೈಲ (ಶ್ರೀಪರ್ವತ), ಶೋಣಶೈಲ (ತಿರುವಣ್ಣಾಮಲೈ), ಹರಿಹರ (ದಾವಣಗೆರೆ ಜಿಲ್ಲೆ), ಅಹೋಬಲ (ಕರ್ನೂಲು ಜಿಲ್ಲೆ), ಸಂಗಮ (ಆಲಂಪುರದ ಹತ್ತಿರ), ಶ್ರೀರಂಗ (ತ್ರಿಚಿನಾಪಳ್ಳಿ ಹತ್ತಿರ), ಕುಂಭಘೋಣ (ತಂಜಾವೂರು ಜಿಲ್ಲೆ), ಮಹಾನಂದಿತೀರ್ಥ (ಕರ್ನೂಲು ಜಿಲ್ಲೆ), ನಿವೃತ್ತಿ (ಕರ್ನೂಲು ಜಿಲ್ಲೆ), ಗೋಕರ್ಣ (ಉತ್ತರ ಕನ್ನಡ ಜಿಲ್ಲೆ), ರಾಮಸೇತು (ರಾಮೇಶ್ವರಂ) ಮತ್ತು ಇತರ ಪುಣ್ಯಕ್ಷೇತ್ರಗಳಲ್ಲಿ ಮಾಡಿದರೆಂದು ತಿಳಿಸುತ್ತವೆ.

ವಿಜಯನಗರ ಸಾಮ್ರಾಜ್ಯದ ಬೇರೆ ಬೇರೆ ಊರುಗಳಲ್ಲಿ ಆ ಊರುಗಳಲ್ಲಿಯ ಅಥವಾ ಬೇರೆ ಊರುಗಳಲ್ಲಿಯ ದೇವರಿಗೆ ಅಥವಾ ವ್ಯಕ್ತಿಗಳಿಗೆ ದಾನ ಕೊಡುವಾಗ ಸಾಮಾನ್ಯವಾಗಿ ತುಂಗಭದ್ರಾ ತೀರದ ಪಂಪಾಕ್ಷೇತ್ರದ ವಿರೂಪಾಕ್ಷನ ಸನ್ನಿಧಿಯಲ್ಲಿ ದಾನ ಕೊಡುವುದು ರೂಢಿಯಲ್ಲಿತ್ತು.

ಶಾಸನಗಳನ್ನು ಅವಲೋಕಿಸಿದಾಗ ಒಂದನೇ ಬುಕ್ಕನಿಂದ ಅಚ್ಯುತದೇವರಾಯನವರೆಗೆ ಈ ಪದ್ಧತಿ ಮುಂದುವರಿದದ್ದು ಕಾಣುತ್ತದೆ. ಎರಡನೇ ದೇವರಾಯನು ವಿರೂಪಾಕ್ಷನ ಸನ್ನಿಧಿಯಲ್ಲಿ ದಾನಮಂಟಪದಲ್ಲಿ ದಾನ ಮಾಡುತ್ತಿದುದನ್ನು ಮೇಲೆ ಗಮನಿಸಿದ್ದೇವೆ. ಕೃಷ್ಣದೇವರಾಯನು ಕ್ರಿ.ಶ. 1517ರಲ್ಲಿ ವಿರೂಪಾಕ್ಷನ ಸನ್ನಿಧಿಯಲ್ಲಿ ಮುಕ್ತಿಮಂಟಪದಲ್ಲಿ ದಾನಮಾಡಿದನೆಂದು ಪಾವಗಡದ ಶಾಸನ ತಿಳಿಸುತ್ತದೆ.[31] ತುಮಕೂರು ಜಿಲ್ಲೆಯ ಬೆನಕನಕೆರೆ ಶಾಸನವನ್ನು ಹರಿಹರನ ಕಾಲದಲ್ಲಿ ವಿರೂಪಾಕ್ಷನ ಸನ್ನಿಧಿಯಲ್ಲಿ ಬರೆದು ವಿರೂಪಾಕ್ಷನ ಶಾಸನವೆಂದು ಕರೆಯಲಾಗಿದೆ.[32]

ವಿಜಯನಗರದ ಅರಸರು ತಾವು ಹೊರಡಿಸಿದ ಶಾಸನಗಳಿಗೆ ವಿರೂಪಾಕ್ಷನ ಹೆಸರಿನಲ್ಲಿ "ಶ್ರೀ ವಿರೂಪಾಕ್ಷ" ಎಂದು ಹಸ್ತಾಕ್ಷರ ಹಾಕುವುದನ್ನು ಈಗಾಗಲೇ ಗಮನಿಸಿದ್ದೇವೆ. ಇದು ಹೆಚ್ಚಾಗಿ ತಾಮ್ರ ಶಾಸನಗಳಿಗೆ ಅನ್ವಯಿಸಿದರೂ ಕೆಲವು ಶಿಲಾಶಾಸನಗಳಲ್ಲೂ ಇದನ್ನು ಕಾಣುತ್ತೇವೆ. ಶಾಸನದ ಭಾಷೆ ಮತ್ತು ಲಿಪಿ ಯಾವುದೇ ಆಗಿದ್ದರೂ "ಶ್ರೀ ವಿರೂಪಾಕ್ಷ" ಹಸ್ತಾಕ್ಷರವು ಸಾಮಾನ್ಯವಾಗಿ ಕನ್ನಡ ಲಿಪಿಯಲ್ಲಿರುತ್ತದೆ. "ಶ್ರೀ ವಿರೂಪಾಕ್ಷ" ಹಸ್ತಾಕ್ಷರ ವಿಜಯನಗರ ಅರಸರದೆ ಆಗಿದೆ ಎಂಬುದಕ್ಕೆ ಎರಡನೇ ಹರಿಹರನ ಅನೇಕ ಶಾಸನಗಳು ಪುಷ್ಟಿ ನೀಡುತ್ತವೆ. ತುಮಕೂರು ಜಿಲ್ಲೆಯ ನಾಗಸಂದ್ರದ ಶಾಸನದಲ್ಲಿ "ಹರಿಹರರಾಯನ ಶ್ರೀಹಸ್ತದ ಬರಹ ಶ್ರೀ ವಿರೂಪಾಕ್ಷ" ಎಂದಿದೆ.[33] ಮೈಸೂರು ಜಿಲ್ಲೆಯ ಸಾಗೆರೆ ಶಾಸನದಲ್ಲಿ "ಹರಿಹರ ಸ್ವಹಸ್ತೇನ ಶ್ರೀ ವಿರೂಪಾಕ್ಷ" ಎಂದಿದೆ.[34] ದಾವಣಗೆರೆ ಜಿಲ್ಲೆಯ ಹರಿಹರ ಶಾಸನದಲ್ಲಿ "ಶ್ರೀ ಹರಿಹರರಾಯನ ವೊಪ್ಪ ಶ್ರೀ ವಿರೂಪಾಕ್ಷ" ಎಂದಿದೆ.[35] ತುಮಕೂರು ಜಿಲ್ಲೆಯ ಯಲಿಯೂರು ಶಾಸನದಲ್ಲಿ "ರಾಯರವೊಪ್ಪ ಶ್ರೀ ವಿರೂಪಾಕ್ಷ" ಎಂದಿದೆ.[36]

ಮೇಲಿನ ಎಲ್ಲ ಅಂಶಗಳನ್ನು ಗಮನಿಸಿದಾಗ ವಿಜಯನಗರದ ಅರಸರು ವಿರೂಪಾಕ್ಷನ ಕರುಣೆಯಿಂದ, ಆತನ ಸನ್ನಿಧಿಯಲ್ಲಿ ಸಿಂಹಾಸನದ ಮೇಲೆ ಕುಳಿತು, ತಮ್ಮನ್ನು ವಿರೂಪಾಕ್ಷ ಚರಣಕಮಲ ರಾಜಭೃಂಗಗಳೆಂದು ಕರೆದುಕೊಂಡು, ತಾವು ಬರೆಸಿದ ಶಾಸನಗಳಿಗೆ ದೇವರ ಹೆಸರಿನಲ್ಲಿ "ಶ್ರೀ ವಿರೂಪಾಕ್ಷ" ಎಂದು ಹಸ್ತಾಕ್ಷರ ಹಾಕಿ, ದೇವರೇ ವಿಜಯನಗರದ ಅರಸ, ತಾವು ಆತನ ಪ್ರತಿನಿಧಿಗಳೆಂಬಂತೆ ರಾಜ್ಯಭಾರ ಮಾಡುತ್ತಿದ್ದರೆಂಬುದು ಸ್ಪಷ್ಟವಾಗುತ್ತದೆ.

ಟಿಪ್ಪಣಿಗಳು

1. *ಪಂಪಾಮಹಾತ್ಮೆ,* ಭಾಗ 1, ಅಧ್ಯಾಯ 70.
2. *ಅದೇ,* ಭಾಗ 1, ಅಧ್ಯಾಯ 4-7.
3. *ಇಂಎಂ,* VI, ಪು. 85-88.
4. *ಸೌಇಂಇ,* IX i, ಸಂ. 81-82.
5. *ಶಾಸನ ಪರಿಚಯ,* ಸಂ. 49.
6. *ಸೌಇಂಇ,* IV, ಸಂ. 260.
7. ಆರ್. ನರಸಿಂಹಾಚಾರ್ಯ, 1972, *ಕರ್ನಾಟಕ ಕವಿಚರಿತೆ,* ಸಂ. 1, ಪು. 257-264.
8. ಎಂ.ಎಸ್. ಸುಂಕಾಪುರ (ಸಂ.), 1985, *ರಕ್ಷಾಶತಕ ಪಂಪಾಶತಕ,* ಧಾರವಾಡ.
9. *ಅದೇ.*
10. ಆರ್. ನರಸಿಂಹಾಚಾರ್ಯ, *ಪೂರ್ವೋಕ್ತ,* ಪು. 268-274.
11. *ಆರಿಇಂಎ,* 1934-35, ಸಂ. ಬಿ 355.
12. *ಎಕ* (ಪರಿಷ್ಕೃತ), VIII, ಹೊಳೆನರಸೀಪುರ 71.
13. *ಎಕ,* XII, ಗುಬ್ಬಿ 30.
14. ಪಿ.ಬಿ. ದೇಸಾಯಿ, ಶ್ರೀನಿವಾಸ ರಿತ್ತಿ ಮತ್ತು ಬಿ.ಆರ್. ಗೋಪಾಲ್, 1981, *ಎ ಹಿಸ್ಟರಿ ಆಫ್ ಕರ್ನಾಟಕ,* ಧಾರವಾಡ, ಪು. 332.
15. *ಎಕ,* V, ಚನ್ನರಾಯಪಟ್ಟಣ 256.

16. ಎಕ, XI, ದಾವಣಗೆರೆ 34.

17. ಎಕ (ಪರಿಷ್ಕೃತ), V, ಕೃಷ್ಣರಾಜನಗರ 77.

18. ಎಕ (ಪರಿಷ್ಕೃತ), VIII, ಹಾಸನ 115.

19. ಎಕ, X, ಶ್ರೀನಿವಾಸಪುರ 54.

20. ಎಕ (ಪರಿಷ್ಕೃತ), VIII, ಹಾಸನ 115.

21. ಎನ್, ವೆಂಕಟರಮಣಯ್ಯ, "ಎ ನೋಟ್ ಆನ್ ಶ್ರೀ ವಿರೂಪಾಕ್ಷ," ಜಓರೀ, V, ಪು. 241-245.

22. ಎಕ, VII, ಶಿವಮೊಗ್ಗ 70.

23. ಅದೇ, VII, ಶಿವಮೊಗ್ಗ 71.

24. ಎಕ (ಪರಿಷ್ಕೃತ), IX, ಬೇಲೂರು 576.

25. ಎಕ, XII, ತುಮಕೂರು 11.

26. ಅದೇ, X, ಗೌರಿಬಿದನೂರು 77.

27. ಅದೇ, XVI, ಮಧುಗಿರಿ 131.

28. ಎಕ (ಪರಿಷ್ಕೃತ), III, ಗುಂಡ್ಲುಪೇಟೆ 1.

29. ಎಕ (ಪರಿಷ್ಕೃತ), VI, ಕೃಷ್ಣರಾಜಪೇಟೆ 71.

30. ಎಕ (ಪರಿಷ್ಕೃತ), VIII, ಹಾಸನ 9.

31. ಎಕ, XII, ಪಾವಗಡ 4.

32. ಅದೇ, XII, ತಿಪಟೂರು 139.

33. ಅದೇ, XII, ಕುಣಿಗಲ್ಲು 43.

34. ಎಕ (ಪರಿಷ್ಕೃತ), III, ಹೆಗ್ಗಡದೇವನಕೋಟೆ 149.

35. ಎಕ, XI, ದಾವಣಗೆರೆ 34.

36. ಅದೇ, XII, ಶಿರಾ 76.

2. ಹಂಪಿ ಪ್ರದೇಶದ ಸೂರ್ಯ ಶಿಲ್ಪಗಳು

ಕೆ.ಎಂ. ಸುರೇಶ

ಭಾರತದಲ್ಲಿ ಸೂರ್ಯನ ಆರಾಧನೆ ವೇದಗಳಷ್ಟೆ ಹಿಂದಿನಿಂದ ನಡೆದುಕೊಂಡು ಬಂದಿದೆ. ವೇದಗಳೇ ಸೂರ್ಯನನ್ನು ಮತ್ತು ಅವನ ವೈವಿಧ್ಯಗಳನ್ನು ಸವಿತೃ, ಪುಷನ್, ಭಗ, ಮಿತ್ರ, ಆರ್ಯಮನ್ ಮತ್ತು ವಿಷ್ಣು ಎಂದು ಕರೆದಿವೆ. ಸೌರಮಂಡಲದ ದೇವತೆಗಳಲ್ಲೇ ಸೂರ್ಯನಿಗೆ ಅಗ್ರ ಪ್ರಾಶಸ್ತ್ಯ. ಪ್ರತಿಯೊಂದಕ್ಕೂ ಉತ್ತೇಜನಕಾರಿಯಾದ ಸೂರ್ಯನನ್ನು ಸವಿತೃ ಎಂದು ಕರೆದು ಅನ್ವರ್ಥಗೊಳಿಸಲಾಗಿದೆ. ಮಿತ್ರ ಹಾಗೂ ಆರ್ಯಮನ್ ಭಾರತ ಮತ್ತು ಇರಾನ್ ದೇವತೆಗಳ ಹೆಸರು. ವಿಷ್ಣು ಭಾಗವತ ಸಂಪ್ರದಾಯದ ಅಧಿದೈವವಾಗಿದ್ದು ಸೌರಮಂಡಲದ ದೇವತೆಗಳಲ್ಲಿ ಪ್ರಮುಖವಾಗಿದ್ದಾನೆ. ಈ ಎಲ್ಲ ದೇವತೆಗಳ ಜೊತೆಯಲ್ಲಿ ಇನ್ನಿತರ ದೇವತೆಗಳಾದ ಅಂಶ, ದಕ್ಷ, ಮಾರ್ತಾಂಡ ಮುಂತಾದವರೊಂದಿಗೆ, ವಿವಿಧ ಸಂದರ್ಭಗಳಲ್ಲಿ ಹಾಗೂ ಗುಂಪುಗಳಲ್ಲಿ ಆದಿತ್ಯರೆಂಬ ಹೆಸರಿನಿಂದ ಕರೆಯಲ್ಪಡುತ್ತಾರೆ. ಈ ರೀತಿಯ ಹನ್ನೆರಡು ಆದಿತ್ಯರ ಹಾಗೂ ನವಗ್ರಹಗಳ ಆರಾಧನೆ ಭಾರತೀಯರ ಧಾರ್ಮಿಕ ಆಚರಣೆಯ ಬಹುಮುಖ್ಯ ಭಾಗವಾಗಿದೆ.

ವೇದಕಾಲದ ನಂತರದಲ್ಲಿಯ ಸೂರ್ಯದೇವನ ವಿಶೇಷಣಗಳ ಬಗ್ಗೆ ಮಾಹಿತಿ ಒದಗಿಸುವ ಹಲವಾರು ಉಕ್ತಿಗಳು ಋಗ್ವೇದದಲ್ಲಿ ಕಂಡು ಬರುತ್ತವೆ. ಕೆಲವು ಕಡೆ ಸೂರ್ಯನನ್ನು ಸ್ವರ್ಗಲೋಕದಿಂದ ಬರುವ ಸುಂದರ ರೆಕ್ಕೆಯುಳ್ಳ ಗರುಡನೆಂದು ಕರೆಯಲಾಗಿದೆ. ಇನ್ನೊಂದೆಡೆ ಉಷೆ ತರುವ ಹೊಳಪಿನ ಶ್ವೇತಾಶ್ವ ಎನ್ನಲಾಗಿದೆ. ಇಂಥಹ ವಿವರಣೆಗಳಿಂದ ವಿಷ್ಣುವಿನ ವಾಹನವಾದ ಗರುಡ ಮತ್ತು ಸೂರ್ಯನ ಕುದುರೆಯಾದ ತಾರ್ಕ್ಷ್ಯನ ಬಗ್ಗೆ ಮೂಲ ಕಲ್ಪನೆಗಳು ಮೂಡಿಬರುತ್ತವೆ. ವೇದ ಕಾಲದ ನಂತರದ ಸಾಹಿತ್ಯದಲ್ಲಿ ಉಲ್ಲೇಖವಿರುವಂತೆ ನಾಲ್ಕು ಅಥವಾ ಏಳು ಕುದುರೆಗಳ ಮೇಲೆ ಸೂರ್ಯನು ಸಂಚಾರ ಮಾಡುವ ಕಲ್ಪನೆಗಳು ಋಗ್ವೇದದ ಸೂಕ್ತಿಗಳಲ್ಲಿ ಮೊದಲೇ ಮೂಡಿಬಂದಿವೆ. ಸೂರ್ಯನನ್ನು ಒಂದು ಅಥವಾ ಹೆಚ್ಚು ಕುದುರೆಗಳ ಲಗಾಮು ಹಿಡಿದು ಬರುವಂತೆ ಚಿತ್ರಿಸಲಾಗಿದೆ. ಸೂರ್ಯದೇವನ ಹಾಗೂ ಅವನ ಅವತಾರಗಳ ಆರಾಧನೆ ವೇದಗಳ ಕಾಲದಲ್ಲೂ ಮುಂದುವರೆದು ಬಂದಿರುವುದು ಕಂಡುಬರುತ್ತದೆ. ವೇದಗಳ ನಂತರ ಎರಡು ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತಗಳಲ್ಲಿ ಸೂರ್ಯನ ಬಗ್ಗೆ ಮತ್ತಷ್ಟು ವಿವರಗಳು ವ್ಯಕ್ತವಾಗಿವೆ. ಮಹಾಭಾರತದಲ್ಲಿ ಸೂರ್ಯನನ್ನು ದೇವತೆಗಳ ಪಾಲಕನಾದ ದೇವೇಶ್ವರನೆಂದು ಕರೆಯಲಾಗಿದೆ. ಇಂಥಹ ಉಲ್ಲೇಖಗಳು ಗುಪ್ತರ ಕಾಲದ ಹಲವು ಸಂಸ್ಕೃತ ಕೃತಿಗಳಲ್ಲಿ ವ್ಯಕ್ತವಾಗಿವೆ. ಆಗಮಗಳ ಪ್ರಕಾರ ಸೂರ್ಯದೇವನು ವೃತ್ತಾಕಾರನು, ಕೆಂಪು ಬಣ್ಣದವನು, ಕೆಂಪು ಬಣ್ಣದ ಹೂವುಗಳಿಂದ ಅಲಂಕೃತನಾದವನು, ವೈವಿಧ್ಯ ಬಣ್ಣಗಳ ಉಡುಪು ಧರಿಸಿದವನು, ಹಲವು ಧ್ವಜಗಳ ರಥವುಳ್ಳವನು. ಏಳು ಕುದುರೆಗಳನ್ನು ಕಡಿವಾಣದಲ್ಲಿಟ್ಟು, ಕಾಲುಗಳೇ ಇಲ್ಲದ ಸಾರಥಿ ಅರುಣನೊಂದಿಗೆ, ಒಂದೇ ಗಾಲಿಯ ರಥದ ಮೇಲೆ ಸೂರ್ಯದೇವ ಸವಾರಿ ಮಾಡುತ್ತಿರುತ್ತಾನೆ. ಮಧ್ಯಕಾಲೀನ ಕವಿ ಮಯೂರಭಟ್ಟನು ಸೂರ್ಯದೇವನ ಮಹಿಮೆಯನ್ನು ಕೊಂಡಾಡುವ ನೂರು ಶ್ಲೋಕಗಳ ಶತಕವಾದ ಸೂರ್ಯ ಶತಕ ರಚಿಸಿದ್ದಾನೆ.

ಸೂರ್ಯದೇವನು ಮೂರು ವೇದಗಳ ಸಾರನೆಂತಲೂ, ಸಮಸ್ತ ಜಗತ್ತಿನ ಜೀವರಾಶಿಯ ರಕ್ಷಕನೆಂತಲೂ, ತನ್ನ ದಿವ್ಯವಾದ ರಥದಲ್ಲಿ ಸ್ವರ್ಗಲೋಕದ ಕನ್ಯೆಯರಿಂದಲೂ, ಇತರ ಗ್ರಹಗಳೊಂದಿಗೆ ಆಸೀನರಾಗಿರುವವನೆಂತಲೂ ಚಿತ್ರಿಸಲಾಗಿದೆ. ಹೇಮಾದ್ರಿ ಹೇಳುವಂತೆ ಬಂಡಪಿಂಗಲ ಮತ್ತು ಅತಿಪಿಂಗಲರು ಸೂರ್ಯನ ಪಕ್ಕದಲ್ಲಿ ನಿಂತು ಅವನನ್ನು ಪೂಜಿಸುತ್ತಿರುತ್ತಾರೆ. ಕೆಲವು ಕಡೆ ಸೂರ್ಯನನ್ನು ತ್ರಿಮೂರ್ತಿಗಳಾದ ಬ್ರಹ್ಮ-ವಿಷ್ಣು-ಮಹೇಶ್ವರರನ್ನು ಒಳಗೊಂಡಂತೆ ಚಿತ್ರಿಸಿದ್ದಾರೆ. ತಮಿಳುನಾಡಿನ ಚಿದಂಬರಂನಲ್ಲಿ ಸೂರ್ಯನಲ್ಲಿ ತ್ರಿಮೂರ್ತಿಗಳನ್ನು ಒಟ್ಟುಗೂಡಿಸಲಾಗಿದೆ. ಆ ಚಿತ್ರದಲ್ಲಿಯ ಕರಮುದ್ರೆಗಳನ್ನು ಗಮನಿಸಿದಲ್ಲಿ ಖಚಿತವಾಗಿ ಇಂಥಹ ನಿರ್ಣಯಕ್ಕೆ ಬರಲಾಗದಿದ್ದರೂ, ಆ ಚಿತ್ರದ ತಳಭಾಗದಲ್ಲಿ ಸೂರ್ಯನ ಏಳು ಕುದುರೆ ಮತ್ತು ಸಾರಥಿಯಾದ ಅರುಣನನ್ನು ಮೂಡಿಸಲಾಗಿದೆ.

ಅಂಶುಮದ್ ಭೇದಾಗಮ ಮತ್ತು ಸುಪ್ರಭೇದಾಗಮಗಳು ವರ್ಣಿಸುವಂತೆ, ಸೂರ್ಯದೇವನ ವಿಗ್ರಹದಲ್ಲಿ ಭುಜದ ಎತ್ತರಕ್ಕೆ ಎತ್ತಿದ ಎರಡು ಕೈಗಳಲ್ಲಿ ಕಮಲದ ಹೂಗಳಿವೆ. ಸೂರ್ಯನ ತಲೆಯ ಹಿಂಭಾಗದಲ್ಲಿ ವೃತ್ತಾಕಾರದ ಕಾಂತಿಮಂಡಲವನ್ನು ಮತ್ತು ಹಲವಾರು ಆಭರಣಗಳನ್ನು, ಶಿರದಲ್ಲಿ ಕಿರೀಟವನ್ನು, ಕೆಂಪುಬಣ್ಣದ ಬಟ್ಟೆಗಳನ್ನು ಧರಿಸಿರುವಂತೆ ಚಿತ್ರಿಸಿದೆ. ಸೂರ್ಯನ ಕಿವಿಗಳಲ್ಲಿ ಕುಂಡಲಗಳು ಎದೆಯ ಮೇಲೆ ಕಠೀಹಾರವಿರುವುದಾಗಿ ಮತ್ತು ಸೂರ್ಯನು ಯಜ್ಞೋಪವೀತವನ್ನು ಧರಿಸಿದ್ದಾಗಿ ಹೇಳಿದೆ. ನೆಗೆಯುತ್ತಿರುವ ಏಳು ಕುದುರೆಗಳ ರಥದಲ್ಲಿ ಪದ್ಮಪೀಠದಲ್ಲಿ ನಿಂತಿರುವುದು ಕಂಡುಬರುತ್ತದೆ. ಒಂದೇ ಚಕ್ರವುಳ್ಳ ರಥದ ಸಾರಥಿ ಹೆಳವನಾದ ಅರುಣ. ಸೂರ್ಯನ ಬಲಭಾಗದಲ್ಲಿ ಉಷಾದೇವಿಯು ಎಡಭಾಗದಲ್ಲಿ ಪ್ರತ್ಯುಷಾದೇವಿಯು ನಿಂತಿರುತ್ತಾರೆ.



1. ಕಮಲಾಪುರ ವಸ್ತುಸಂಗ್ರಹಾಲಯದಲ್ಲಿರುವ ಸೂರ್ಯ



2. ಕೋಟಿಲಿಂಗದ ಹತ್ತಿರವಿರುವ ಸೂರ್ಯ

ಶಿಲ್ಪರತ್ನವು ಉಲ್ಲೇಖಿಸುವಂತೆ ಸೂರ್ಯದೇವನ ಪಕ್ಕದಲ್ಲಿ ಮಂಡಲ ಮತ್ತು ಪಿಂಗಳರೆಂಬ ದ್ವಾರಪಾಲಕರಿರುತ್ತಾರೆ. ಮತ್ಸ್ಯಪುರಾಣವು ಹೇಳುವಂತೆ ಸೂರ್ಯನು ಆಕರ್ಷಕ ಮೀಸೆ ಮತ್ತು ಉತ್ತರಭಾರತದ ವ್ಯಕ್ತಿಯಂತೆ ಉಡುಪಿನ ವಿನ್ಯಾಸ ಹೊಂದಿದವನಾಗಿದ್ದಾನೆ. ಸೂರ್ಯನು ನಾಲ್ಕು ಕೈಗಳನ್ನು, ಕಾಂತಿಯುಕ್ತವಾದ ಶರೀರವನ್ನು ಹೊಂದಿ ಮತ್ತು ಕೆಂಪು ವರ್ಣದ ನಿಲುವಂಗಿಯಿಂದ ಅಲಂಕೃತನಾಗಿರುತ್ತಾನೆಂದು ತಿಳಿಸುತ್ತದೆ.

ಹಂಪೆಯಲ್ಲಿ ಕೆಲವು ಸೂರ್ಯನ ಶಿಲ್ಪಗಳಿವೆ. ಕಡಲೇಕಾಳು ಗಣಪತಿ ದೇವಸ್ಥಾನದ ಮುಖ ಮಂಟಪದ ಕಂಬದ ಮೇಲೆ ಸಮಭಂಗಿಯಲ್ಲಿ ನಿಂತಿರುವ ಸೂರ್ಯನ ವಿಗ್ರಹವಿದೆ. ಇಲ್ಲಿ ಕುದುರೆಗಳ ರಥಾರೂಢನಾದ ಸೂರ್ಯ ಎರಡು ಕೈಗಳಲ್ಲಿ ಕಮಲದ ಹೂಗಳನ್ನು ಹಿಡಿದಿದ್ದಾನೆ. ಕಿರೀಟ, ಕಂಠಹಾರ, ಕರ್ಣಕುಂಡಲ, ಯಜ್ಞೋಪವೀತ, ತೋಳ್ಪಟ್ಟಿ, ಕೈಪಟ್ಟಿ, ನಡುಪಟ್ಟಿ ಮತ್ತು ಹೂವಿನ ಹಾರಗಳಿಂದ ಸೂರ್ಯ ಅಲಂಕೃತನಾಗಿದ್ದಾನೆ. ರಥಕ್ಕೆ ಕಟ್ಟಿದ ಕುದುರೆಗಳು ಮುಂಗಾಲುಗಳನ್ನೆತ್ತಿ ನೆಗೆಯುತ್ತಿದ್ದು, ಸಾರಥಿ ಅರುಣನೂ ಕಾಣುತ್ತಾನೆ. ಸೂರ್ಯನ ಹಿಂಬದಿಯಲ್ಲಿ ಪ್ರಭಾಮಂಡಲವಿದೆ.

ಮತ್ತೊಂದು ಶಿಲ್ಪವು ಕಮಲಾಪುರದ ವಸ್ತುಸಂಗ್ರಹಾಲಯದಲ್ಲಿ ಪ್ರದರ್ಶನಕ್ಕಿದೆ (ಚಿತ್ರ 1). ಈ ಶಿಲ್ಪವು ಸಹ ಸಮಭಂಗಿಯಲ್ಲಿದ್ದು ಎರಡೂ ಕೈಗಳಲ್ಲಿ ಕಮಲದ ಹೂಗಳಿವೆ. ಕಿರೀಟ, ಕಂಠಹಾರ, ನಡುಪಟ್ಟಿ, ಜನಿವಾರ, ಕುಂಡಲಗಳನ್ನು ಧರಿಸಿದ ಸೂರ್ಯ ಧೋತ್ರ ಹಾಗೂ ಕಾಲಲ್ಲಿ ರುಳಿಗಳನ್ನು ಧರಿಸಿದ್ದಾನೆ. ಪ್ರಭಾವಳಿಯ ಮೇಲ್ಭಾಗದಲ್ಲಿ ಕೀರ್ತಿಮುಖವಿದೆ. ಅದೇ ಪೀಠದ ಮೇಲೆ ಬಲಭಾಗದಲ್ಲಿ ಉಷಾದೇವಿ ಹಾಗೂ ಎಡಭಾಗದಲ್ಲಿ ಪ್ರತ್ಯುಷಾದೇವಿ ತ್ರಿಭಂಗಿಯಲ್ಲಿ ನಿಂತಿದ್ದಾರೆ. ಇಬ್ಬರೂ ಕಿರೀಟ, ಕುಂಡಲ, ಕಂಠಹಾರ ಹಾಗೂ ಇನ್ನಿತರ ಆಭರಣಗಳನ್ನು ಧರಿಸಿದ್ದಾರೆ.

ಹಂಪಿಯ ಕೋಟಿಲಿಂಗದ ಬಳಿಯ ಶಿಲ್ಪದಲ್ಲಿ ಸೂರ್ಯನು ಏಳು ಕುದುರೆಗಳನ್ನೊಳಗೊಂಡ ರಥದ ಮೇಲೆ ಸಮಭಂಗದಲ್ಲಿ ನಿಂತಿದ್ದಾನೆ (ಚಿತ್ರ 2). ಇಲ್ಲಿಯೂ ಕೂಡಾ ಅರುಣನು ಸಾರಥಿಯಾಗಿದ್ದಾನೆ. ಹಂಪಿಯ ವಿರೂಪಾಕ್ಷ ದೇವಾಲಯದಲ್ಲಿ ಗರ್ಭಗೃಹಕ್ಕೆ ಎದುರಾಗಿರುವ ಸಣ್ಣ ಗುಡಿಯಲ್ಲಿ ಸೂರ್ಯನ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ. ಸೂರ್ಯನ ಕೊರಳಲ್ಲಿ ಪಾದದವರೆಗಿರುವ ವೈಜಯಂತಿಮಾಲೆಯಿದೆ.

3. ಆತ್ಮಾಹುತಿಯ ಶಿಲ್ಪಗಳು

ಬಾಲಸುಬ್ರಹ್ಮಣ್ಯ

ಪ್ರಾಚೀನ ಕರ್ನಾಟಕದ ಯುದ್ಧದ ಪರಿಕಲ್ಪನೆ, ವೀರಾವೇಶದ ಹೋರಾಟದ ವಿವರಗಳನ್ನು ನೀಡುವ ಹಲವಾರು ಶಾಸನಗಳು, ಶಿಲ್ಪಗಳು ದೊರಕುತ್ತವೆ. ಯುದ್ಧದಲ್ಲಿ ವೀರಮರಣ ಹೊಂದಿದರೆ ಸ್ವರ್ಗದ ಆಮಿಷ, ಗೆದ್ದರೆ ಲಕ್ಷ್ಮಿಯು ದೊರಕುವಳೆಂಬ ಹಂಬಲ, ರಣರಂಗದಲ್ಲಿ ಮಡಿಯುವಾಗ ಚಿಂತೆ ಏಕೆ ಎನ್ನುವ ಭಾವನೆಗಳಿಂದ,[1] ವೀರರನ್ನು ಹೋರಾಡಲು ಪ್ರೇರೆಪಿಸಿದ ಬಗ್ಗೆ ಹಲವು ಶಾಸನಗಳಿವೆ. ಈ ಬಲಿದಾನಗಳು ತಮ್ಮ ದೇಶಕ್ಕೆ, ಒಡೆಯನಿಗೆ, ತೋರಿಸಿದ ಮಹಾತ್ಯಾಗ. ಇವುಗಳನ್ನು ಬಿಂಬಿಸುವ ವೀರಗಲ್ಲುಗಳು ಹಲವಿವೆ. ಉದಾತ್ತ ಧ್ಯೇಯಕ್ಕಾಗಿ ತಮ್ಮ ಪ್ರಾಣವನ್ನು ತಾವೇ ತೆಗೆದುಕೊಳ್ಳವ ಪದ್ಧತಿಯನ್ನು 'ಆತ್ಮಬಲಿ' ಎಂದು ಅಥವಾ 'ದೇಹ ತ್ಯಾಗ'ವೆಂದು ಕರೆದಿದ್ದಾರೆ. ಇಲ್ಲಿ ವೀರಯೋಧರ ರೀತಿಯ ಮೋಕ್ಷಾಪೇಕ್ಷೆಯನ್ನು, ಕೆಚ್ಚೆದೆಯನ್ನು, ಅಸೀಮವಾದ ಧ್ಯೇಯ, ನಿಷ್ಠೆ, ಸ್ವಾಮಿಭಕ್ತಿಗಳನ್ನು ಈ ಆತ್ಮಾಹುತಿಯಲ್ಲಿ ಗುರುತಿಸಬಹುದಾಗಿದೆ. ಈ ಆತ್ಮಬಲಿಗಳು ಧಾರ್ಮಿಕ ಮತ್ತು ಸ್ವಾಮಿಭಕ್ತಿಯನ್ನು ತೋರಿಸುವ ಕುರುಹುಗಳಾಗಿವೆ. ಆತ್ಮಾಹುತಿಯನ್ನು ಹಲವಾರು ಕಾರಣಗಳಿಂದ ಕೈಗೊಂಡಿರುವುದನ್ನು ಗುರುತಿಸಬಹುದು. ಈ ವೀರರ ಉದ್ದೇಶವೇನೇ ಇರಲಿ, ಇವರಲ್ಲಿದ್ದ ಸಮರ್ಪಣಾ ಭಾವ ಮೆಚ್ಚತಕ್ಕದ್ದಾಗಿದೆ. ಪ್ರಾಣವನ್ನು ತೃಣವಾಗಿ ಕಂಡಂತಹ ಹಲವರು ದೃಷ್ಟಾಂತಗಳನ್ನು ಕಾಣಬಹುದು. ತಮ್ಮ ಪ್ರಾಣವನ್ನು ತಾವೇ ತೆಗೆದುಕೊಂಡು, ರಾಜನ ಪುರೋಭಿವೃದ್ಧಿಗೋ ಅಥವಾ ತಮಗೆ ಶ್ರೇಯಸ್ಸು ದೊರಕುವುದೆಂಬ ನಂಬಿಕೆಯಿಂದ ಆತ್ಮಾಹುತಿಯಾದ ಪ್ರಕರಣಗಳು ಹಲವಿವೆ. ಮನುಷ್ಯನ ಪ್ರಾಣದ ಮೋಹ ಎಷ್ಟೇ ಇರಲಿ ತನ್ನೆಲ್ಲಾ ಆಸೆಯನ್ನು, ಬದುಕುವ ಹಂಬಲವನ್ನು ತೊರೆದು, ತಾವು ನಂಬಿದ ನಂಬುಗೆಗೆ ತಮ್ಮನ್ನೇ ಅರ್ಪಿಸಿಕೊಂಡ ಉದಾಹರಣೆಗಳು ಕರ್ನಾಟಕದ ಉದ್ದಗಲಕ್ಕೂ ವಿಪುಲವಾಗಿ ದೊರೆಯುತ್ತವೆ. ಆತ್ಮಬಲಿಯ ಪದ್ಧತಿಗೆ ಹಲವು ಕಾರಣಗಳಿರಬಹುದು. ಯುದ್ಧದಲ್ಲಿ ಹೋರಾಡಿ ಮಡಿದ ವ್ಯಕ್ತಿಗಳಿಗಿಂತ ತಾವು ನಂಬಿದ ಆದರ್ಶಗಳಿಗೆ, ಭಾವನೆಗಳಿಗೆ, ಸಮಾಜದ ಅಥವಾ ಉಪ್ಪುಂಡವನ ಒಳಿತಿಗಾಗಿ ಆತ್ಮ ಸಮರ್ಪಿಸಿಕೊಂಡವರು ಸಮಾಜದಲ್ಲಿ ಕಡಿಮೆಯಿಲ್ಲವೆಂದು ತಿಳಿಯಬಹುದಾಗಿದೆ.

ಪ್ರಾಚೀನ ಕಾಲದ ಈ ವ್ಯವಸ್ಥೆಯನ್ನು ಇಂದಿನ ದೃಷ್ಟಿಯಿಂದ ನೋಡಿದಲ್ಲಿ ವಿಚಿತ್ರ ಮತ್ತು ಅಮಾನವೀಯ ಎನಿಸಬಹುದು. ಸ್ಮೃತಿ, ಪುರಾಣ, ಇತಿಹಾಸಗಳು ಕೆಳಗಿನ ಕೆಲ ಬಗೆಯ ದೇಹತ್ಯಾಗವನ್ನು ಒಪ್ಪಿಕೊಂಡಿವೆ.

1. ಘೋರ ಪಾತಕಗಳ ಪ್ರಾಯಶ್ಚಿತ್ತ
2. ತೀರ್ಥಯಾತ್ರೆಯ ಸಮಯದಲ್ಲಿ ಅಸಮರ್ಥನಾದಾಗ ದೇಹತ್ಯಾಗ
3. ಧಾರ್ಮಿಕ ದೇಹತ್ಯಾಗ
4. ಗೃಹಸ್ಥ ಲೌಕಿಕ ಆಸೆಗಳು ಬತ್ತಿಹೋದ ಮೇಲೆ ದೇಹತ್ಯಾಗದ ಬಯಕೆ

ಪ್ರಸಿದ್ಧ ತೀರ್ಥಕ್ಷೇತ್ರಗಳಲ್ಲಿ ದೇಹತ್ಯಾಗ ಮಾಡಿದರೆ, ಶುಭ ದಿನಗಳಲ್ಲಿ ಈ ದೇಹತ್ಯಾಗವು ನಡೆದಲ್ಲಿ ಮೋಕ್ಷವು ಖಂಡಿತ ಎಂದು ನಂಬಲಾಗಿತ್ತು. ಇದೇ ರೀತಿ ದೇವಾಲಯ ರಥಗಳಿಗೆ ರಥೋತ್ಸವದಲ್ಲಿ ತಲೆಯನ್ನು ಸಮರ್ಪಿಸಿಕೊಳ್ಳುವುದನ್ನು ಪ್ರವಾಸ ಕಥನದಲ್ಲಿ ಉಲ್ಲೇಖಿಸಿದೆ.

ಪ್ರಸಿದ್ಧ ಬೌದ್ಧ ಪ್ರವಾಸಿ ಹುಯೆನ್‌ತ್ಸಾಂಗ್ ಈ ಧಾರ್ಮಿಕತೆಯ ದೇಹತ್ಯಾಗದ ಬಗ್ಗೆ ವಿವರವಾಗಿ ವಿವರಣೆ ನೀಡಿದ್ದಾನೆ. ಕ್ರಿ.ಶ. ಸು. 900ರಲ್ಲಿ ಬೆಂಕಿಯ ಕೊಂಡವನ್ನು ಮಕರ ಮಾಸದ ದಿನ ಹಾಯ್ದು ಜಯನಾಗನ್ ಶಿವನ ಲೋಕಕ್ಕೆ ಹೋದದ್ದು ತಿಳಿಯುತ್ತದೆ.[2] ಒಡೆಯನಿಗೆ ಪುತ್ರ ಸಂತಾನವಾದರೆ ತಾನು ಬಲಿಯಾಗುವುದಾಗಿ ಒಪ್ಪಿಕೊಂಡು ಸಿಡಿತಲೆಯ ಮೂಲಕ ದೇಹತ್ಯಾಗ ಮಾಡಿದ ಸುಮಾರು ಕ್ರಿ.ಶ. 991ರ ಶಾಸನವೊಂದು ದೊರೆತಿದೆ.[3]

ಮಧ್ಯಯುಗದಲ್ಲಿ ಶೈವಧರ್ಮವು ಒಂದು ರೀತಿ ವೀರತ್ವಕ್ಕೆ ಪ್ರೋತ್ಸಾಹ ನೀಡಿದೆ. ಈ ಮತವು ತಾಂತ್ರಿಕ ಮತದ ಸಂಪರ್ಕದಿಂದಾಗಿ ಹೆಚ್ಚಿನ ವ್ಯಾಪ್ತಿ ಹೊಂದಿತು. ಆಂಧ್ರಪ್ರದೇಶದಲ್ಲಿ ಅಷ್ಟಭೈರವ ದೇವತೆಗಳಿಗೆ ಬಲಿ ಕೊಡುವ ಸಂಪ್ರದಾಯ ಗಮನ ಸೆಳೆಯುತ್ತದೆ. ಇಲ್ಲಿ ಬಲಿಯಾದವರು ವೀರರ–ವೀರಾಧಿವೀರರು ಎಂದು ಪರಿಗಣಿಸಲ್ಪಡುತ್ತಿದ್ದರು. ಈ ರೀತಿ ಬಲಿಕೊಡುವುದರಿಂದ ಅನಿಷ್ಟಗಳು ದೂರವಾಗಿ, ಅಂಟು ವ್ಯಾಧಿಗಳು ಮುಂತಾದ ತೊಂದರೆಗಳಿಂದ ದೂರವಿರುವ ಸಲುವಾಗಿ ತಲೆಕೊಡುವ ಹರಕೆ ಹೊರುತ್ತಿದ್ದರು. ಮಹಾಶಿವರಾತ್ರಿಯ ದಿನ ಶೈವಧರ್ಮದ ಅನುಯಾಯಿಗಳು ತಮ್ಮ ಕುಕ್ಷಿ, ಶಿರಸ್ಸು, ಮುಂತಾದ ಭಾಗಗಳನ್ನು ಕತ್ತರಿಸಿ ದೇವರಿಗೆ ಸಮರ್ಪಿಸುತ್ತಿದ್ದರು. ಇಂತಹವರ ಸ್ಮರಣಾರ್ಥ

ಕಲ್ಲುಗಳನ್ನು ನೆಡುತ್ತಿದ್ದುದಲ್ಲದೆ ಗುಡಿಗಳನ್ನು ಕಟ್ಟುತ್ತಿದ್ದರು. ಇವುಗಳು ನಮ್ಮ ನೆರೆರಾಜ್ಯವಾದ ಆಂಧ್ರಪ್ರದೇಶದಲ್ಲಿ ಹೇರಳವಾಗಿ ದೊರೆಯುತ್ತಿದ್ದು, ಇವನ್ನು "ವೀರಗುಡ್ಡಮಲು" ಎಂದು ಕರೆಯುತ್ತಾರೆ. ಕೇವಲ ವೈಯಕ್ತಿಕ ಮೋಕ್ಷ ಸಾಧನೆಗೆ ಆತ್ಮಹತ್ಯೆ ಮಾಡಿಕೊಂಡ ಶೈವ ಧರ್ಮದವರ ಶಾಸ್ತ್ರ ಸಂಪ್ರದಾಯದ ಹಲವು ಉದಾಹರಣೆಗಳನ್ನು ಕೋಲಾರ ಜಿಲ್ಲೆಯಲ್ಲಿ ನೋಡಬಹುದಾಗಿದೆ. ಇವುಗಳು ಶಾಸನ ರಹಿತವಾಗಿರುವುದನ್ನು ಗಮನಿಸಬಹುದಾಗಿದೆ.

ಧಾರ್ಮಿಕ ಉದ್ದೇಶಗಳಿಗೆ ಅರಸನಿಗೆ ಒಳಿತಾಗಲೆಂದು ತಾವೇ ಸಮರ್ಥಿಸಿಕೊಂಡ ಉದಾಹರಣೆಗಳು ಹಲವಿವೆ. ತಮ್ಮ ಪಕ್ಷಕ್ಕೆ ಯುದ್ಧದಲ್ಲಿ ಜಯವು ದೊರೆಯಲೆಂಬ ಉದ್ದೇಶದಿಂದ ಸೈನಿಕರಲ್ಲಿ ವೀರೋತ್ಸಾಹ ತುಂಬಲೆಂದು ಆತ್ಮಬಲಿಯನ್ನು ಮಾಡಿಕೊಳ್ಳುವ ಪದ್ಧತಿ ಇದ್ದಿತೆಂದು ಎಂ. ಚಿದಾನಂದಮೂರ್ತಿಯವರು ಅಭಿಪ್ರಾಯ ಪಡುತ್ತಾರೆ. ಕ್ರಿ.ಶ. ಸುಮಾರು 1141ರ ಶಾಸನದಲ್ಲಿ "ಸೂರ್ಯಗ್ರಹಣ ದೊರೆ ಕೊಳೆ ತೆಲುಂಗದ ಮಲ್ಯಂ ಸುರಗಣಕೆಯರುಮೆ ಸೂರ್ಯ ಲೋಕಕ್ಕೋದ ಸೂರ್ಯಾಯನಮು" ಎಂದಿದೆ.[4] ಈ ರೀತಿ ಸೂರ್ಯಗ್ರಹಣದ ದಿನ ದೇಹತ್ಯಾಗ ಮಾಡಿದವರ ಮಾಹಿತಿಯಿದೆ.

ಕ್ರಿ.ಶ. 1220ರ ಹಳೇಬೀಡು ಶಾಸನವು ಕುವರಲಕ್ಷ್ಮ, ಆತನ ಸತಿ ಸುಗ್ಗಲೆ ಮತ್ತು ಕೆಲ ಜನ ಲೆಂಕರು ಬಲ್ಲಾಳನಿಗೆ ಪ್ರಾಣಾರ್ಪಣೆ ಮಾಡಿಕೊಂಡಿದ್ದನ್ನು ಹೇಳುತ್ತದೆ. ಕುವರಲಕ್ಷ್ಮನ ಶಾಸನ ಮುಂದೆ ಕಂಬದ ಮೇಲಿದೆ. ಆನೆಯ ಮೇಲೆ ಕುಳಿತ ಅನೇಕ ವ್ಯಕ್ತಿಗಳು ಗರುಡನೊಂದಿಗೆ ಹೋರಾಡುವ ವಿಗ್ರಹವಿದೆ. ಕನ್ನೆಯ ನಾಯಕನ, ಆತನ ಹೆಂಡಿರ ಮತ್ತು ಲೆಂಕ–ಲೆಂಕಿತಿಯರ ಮರಣ ಸ್ವರೂಪವನ್ನೂ ಅನಂತನಾಥಪುರಾಣಂನಲ್ಲಿ ಹೇಳಿದೆ.[5]

ದೇವಿಗೆ ತಮ್ಮ ಶಿರಸ್ಸನ್ನು ಸಮರ್ಪಿಸಿಕೊಂಡವರ ಬಗ್ಗೆ ನಿಕೊಲೊಕೊಂಟಿ ವಿವರಣೆ ನೀಡುತ್ತಾನೆ. "ಕಾಂಬೈ ತಾ (ಕ್ಯಾಂಬೆ) ನಗರದಲ್ಲಿ ಪುರೋಹಿತರು ದೇವರ ವಿಗ್ರಹಗಳ ಮುಂದೆ ನಿಂತು ತಮ್ಮ ಧರ್ಮದಲ್ಲಿ ವಿಧಿಸಿರುವ ಕರ್ಮಗಳನ್ನು ಮಾಡಬೇಕೆಂದೂ ದೇವರುಗಳಿಗೋಸ್ಕರ ಬಲಿದಾನ ಮಾಡಿ ಪ್ರಾಣತ್ಯಾಗ ಮಾಡಿದರೆ ದೇವರುಗಳಿಗೆ ಮೆಚ್ಚುಗೆಯಾಗುವುದೆಂದೂ ಬೋಧನೆ ಮಾಡುತ್ತಾರೆ. ದೇವರುಗಳಿಗೋಸ್ಕರ ಪ್ರಾಣತ್ಯಾಗ ಮಾಡಲು ಅನೇಕರು ಸಿದ್ಧವಾಗಿ ಮುಂದೆ ಬರುತ್ತಾರೆ" ಎಂಬುದಾಗಿ ನಿಕೊಲೊಕೊಂಟಿ ತಿಳಿಸುತ್ತಾನೆ. ಬಾರ್ಬೋಸ ತಾನು ಕಂಡ ವಿವರಣೆಯನ್ನು ಬೇರೆ ರೀತಿಯದಾಗಿ ನೀಡುತ್ತಾನೆ. ರಥೋತ್ಸವದ ದಿನ ರಾಜನು ಸ್ನಾನ ಮಾಡಿ, ದೇವರ ಪೂಜೆಯನ್ನು ನೆರವೇರಿಸಿ ಸಾರುವೆ ಕಟ್ಟಿ, ರೇಷ್ಮೆ ಬಟ್ಟೆಗಳಿಂದ ಅಲಂಕರಿಸಿದ ರಥದ ಮೇಲೆ ಬಂದು ನಿಲ್ಲುತ್ತಾನೆ. ರಕ್ತಸ್ರಾವದಿಂದ ಪ್ರಜ್ಞೆತಪ್ಪಿ ಬೀಳುವಷ್ಟರಲ್ಲಿ ತನ್ನ ಕುತ್ತಿಗೆಯನ್ನು ಕೊಯ್ದುಕೊಳ್ಳುತ್ತಾನೆ. ಈ ರೀತಿ ಅವನು ದೇವರಿಗೆ ಬಲಿಯಾಗುತ್ತಾನೆ. ಅವನ ನಂತರ ರಾಜನಾಗುವವನು ಅಲ್ಲಿದ್ದು ಇದನ್ನೆಲ್ಲಾ ನೋಡಬೇಕು, ಆಗಲೆ ಅವನನ್ನು ಮುಂದಿನ ರಾಜನನ್ನಾಗಿ ಮಾಡುವುದು. ಈ ರೀತಿಯ ಕೆಲವು ಉದಾಹರಣೆಗಳು ದೊರಕುತ್ತವೆ.

ಹಂಪಿಯಲ್ಲಿ ದೊರಕಿರುವ ಸಿಡಿಕಲ್ಲುಗಳನ್ನು ಮೂರು ವಿಧವಾಗಿ ವಿಂಗಡಿಸಬಹುದು: (1) ಪಟ್ಟಿಕೆಗಳನ್ನು ಹೊಂದಿರುವ ಸಿಡಿಕಲ್ಲು, (2) ಏಕಚಿತ್ರಣವಿರುವ ಸಿಡಿಕಲ್ಲು, (3) ಸ್ತಂಭ ಸಿಡಿಕಲ್ಲು.

1. ಪಟ್ಟಿಕೆಗಳನ್ನು ಹೊಂದಿರುವ ಸಿಡಿಕಲ್ಲು (ಚಿತ್ರ)

ಸಿಂಘಾರದ ಹೆಬ್ಬಾಗಿಲ ಪೂರ್ವಕ್ಕಿರುವ ಕೃಷ್ಣ ದೇವಾಲಯದ ಬಳಿ ಇರುವ ಗುಡ್ಡದ ತಪ್ಪಲಲ್ಲಿ ಒಂದು ಸ್ಮಾರಕ ಚಪ್ಪಡಿಕಲ್ಲು ದೊರೆತಿದೆ. ಈ ರೀತಿಯ ಕಲ್ಲನ್ನು ಸಿಡಿಕಲ್ಲು ಎಂದು ಕರೆದಿದ್ದಾರೆ. ವಿಜಯನಗರದ ಸಿಡಿಕಲ್ಲಿನ ಉತ್ತಮ ಉದಾಹರಣೆ ಇದಾಗಿದೆ. ಈ ಚಪ್ಪಡಿಯು 5x2½ ಅಡಿ ಇದೆ. ಇಲ್ಲಿ ಮೂರು ಪಟ್ಟಿಕೆಗಳಿವೆ. ಕೆಳಭಾಗದ ಪಟ್ಟಿಕೆಯಲ್ಲಿ, ವೀರನೊಬ್ಬ ತನ್ನ ತಲೆಯನ್ನು ಸಮರ್ಪಿಸಿಕೊಳ್ಳುವ ಭಂಗಿಯಲ್ಲಿ ನಿಂತಿದ್ದಾನೆ. ಈ ವೀರನು ದೇವರನ್ನು ಒಲಿಸಿಕೊಳ್ಳಲು ಅಥವಾ ತನ್ನ ತಲೆಯನ್ನು ಕಡಿದುಕೊಂಡು ದೇವರಿಗೆ ಸಮರ್ಪಿಸಿಕೊಳ್ಳುವ ಭಂಗಿಯಲ್ಲಿದ್ದಾನೆ. ಆತನ ಇಚ್ಛೆಯು ಪೂರ್ಣವಾದ ಕುರುಹು ಇದು ಆಗಿರಬೇಕು. ಇಲ್ಲಿ ಸಿಡಿಯಾಡುವ ಚಿತ್ರವಿದೆ. ಈ ಸಾಧನವು ಒಂದು ನೆಟ್ಟನೆಯ ಕಂಬವನ್ನು ನೆಲದಲ್ಲಿ ನೆಟ್ಟು, ಅದರ ಮೇಲ್ಭಾಗದ ತುದಿಯಲ್ಲಿ ಅಡ್ಡವಾಗಿ ಉದ್ದವಾದ ಕೋಲನ್ನು ಇಡಲಾಗಿದೆ. ಹಿಂಭಾಗದಲ್ಲಿ ನಿಂತಿರುವ ಸೇವಕನು ಕೋಲಿಗೆ ಕಟ್ಟಿದ ದಪ್ಪ ಹಗ್ಗವನ್ನು ಕೈಯಲ್ಲಿ ಹಿಡಿದಿದ್ದಾನೆ. ಮುಂಭಾಗದಲ್ಲಿ ವೀರನು ತನ್ನ ಎಡಗೈಯಿಂದ ಕೋಲನ್ನು ಹಿಡಿದುಕೊಂಡಿದ್ದಾನೆ. ವೀರನ ಸೊಂಟದಿಂದ ಹಗ್ಗವನ್ನು ಕೋಲಿಗೆ ಕಟ್ಟಲಾಗಿದೆ. ಆತನ ಬಲಗೈಯಲ್ಲಿರುವ ಖಡ್ಗವು ಅವನ ಕುತ್ತಿಗೆಯ ಬಳಿ ಇದೆ. ವೀರ ಆತ್ಮಾಹುತಿಯ ಪ್ರಕ್ರಿಯೆಗೆ ಒಳಪಟ್ಟಾಗ ಖಡ್ಗದಿಂದ ಅವನ ಶಿರಚ್ಛೇದವಾಗುತ್ತದೆ. ವೀರನ ರುಂಡವು ಕೋಲಿನ ತುದಿಯಿಂದ ನೇತಾಡುವ ವ್ಯವಸ್ಥೆಯಿರುತ್ತದೆ. ಈ ಸಿಡಿಕಲ್ಲಿನಲ್ಲಿ ವೀರನು ಆತ್ಮಾಹುತಿಯ ಕೊನೆಯ ಹಂತದಲ್ಲಿರುವಂತೆ ಬಿಡಿಸಲಾಗಿದೆ. ಆತನ ಇಬ್ಬರು ಹೆಂಡಂದಿರು ಸತಿ ಮರಣವನ್ನಪ್ಪಿರುವುದನ್ನು ಚಿತ್ರಿಸಲಾಗಿದೆ.[6] ಈ ಸತಿಯಾಗಿರುವ ಮಹಿಳೆಯರನ್ನು ಅವರು ಶೃಂಗರಿಸಿಕೊಂಡಿರುವ ರೀತಿಯಿಂದ ಅರಿಯಬಹುದಾಗಿದೆ. ಅವರು ಬಲಗೈಯನ್ನು ಮೇಲೆತ್ತಿರುವುದನ್ನು ಸ್ಪಷ್ಟವಾಗಿ ಚಿತ್ರಿಸಲಾಗಿದೆ.



ಕೃಷ್ಣದೇವಾಲಯದ ಬಳಿಯಿರುವ ಸಿಡಿಕಲ್ಲು

ಎರಡನೆಯ ಪಟ್ಟಿಕೆಯಲ್ಲಿ ವೀರ ತನ್ನಿಬ್ಬರು ಹೆಂಡಂದಿರೊಡನೆ ಶಿವನ ಸಾನಿಧ್ಯಕ್ಕೆ ಕೈಮುಗಿದುಕೊಂಡು ಹೋಗುತ್ತಿರುವಂತೆ ಚಿತ್ರಿಸಿದೆ. ಮೇಲ್ಭಾಗದಲ್ಲಿ ಕೊನೆಯ ಪಟ್ಟಿಕೆಯಿದ್ದು, ಇಲ್ಲಿ ಲಿಂಗ, ಅದರ ಮುಂದೆ ನಂದಿ, ಲಿಂಗವನ್ನು ಪೂಜಿಸುವ ಗಡ್ಡಧಾರಿ ಭಕ್ತ ಮತ್ತು ಸೂರ್ಯಚಂದ್ರರಿದ್ದಾರೆ.

ಈ ಸಿಡಿತಲೆ ಕಲ್ಲಿನಲ್ಲಿ ಯಾವುದೇ ಶಾಸನ ಇರುವುದಿಲ್ಲ. ಹೊಯ್ಸಳರ ಕಾಲದ ಈ ಬಗೆಯ ಸಿಡಿತಲೆಗಳಲ್ಲಿ ಶಾಸನವಿರುವುದು ಸಾಮಾನ್ಯ.

2. ಏಕ ಚಿತ್ರಣವಿರುವ ಸಿಡಿಕಲ್ಲು

ಹಂಪಿಯ ಸಂಗ್ರಹಾಲಯದಲ್ಲಿರುವ ಎರಡು ಶಿಲ್ಪಗಳು ತೀರಾ ಭಿನ್ನವಾಗಿವೆ. ಸಮ ಭಂಗಿಯಲ್ಲಿ ನಿಂತ ವೀರ ತನ್ನ ಕುತ್ತಿಗೆಯನ್ನು ಕತ್ತರಿಸಿಕೊಂಡು ಎಡಗೈಯಲ್ಲಿ ಜುಟ್ಟಿನಿಂದ ರುಂಡವನ್ನು ಹಿಡಿದು ನಿಂತಿದ್ದಾನೆ. ಈ ಶಿಲ್ಪದ ಮೇಲೆ ಯಾವುದೇ ಶಾಸನವಿಲ್ಲ.

3. ಕಂಬದ ಸಿಡಿಕಲ್ಲು

ಮೂರನೆಯ ಬಗೆಯ ಆತ್ಮಾಹುತಿ ಕಲ್ಲು ಸುಮಾರು 4 ಅಡಿ ಉದ್ದವಿದೆ. ಇದು ಕೆಳಗೆ ಚೌಕಾಕರದಲ್ಲಿದ್ದು ಮೇಲೆ ಹೋದಂತೆ ಕಿರಿದಾಗಿದೆ. ಎರಡು ಕಡೆ ಸತಿಯ ಚಿತ್ರಣವಿದ್ದು, ಮಿಕ್ಕೆರಡು ಕಡೆ ವೀರನನ್ನು ತನ್ನ ತಲೆ ಸಮರ್ಪಿಸಿಕೊಳ್ಳುವ ಭಂಗಿಯಲ್ಲಿ ಚಿತ್ರಿಸಲಾಗಿದೆ. ಅಷ್ಟಕೋನಾಕೃತಿಯ ಮೇಲ್ಭಾಗ ಕಳಶದ ಆಕಾರದಲ್ಲಿದೆ. ಇದರ ಮೇಲೆ ಶಾಸನವಿಲ್ಲ.

ಹಂಪಿಯ ಒಟ್ಟು ವಿಸ್ತೀರ್ಣಕ್ಕೆ ಹೋಲಿಸಿದರೆ ದೊರೆತಿರುವ ಸಿಡಿತಲೆ ಕಲ್ಲುಗಳು ಬಹಳ ಕಡಿಮೆ ಎಂದು ಹೇಳಬಹುದು. ನೋಡುಗರ ಗಮನ ಸೆಳೆಯುವ ಈ ಸಿಡಿಕಲ್ಲುಗಳು ಮತ್ತು ಅವುಗಳು ಚಿತ್ರಿಸಿರುವ ಚಿತ್ರಣಗಳು ವಿಜಯನಗರ ಕಾಲದ ಸಮಾಜವನ್ನು ಬಿಂಬಿಸುತ್ತವೆ.

ಟಿಪ್ಪಣಿಗಳು

1. ಎಂ. ಚಿದಾನಂದಮೂರ್ತಿ, *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ,* ಪು. 299.
2. *SII.*, IX, pt. i, No. 9.
3. *EC.*, VIII, Sb. 479.
4. *EC.*, VII, Sk. 290.
5. ಎಂ.ಎಂ. ಕಲಬುರ್ಗಿ, *ಸಮಾಧಿ ಬಲಿದಾನ ವೀರಮರಣ ಸ್ಮಾರಕಗಳು,* ಪು. 61-62.
6. M.S. Nagaraja Rao (Ed.), *Vijayanagara: Progress of Research 1979-83*, pp. 38-39.

4. ಬಳ್ಳಾರಿಯ ಕೋಟೆಮಲ್ಲೇಶ್ವರ ದೇವಸ್ಥಾನದಲ್ಲಿಯ ಶಿವಭಕ್ತರ ಶಿಲ್ಪಗಳು

ವಿನೋದಾ ಪಾಟೀಲ

ಒಂದು ಕಾಲದಲ್ಲಿ ತಮಿಳುನಾಡಿನಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಶೈವಧರ್ಮವು, ಜೈನ ಮತ್ತು ಬೌದ್ಧ ಧರ್ಮಗಳ ಪ್ರಚಾರದಿಂದ, ಅವಸಾನ ಹೊಂದುವ ಸ್ಥಿತಿ ತಲುಪಿತ್ತು. ಆಗ ಆ ಧರ್ಮವನ್ನು ಮತ್ತೆ ಪುನರುಜ್ಜೀವನಗೊಳಿಸಿದವರು 63 ಪುರಾತನರೆಂದು ಪ್ರಸಿದ್ಧಿ ಪಡೆದ ತಮಿಳುನಾಡಿನ ಶಿವಭಕ್ತರು. ಇವರು ತಮ್ಮ ಪ್ರಾಣವನ್ನಷ್ಟೇ ಅಲ್ಲದೆ ತಮ್ಮ ಪತ್ನಿ, ಮಕ್ಕಳನ್ನೂ ತ್ಯಾಗ ಮಾಡಿ ಶೈವಧರ್ಮದ ಉದ್ಧಾರಕ್ಕೆ ಶ್ರಮಿಸಿದ್ದಾರೆ. ಈ ಪುರಾತನರ ಬಗ್ಗೆ ಕನ್ನಡದಲ್ಲಿ ಹರಿಹರನ ರಗಳೆ, ಭೀಮಕವಿಯ ಬಸವಪುರಾಣ, ಲಕ್ಕಣ್ಣ ದಂಡೇಶನ ಶಿವತತ್ವ ಚಿಂತಾಮಣಿ; ಸಂಸ್ಕೃತದಲ್ಲಿ ಅಗಸ್ತ್ಯ ಭಕ್ತ ವಿಲಾಸ, ಉಪಮನ್ಯು ಭಕ್ತವಿಲಾಸ; ತಮಿಳಿನಲ್ಲಿ ಶೇಕ್ಕಿಳಾರನ ಪೆರಿಯ ಪುರಾಣ ಮತ್ತು ತೆಲುಗು ಸಾಹಿತ್ಯಗಳಲ್ಲಿ ವಿಪುಲ ಮಾಹಿತಿ ದೊರೆಯುತ್ತದೆ. ಇವರು ತಮಿಳುನಾಡಿನವರಾಗಿದ್ದು ಇತರ ಭಾಷೆಗಳಲ್ಲಿಯೂ ಇವರ ಚರಿತ್ರೆ ದೊರೆತಿದ್ದರಿಂದ ಇವರ ಹೆಸರುಗಳಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಈ ವ್ಯತ್ಯಾಸ ಉಚ್ಚಾರಣೆಯಿಂದ ಆಗಿದೆಯೋ ಅಥವಾ ಇನ್ನಾವುದಾದರು ಕಾರಣದಿಂದ ಆಗಿದೆಯೋ ಎಂಬುದು ಸ್ಪಷ್ಟವಾಗಿಲ್ಲ. ಕೆಳಗೆ ತಿಳಿಸಿರುವ ನಾಲ್ಕು ಕೃತಿಗಳಲ್ಲಿರುವ ಅವರ ಹೆಸರು ಮತ್ತು ಕಾಯಕಗಳ ಆಧಾರದಿಂದ ಇಲ್ಲಿರುವ ಶಿಲ್ಪಗಳನ್ನು ಗುರುತಿಸಲಾಗಿದೆ. ಆ ಕೃತಿಗಳು:

1. ಆರ್.ಸಿ. ಹಿರೇಮಠರವರ "ಕವಿ ಚಕ್ರವರ್ತಿ ಸುರಂಗಕವಿ ಕೃತ ತ್ರಿಷಷ್ಠಿ ಪುರಾತನ ಚಾರಿತ್ರಂ" ಗ್ರಂಥದಲ್ಲಿ ಕೊಟ್ಟಿರುವ 18 ಕೃತಿಗಳಲ್ಲಿ ಬರುವ ಪುರಾತನರ ಹೆಸರುಗಳ ಪಟ್ಟಿ.[1]

2. ಎಚ್. ದೇವೀರಪ್ಪನವರ "ಹಂಪೆಯ ಹರಿಹರದೇವ ವಿರಚಿತ ಶರಣಚರಿತ ಮಾನಸಂ" ಗ್ರಂಥದಲ್ಲಿ ಕೊಟ್ಟಿರುವ 5 ಕೃತಿಗಳಲ್ಲಿ ಬರುವ ಪುರಾತನರ ಹೆಸರುಗಳ ಪಟ್ಟಿ.[2]

3. ಎಸ್. ವಿದ್ಯಾಶಂಕರರವರ "ವೀರಶೈವ ಪುರಾಣಗಳು - ಒಂದು ಅಧ್ಯಯನ" ಗ್ರಂಥದಲ್ಲಿರುವ ಪುರಾತನರ ಹೆಸರು ಮತ್ತು ಕಾಯಕಗಳಪಟ್ಟಿ.[3]

4. ಜಿ.ಜಿ. ಮಂಜುನಾಥನ್‌ರವರ "ಪ್ರಸಾದ", ದ್ವೈಮಾಸಿಕ, ಸಂಪುಟ 6(1991)ರಲ್ಲಿ ಪ್ರಕಟಿಸಿದ "ಕಳಲೆ ನಂಜರಾಜ ವಿರಚಿತ ಅರವತ್ತು ಮೂವರ ಪುರಾತನ ಚರಿತೆ"ಯಲ್ಲಿ ಕೊಟ್ಟಿರುವ ಪುರಾತನರ ಹೆಸರು ಮತ್ತು ಕಾಯಕ.[4]

63 ಪುರಾತನರು ತಮ್ಮ ನಿಷ್ಠೆ, ಭಕ್ತಿಯಿಂದ ಶಿವನನ್ನು ಒಲಿಸಿಕೊಂಡು ಜನರಲ್ಲಿದ್ದ ನಾಸ್ತಿಕತೆಯನ್ನು ಹೊಡೆದೋಡಿಸಿ ಆಸ್ತಿಕತೆಯನ್ನು ಬೆಳೆಸಿದುದರ ಜೊತೆಗೆ ತಾವೂ ಪೂಜ್ಯನೀಯರಾಗಿ ಮೆರೆದಿದ್ದಾರೆ. ಆ ಕಾರಣಕ್ಕಾಗಿಯೇ ಅವರ ಮಹಿಮೆ ತಮಿಳುನಾಡಿನಲ್ಲಿ ಮಾತ್ರವಲ್ಲದೆ ಕರ್ನಾಟಕದಲ್ಲಿಯೂ ಹರಡಿ, ಜನರು ಅವರ ಶಿಲ್ಪಗಳನ್ನು ಸ್ಥಾಪಿಸಿ ಪೂಜೆ ಸಲ್ಲಿಸಿದ್ದಾರೆ. ಇವರ ಶಿಲ್ಪಗಳು ತಮಿಳುನಾಡಿನಲ್ಲಿ ದಾರಾಸುರಂನ ಐರಾವತೇಶ್ವರ ದೇವಸ್ಥಾನ ಮತ್ತು ಇತರ ಕೆಲವು ಸ್ಥಳಗಳಲ್ಲಿ ಮತ್ತು ಕರ್ನಾಟಕದಲ್ಲಿ ನಂಜನಗೂಡಿನ ಶ್ರೀಕಂಠೇಶ್ವರ ದೇವಸ್ಥಾನ, ಚಾಮರಾಜನಗರದ ಚಾಮರಾಜೇಶ್ವರ ದೇವಸ್ಥಾನ, ಶ್ರೀರಂಗಪಟ್ಟಣದ ಗಂಗಾಧರೇಶ್ವರ ದೇವಸ್ಥಾನ, ಬುಕ್ಕಸಾಗರದ ವೀರಭದ್ರಸ್ವಾಮಿ ದೇವಸ್ಥಾನ ಮತ್ತು ಬಳ್ಳಾರಿಯ ಕೋಟೆಮಲ್ಲೇಶ್ವರ ದೇವಸ್ಥಾನಗಳಲ್ಲಿ ಕಂಡು ಬಂದಿವೆ. ದಾರಾಸುರಂನ ವಿಗ್ರಹಗಳ ರೇಖಾಚಿತ್ರಗಳು ಆ್ಯರಿಇಎ (A.R.I.E) 1908ರಲ್ಲಿ,[5] ನಂಜನಗೂಡಿನ ವಿಗ್ರಹಗಳು ಎ.ಕ. ಸಂ. IVರಲ್ಲಿ[6] ಮತ್ತು ಮೈ.ಆ.ರಿ.ನಲ್ಲಿ,[7] ಚಾಮರಾಜನಗರದ ವಿಗ್ರಹಗಳು ಎ.ಕ., ಸಂ. XIVರಲ್ಲಿ[8] ಪ್ರಕಟವಾಗಿವೆ. ಬುಕ್ಕಸಾಗರದ ವಿಗ್ರಹಗಳನ್ನು ಸಿ.ಟಿ.ಎಂ. ಕೊಟ್ರಯ್ಯನವರು ಗುರುತಿಸಿದ್ದಾರೆ.[9] ಶ್ರೀರಂಗಪಟ್ಟಣದ ಶಿಲ್ಪಗಳು ಸತ್ಯಶುದ್ಧ ಕಾಯಕದಲ್ಲಿ ಪ್ರಕಟವಾಗಿವೆ.[10] ಬಳ್ಳಾರಿಯ ಕೋಟೆಮಲ್ಲೇಶ್ವರ ದೇವಸ್ಥಾನದಲ್ಲಿರುವ ವಿಗ್ರಹಗಳನ್ನು ಪ್ರಥಮಬಾರಿಗೆ ಇಲ್ಲಿ ಗುರುತಿಸಲಾಗಿದೆ. ಈ ದೇವಸ್ಥಾನದ ಪ್ರಾಕಾರದ ಗೋಡೆಯ ಒಳಭಾಗದಲ್ಲಿ ಅನೇಕ ಶಿಲ್ಪ ಪಟ್ಟಿಕೆಗಳಿವೆ. ಇಲ್ಲಿ ಗಿರಿಜಾ ಕಲ್ಯಾಣಕ್ಕೆ ಸಂಬಂಧಿಸಿದ ಶಿಲ್ಪಗಳನ್ನು, ಪುರಾತನರ ಮತ್ತು ವೀರಶೈವ ಶರಣರ ಶಿಲ್ಪಗಳನ್ನು ಮತ್ತು ಇನ್ನೂ ಕೆಲವು ಇತರ ಕಥೆಗಳಿಗೆ ಸಂಬಂಧಿಸಿದ ಶಿಲ್ಪಗಳನ್ನು ಒಟ್ಟಿಗೆ ಕೆತ್ತಿರುವುದರಿಂದ ಯಾವ ಶಿಲ್ಪ ಯಾವ ಕಥೆಗೆ ಸಂಬಂಧಿಸಿದ್ದೆಂದು ಗುರುತಿಸುವುದು ಕಷ್ಟಕರ. ಬಹುಶಃ ಇಲ್ಲಿ ಎಲ್ಲ 63 ಪುರಾತನರ ಶಿಲ್ಪಗಳಿರಬಹುದು. ಶಿಲ್ಪಗಳಿಗೆ ಯಾವುದೇ ಶಾಸನಗಳಿಲ್ಲದಿರುವುದರಿಂದ ಎಲ್ಲ ಶಿಲ್ಪಗಳನ್ನು ಗುರುತಿಸುವುದು ಸಾಧ್ಯವಾಗಿಲ್ಲ. ಆದರೂ ಶ್ರಮವಹಿಸಿ ಈ ಶಿವಭಕ್ತರ ಜೀವನದಲ್ಲಿ ನಡೆದ ಘಟನೆಗಳ ಆಧಾರದಿಂದ 19 ಪುರಾತನರ ಮತ್ತು 4 ವೀರಶೈವ ಶರಣರ ಶಿಲ್ಪಗಳನ್ನು ಗುರುತಿಸಲಾಗಿದೆ. ಇನ್ನೂ ಕೆಲವು ಶಿಲ್ಪಗಳನ್ನು ಊಹೆಯಿಂದ ಗುರುತಿಸಬಹುದಾಗಿದೆ.

ಈ ದೇವಸ್ಥಾನದ ವಾಸ್ತು ಮತ್ತು ಈ ಶಿಲ್ಪಗಳ ಶೈಲಿಯಿಂದ ಇವು ವಿಜಯನಗರ ಕಾಲದವೆಂದು ಹೇಳಬಹುದು. ಕಲ್ಯಾಣದಲ್ಲಿ ಬಸವಣ್ಣನವರ ಕಾಲದಲ್ಲಿ ನಡೆದ ಕ್ರಾಂತಿಯಿಂದ ಬಸವಣ್ಣನವರ ಅನುಯಾಯಿಗಳು ಕಲ್ಯಾಣ ತೊರೆದು ಕೂಡಲಸಂಗಮ, ಹಂಪೆ, ಬಳ್ಳಿಗಾವೆ,

ಉಳವಿ ಮುಂತಾದ ಸ್ಥಳಗಳಿಗೆ ಹೋಗಿ ನೆಲೆಸಿದರು. ಧರ್ಮಪ್ರಚಾರಕ್ಕಾಗಿ ಶರಣರನ್ನು ಕುರಿತು ಗ್ರಂಥಗಳನ್ನು ರಚಿಸುವ ಮಠ, ಸಂಘ, ಸಂಸ್ಥೆಗಳನ್ನು ಸ್ಥಾಪಿಸಿ ದಾನ ನೀಡುವ ಕಾರ್ಯಗಳನ್ನು ಕೈಗೊಂಡರು. ಇದಕ್ಕೂ ಪೂರ್ವದಲ್ಲಿ ಕವಿ ಹರಿಹರನು ಪಂಪಾ ಕ್ಷೇತ್ರದಲ್ಲಿ ನೆಲೆಸಿ ಪುರಾತನರ ಮತ್ತು ವೀರಶೈವ ಶರಣರ ರಗಳೆಗಳನ್ನು ರಚಿಸಿದ್ದಾನೆ. ಅಲ್ಲದೆ ವಿಜಯನಗರವು ಸಂಗಮ ವಂಶದ ಆಡಳಿತ ಕಾಲದಲ್ಲಿ ಶೈವ-ವೀರಶೈವ ಧರ್ಮದ ಪ್ರಮುಖ ಕೇಂದ್ರವಾಗಿತ್ತು. ಹರಿಹರನ ರಗಳೆಗಳ ಪ್ರಭಾವದಿಂದಾಗಲಿ ಅಥವಾ ಶೈವಧರ್ಮದ ಪ್ರಚಾರಕ್ಕಾಗಿಯಾಗಲಿ ಇಲ್ಲಿ ಈ ಶಿಲ್ಪಗಳನ್ನು ಕೆತ್ತಿಸಿರಬಹುದೆಂದು ಭಾವಿಸಬಹುದಾಗಿದೆ.

ಈ ಶಿವಭಕ್ತರ ಜೀವನ ಚರಿತ್ರೆ[11] ಮತ್ತು ದೇವಸ್ಥಾನದಲ್ಲಿರುವ ಶಿಲ್ಪಗಳನ್ನು ಕೆಳಗೆ ವಿವರಿಸಲಾಗಿದೆ.

(1) ತಿರುನೀಲಕಂಠ: ಈತ ಚೋಳದೇಶದ ಚಿದಂಬರದವನು. ಆದರೆ ಹರಿಹರನು ಈತ ಚೋಳದೇಶದ ಪೊನ್ನಾಂಬಲಿಪುರದವನೆಂದು ಹೇಳಿದ್ದಾನೆ. ಸುಮಾರು ಕ್ರಿ.ಶ. 600-660ರ ಮಧ್ಯಕಾಲದಲ್ಲಿ ಜೀವಿಸಿದ್ದ. ಪತಿ-ಪತ್ನಿಯರಿಬ್ಬರಿಗೂ ಶಿವನಲ್ಲಿ ಅಪಾರ ಭಕ್ತಿ ಇತ್ತು. ಒಂದು ದಿನ ದೇವಾಲಯಕ್ಕೆ ಹೋಗಿ ಪೂಜೆ ಮುಗಿಸಿಕೊಂಡು ಬರುವಾಗ ಒಬ್ಬ ವೇಶ್ಯೆಯು ಮನೆಯೊಳಗೆ ನಿಂತು ಎಂಜಲು ನೀರನ್ನು ಚೆಲ್ಲಿದಾಗ ಅದು ನೀಲಕಂಠನ ಮೈಮೇಲೆ ಬೀಳುತ್ತದೆ. ವೇಶ್ಯೆಗೆ ತನ್ನ ತಪ್ಪಿನ ಅರಿವಾಗಿ ನೀಲಕಂಠನನ್ನು ಒಳಗೆ ಕರೆದು ಪರಿಮಳ ದ್ರವ್ಯಗಳಿಂದ ಕೂಡಿದ ನೀರಿನಿಂದ ಸ್ನಾನ ಮಾಡಿಸಿ ಕಳಿಸುತ್ತಾಳೆ. ಮನೆಗೆ ಬಂದ ಪತಿಯ ಮೈಯಿಂದ ಸುಗಂಧ ದ್ರವ್ಯದ ವಾಸನೆಯು ಬರುತ್ತಿರುವುದನ್ನು ಗಮನಿಸಿದ ಆತನ ಪತ್ನಿಯು, ಪತಿಯು ದಾರಿ ತಪ್ಪಿರುವನೆಂದು ತಿಳಿದು ನೀವು ನಮ್ಮನ್ನು ಮುಟ್ಟಿದರೆ ತಿರುನೀಲಕಂಠನಾಣೆ ಎಂದು ಆಣೆ ಇಡುತ್ತಾಳೆ. ಅಂದಿನಿಂದ ಪತಿ ಪತ್ನಿಯರಿಬ್ಬರೂ ಒಂದೇ ಮನೆಯಲ್ಲಿದ್ದರೂ ಒಬ್ಬರನ್ನೊಬ್ಬರು ಮುಟ್ಟದೆ ಬದುಕುತ್ತಿರುತ್ತಾರೆ. ಶಿವನು ಇವರಿಬ್ಬರನ್ನು ಪರೀಕ್ಷಿಸುವುದಕ್ಕೋಸ್ಕರ ಭಿಕ್ಷುಕನ ವೇಷದಲ್ಲಿ ಬಂದು ಒಂದು ಪಾತ್ರೆಯನ್ನು ಕೊಟ್ಟು ಸುರಕ್ಷಿತವಾಗಿಡಲು ಹೇಳಿಹೋಗುತ್ತಾನೆ. ಕೆಲವು ಸಮಯದ ನಂತರ ಬಂದು ತನ್ನ ಪಾತ್ರೆ ಕೇಳಲು ಅದು ಮಾಯವಾಗಿರುತ್ತದೆ. ತನ್ನ ಪಾತ್ರೆಯನ್ನು ಕೊಡಬೇಕು ಇಲ್ಲವಾದರೆ ಇಬ್ಬರೂ ಒಬ್ಬರ ಕೈಯನ್ನೊಬ್ಬರು ಹಿಡಿದು ಕೊಳದಲ್ಲಿ ಮುಳುಗಬೇಕು ಎಂದು ಹೇಳುತ್ತಾನೆ. ಆಗ ದಂಪತಿಗಳು ತಾವಿಬ್ಬರೂ ಒಬ್ಬರನ್ನೊಬ್ಬರು ಮುಟ್ಟುವುದಿಲ್ಲ ಎಂದು ಆಣೆಯನ್ನು ಪಾಲಿಸುತ್ತಿರುವ ವಿಷಯ ತಿಳಿಸಿದಾಗ ಶಿವನು ಒಂದು ಕೋಲನ್ನು ಕೊಟ್ಟು ಇಬ್ಬರೂ ಕೋಲಿನ ಒಂದೊಂದು ತುದಿ ಹಿಡಿದು ನೀರಿನಲ್ಲಿ ಮುಳುಗಿರಿ ಎಂದು ಹೇಳುತ್ತಾನೆ. ಅದರಂತೆ ಇಬ್ಬರೂ ನೀರಿನಲ್ಲಿ ಮುಳುಗಿದಾಗ ಹದಿನಾರರ ಹರೆಯದವರಾಗಿ ಮೇಲೇಳುತ್ತಾರೆ. ಭಿಕ್ಷುಕನು ನಿಜರೂಪ ತೋರುತ್ತಾನೆ.

ಶಿಲ್ಪ: ಇಲ್ಲಿ ಮಧ್ಯದಲ್ಲಿ ಕೊಳದ ದೃಶ್ಯವಿದೆ. ಕೊಳದಲ್ಲಿ ಮೇಲಿನಿಂದ ನೀರು ಬೀಳುತ್ತಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಎಡಭಾಗದಲ್ಲಿ ಪತಿಪತ್ನಿಯರು ಕೋಲಿನ ಒಂದೊಂದು ತುದಿ ಹಿಡಿದು ನಿಂತಿದ್ದಾರೆ. ಬಲಭಾಗದಲ್ಲಿ ಶಿವನು ಭಿಕ್ಷುಕನ ವೇಷದಲ್ಲಿ ನಿಂತು ಕೈ ಮುಂದೆ ಮಾಡಿ ದಂಪತಿಗಳಿಗೆ ಕೊಳದಲ್ಲಿ ಮುಳುಗಲು ಹೇಳುತ್ತಿದ್ದಾನೆ (ಚಿತ್ರ 1(i)).

(2) ಮಾನಕಂಜರ (ಮಾನವಿಕ್ರಮ): ಚೋಳದೇಶದ ಕಂಜಾರೂರಿನವನು. ಮನೆಗೆ ಬಂದ ಭಕ್ತರಿಗೆ ಬೇಡಿದ್ದನ್ನು ನೀಡುವ ನೇಮವಿಟ್ಟುಕೊಂಡಿದ್ದ. ಈತನ ಭಕ್ತಿಯನ್ನು ಪರೀಕ್ಷಿಸಲು ಶಿವನು ಮುನಿಯ ವೇಷದಲ್ಲಿ ಈತನ ಮಗಳ ಮದುವೆ ನಡೆಯುತ್ತಿರುವ ಮಂಟಪಕ್ಕೆ ಬರುತ್ತಾನೆ. ಈತನ ಮಗಳ ಮುಡಿಯು ಬೆನ್ನು ತುಂಬ ಹರಡಿರುವುದನ್ನು ನೋಡಿ ತನಗೆ ಜನಿವಾರಕ್ಕೆ ಕೂದಲು ಕೊಡಬೇಕೆಂದು ಕೇಳಲು ಹಿಂದೆ ಮುಂದೆ ಯೋಚಿಸದೆ ಮಗಳ ಮುಡಿಯನ್ನು ಕತ್ತರಿಸಿ ಕೊಡುತ್ತಾನೆ. ಈತನ ಭಕ್ತಿಗೆ ಮೆಚ್ಚಿದ ಶಿವನು ಪಾರ್ವತಿಯೊಂದಿಗೆ ದರ್ಶನ ಕೊಟ್ಟು ವಧುವಿನ ಕೂದಲು ಮೊದಲಿನಂತೆ ಬೆನ್ನು ತುಂಬ ಹರಡುವಂತೆ ಮಾಡುತ್ತಾನೆ.

ಶಿಲ್ಪ: ಇಲ್ಲಿ ಮಾನಕಂಜರನ ಮಗಳು ವಧುವಿನ ವೇಷದಲ್ಲಿ ಸ್ವಲ್ಪ ತಲೆಬಾಗಿ ನಿಂತಿದ್ದಾಳೆ. ಮಾನಕಂಜರನು ಎಡಗೈಯಲ್ಲಿ ಅವಳ ಮುಡಿ ಹಿಡಿದು ಬಲಗೈಯಲ್ಲಿರುವ ಕತ್ತಿಯಿಂದ ಕೂದಲನ್ನು ಕತ್ತರಿಸುತ್ತಿದ್ದಾನೆ (ಚಿತ್ರ 1(iv)).

(3) ಮಹಾಧನ (ಸಿಂಧು ಬಲ್ಲಾಳ, ಇಹಃಪಗೆಯಾಂಡ): ಈತ ಚೋಳನಾಡಿನ ಅತಿ ಪುರಾತನ ರಾಜಧಾನಿಯಾಗಿದ್ದ ಪುಗಾರ್ ಎಂಬ ಊರಿನ ಶ್ರೀಮಂತ ವ್ಯಾಪಾರಿಯಾಗಿದ್ದ. ಈತನೂ ಸಹ ಮನೆಗೆ ಬಂದ ಭಕ್ತರಿಗೆ ಬೇಡಿದ್ದನ್ನು ಕೊಡುವ ನೇಮವಿಟ್ಟುಕೊಂಡಿದ್ದ. ಈತನ ಭಕ್ತಿಯ ಆಳವನ್ನು ಪರೀಕ್ಷಿಸಲು ಶಿವನು ಮುನಿಯ ವೇಷದಲ್ಲಿ ಈತನ ಮನೆಗೆ ಬಂದು ತನ್ನ ಪರಿಚಾರಿಕೆಗೆ ಒಬ್ಬ ವನಿತೆ ಬೇಕಾಗಿದ್ದಾಳೆಂದು ಕೇಳುತ್ತಾನೆ. ಮಹಾಧನನು ತನ್ನಲ್ಲಿರುವ ವಿಲಾಸಿನಿಯರನ್ನು, 100 ಸೇವಕಿಯರನ್ನು ಕರೆದು ನಿಮಗೆ ಯಾರು ಬೇಕೊ ಆರಿಸಿಕೊಳ್ಳಿ ಎಂದು ಹೇಳುತ್ತಾನೆ. ಆದರೆ ಶಿವನು ಅವರಲ್ಲಿ ಒಬ್ಬರನ್ನೂ ಇಷ್ಟಪಡದೆ ಮಹಾಧನನ ಪತ್ನಿಯನ್ನೇ ಇಚ್ಛಿಸುತ್ತಾನೆ. ಮುನಿಯು ತನ್ನಲ್ಲಿರುವ ವಸ್ತುವನ್ನೇ ಕೇಳಿದನಲ್ಲ ಎಂದು ಸಂತೋಷಪಟ್ಟು ಮಹಾಧನನು ಪತ್ನಿಯನ್ನೇ ಮುನಿಗೆ ಒಪ್ಪಿಸುತ್ತಾನೆ. ಮಹಾಧನನ ಸಂಬಂಧಿಕರು ಇದಕ್ಕೆ ಅಡ್ಡಿ ಬರಬಹುದೆಂದು ಯೋಚಿಸಿದ ಮುನಿಯು ಊರ ಗಡಿ ದಾಟುವವರೆಗೆ ಬಂದು ತಮ್ಮನ್ನು ಕಳಿಸು ಬಾ ಎಂದು ಆತನನ್ನು ಕರೆಯುತ್ತಾನೆ. ಆಗ ಮಹಾಧನನು ಊರ ಗಡಿಯವರೆಗೆ ಹೋಗಿ ಸಂಬಂಧಿಗಳೊಂದಿಗೆ ಹೋರಾಡಿ ಅವರನ್ನು ಕಳಿಸಿಕೊಡುತ್ತಾನೆ. ಈತನ ಭಕ್ತಿಗೆ ಮೆಚ್ಚಿದ ಶಿವನು ನಿಜರೂಪ ತೋರಿ ಮುಕ್ತಿ ನೀಡುತ್ತಾನೆ.

ಶಿಲ್ಪ: ಶಿವನು ಮುನಿಯ ವೇಷದಲ್ಲಿ ನಡೆದುಹೋಗುತ್ತಿರುವ ಭಂಗಿಯಲ್ಲಿದ್ದಾನೆ. ಈತನ ಬಲಗೈಯಲ್ಲಿ ದಂಡ, ಎಡಗೈಯಲ್ಲಿ ಕಮಂಡಲಗಳಿವೆ. ಆತನ ಹಿಂದೆ ಮಹಾಧನನ ಪತ್ನಿಯು ಕೈಮುಗಿದು ನಿಂತಿದ್ದಾಳೆ. ಅವಳ ಪಕ್ಕದಲ್ಲಿ ಮಹಾಧನನು ಬಲಗೈಯಲ್ಲಿ ಖಡ್ಗ ಹಿಡಿದು, ಎಡಗೈಯನ್ನು ಕೆಳಗೆ ಇಟ್ಟಿರುವ ಗುರಾಣಿಯ ಮೇಲೆ ಇಟ್ಟು ನಿಂತಿದ್ದಾನೆ. ಆತನ ಪಕ್ಕದಲ್ಲಿ ಇಬ್ಬರು ನಿಂತಿದ್ದಾರೆ (ಚಿತ್ರ 2(ii)).

(4) ಅಮರನೀತಿ: ಚೋಳ ದೇಶದ ಪಳೈಯಾರೈ ಎಂಬ ಊರಲ್ಲಿ ಹುಟ್ಟಿದ ಈತನು ಬಟ್ಟೆ ನೇಯುವ ಕಾಯಕ ಕೈಗೊಂಡಿದ್ದ. ತಾನು ನೇಯ್ದ ಬಟ್ಟೆಗಳನ್ನು ಶಿವನಿಗೆ ಅರ್ಪಿಸಿ ಅವುಗಳನ್ನು ಬಡವರಿಗೆ ಹಂಚುತ್ತಿದ್ದ. ಈತನನ್ನು ಪರೀಕ್ಷಿಸಲು ಶಿವನು ಬಂದು, ಒಂದು ವಸ್ತ್ರವನ್ನು ಕೊಟ್ಟು, ತಾನು ಸ್ನಾನ ಮಾಡಿ ಬಂದು ಮತ್ತೆ ಕೇಳಿದಾಗ ಅದನ್ನು ಕೊಡಬೇಕೆಂದು ಹೇಳಿ ಹೋಗುತ್ತಾನೆ. ಕೆಲವು ಸಮಯದ ನಂತರ ಬಂದು ವಸ್ತ್ರವನ್ನು ಕೇಳಿದಾಗ ಅದು ಮಾಯವಾಗಿರುತ್ತದೆ. ಅದಕ್ಕೆ ಬದಲಾಗಿ ಬೇರೆ ವಸ್ತ್ರ ಕೊಡುತ್ತೇನೆಂದು ಅಮರನೀತಿ ಎಷ್ಟೇ ಹೇಳಿದರೂ ಶಿವನು ಒಪ್ಪುವುದಿಲ್ಲ. ನಂತರ ಶಿವನು ತನ್ನಲ್ಲಿರುವ ಒಂದು ಬೇರೆ ವಸ್ತ್ರವನ್ನು ಕೊಟ್ಟು ಅದರ ತೂಕಕ್ಕೆ ಸಮನಾದ ನಿನ್ನಲ್ಲಿರುವ ಒಂದು ವಸ್ತ್ರವನ್ನು ಕೊಡು ಎಂದು ಹೇಳುತ್ತಾನೆ. ನಂತರ ಅಮರನೀತಿಯು ತಕ್ಕಡಿಯ ಒಂದು ತಟ್ಟೆಯಲ್ಲಿ ಶಿವನ ವಸ್ತ್ರವನ್ನಿಟ್ಟು ಇನ್ನೊಂದು ತಟ್ಟೆಯಲ್ಲಿ ತನ್ನಲ್ಲಿರುವ ಸಂಪತ್ತನ್ನೆಲ್ಲ ಇಟ್ಟರೂ ತೂಕ ಸಮನಾಗುವುದಿಲ್ಲ. ಕೊನೆಗೆ ತಾನು ಸತಿ ಸುತರೊಡನೆ ತಟ್ಟೆಯಲ್ಲಿ ಕುಳಿತಾಗ ತೂಕ ಸಮನಾಗುತ್ತದೆ.

ಶಿಲ್ಪ: ಇಲ್ಲಿ ವಸ್ತ್ರಕ್ಕೆ ಬದಲಾಗಿ ತಕ್ಕಡಿಯ ಒಂದು ತಟ್ಟೆಯಲ್ಲಿ ಶಿವನೇ ಕುಳಿತ್ತಿದ್ದು ಇನ್ನೊಂದು ತಟ್ಟೆಯಲ್ಲಿ ಅಮರ ನೀತಿ ಮತ್ತು ಆತನ ಪತ್ನಿ ಇಬ್ಬರೂ ಕೈಮುಗಿದು ಕುಳಿತಿದ್ದಾರೆ (ಚಿತ್ರ 3).


(5) ಕಾರೈಕ್ಕಾಲಮ್ಮ (ಪೂತವತಿ): ಚೋಳನಾಡಿನ ತಿರುಕ್ಕಾರೈಕ್ಕಾಲ್ ಎಂಬ ಊರಿನ ಧನದತ್ತನ ಮಗಳು. ಚಿಕ್ಕಂದಿನಿಂದಲೇ ಶಿವನ ಬಗ್ಗೆ ಅಪಾರ ಭಕ್ತಿ ಇತ್ತು. ಪರಮದತ್ತ ಎಂಬ ಯುವಕನೊಂದಿಗೆ ಮದುವೆಯಾಗಿತ್ತು. ಪತಿಯು ಮನೆಗೆ ಕೊಟ್ಟು ಕಳಿಸಿದ ಎರಡು ಮಾವಿನ ಹಣ್ಣುಗಳಲ್ಲಿ ಒಂದನ್ನು ಅತಿಥಿಗಳಿಗೆ ಕೊಡುತ್ತಾಳೆ. ಪತಿಯು ಮನೆಗೆ ಬಂದು ಹಣ್ಣು ಕೇಳಿದಾಗ ಒಂದೇ ಹಣ್ಣು ಕೊಡುತ್ತಾಳೆ. ಇನ್ನೊಂದು ಹಣ್ಣನ್ನು ಪತಿಯು ಕೇಳಿದಾಗ ಅದನ್ನು ಅತಿಥಿಗಳಿಗೆ ಕೊಟ್ಟ ವಿಷಯ ಪತಿಗೆ ಹೇಳಿದರೆ ಎಲ್ಲಿ ಬಯ್ಯುತ್ತಾನೋ ಎಂದು ಹೆದರಿ ದೇವರ ಮನೆಗೆ ಹೋಗಿ ಶಿವನನ್ನು ಬೇಡುತ್ತಾಳೆ. ಆಗ ಶಿವನು ಆ ಹಣ್ಣನ್ನು ದಯಪಾಲಿಸುತ್ತಾನೆ. ಪತಿಗೆ ಸಂಶಯ ಬಂದು ವಿಚಾರಿಸಿದಾಗ ನಡೆದ ವಿಷಯ ಹೇಳುತ್ತಾಳೆ. ಇವಳು ಸಾಮಾನ್ಯ ಮನುಷ್ಯಳಲ್ಲ ಇವಳೊಂದಿಗೆ ಬಾಳುವುದು ಉಚಿತವಲ್ಲವೆಂದು ಪತಿಯು ಅವಳನ್ನು ತೊರೆದು ಹೋಗುತ್ತಾನೆ. ತನ್ನ ಪತಿಗೇ ಬೇಡವಾದ ಮೇಲೆ ತಾನು ಬದುಕಿ ಏನು ಪ್ರಯೋಜನವೆಂದು ಯೋಚಿಸಿ ಕಾರೈಕ್ಕಾಲಮ್ಮ ಕೈಲಾಸದತ್ತ ಹೊರಡುತ್ತಾಳೆ. ಆದರೆ ತನಗಿಂತ ಮೊದಲೆ ಕೈಲಾಸ ಸೇರಿದ ಹಿರಿಯ ಭಕ್ತರ ಹೆಜ್ಜೆಗಳ ಮೇಲೆ ತಾನೂ ನಡೆಯುವುದು ಪಾಪವೆಂದು ತಿಳಿದು ತಲೆಕೆಳಗೆ ಮಾಡಿ ಕೈಯಿಂದಲೇ ನಡೆದು ಕೈಲಾಸ ಸೇರುತ್ತಾಳೆ.

ಶಿಲ್ಪ: ಇಲ್ಲಿ ಕಾರೈಕ್ಕಾಲಮ್ಮೆಯು ತಲೆಕೆಳಗೆ ಮಾಡಿ ಕೈಗಳಿಂದ ನಡೆದು ಹೋಗುತ್ತಿರುವ ದೃಶ್ಯವಿದೆ (ಚಿತ್ರ 4).


(6) ಶಾಕ್ಯನಾಥ (ಸಾಂಖ್ಯತೊಂಡ): ಚೋಳನಾಡಿನ ತಿರುಚ್ಚಮಂಗೈನಲ್ಲಿ ವೇಳ್ಳಾಳ ಕುಲದಲ್ಲಿ ಜನಿಸಿದ. ಪ್ರತಿದಿನ ಶಿವಲಿಂಗವನ್ನು ಪೂಜಿಸಿ ಊಟಮಾಡುವ ನೇಮವಿಟ್ಟುಕೊಂಡಿದ್ದ. ಒಂದು ದಿನ ಪೂಜೆಗೆ ಹೋಗುತ್ತಿರುವಾಗ ಬಯಲಲ್ಲಿ ಒಂದು ಶಿವಲಿಂಗ ಕಾಣುತ್ತದೆ. ಅದನ್ನು ನೋಡಿ ಸಂತೋಷಗೊಂಡು ತನಗರಿವಿಲ್ಲದಂತೆಯೇ ಅಲ್ಲಿಯೇ ಬಿದ್ದಿದ್ದ ಒಂದು ಕಲ್ಲನ್ನು ಎತ್ತಿ ಶಿವಲಿಂಗಕ್ಕೆ ಹೊಡೆಯುತ್ತಾನೆ. ಇದೇ ಕುಚೇಷ್ಟೆಯನ್ನು ಅನೇಕ ದಿನಗಳವರೆಗೆ ಮುಂದುವರಿಸುತ್ತಾನೆ. ಈತ ಎಸೆಯುತ್ತಿರುವ ಕಲ್ಲುಗಳು ಶಿವನಿಗೆ ಭಕ್ತಿಯಿಂದ ಅರ್ಪಿಸುವ ಪುಷ್ಪಗಳಂತೆ ಕಾಣುತ್ತವೆ. ಒಂದು ದಿನ ಪೂಜೆ ಮರೆತು ಊಟ ಮಾಡುತ್ತಿರುವಾಗ ಪೂಜೆಯ ನೆನಪಾಗಿ ಊಟ ಬಿಟ್ಟು ಓಡಿಹೋಗಿ ಲಿಂಗದ ಹತ್ತಿರವೇ ಬಿದ್ದಿದ್ದ ಒಂದು ದೊಡ್ಡ ಕಲ್ಲನ್ನು ಎತ್ತಿ ಹೊಡೆಯುತ್ತಿರುವಾಗ ಶಿವನು ದರ್ಶನ ಕೊಟ್ಟು ಶಿವಲೋಕಕ್ಕೆ ಕರೆದೊಯ್ಯುತ್ತಾನೆ.

ಶಿಲ್ಪ: ಇಲ್ಲಿ ಈಶ್ವರ ಲಿಂಗವಿದೆ. ಅದರ ಮುಂದೆ ಶಾಕ್ಯನಾಥನು ಬಲಗೈಯಲ್ಲಿ ಕಲ್ಲನ್ನು ಹಿಡಿದು ಶಿವಲಿಂಗಕ್ಕೆ ಹೊಡಿಯುತ್ತಿದ್ದಾನೆ. ಎಡಗೈಯನ್ನು ತೊಡೆಯ ಮೇಲೆ ಇಟ್ಟಿದ್ದಾನೆ (ಚಿತ್ರ 5).

(7) ದಾರುಕ (ಇರಿಭಕ್ತ): ಚೋಳದೇಶದ ಕರವೂರಿನಲ್ಲಿ ಜನಿಸಿದ. ಪ್ರತಿ ದಿನ ಶಿವದೇವಾಲಯಕ್ಕೆ ಹೋಗಿ ದೇವರಿಗೆ ಹೂಗಳನ್ನು ಅರ್ಪಿಸಿ ಹಾಡುತ್ತ ಪೂಜೆ ಮಾಡುವುದು ಈತನ ಕಾಯಕವಾಗಿತ್ತು. ಶಿವಭಕ್ತರಿಗೆ ಯಾವುದೇ ತೊಂದರೆ ಬಂದರೂ ನಿವಾರಿಸಲು ತನ್ನ ಜೊತೆಯಲ್ಲಿ ಯಾವಾಗಲೂ ಖಡ್ಗ ಇಟ್ಟುಕೊಂಡಿರುತ್ತಿದ್ದ. ಒಂದು ದಿನ ಪೂಜೆ ಮುಗಿಸಿಕೊಂಡು ಬರುತ್ತಿರುವಾಗ ಶಿವಕಾಮಿಯಾಂಡಾರ್ ಎಂಬ ಭಕ್ತ ದೇವಾಲಯಕ್ಕೆ ಹೂವು ತೆಗೆದುಕೊಂಡು ಹೋಗುತ್ತಿದ್ದ. ಆಗ ಪಟ್ಟವರ್ಧಿನಿ ಎಂಬ ಅರಸನ ಆನೆಯು ಆತನ ಕೈಯಲ್ಲಿರುವ ಬುಟ್ಟಿಯನ್ನು ಕೆಡವುತ್ತದೆ. ಇದನ್ನು ನೋಡಿದ ದಾರುಕನು ಆನೆಯನ್ನು ಕೊಲ್ಲುತ್ತಾನೆ. ಈ ವಿಷಯ ಅರಸನಿಗೆ ತಿಳಿದು ಆ ಸ್ಥಳಕ್ಕೆ ಬಂದು ನೋಡಿದಾಗ ದಾರುಕನು ತನ್ನ ಆನೆಗೆ ಕೊಟ್ಟಿರುವ ಶಿಕ್ಷೆ ಸಾಲದೆಂದು ತನ್ನನ್ನೂ ಕೊಲ್ಲು ಎಂದು ಹೇಳುತ್ತಾನೆ. ಇಂಥ ಪವಿತ್ರವಾದ ಮನಸ್ಸುಳ್ಳ ಅರಸನಿಗೆ ಮೋಸ ಮಾಡಿದೆನಲ್ಲ ಎಂದು ತನ್ನನ್ನೇ ಇರಿದುಕೊಳ್ಳುತ್ತಿರುವಾಗ ಶಿವನು ನಿಜರೂಪ ತೋರಿ ಆನೆಯನ್ನು ಬದುಕಿಸುತ್ತಾನೆ.



1. (i) ತಿರುನೀಲಕಂಠ, (ii) ನೀಲನಗ್ನನ ಪತ್ನಿ, (iii) ಮಾನಕಂಜರ



2. (i) ಸೋಮಸಿಮಾರ, (ii) ಮಹಾಧನ



3. ಅಮರನೀತಿ

ಶಿಲ್ಪ: ಇಲ್ಲಿ ಈಶ್ವರ ಲಿಂಗವಿದ್ದು ದಾರುಕನು ಅದಕ್ಕೆ ಹೂಮಾಲೆ ಹಾಕುತ್ತಿದ್ದಾನೆ. ಇನ್ನೊಂದು ಭಾಗದಲ್ಲಿ ಆನೆಯನ್ನು ಕೊಲ್ಲುತ್ತಿರುವ ದೃಶ್ಯವಿದೆ. ಆತನ ಪಕ್ಕಲ್ಲಿ ಶಿವಕಾಮಿಯಾಂಡಾರನು ಕೈಮುಗಿದು ನಿಂತಿದ್ದಾನೆ (ಚಿತ್ರ 6(i)).

(8) ಮೂರ್ತಿನಾಥ: ಪಾಂಡ್ಯನಾಡಿನ ಮಧುರಾಪುರಿ (ಮಧುರೈ)ಯಲ್ಲಿ ಜನಿಸಿದ. ಅಲ್ಲಿಯ ದೇವಾಲಯದಲ್ಲಿ ಪ್ರತಿದಿನ ಶಿವನಿಗೆ ಚಂದನ ತೇಯ್ದು ಅರ್ಪಿಸುವ ಕಾಯಕ ಕೈಗೊಂಡಿದ್ದ. ಈತನ ಭಕ್ತಿಯನ್ನು ಪರೀಕ್ಷಿಸಲು ಶಿವನು ಈತನನ್ನು ದರಿದ್ರನನ್ನಾಗಿ ಮಾಡುತ್ತಾನೆ. ಕೊನೆಗೆ ಪತ್ನಿಯ ಕೊರಳಲ್ಲಿರುವ ತಾಳಿಯನ್ನೂ ಮಾರುತ್ತಾನೆ. ಚಂದನದ ಕಾಯಕಕ್ಕೆ ಏನು ಮಾಡಬೇಕೆಂದು ಗೊತ್ತಾಗದೆ ದೇವರಲ್ಲಿ

"ನಾಳಿಂಗೆ ನೇಮಕ್ಕೆ ಗಂಧವಿಲ್ಲವಯ್ಯ
ಶೂಳಿ ನಿನ್ನಯ ಚಿತ್ತವಿದ್ದಂತೆ ಮಾಡಯ್ಯ"

ಎಂದು ಬೇಡಿಕೊಳ್ಳಲು ಶಿವನು ಕನಸಿನಲ್ಲಿ ಬಂದು

"ಚಂದನಕ್ಕೆಮ್ಮಳಿಸಲೇಕೆ ನೀನೆಲೆ ಮಗನೆ
ಚಂದನ ನಿನ್ನ ಮೊಳಕೈಯ್ಯೊಳದೆ ಎಲೆ ಮಗನೆ"

ಎಂದು ನುಡಿಯುತ್ತಾನೆ. ನಂತರ ಮೂರ್ತಿನಾಥನು ಪ್ರತಿದಿನ ಮೊಳಕೈಯಲ್ಲಿಯೇ ಗಂಧ ತೇಯ್ದು ಶಿವನಿಗರ್ಪಿಸಿದಾಗ ಶಿವನು ಆತನ ಮೊಳಕೈಯಲ್ಲಿಯೇ ದರ್ಶನ ನೀಡುತ್ತಾನೆ.

ಶಿಲ್ಪ: ಮಧ್ಯದಲ್ಲಿ ಗಂಧ ತೇಯುವ ಮಣೆ (ಕಲ್ಲು) ಇದ್ದು ಅದರ ಮೇಲೆ ಗಂಧ ತೇಯುವ ಕೊರಡು ಇದೆ. ಮಣೆಯ ಎರಡೂ ಬದಿಗಳಲ್ಲಿ ಒಬ್ಬೊಬ್ಬ ಮನುಷ್ಯರು ಕೈಯಲ್ಲಿ ಗಂಧದ ಉಂಡೆಯನ್ನು ಹಿಡಿದು ಕುಳಿತಿದ್ದಾರೆ. ಈ ಇಬ್ಬರೂ ಮೂರ್ತಿನಾಥನನ್ನು ಪ್ರತಿನಿಧಿಸುತ್ತಾರೋ ಅಥವಾ ಒಬ್ಬ ವ್ಯಕ್ತಿ ಬೇರೆ ಮನುಷ್ಯನೋ ಎಂಬುದು ಸ್ಪಷ್ಟವಾಗುವುದಿಲ್ಲ (ಚಿತ್ರ 7).

(9) ವಿಚಾರವಂತ (ತಿರುಕ್ಕರಿಪ್ಪುತೊಂಡ): ತೊಂಡೈನಾಡಿನ ಕಾಂಚೀಪುರದಲ್ಲಿ ಜನಿಸಿದ. ಈತ ಶಿವಭಕ್ತರ ಬಟ್ಟೆ ಮಡಿ ಮಾಡಿಕೊಡುವ ಕಾಯಕ ಮಾಡುತ್ತಿದ್ದ. ಶಿವನು ಈತನನ್ನು ಪರೀಕ್ಷಿಸಲು ಮುನಿಯ ವೇಷದಲ್ಲಿ ಬಂದು ಒಂದೇ ದಿನದಲ್ಲಿ ತನ್ನ ಬಟ್ಟೆ ಒಗೆದು ಒಣಗಿಸಿ ಕೊಡಬೇಕೆಂದು ಹೇಳುತ್ತಾನೆ. ವಿಚಾರವಂತ ಆತನ ಬಟ್ಟೆಯನ್ನು ಒಗೆದು ಒಣಗಿಸಿದಾಗ ಶಿವನು ಮಳೆ ಬರುವಂತೆ ಮಾಡುತ್ತಾನೆ. ಮಾತಿಗೆ ತಪ್ಪಿದೆನಲ್ಲ ಎಂದು ವಿಚಾರವಂತನು ಒಗೆಯುವ ಕಲ್ಲಿಗೆ ತಲೆ ಹೊಡೆದುಕೊಳ್ಳುತ್ತಿರುವಾಗ ಶಿವನು ಆತನನ್ನು ತಡೆದು ಮುಕ್ತಿ ನೀಡುತ್ತಾನೆ.


ಶಿಲ್ಪ: ಇಲ್ಲಿ ಎರಡು ದೃಶ್ಯಗಳಿವೆ. ಒಂದು ದೃಶ್ಯದಲ್ಲಿ ವಿಚಾರವಂತನು ಮಂಡಿಯೂರಿ ಕುಳಿತು ಬಟ್ಟೆ ಒಗೆಯುತ್ತಿದ್ದಾನೆ. ಬಟ್ಟೆ ಒಗೆಯುವ ಕಲ್ಲು ಸ್ಪಷ್ಟವಾಗಿ ಕಾಣುತ್ತದೆ. ಇನ್ನೊಂದು ದೃಶ್ಯದಲ್ಲಿ ಶಿವನು ಲಿಂಗದಲ್ಲಿ ಕಾಣಿಸಿಕೊಂಡಿದ್ದಾನೆ. ಎದುರಿಗೆ ವಿಚಾರವಂತನು ಕುಳಿತು ಕೈಯಲ್ಲಿರುವ ಬಟ್ಟೆಯನ್ನು ಶಿವನಿಗೆ ಕೊಡುತ್ತಿದ್ದಾನೆ. ಶಿವನು ಬಲಗೈ ಮುಂದೆ ಮಾಡಿ ಆ ಬಟ್ಟೆಯನ್ನು ತೆಗೆದುಕೊಳ್ಳುತ್ತಿದ್ದಾನೆ (ಚಿತ್ರ 8).

(10) ಭದ್ರಭಕ್ತ (ಶಿರಿಯಾಳ): ತಮಿಳುನಾಡಿನ ತಿರುಚ್ಚೆಂಗಟ್ಟಕುಡಿಯಲ್ಲಿ ಜನಿಸಿದ. ಅರಸನ ಆಸ್ಥಾನದಲ್ಲಿ ಸೇನಾಪತಿಯಾಗಿದ್ದ. ಕರ್ನಾಟಕದಲ್ಲಿ ಶಿರಿಯಾಳ ಎಂಬ ಹೆಸರಿನಿಂದ ಪ್ರಸಿದ್ಧಿಯಾದ. ಪ್ರತಿದಿನ ಭಕ್ತರಿಗೆ ಭೋಜನ ಮಾಡಿಸಿ ತಾನು ಪ್ರಸಾದ ಸೇವಿಸುವ ಪದ್ಧತಿ ಇಟ್ಟುಕೊಂಡಿದ್ದ. ಈತನನ್ನು ಪರೀಕ್ಷಿಸಲು ಭೈರವನ ವೇಷದಲ್ಲಿ ಬಂದ ಶಿವನಿಗೆ, ಆತನ ಇಚ್ಛೆಯಂತೆ ತನ್ನ ಮಗನನ್ನೇ ಕೊಂದು ಮಾಂಸದಡಿಗೆ ಮಾಡಿ ಶಿವನಿಗೆ ಬಡಿಸುತ್ತಾನೆ. ಶಿವನ ಕರುಣೆಯಿಂದ ಈತನ ಮಗ ಮತ್ತೆ ಜೀವ ಪಡೆಯುತ್ತಾನೆ.


ಶಿಲ್ಪ: ಇಲ್ಲಿ ಶಿರಿಯಾಳನು ಕೆಳಗೆ ಕುಳಿತು ತನ್ನ ಮಗನನ್ನು ಖಡ್ಗದಿಂದ ಕತ್ತರಿಸುತ್ತಿದ್ದಾನೆ. ಇನ್ನೊಂದು ಭಾಗದಲ್ಲಿ ಶಿವನು ಲಿಂಗದಲ್ಲಿ ಮೂಡಿದ್ದಾನೆ. ಲಿಂಗದ ಮುಂದೆ ನಿಂತ ಈತನ ಪತ್ನಿಯು ಭೋಜನವಿರುವ ತಟ್ಟೆಯನ್ನು ಶಿವನಿಗೆ ಅರ್ಪಿಸುತ್ತಿದ್ದಾಳೆ (ಚಿತ್ರ 9).

(11) ಮಾನಧನ (ಕಲಿಕ್ಕಂಬ): ನಡುನಾಡಿನ ಪೆನ್ನಗಡಂ ಎಂಬ ಊರಲ್ಲಿ ವಣಿಗರ ಕುಲದಲ್ಲಿ ಜನಿಸಿದ. ಮನೆಗೆ ಬಂದ ಭಕ್ತರ ಪಾದ ತೊಳೆದು ಭೋಜನ ಮಾಡಿಸಿ ತಾನೂ ಪ್ರಸಾದ ಸೇವಿಸುವ ಕಾಯಕ ಮಾಡುತ್ತಿದ್ದ. ಒಂದು ದಿನ, ಈತನ ಮನೆಯಲ್ಲಿ ಕೆಲಸಕ್ಕಿದ್ದು ಹೋದ ಒಬ್ಬ ಸೇವಕ ಭಕ್ತನ ವೇಷದಲ್ಲಿ ಈತನ ಮನೆಗೆ ಬರುತ್ತಾನೆ. ಇದನ್ನರಿತ ಆತನ ಪತ್ನಿಯು ಆತನ ಪಾದ ತೊಳೆಯಲು ನೀರು ಹಾಕಲು ಹಿಂಜರಿದಾಗ ಅವಳ ಶಿರವನ್ನು ಕತ್ತರಿಸುತ್ತಾನೆ. ಶಿವಶರಣ ಕಥಾ ರತ್ನಕೋಶದಲ್ಲಿ ಪತ್ನಿಯ ಕೈಗಳನ್ನು ಕತ್ತರಿಸುತ್ತಾನೆಂದು ತಿಳಿಸಲಾಗಿದೆ.


ಶಿಲ್ಪ: ಮಾನಧನನ ಪತ್ನಿಯು ಕೈಮುಗಿದು ಪದ್ಮಾಸನದಲ್ಲಿ ಕುಳಿತಿದ್ದಾಳೆ. ಮಾನಧನನು ಕತ್ತಿಯಿಂದ ಅವಳ ಶಿರ ಕೈಗಳನ್ನು ಕತ್ತರಿಸುತ್ತಿದ್ದಾನೆ (ಚಿತ್ರ 10(i)).



4. ಕಾರೈಕ್ಕಾಲಮ್ಮೆ



5. ಶಾಕ್ಯನಾಥ



6. (i) ದಾರುಕ, (ii) ಗುಂಡಯ್ಯ- ಬ್ರಹ್ಮಯ್ಯ



7. ಮೂರ್ತಿನಾಥ

(12) ಸಾಹಸಪ್ರಿಯ (ಚಿರುತ್ತೊಣ್ಣೈಯಾಂಡಾರ್): ತಂಜಾವೂರಿನಲ್ಲಿ ಜನಿಸಿದ. ದೇವಾಲಯಕ್ಕೆ ಹೋಗಿ ಶಿವನಿಗೆ ಹೂಮಾಲೆ ಅರ್ಪಿಸುವ ಕಾಯಕ ಮಾಡುತ್ತಿದ್ದ. ಒಮ್ಮೆ ದೇವಾಲಯದಲ್ಲಿ ದೇವರಿಗೆ ಹೂಮಾಲೆ ಅರ್ಪಿಸುತ್ತಿರುವಾಗ ದೇವಾಲಯಕ್ಕೆ ಬಂದಿದ್ದ ಕಳಚೆಂಗ ಅರಸನ ಪತ್ನಿಯು ಹೂಗಳನ್ನು ಮೂಸಿ ನೋಡುತ್ತಾಳೆ. ಇದರಿಂದ ಕೋಪಗೊಂಡ ಸಾಹಸಪ್ರಿಯನು ದೇವರಿಗೆ ಮೀಸಲಾಗಿಟ್ಟ ಹೂ ಮೈಲಿಗೆಯಾಯಿತೆಂದು ಅವಳ ಮೂಗನ್ನು ಕತ್ತರಿಸುತ್ತಾನೆ. ಅರಸನು ತನ್ನ ಪತ್ನಿ ಮಾಡಿದ ತಪ್ಪಿಗೆ ಇಷ್ಟೆ ಶಿಕ್ಷೆ ಸಾಲದೆಂದು ಅವಳ ಕೈಗಳನ್ನು ಕತ್ತರಿಸುತ್ತಾನೆ. ಇವರ ಭಕ್ತಿಗೆ ಮೆಚ್ಚಿದ ಶಿವನು ಮೂವರಿಗೂ ಕೈಲಾಸ ಪದವಿ ನೀಡುತ್ತಾನೆ.

ಶಿಲ್ಪ: ಸಾಹಸಪ್ರಿಯನು ಎಡಗೈಯಲ್ಲಿ ಕಳಚೆಂಗನ ಪತ್ನಿಯ ಮುಡಿ ಹಿಡಿದು ಬಲಗೈಯಲ್ಲಿರುವ ಕತ್ತಿಯಿಂದ ಅವಳ ಮೂಗನ್ನು ಕತ್ತರಿಸುತ್ತಿದ್ದಾನೆ. ಬಲಭಾಗದಲ್ಲಿ ಶಿವನು ಲಿಂಗದಲ್ಲಿ ಪ್ರತ್ಯಕ್ಷವಾಗಿರುವ ಚಿತ್ರವಿದೆ (ಚಿತ್ರ 11).

(13) ಅಭೂತಿಚರ (ಅಪ್ಪೂದಿಅಡಿಗಳು): ಚೋಳನಾಡಿನ ತಿಂಗಳೂರಿನಲ್ಲಿ ಜನಿಸಿದ. ಸಂಗೀತ ಹಾಡಿ ಬಂದ ಹಣದಿಂದ ಜಂಗಮಾರ್ಚನೆ ಮಾಡುತ್ತಿದ್ದ. ಬ್ರಾಹ್ಮಣ ಕುಲದಲ್ಲಿ ಹುಟ್ಟಿದರೂ ಕೆಳಜಾತಿಯವನಾದ ತಿರುನಾವುಕ್ಕರಸನ ಬಗ್ಗೆ ಅಪಾರ ಪ್ರೀತಿಯಿಟ್ಟುಕೊಂಡಿದ್ದ. ಆತನ ಹೆಸರಿನಲ್ಲಿ ಛತ್ರ, ಅರವಟ್ಟಿಗೆ ಕಟ್ಟಿಸಿ, ಮನೆಯಲ್ಲಿ ಮಕ್ಕಳಿಗೆ ಸಹ ಆತನ ಹೆಸರನ್ನೇ ಇಟ್ಟಿದ್ದ. ತಿರುನಾವುಕ್ಕರಸು ಈತನ ಮನೆಗೆ ಬಂದಾಗ ಭೋಜನಕ್ಕೆ ಬಾಳೆ ಎಲೆ ತರಲು ಮಗನನ್ನು ಕಳಿಸಿದಾಗ ಬಾಲಕ ಹಾವು ಕಚ್ಚಿ ಸಾಯುತ್ತಾನೆ. ನಂತರ ತಿರುನಾವುಕ್ಕರಸು ಆತನಿಗೆ ಪುನಃ ಜೀವ ಬರುವಂತೆ ಮಾಡುತ್ತಾನೆ. ಶಿವನು ತಿರುನಾವುಕ್ಕರಸನ ವೇಷದಲ್ಲಿ ಬಂದು ಕೈಲಾಸಕ್ಕೆ ಕರೆದೊಯ್ಯುತ್ತಾನೆ.

ಶಿಲ್ಪ: ಇಲ್ಲಿ ಅಭೂತಿಚರ ಮತ್ತು ಆತನ ಪತ್ನಿ ಇಬ್ಬರೂ ಮಗನ ಶವವನ್ನು ಬಚ್ಚಿಡಲು ಎತ್ತಿ ಹಿಡಿದಿದ್ದಾರೆ. ಇನ್ನೊಂದು ಭಾಗದಲ್ಲಿ ಶಿವನು ಲಿಂಗದಲ್ಲಿ ಮೂಡಿದ್ದಾನೆ (ಚಿತ್ರ 12).

(14) ಸಂಕುಲದಾಯ (ಅರಿವಟ್ಟಾಯ): ಚೋಳನಾಡಿನ ಕಣಮಂಗಲಂ ಈತನ ಊರು. ಈತ ದಿನಗೂಲಿ ಮಾಡಿ ಬಂದ ಅಕ್ಕಿಯಲ್ಲಿ ಸ್ವಲ್ಪ ಭಾಗವನ್ನು ಶಿವನಿಗೆ ಅರ್ಪಿಸಿ ಉಳಿದದ್ದನ್ನು ತಾನು ಸೇವಿಸುವ ಪದ್ಧತಿ ಇಟ್ಟುಕೊಂಡಿದ್ದ. ಒಮ್ಮೆ ಪತಿ-ಪತ್ನಿಯರು ಪ್ರಸಾದವನ್ನು ಬುಟ್ಟಿಯಲ್ಲಿ ತುಂಬಿಕೊಂಡು ಹೋಗುತ್ತಿರುವಾಗ ಬಿರುಗಾಳಿ ಬೀಸಿ ಪ್ರಸಾದ ಕೆಳಗೆ ಬೀಳುತ್ತದೆ. ದೇವರಿಗೆ ನೈವೇದ್ಯ ತಪ್ಪಿಹೋಯಿತಲ್ಲ ಎಂದು ತನ್ನಲ್ಲಿರುವ ಕತ್ತಿಯಿಂದ ಶಿರವನ್ನು ಕತ್ತರಿಸಿಕೊಳ್ಳುತ್ತಿರುವಾಗ ಶಿವನು ಪ್ರತ್ಯಕ್ಷವಾಗಿ ತಡೆಯುತ್ತಾನೆ.

ಶಿಲ್ಪ: ಇಲ್ಲಿ ಸಂಕುಲದಾಯ ಮತ್ತು ಆತನ ಪತ್ನಿ ಇಬ್ಬರೂ ನೈವೇದ್ಯ ಇರುವ ಬುಟ್ಟಿಗಳನ್ನು ತಲೆಯ ಮೇಲಿಟ್ಟುಕೊಂಡು ಲಿಂಗದ ಮುಂದೆ ನಿಂತಿದ್ದಾರೆ (ಚಿತ್ರ 13).

(15) ಧರ್ಮಕೇತನ (ಪುಗಳ್ಚೋಳ): ಹಿಂದೆ ಚೋಳನಾಡಿನ ರಾಜಧಾನಿಯಾಗಿದ್ದ ಉರೈಯಾರ್‌ನಲ್ಲಿ ಅರಸನಾಗಿದ್ದ. ಈತ ಶಿವಭಕ್ತರ ಬಗ್ಗೆ ಅಪಾರ ಪ್ರೀತಿ ಇಟ್ಟಕೊಂಡವನಾಗಿದ್ದ. ಒಮ್ಮೆ ಈತನ ಸೈನಿಕರು ಯುದ್ಧದಲ್ಲಿ ಸತ್ತ ವೈರಿ ಸೈನಿಕರ ರುಂಡಗಳನ್ನು ತಂದಾಗ ಅವುಗಳ ಮಧ್ಯದಲ್ಲಿ ಒಬ್ಬ ಶಿವಭಕ್ತನ ರುಂಡ ನೋಡುತ್ತಾನೆ. ಒಬ್ಬ ಶಿವಭಕ್ತನ ಸಾವಿಗೆ ಕಾರಣನಾದೆನಲ್ಲ ಎಂದು ಯೋಚಿಸಿ ತನ್ನ ಪ್ರಾಣವನ್ನೇ ಕಳೆದುಕೊಳ್ಳುತ್ತಾನೆ.

ಶಿಲ್ಪ: ಪೀಠದ ಮೇಲೆ ಜಡೆಯಿರುವ ಒಬ್ಬ ಶಿವಭಕ್ತನ ರುಂಡವಿದೆ. ಪಕ್ಕದಲ್ಲಿ ಶಿವನು ಲಿಂಗದಲ್ಲಿ ಕಾಣಿಸಿಕೊಂಡಿದ್ದಾನೆ. ಶಿವನ ಮುಂದೆ ನಿಂತಿರುವ ಧರ್ಮಕೇತನನು ತನ್ನ ಶಿರವನ್ನು ಕತ್ತರಿಸಿಕೊಳ್ಳುತ್ತಿದ್ದಾನೆ (ಚಿತ್ರ 10(ii)).

(16) ಕಣ್ಣಪ್ಪ: ಪೆರಿಯಪುರಾಣದಲ್ಲಿ ಈತನ ಊರು ಉಡಪ್ಪೂರ ಎಂದು ತಿಳಿಸಿದ್ದರೆ, 'ರಸಿಕ ಚಕ್ರಿ ಹರಿಹರದೇವ' ಗ್ರಂಥದಲ್ಲಿ ಈತನ ಊರು ತಿರುಕಾಳತ್ತಿ ಎಂದು ತಿಳಿಸಲಾಗಿದೆ. ಈತನ ಕಥೆ ಸಾಮಾನ್ಯವಾಗಿ ಎಲ್ಲರಿಗೂ ತಿಳಿದದ್ದೆ. ಈತ ತನ್ನ ಕಣ್ಣುಗಳನ್ನೇ ಕಿತ್ತು ಶಿವನಿಗೆ ಅರ್ಪಿಸಿದ ಕಥೆ ಜನಜನಿತವಾಗಿದೆ.

ಶಿಲ್ಪ: ಇಲ್ಲಿ ಕಣ್ಣಪ್ಪನು ತನ್ನ ಎಡಗಾಲನ್ನು ಶಿವಲಿಂಗದ ಮೇಲಿಟ್ಟು ಎಡಗೈಯಲ್ಲಿ ಮಾಂಸದ ತಟ್ಟೆ ಮತ್ತು ಬಲಗೈಯಲ್ಲಿ ಖಡ್ಗ ಹಿಡಿದು ನಿಂತಿದ್ದಾನೆ (ಚಿತ್ರ 14(i)).

(17) ನೀಲನಗ್ನ (ತಿರುನೀಲನಕ್ಕ): ಚೋಳನಾಡಿನ ತಿರುಚ್ಚಾಮಂಗೈ ಎಂಬ ಊರಿನವನು. ಒಂದು ದಿನ ಪತ್ನಿಯೊಡನೆ ಶಿವದೇವಾಲಯಕ್ಕೆ ಹೋಗಿ ಪೂಜಿಸುತ್ತಿರುವಾಗ ಲಿಂಗದ ಮೇಲೆ ಜೇಡ ಹುಳುವೊಂದು ಬೀಳುತ್ತದೆ. ಈತನ ಪತ್ನಿಯು ಜೇಡವನ್ನು ಓಡಿಸಲು ಲಿಂಗದ ಮೇಲೆ ಬಾಯಿಯಿಂದ ಊದುತ್ತಾಳೆ. ಆಗ ಅವಳ ಬಾಯಿಯಿಂದ ಉಗುಳು ಬೀಳುತ್ತದೆ. ಲಿಂಗವನ್ನು ಮೈಲಿಗೆ ಮಾಡಿದಳೆಂದು ನೀಲನಗ್ನನು ತನ್ನ ಪತ್ನಿಯನ್ನು ತ್ಯಜಿಸುತ್ತಾನೆ. ನಂತರ ಶಿವನ ಆಜ್ಞೆಯಂತೆ ಅವಳನ್ನು ಕ್ಷಮಿಸುತ್ತಾನೆ.



8. ವಿಚಾರವಂತ



9. ಭದ್ರಭಕ್ತ



10. (i) ಮಾನಧನ, **(ii)** ಧರ್ಮಕೇತನ

ಶಿಲ್ಪ: ಇಲ್ಲಿ ಶಿವಲಿಂಗವಿದ್ದು ಅದರ ಮುಂದೆ ನೀಲನಗ್ನನ ಪತ್ನಿಯು ನಿಂತು ಶಿವಲಿಂಗದ ಕಡೆಗೆ ಬಾಗಿ ಬಾಯಿಯಿಂದ ಊದುತ್ತಿರುವ ದೃಶ್ಯವಿದೆ (ಚಿತ್ರ 1(ii)).

(18) ಸೋಮಾಸಿಮಾರ: ಚೋಳನಾಡಿನ ತಿರುವೆಂಬರ ಎಂಬಲ್ಲಿ ಜನಿಸಿದ. ಸಕಲ ವೇದ ಪಾರಂಗತನಾಗಿದ್ದ. ತಾನು ಮಾಡುವ ಶಿವಯಾಗಕ್ಕೆ ಸ್ವತಃ ಶಿವನನ್ನೇ ಬರಮಾಡಿಕೊಳ್ಳಬೇಕೆಂದು ಇಚ್ಛಿಸಿ, ಆ ಇಚ್ಛೆಯನ್ನು ಸುಂದರನ ಮೂಲಕ ನೆರವೇರಿಸಿಕೊಂಡು ಮುಕ್ತಿ ಹೊಂದುತ್ತಾನೆ.

ಶಿಲ್ಪ: ಇಲ್ಲಿ ಸೋಮಾಸಿಮಾರನು ಯಜ್ಞಮಾಡುತ್ತಿರುವ ದೃಶ್ಯವಿದೆ. ಶಿವಲಿಂಗದ ಮುಂದೆ ಯಜ್ಞವೇದಿಕೆ ಇದೆ. ಅದರಲ್ಲಿ ಜ್ವಾಲೆಗಳು ಸ್ಪಷ್ಟವಾಗಿ ಕಾಣುತ್ತಿವೆ. ಯಜ್ಞವೇದಿಕೆಯ ಮುಂದೆ ಕುಳಿತ ಸೋಮಾಸಿಮಾರನು ಬಲಗೈಯಲ್ಲಿ ಸೌಟು ಹಿಡಿದು ತುಪ್ಪ ಸುರಿಯುತ್ತಿದ್ದಾನೆ (ಚಿತ್ರ 2(i)).

(19) ಶೂರವ್ಯಾಘ್ರ (ಕೋಟ್ಪುಲಿಯಾಂಡಾರ್): ಚೋಳ ಅರಸನ ಆಸ್ಥಾನದಲ್ಲಿ ಸೇನಾನಾಯಕನಾಗಿದ್ದ. ಈತ ಜಂಗಮರಿಗೆ ದಾಸೋಹ ನಡೆಸುವ ಕಾಯಕ ಮಾಡುತ್ತಿದ್ದ. ಒಮ್ಮೆ ಯುದ್ಧಕ್ಕೆ ಹೋಗುವ ಪ್ರಸಂಗ ಬಂದಾಗ ಊರಿನಲ್ಲಿ ಬರಗಾಲ ಬಂದಿರುತ್ತದೆ. ಮನೆಯಲ್ಲಿರುವ ಧಾನ್ಯವನ್ನೆಲ್ಲಾ ಜಂಗಮರಿಗೆ ಹಂಚಿರಿ ಎಂದು ತಂದೆ ತಾಯಿಯರಿಗೆ ಹೇಳಿ ಯುದ್ಧಕ್ಕೆ ಹೋಗುತ್ತಾನೆ. ಆದರೆ ಅವರು ಧಾನ್ಯವನ್ನೆಲ್ಲಾ ತಾವೇ ಉಪಯೋಗಿಸುತ್ತಾರೆ. ಇದರಿಂದ ಕೋಪಗೊಂಡ ಶೂರವ್ಯಾಘ್ರನು ಅವರನ್ನೆಲ್ಲ ಕೊಲ್ಲುತ್ತಾನೆ. ಈತನ ಭಕ್ತಿಗೆ ಮೆಚ್ಚಿದ ಶಿವನು ಪ್ರತ್ಯಕ್ಷನಾಗಿ ಕೈಲಾಸಕ್ಕೆ ಕರೆದೊಯ್ಯುತ್ತಾನೆ.

ಶಿಲ್ಪ: ಇಲ್ಲಿ ಶೂರವ್ಯಾಘ್ರನು ಕುದುರೆಯ ಮೇಲೆ ಯುದ್ಧ ಮಾಡುತ್ತಿರುವ ಭಂಗಿಯಲ್ಲಿ ಕುಳಿತಿದ್ದಾನೆ. ಕೋಟೆಯ ಗೋಡೆಯೂ ಸ್ಪಷ್ಟವಾಗಿ ಕಾಣುತ್ತಿದ್ದು ಕುದುರೆಯು ಗೋಡೆಯನ್ನು ಹಾರುತ್ತಿರುವಂತೆ ಮುಂದಿನ ಎರಡೂ ಕಾಲುಗಳನ್ನು ಮೇಲೆತ್ತಿ ನಿಂತಿದೆ (ಚಿತ್ರ 14(ii)).

63 ಪುರಾತನರಲ್ಲಿ ಕಲಿನೀತಿ, ನವನಂದಿ ಮತ್ತು ಗಾನವಲ್ಲಭ ಎಂಬ ಮೂವರು ದೇವಾಲಯದಲ್ಲಿ ದೀಪ ಉರಿಸುವ ಕಾಯಕ ಮಾಡುತ್ತಿದ್ದರು. ಇಲ್ಲಿರುವ ಒಂದು ಶಿಲ್ಪದಲ್ಲಿ ಶಿವನ ಮುಂದೆ ಒಬ್ಬ ವ್ಯಕ್ತಿಯು ಎರಡೂ ಕೈಗಳಲ್ಲಿ ಹಣತೆಗಳನ್ನು ಹಿಡಿದು ಕುಳಿತ್ತಿದ್ದಾನೆ. ಈ ಶಿಲ್ಪ ಈ ಮೂವರಲ್ಲಿ ಯಾರದ್ದೆಂದು ಗೊತ್ತಾಗುವುದಿಲ್ಲ.

ಕರ್ನಾಟಕದ ಶಿವಶರಣರಲ್ಲಿ ಕುಂಬಾರ ಗುಂಡಯ್ಯ, ಕೋಳೂರ ಕೊಡಗೂಸು ಚನ್ನಕ್ಕ, ಸತ್ಯಕ್ಕ ಮತ್ತು ಗುಂಡಯ್ಯ-ಬ್ರಹ್ಮಯ್ಯರ ವಿಗ್ರಹಗಳನ್ನು ನಿಖರವಾಗಿ ಗುರುತಿಸಲಾಗಿದೆ.

(1) ಕುಂಬಾರ ಗುಂಡಯ್ಯ: ಬೀದರ ಜಿಲ್ಲೆಯ ಭಾಲ್ಕಿಯವನು. ಈತ ಮಡಕೆ ಮಾಡುವ ಕಾಯಕ ಮಾಡುತ್ತಿದ್ದ. ರಾತ್ರಿ ಸಮಯದಲ್ಲಿ ಮಡಕೆ ಬಾರಿಸುತ್ತ ಶಿವನ ಧ್ಯಾನ ಮಾಡುತ್ತಿದ್ದ. ಒಮ್ಮೆ ಸ್ವತಃ ಶಿವನೇ ಈತನ ಮನೆಯ ಮುಂದೆ ಬಂದು ಈತನ ಹಾಡಿಗೆ ಮೆಚ್ಚಿ ಕುಣಿಯುತ್ತಾನೆ.

ಶಿಲ್ಪ: ಗುಂಡಯ್ಯ ಮಡಕೆ ಹಿಡಿದು ಕುಳಿತಿದ್ದಾನೆ. ಶಿವನು ಈತನ ಪಕ್ಕದಲ್ಲಿ ನಾಟ್ಯವಾಡುವ ಭಂಗಿಯಲ್ಲಿದ್ದಾನೆ (ಚಿತ್ರ 15).

(2) ಕೋಳೂರು ಕೊಡಗೂಸು ಚನ್ನಕ್ಕ: ಗುಲ್ಬರ್ಗ ಜಿಲ್ಲೆಯ ಕೋಳೂರು ಗ್ರಾಮದ ಸಂಗಯ್ಯ ಮತ್ತು ಸೋಮಲೆಯರ ಮಗಳು. ತಂದೆ ತಾಯಿಯರ ಅನುಪಸ್ಥಿತಿಯಲ್ಲಿ ಚನ್ನಕ್ಕ ಶಿವನಿಗೆ ಹಾಲನ್ನು ಅರ್ಪಿಸುತ್ತಾಳೆ. ನಿಜವಾಗಿ ಶಿವನೇ ಬಂದು ಹಾಲು ಕುಡಿದಿದ್ದನ್ನು ತಂದೆ ತಾಯಿಗಳು ಒಪ್ಪದೆ ತಮ್ಮ ಎದುರಿನಲ್ಲಿಯೇ ಶಿವನಿಗೆ ಹಾಲು ಕೊಡು ಎಂದು ಹೇಳುತ್ತಾರೆ. ಶಿವನು ಹಾಲು ಕುಡಿಯದೆ ಹೋದಾಗ ತಂದೆ ಅವಳನ್ನು ಹೊಡೆಯಲು ಹೋದಾಗ ಶಿವನು ಅವಳನ್ನು ಲಿಂಗದಲ್ಲಿ ಸೆಳೆದುಕೊಳ್ಳುತ್ತಾನೆ.

ಶಿಲ್ಪ: ಮಧ್ಯದಲ್ಲಿ ಲಿಂಗದಲ್ಲಿ ಶಿವನು ಒಡಮೂಡಿದ್ದಾನೆ. ಲಿಂಗದ ಎರಡೂ ಪಕ್ಕಗಳಲ್ಲಿ ಚನ್ನಕ್ಕ ನಿಂತಿದ್ದಾಳೆ. ಒಂದು ಭಾಗದಲ್ಲಿ ನಿಂತ ಚನ್ನಕ್ಕನ ಕೈಯಲ್ಲಿ ಹಾಲಿನ ಬಟ್ಟಲಿದೆ. ಇನ್ನೊಂದು ಭಾಗದಲ್ಲಿರುವ ಚನ್ನಕ್ಕನ ಕೈಯಲ್ಲಿನ ಬಟ್ಟಲನ್ನು ಶಿವನು ತನ್ನ ಕೈಯಲ್ಲಿ ತೆಗೆದು ಕೊಂಡಿದ್ದಾನೆ (ಚಿತ್ರ 16).

(3) ಸತ್ಯಕ್ಕ: ಶಿವಮೊಗ್ಗ ಜಿಲ್ಲೆಯ ಶಿರಾಳಕೊಪ್ಪ ತಾಲೂಕಿನ ಹಿರೇಜಂಬೂರು ಈಕೆಯ ಜನ್ಮಸ್ಥಳ. ಹರನ ಭಕ್ತಳಾದ ಈಕೆ ಯಾರಾದರೂ 'ಹರಿ' ಎಂದು ಉಚ್ಚರಿಸಿದರೆ ಅವರನ್ನು ದಂಡಿಸುತ್ತಿದ್ದಳು. ಒಮ್ಮೆ ಶಿವನು ಇವಳ ಭಕ್ತಿ ಪರೀಕ್ಷಿಸುವುದಕ್ಕಾಗಿ ಬಿಕ್ಷುಕ (ಜಂಗಮ)ನ ವೇಷದಲ್ಲಿ ಬಂದು ಭಿಕ್ಷೆ ಬೇಡುತ್ತಾನೆ. ಇವಳು ಧಾನ್ಯ ನೀಡಿದಾಗ ಜೋಳಿಗೆಯಿಂದ ಕಾಳುಗಳು ನೆಲದ ಮೇಲೆ ಬೀಳುತ್ತವೆ. ಆಗ ಭಿಕ್ಷುಕನು "ಹರಿಯಿಂದ ಹರಿದ ಕಾಳು ನೆಲಕ್ಕೆ ಬಿತ್ತು" ಎಂದು ಹೇಳುತ್ತಾನೆ. ಆತನ ಬಾಯಿಯಿಂದ 'ಹರಿ' ಎಂಬ ಶಬ್ದ ಕೇಳಿ ತನ್ನ ಕೈಯಲ್ಲಿರುವ ಸೌಟಿನಿಂದಲೇ ಹೊಡೆಯುತ್ತಾಳೆ. ಶಿವನು ನಿಜರೂಪ ತೋರುತ್ತಾನೆ.




11. ಸಾಹಸಪ್ರಿಯ



12. ಅಭೂತಿಚರ




13. ಸಂಕುಲದಾಯ




14. **(i)** ಕಣ್ಣಪ್ಪ, **(ii)** ಶೂರವ್ಯಾಘ್ರ



15. ಕುಂಬಾರ ಗುಂಡಯ್ಯ



16. ಕೋಳೂರ ಕೊಡಗೂಸು ಚನ್ನಕ್ಕ



17. ಸತ್ಯಕ್ಕ

ಶಿಲ್ಪ: ಶಿವನು ಜಂಗಮ ವೇಷದಲ್ಲಿ ಎಡಗೈಯಲ್ಲಿ ಜೋಳಿಗೆ, ಬಲಗೈಯಲ್ಲಿ ದಂಡ ಹಿಡಿದು ನಿಂತಿದ್ದಾನೆ. ಆತನ ಮುಂದೆ ಸತ್ಯಕ್ಕ ಬಲಗೈಯಲ್ಲಿ ಸೌಟು ಹಿಡಿದು ಹೊಡೆಯುತ್ತಿರುವ ಭಂಗಿಯಲ್ಲಿ ನಿಂತಿದ್ದಾಳೆ. ಇನ್ನೊಂದು ಭಾಗದಲ್ಲಿ ಶಿವನು ಲಿಂಗದಲ್ಲಿ ಮೂಡಿದ್ದಾನೆ (ಚಿತ್ರ 17).

(4) ಗುಂಡಯ್ಯ-ಬ್ರಹ್ಮಯ್ಯ: ಜಗದೇವ ಮತ್ತು ಮಲ್ಲಿಬೊಮ್ಮಣ್ಣನವರೇ ಗುಂಡಯ್ಯ-ಬ್ರಹ್ಮಯ್ಯರಾಗಿ ಹುಟ್ಟಿದರೆಂಬ ಅಭಿಪ್ರಾಯವಿದೆ. 'ರಕ್ಷಣೆ ಬೇಡಿ ತಮ್ಮಲ್ಲಿ ಬಂದವರನ್ನು ಬಿಟ್ಟು ಕೊಡೆವು' ಎಂಬ ಪ್ರತಿಜ್ಞೆ ಮಾಡಿದ್ದರು. ಶಿವನು ಇವರನ್ನು ಪರೀಕ್ಷಿಸಲು ಅರಸನ ಮನೆಯಲ್ಲಿ ಕಳ್ಳತನ ಮಾಡಿ ಇವರಲ್ಲಿಗೆ ಬಂದು ರಕ್ಷಣೆ ಬೇಡುತ್ತಾನೆ. ಈ ಕಾರ್ಯದಲ್ಲಿ ತಾವೇ ಶೂಲಕ್ಕೇರಿ ಪ್ರಾಣ ಕಳೆದುಕೊಳ್ಳುತ್ತಾರೆ. ಶಿವನು ಶೂಲ ಸಮೇತ ಇವರನ್ನು ಕೈಲಾಸಕ್ಕೆ ಕರೆದೊಯ್ಯುತ್ತಾನೆ.

ಶಿಲ್ಪ: ಇಬ್ಬರೂ ಎಡಗೈಯಲ್ಲಿ ಲಿಂಗ ಹಿಡಿದು ಪದ್ಮಾಸನದಲ್ಲಿ ಕುಳಿತಿದ್ದಾರೆ (ಚಿತ್ರ 6(ii)).

ಟಿಪ್ಪಣಿಗಳು

1. ಆರ್.ಸಿ. ಹಿರೇಮಠ, 1978, *ಕವಿ ಚಕ್ರವರ್ತಿ ಸುರಂಗಕವಿ ಕೃತ ತ್ರಿಷಷ್ಠಿ ಪುರಾತನ ಚಾರಿತ್ರಂ.*
2. ಎಚ್. ದೇವೀರಪ್ಪ, 1988, *ಹಂಪೆಯ ಹರಿಹರದೇವ ವಿರಚಿತ ಶರಣ ಚರಿತ ಮಾನಸಂ,* ಮೈಸೂರು, ಪು. 332-450.
3. ಎಸ್. ವಿದ್ಯಾಶಂಕರ, 1982, *ವೀರಶೈವ ಪುರಾಣಗಳು - ಒಂದು ಅಧ್ಯಯನ,* ಪು. 87.
4. ಜಿ.ಜಿ. ಮಂಜುನಾಥನ್, "ಕಳಲೆ ನಂಜರಾಜ ವಿರಚಿತ ಅರವತ್ತು ಮೂವರ ಪುರಾತನ ಚರಿತೆ", *ಪ್ರಸಾದ,* ದ್ವೈಮಾಸಿಕ, ಸಂ. 6, ಸಂ. 6. ನವಂಬರ್-ಡಿಸೆಂಬರ್ 1991, ಪು. 14-23.
5. *Annual Report on Indian Epigraphy*, 1908.
6. *ಎಪಿಗ್ರಾಫಿಯ ಕರ್ನಾಟಿಕ (ಎಕ),* ಸಂ. IV, ನಂಜನಗೂಡು 201-265; ಪರಿಷ್ಕೃತ ಸಂ. III, ನಂಜನಗೂಡು ಸಂ. 25-89.
7. *Annual Report of the Mysore Archaeological Department (MAR),* 1940, ಪು. 27-29, ಚಿತ್ರ VII-XI.
8. *ಎಕ,* XIV, ಚಾಮರಾಜನಗರ 247, ಪರಿಷ್ಕೃತ ಸಂ. IV, ಚಾಮರಾಜನಗರ 54.
9. ಸಿ.ಟಿ.ಎಂ. ಕೊಟ್ರಯ್ಯ, 1998, "ಬುಕ್ಕಸಾಗರದ ಶಿಲ್ಪಗಳಲ್ಲಿ ಶೈವ/ವೀರಶೈವ ಶರಣರು", *ವಿಜಯನಗರ ಅಧ್ಯಯನ,* ಸಂ. 3, ಪು. 1-21.
10. ವಿನೋದಾ ಪಾಟೀಲ, "ಶ್ರೀರಂಗಪಟ್ಟಣದ ಗಂಗಾಧರೇಶ್ವರ ದೇವಸ್ಥಾನದಲ್ಲಿರುವ ಪುರಾತನರ ವಿಗ್ರಹಗಳು", *ಸತ್ಯಶುದ್ಧ ಕಾಯಕ,* ತ್ರೈಮಾಸಿಕ, ಸಂ. 8, ಸಂ. 1-4, ಸೆಪ್ಟೆಂಬರ್ 1997-ಆಗಸ್ಟ್ 1998, ಚಿತ್ರದುರ್ಗ, ಪು. 75-88.
11. ಶಂಕರ ಕೆದಿಲಾಯ, 1974, *ಪೆರಿಯ ಪುರಾಣ,* ಭಾಗ 1, ಪು. 47-118; 1980, *ಪೆರಿಯ ಪುರಾಣ,* ಭಾಗ 2, ಪು. 1-156.

5. ವಿಜಯನಗರ ಕಾಲದಲ್ಲಿ ಆಯುಧ ಕಲೆ

ಹೆಚ್.ಟಿ. ತಳವಾರ್

ನಾಗರೀಕತೆಯ ಬೆಳವಣಿಗೆಯಲ್ಲಿ ಆಯುಧಗಳ ಪಾತ್ರ ಪ್ರಾಮುಖ್ಯವಾಗಿದೆ. ಅಂತೆಯೇ ಅವುಗಳ ವಿಕಾಸವೂ ಬಹಳ ಆಸಕ್ತಿಯಿಂದ ಕೂಡಿದ್ದು, ಮಾನವ ಜೀವನದ ಮೇಲೆ ಬೆಳಕು ಚೆಲ್ಲುತ್ತದೆ. ಮಾನವನು ವಿವಿಧ ಆಯುಧಗಳನ್ನು ಹಿಡಿದಿರುವ ವಿವಿಧ ದೇವ ದೇವತೆಗಳನ್ನು ಪೂಜಿಸುತ್ತಿದ್ದಾನೆ. ಈ ಆಯುಧಗಳನ್ನು ಆಧಾರವಾಗಿಟ್ಟುಕೊಂಡು ದೇವರುಗಳನ್ನು ಗುರುತಿಸಲಾಗುತ್ತಿದೆ. ಈ ರೀತಿ ಪುರಾಣಗಳಲ್ಲಿ ಮತ್ತು ಇತಿಹಾಸದಲ್ಲಿ ತಮ್ಮದೇ ಆದ ಪ್ರಾಮುಖ್ಯತೆಯನ್ನು ಪಡೆದುಕೊಂಡ ಆಯುಧಗಳನ್ನು ಸಾಂಪ್ರದಾಯಿಕವಾಗಿ ಗುರುತಿಸಲಾಗಿದೆ. ಈ ದಿಕ್ಕಿನಲ್ಲಿ ಪ್ರಾಚೀನ ಗ್ರಂಥಗಳಲ್ಲಿ ಕಾಣಸಿಗುವ ಇಂದ್ರನ ವಜ್ರಾಯುಧ ಮತ್ತು ಪಾಶ, ವಿಷ್ಣುವಿನ ಗದೆ ಮತ್ತು ಚಕ್ರ, ಶಿವನ ತ್ರಿಶೂಲ ಮತ್ತು ಪರುಶುರಾಮನ ಕೊಡಲಿ (ಪರಶು) ಇವುಗಳು ಇಂದಿಗೂ ಒಂದಲ್ಲ ಒಂದು ವಿಧದಲ್ಲಿ ಕಾಣಸಿಗುತ್ತವೆ.

ವಿಜಯನಗರ ಕಾಲದ ಆಯುಧ ಕಲೆಯನ್ನು ಅಧ್ಯಯನ ಮಾಡಲು ಶಾಸನಗಳು, ಶಿಲ್ಪಗಳು, ನಾಣ್ಯಗಳು, ವರ್ಣಚಿತ್ರಗಳು, ಸಾಹಿತ್ಯ ಮತ್ತು ವಿದೇಶಿಯರ ಬರಹ ಮುಖ್ಯ ಆಕರಗಳಾಗಿವೆ.

ಶಾಸನಗಳು:

ಆಯುಧ ಕಲೆಯನ್ನು ತಿಳಿಯಲು ಶಾಸನಗಳ ಪಾತ್ರ ಗಣನೀಯವಾಗಿರುವುದು. ಕನ್ನಡ ಶಾಸನಗಳಲ್ಲಿ ನೂರಾರು ಆಯುಧಗಳ ಹೆಸರುಗಳು ಬರುತ್ತವೆ. ಆದರೆ ಅವುಗಳ ಸ್ವರೂಪವೇನೆಂಬುದನ್ನು ತಿಳಿಯಲು ಕಷ್ಟದಾಯಕವಾದರೂ ಪ್ರಮುಖವಾದ ಆಯುಧಗಳನ್ನು ಗುರುತಿಸಬಹುದು. ಬಾಣದ ಪ್ರಭೇದಗಳಲ್ಲಿ ಬಿಳಿಯಂಬು, ಕೋಲಂಬು, ಸುಂಗಲಂಬು ಮುಂತಾದವುಗಳ ಹೆಸರುಗಳು ದೊರೆಯುತ್ತವೆ. ಖಡ್ಗ ಅಥವಾ ಕತ್ತಿಗೆ ಕರವಾಳ್ ಇಲ್ಲವೆ ತೋಳಬಾಳ್ ಎಂಬ ಹೆಸರುಗಳೂ ಇದ್ದವು. ಕಡಿತಲೆ, ಅಲಗು, ಗೇಣ್, ಕೊಂತ, ಶಲ್ಯ, ಭಲ್ಯ, ಕಣೆಯ, ಕರ್ಕಡೆ, ಸುರಿಗೆ, ಮುಸಲ, ತೀರಿಕೆ, ಜಟ್ಟಿಗೆ, ಭಿಂಡಿವಾಳ, ಪಂಚರಾಯುಧ, ಮುದ್ಗರ ಮುಂತಾದವುಗಳನ್ನು ಹೆಸರಿಸಬಹುದಾಗಿದೆ.

ಸಾಹಿತ್ಯ:

ಕನ್ನಡ ಸಾಹಿತ್ಯ ಕೃತಿಗಳಲ್ಲಿ ಸಮರಗಳ ಬಗ್ಗೆ ಮತ್ತು ಆಯುಧಗಳ ಬಗ್ಗೆ ಉಲ್ಲೇಖವಿರುವುದನ್ನು ನೋಡಬಹುದು. ಸಾಮಾನ್ಯವಾಗಿ ಕವಿಗಳು ಕೋಟೆಕೊತ್ತಳಗಳ ಮತ್ತು ಯುದ್ಧದ ವರ್ಣನೆಯನ್ನು ಕೊಡುವುದರ ಜೊತೆಗೆ ಆಯುಧಗಳ, ಸೈನಿಕರ ಉಡಿಗೆ ತೊಡಿಗೆ, ಸೈನಿಕರ ರಕ್ಷಾಕವಚಗಳು, ಆನೆ ಕುದುರೆಗಳ ಸಂರಕ್ಷಕ ಸಾಧನಗಳು, ಸಿಡಿಮದ್ದು, ರಣವಾದ್ಯ ಮುಂತಾದವುಗಳ ವರ್ಣನೆಯನ್ನು ಕೊಡುವರು.

ಕನ್ನಡ ಕೃತಿಗಳಾದ ನಂಜುಂಡಕವಿಯ ರಾಮನಾಥಚರಿತೆ, ಕಂಠೀರವ ನರಸರಾಜ ವಿಜಯ, ಕೆಳದಿ ನೃಪವಿಜಯ ಮತ್ತು ವೀರಶೈವ ಹಾಗೂ ಜೈನ ಪುರಾಣಗಳಲ್ಲಿ ಕೋಟೆಕಾಳಗ ಮತ್ತು ಆಯುಧಗಳ ಚಿತ್ರ ಅದ್ಭುತವಾಗಿದೆ. ವಿರೂಪಾಕ್ಷ ಪಂಡಿತನ (ಕ್ರಿ.ಶ. 1585) ಚೆನ್ನಬಸವ ಪುರಾಣದಲ್ಲಿ ಕೋಟೆ ಕಾಳಗಗಳ ವರ್ಣನೆಯು ನೈಜ ಚಿತ್ರಣವನ್ನು ಕೊಡುವದು. ಪುರಾಣ ವಿಷಯಗಳ ಮಧ್ಯದಲ್ಲಿ ಹುದುಗಿರುವ ಇಂತಹ ಅನೇಕ ವಿಷಯಗಳನ್ನು ನೋಡಬಹುದು. ಹಾಗೆಯೇ ಪುಷ್ಪದಂತ ಪುರಾಣ, ಪಾರ್ಶ್ವನಾಥ ಪುರಾಣ, ನೇಮಿನಾಥ ಪುರಾಣ, ಚಂದ್ರಪ್ರಭ ಪುರಾಣ, ಅನಂತನಾಥ ಪುರಾಣ, ಜಗನ್ನಾಥ ವಿಜಯ ಮುಂತಾದವುಗಳು ಕೋಟೆ ಹಾಗೂ ಸಮರೋಪಕರಣಗಳು, ಸೈನಿಕರ ಆಯುಧಗಳು, ರಕ್ಷಾಕವಚಗಳು, ಆನೆ-ಕುದುರೆಗಳ ಸಂರಕ್ಷಕ ಸಾಧನಗಳು, ಸಿಡಿಮದ್ದು, ರಣವಾದ್ಯಗಳು, ಸೇನಾಬಲ, ಗಜಾಶ್ವದಳ, ಸೈನಿಕರ ಉಡಿಗೆ ತೊಡಿಗೆಗಳು, ಸಮರ ಕಾರ್ಯಾಚರಣೆ, ಕೋಟೆಗಳಿಗೆ ದಂಡಯಾತ್ರೆ, ಸಮರ ಸಿಬ್ಬಂದಿ ಮುಂತಾದವುಗಳ ವರ್ಣನೆಯನ್ನು ಕೊಡುವವು.

ಕನ್ನಡೇತರ ಕೃತಿಗಳಾದ ಸಾಳವಾಭ್ಯುದಯಮ್ ಮತ್ತು ಗಂಗಾಂಬಿಕೆಯ ಮಧುರಾ ವಿಜಯಂ ಕಾವ್ಯಗಳು, ಶಸ್ತ್ರ (ಬಾಕು, ಕತ್ತಿ), ಶರಾಸನ (ಬಿಲ್ಲು), ಅಸಿ, ಕರ್ಪಣ, ಕಥಾರಿಕಾಸ್ತ್ರಮ್ (ಒಂದು ಬಗೆಯ ಬಾಣ), ಕಾರ್ಮುಕಂ, ಕೋದಂಡಂ, ಮುದ್ಗರ (ಚಮ್ಮಟಿಗೆಯಂತಹ ಆಯುಧ), ಪ್ರಾಸ (ಕ್ಷಿಪಣಿ) ಮುಂತಾದ ಆಯುಧಗಳ ಹೆಸರನ್ನು ಹೇಳುತ್ತವೆ. ಶತ್ರುಗಳ ಬಾಣದಿಂದ ರಕ್ಷಿಸಿಕೊಳ್ಳಲು ಸೈನಿಕರು ಫಲಕಗಳನ್ನು, ಕೆಲವು ಸಮಯದಲ್ಲಿ ಚರ್ಮದ ಫಲಕವನ್ನೂ (ಕರ್ಮಧಾರಣ) ಸಹ ಉಪಯೋಗಿಸುತ್ತಿದ್ದರು.

ವಿದೇಶಿ ಪ್ರವಾಸಿಗಳ ವರದಿ:

ವಿದೇಶಿ ಪ್ರವಾಸಿಗಳ ವರದಿಗಳು ಸಹ ಆಯುಧಗಳ ವಿವರಗಳನ್ನು ಕೊಡುವವು. ರಾಯಚೂರು ಯುದ್ಧಕ್ಕೆ ಹೊರಟ ವಿಜಯನಗರ ಸೈನ್ಯವನ್ನು ವರ್ಣಿಸುವ ನ್ಯೂನಿಜನು, "He (the king) left the city of Bisnaga with all his troops; and they marched in the following order. The chief of the guard led the advance with thirty thousand infantry - archers, men with shields, and musqueteers, and spearmen - and a thousand horse, and his elephants." ವಿಜಯನಗರ ಕಾಲದ ವಿವಿಧ ಆಯುಧಗಳ ವರ್ಣನೆಯನ್ನು ಇಲ್ಲಿ ಕಾಣಬಹುದು.

ಶಿಲ್ಪಗಳು:

ನಾವು ಸಾಮಾನ್ಯವಾಗಿ ಯಾವುದೇ ವೀರಗಲ್ಲು ಮತ್ತು ಶಿಲ್ಪಗಳನ್ನು ಕಂಡಾಗ ಅವುಗಳಲ್ಲಿ ಆಯುಧಗಳನ್ನು ಕಾಣಬಹುದು. ದೇವಾಲಯಗಳ ಅಧಿಷ್ಠಾನದ ಮೇಲಿನ ಯುದ್ಧ ದೃಶ್ಯಗಳಲ್ಲಿ ಸೈನಿಕರು ಹಿಡಿದಿರುವ ಆಯುಧಗಳು, ಅವರ ವೇಷಗಳನ್ನು ಗಮನಿಸಬಹುದು. ಶಿಲ್ಪಗಳಲ್ಲಿಯ ಪೌರಾಣಿಕ ದೃಶ್ಯಗಳಲ್ಲಿ ಆಯುಧ ಕಲೆಗೆ ಒತ್ತು ಕೊಡಲಾಗಿದೆ.

ಆಯುಧಗಳನ್ನು (1) ಆಕ್ರಮಣಕಾರಕ ಆಯುಧಗಳು ಮತ್ತು (2) ರಕ್ಷಣಾತ್ಮಕ ಆಯುಧಗಳು ಎಂದು ವಿಂಗಡಿಸಬಹುದು. ಆಕ್ರಮಣಕಾರಕ ಆಯುಧಗಳಲ್ಲಿ (i) ಚುಚ್ಚುವ ಆಯುಧಗಳು, (ii) ಹೊಡೆಯುವ ಆಯುಧಗಳು, (iii) ಕತ್ತರಿಸುವ ಆಯುಧಗಳು ಮತ್ತು (iv) ಧ್ವಂಸ ಮಾಡುವ ಆಯುಧಗಳು ಎಂದು ವಿಂಗಡಿಸಬಹುದು. ರಕ್ಷಣಾತ್ಮಕ ಆಯುಧಗಳಲ್ಲಿ ಗುರಾಣಿಗಳು ಪ್ರಮುಖವಾಗಿರುವವು.

(1) ಆಕ್ರಮಣಕಾರಕ ಆಯುಧಗಳು:

(i) ಚುಚ್ಚುವ ಆಯುಧಗಳಲ್ಲಿ ಸಾಮಾನ್ಯವಾಗಿ ಭರ್ಚಿಗಳು ಮತ್ತು ಕಠಾರಿಗಳು, ಬಿಲ್ಲು ಮತ್ತು ಬಾಣಗಳು, ಬತ್ತಳಿಕೆಗಳು, ಅಂಕುಶಗಳು ಪ್ರಾಮುಖ್ಯವಾಗಿರುವವು. ಭರ್ಚಿಗಳನ್ನು ಹಿಡಿದ ಕುದುರೆದಳ ಮತ್ತು ಕಾಲ್ದಳಗಳನ್ನು ವಿಜಯನಗರದ ಹಜಾರರಾಮ ದೇವಸ್ಥಾನ ಮತ್ತು ತಿರುವೆಂಗಳನಾಥ ದೇವಾಲಯದ ಪ್ರಾಕಾರ ಗೋಡೆಯ ಮೇಲಿರುವ ಶಿಲ್ಪಗಳಲ್ಲಿ ಕಾಣಬಹುದು. ಕಠಾರಿಗಳನ್ನು ಹೆಚ್ಚಾಗಿ ವೀರಗಲ್ಲುಗಳ ಮೇಲೆ ಮತ್ತು ಯೋಧರ ಶಿಲ್ಪಗಳಲ್ಲಿ ಕಾಣಬಹುದು. ವಿಜಯನಗರದ ತಿರುವೆಂಗಳನಾಥ ದೇವಾಲಯದಲ್ಲಿ ವಿಜಯನಗರ ಅರಸರ ಲಾಂಛನದಲ್ಲಿ ಕಠಾರಿಯನ್ನು ನೋಡಬಹುದು. ಬಿಲ್ಲು, ಬಾಣ ಮತ್ತು ಬತ್ತಳಿಕೆಗಳು ಸಾಮಾನ್ಯವಾಗಿ ಪೌರಾಣಿಕ ಕಥೆಗಳ ಶಿಲ್ಪಗಳಲ್ಲಿ ಮತ್ತು ವೀರಗಲ್ಲುಗಳಲ್ಲಿ ಕಂಡು ಬರುವವು. ವಿಜಯನಗರದಲ್ಲಿ ಹಜಾರರಾಮ, ತಿರುವೆಂಗಳನಾಥ, ವಿರೂಪಾಕ್ಷ ಮತ್ತು ಪಟ್ಟಾಭಿರಾಮ ದೇವಾಲಯಗಳಲ್ಲಿ ರಾಮಾಯಣ ದೃಶ್ಯಗಳು ಶಿಲ್ಪಗಳಲ್ಲಿ ಕಾಣುತ್ತವೆ. ಅಂಕುಶಗಳನ್ನು ಸಾಮಾನ್ಯವಾಗಿ ಆನೆಗಳನ್ನು ಪಳಗಿಸಲು ಮಾವುತರು ಉಪಯೋಗಿಸುತ್ತಿದ್ದುದನ್ನು ಶಿಲ್ಪಗಳಲ್ಲಿ ಕಾಣಬಹುದು.

(ii) ಹೊಡೆಯುವ ಆಯುಧಗಳಲ್ಲಿ ವಿವಿಧ ಆಕಾರ ಮತ್ತು ಗಾತ್ರದ ದೊಣ್ಣೆಗಳು ಪ್ರಮುಖವಾಗಿವೆ.

(iii) ಕತ್ತರಿಸುವ ಆಯುಧಗಳನ್ನು ಕತ್ತಿಗಳು, ಯುದ್ಧ ಕೊಡಲಿಗಳು ಅಥವಾ ಪರಶುಗಳು ಎಂದು ವಿಂಗಡಿಸಬಹುದು. ಶಿಲ್ಪಗಳಲ್ಲಿ ಕೊಡಲಿಗಳ ಪ್ರದರ್ಶನ ಕಡಿಮೆಯಾದರೆ ಕತ್ತಿಗಳ ಪ್ರದರ್ಶನ ಹೆಚ್ಚಾಗಿರುವುದು ಕಂಡುಬರುತ್ತದೆ. ಖಡ್ಗಗಳ ಉಪಯೋಗ ಪೌರಾಣಿಕ ದೃಶ್ಯಗಳಲ್ಲಿ ಹೆಚ್ಚಾಗಿರುವುದನ್ನು ಗಮನಿಸಬಹುದು.

(iv) ಧ್ವಂಸ ಮಾಡುವ ಆಯುಧಗಳಲ್ಲಿ ಸಾಮಾನ್ಯವಾಗಿ ವಿಷ್ಣುವಿನ ಚಕ್ರವನ್ನು ಶಿಲ್ಪಗಳಲ್ಲಿ ನೋಡಬಹುದು. ಈ ಆಯುಧವನ್ನು ಯುದ್ಧದಲ್ಲಿ ಉಪಯೋಗಿಸದಿದ್ದರೂ ವಿಜಯನಗರ ದೇವಾಲಯಗಳ ಶಿಲ್ಪಗಳಲ್ಲಿ ಕಾಣಬಹುದು.

(2) ರಕ್ಷಣಾತ್ಮಕ ಆಯುಧಗಳು:

ರಕ್ಷಣಾತ್ಮಕ ಆಯುಧಗಳಲ್ಲಿ ಗುರಾಣಿಗಳೇ ಪ್ರಮುಖವಾಗಿವೆ. ಆಕಾರಕ್ಕನುಗುಣವಾಗಿ ಇವುಗಳನ್ನು ನಾಲ್ಕು ಪ್ರಕಾರಗಳಲ್ಲಿ ವಿಂಗಡಿಸಬಹುದು. ದುಂಡಾಕೃತಿ, ಚೌಕಾಕೃತಿ, ಆಯತಾಕೃತಿ ಮತ್ತು ಅಂಡಾಕೃತಿ ಗುರಾಣಿಗಳನ್ನು ವಿಜಯನಗರ ದೇವಾಲಯಗಳ ಮೇಲಿನ ಪೌರಾಣಿಕ ದೃಶ್ಯಗಳ ಶಿಲ್ಪಗಳಲ್ಲಿ ಮತ್ತು ವೀರಗಲ್ಲುಗಳಲ್ಲಿ ಕಾಣಬಹುದು.

ಆಕರ ಗ್ರಂಥಗಳು

1. H.T. Talwar, 1994, *The Arms and Armoury of the Mysore Palace.*
2. T. Dayanand Patel, *Kesava Temple at Somanathapur: A cultural study.*
3. ಕೆ. ಶ್ರೀಕಂಠಯ್ಯ, 1983, *ಕನ್ನಡ ಕಾವ್ಯಗಳಲ್ಲಿ ಸಮರ ಚಿತ್ರಗಳು.*
4. ಎಂ. ಚಿದಾನಂದಮೂರ್ತಿ, *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.*
5. G.N. Pant, 1978, *Indian Arms and Armour.*
6. Robert Sewell, *A Forgotten Empire.*

6. ಹಂಪಿಯ ವಿಠ್ಠಲ ದೇವಾಲಯ: ನಿರ್ಮಾಣ ಕಾಲ ಮತ್ತು ಸಂದ ದಾನಗಳು

ಶರಣಬಸಪ್ಪ ಕೋಲ್ಕಾರ

ಹಂಪಿಯ ದೇವಾಲಯಗಳಲ್ಲೇ ವಿಠ್ಠಲ ದೇವಾಲಯವು ಭವ್ಯವಾಗಿದೆ. ಅರಸರಿಂದ ಪ್ರಜೆಗಳವರೆಗೆ ಸರ್ವಮಾನ್ಯ ಹೊಂದಿದ ಈ ದೇವಾಲಯವು ವಿಜಯನಗರ ಸಾಮ್ರಾಜ್ಯದ ಅವಧಿಯಲ್ಲಿ ಒಂದು ಪ್ರಧಾನ ಧರ್ಮ ಕ್ಷೇತ್ರವೆನಿಸಿದ್ದಿತು. ಅಲ್ಲಿ ವಿಧಿಬದ್ಧವಾದ ಪೂಜೆ–ಪುನಸ್ಕಾರಗಳು, ಉತ್ಸವ ಆಚರಣೆಗಳು ವೈವಿಧ್ಯವಾಗಿ, ವೈಭವದಿಂದ ನೆರವೇರುತ್ತಿದ್ದವು. ಹೀಗೆ ವಿಠ್ಠಲ ದೇವಾಲಯವು ಪ್ರಭಾವಿ ಧರ್ಮ ಕ್ಷೇತ್ರವಾಗಿ ಬೆಳೆಯುತ್ತಿದ್ದ ಸಂದರ್ಭಗಳು ಸಮಕಾಲೀನ ಶಿಲಾಶಾಸನಗಳಲ್ಲಿ ದಾಖಲೆಗೊಂಡಿವೆ. ಇಂಥ ಶಿಲಾಶಾಸನಗಳ ಅವಲೋಕನವು ಒಂದು 'ದೈವದ ಪ್ರಭಾವ' ಮತ್ತು 'ಭಕ್ತರ ನಡೆದುಕೊಳ್ಳುವಿಕೆ'ಯನ್ನು ಪರಿಚಯಿಸುತ್ತಾ ಆ ಕಾಲದ (ಆಚರಣೆ, ಪರಂಪರೆಗಳ) ಧಾರ್ಮಿಕ ಲೋಕವನ್ನು ತೆರೆದಿಡುತ್ತದೆ. ಈ ಹಿನ್ನೆಲೆಯಲ್ಲಿ ವಿಠ್ಠಲ ದೇವಾಲಯಕ್ಕೆ ಸಂದ ಶಾಸನೋಕ್ತ ದಾನಧರ್ಮಗಳನ್ನು ಅವಲೋಕಿಸುವುದು ಮತ್ತು ದೇವಾಲಯ ನಿರ್ಮಾಣ ಕಾಲದ ಬಗ್ಗೆ ವಿವೇಚಿಸಿ ನಿರ್ಧರಿಸುವುದು ಈ ಪ್ರಬಂಧದ ಉದ್ದೇಶವಾಗಿದೆ.

ನಿರ್ಮಾಣ ಕಾಲ: ವೈಷ್ಣವರಲ್ಲಿಯ ಕೃಷ್ಣನ ಆರಾಧನೆಯ ಪಂಥವೊಂದು ಮಹಾರಾಷ್ಟ್ರದ ಪಂಢರಾಪುರದಿಂದ ವಿಜಯನಗರಕ್ಕೆ ಧಾವಿಸಿತು. ಅಲ್ಲಿನ ವಿಠೋಬನನ್ನು ಪೂಜಿಸುವ ಪರಂಪರೆಯು ಇಲ್ಲಿನ ಅರಸರನ್ನು ಪ್ರಚೋದಿಸಿ ವಿಠ್ಠಲ ದೇವಾಲಯದ ನಿರ್ಮಾಣಕ್ಕೆ ಕಾರಣವಾಯಿತೆನ್ನುವ ಒಂದು ನಂಬಿಕೆ ಇದೆ.[1] ಅಲ್ಲದೆ ಸ್ವತಃ ಕೃಷ್ಣದೇವರಾಯನೆ ಪಂಢರಾಪುರದಿಂದ ವಿಠ್ಠಲನ ಮೂರ್ತಿಯನ್ನು ತಂದು ವಿಜಯನಗರದಲ್ಲಿ ಪ್ರತಿಷ್ಠೆ ಮಾಡಿದನೆಂಬ ಪ್ರತೀತಿಯೂ ಇದೆ. ಆದರೆ, ವಾಸ್ತವಿಕವಾಗಿ ಮೂಲಭಾಗಗಳನ್ನೊಳಗೊಂಡ ವಿಠ್ಠಲ ದೇವಾಲಯವು ಸಂಗಮರ ಕಾಲದಲ್ಲೇ ನಿರ್ಮಾಣಗೊಂಡಿತ್ತೆಂದು ವಸುಂಧರಾ ಫಿಲಿಯೋಜಾ[2] ಮತ್ತು ಎಸ್. ರಾಜಶೇಖರ[3] ಅಭಿಪ್ರಾಯ ಪಟ್ಟಿದ್ದಾರೆ. ಕೃಷ್ಣದೇವರಾಯ ಕೇವಲ ನೂರು ಕಂಬಗಳ ಮಂಟಪವನ್ನು ಮತ್ತು ಅವನ ರಾಣಿಯರು ಗೋಪುರಗಳನ್ನು ನಿರ್ಮಿಸಿರುವ ಸಂಗತಿ ಶಾಸನ[4]ಗಳಿಂದ ತಿಳಿದುಬರುತ್ತದೆ. ಸಂಗಮರ ಕಾಲದಲ್ಲೇ ಈ ದೇವಾಲಯ ಅಸ್ತಿತ್ವದಲ್ಲಿದ್ದ ಬಗ್ಗೆ ಕೆಲವು ಸಾಹಿತ್ಯ ಕೃತಿಗಳು ಮತ್ತು ಶಾಸನಗಳು ಸ್ಪಷ್ಟ ಮಾಹಿತಿಗಳನ್ನು ನೀಡುತ್ತವೆ.

ಕ್ರಿ.ಶ. 1408ರಿಂದ 1503ರ ಅವಧಿಯಲ್ಲಿ ಬದುಕಿದ್ದ ತಾಳಪಾಕ್ಕಂ ಅಣ್ಣಮಾಚಾರ್ಯರು ತಮ್ಮ ಸಂಕೀರ್ತನೆಯೊಂದರಲ್ಲಿ ವಿಠ್ಠಲ ಮತ್ತು ರುಕ್ಮಿಣಿಯರು ವೆಂಕಟಾದ್ರಿಯಿಂದ ಬಂದು ವಿಜಯನಗರದ ತುಂಗಭದ್ರಾ ನದಿ ತೀರದಲ್ಲಿ ನೆಲೆನಿಂತರೆಂದು ವರ್ಣಿಸುತ್ತಾರೆ.[5] ಅಂದರೆ ವಿಠ್ಠಲ-ರುಕ್ಮಿಣಿಯ ವಿಗ್ರಹಗಳನ್ನು ತಿರುಪತಿಯಿಂದ ವಿಜಯನಗರಕ್ಕೆ ತಂದು ಪ್ರತಿಷ್ಠಾಪಿಸಿದ ಸಂಗತಿ ಇಲ್ಲಿ ವ್ಯಕ್ತವಾಗಿದೆ. ಇದಕ್ಕೆ ಪೂರಕವಾಗಿ ಹದಿನಾಲ್ಕನೆಯ ಶತಮಾನದಲ್ಲೇ ವಿಠ್ಠಲ ದೇವಾಲಯ ಅಸ್ತಿತ್ವದಲ್ಲಿತ್ತೆನ್ನುವುದು ಹರಿಭಟ್ಟನ 'ಉತ್ತರ ನರಸಿಂಹ ಪುರಾಣಂ'[6]ದಿಂದ ತಿಳಿಯುತ್ತದೆ. ಇದರಲ್ಲಿ ಪ್ರೌಢದೇವರಾಯನ (ಕ್ರಿ.ಶ. 1426-1446) ಅಧಿಕಾರಿಯಾದ ಪ್ರೊಳುಗಂಟಿ ತಿಪ್ಪಣ್ಣ ಎನ್ನುವವನು ವಿಠ್ಠಲ ದೇವಾಲಯದ ಭೋಗಮಂಟಪವನ್ನು ನಿರ್ಮಿಸಿದನೆಂದು ವರ್ಣಿತವಾಗಿದೆ.

ಕ್ರಿ.ಶ. 1408ರ ಕಾಲದ ಶಿರಾಲಿಯ ಶಾಸನವೊಂದರಲ್ಲಿ ತುಂಗಭದ್ರಾ ನದಿ ತೀರದ ವಿಠ್ಠಲನ ಸನ್ನಿಧಿಯಲ್ಲಿ ಮಾಡಿದ ದಾನದ ಬಗ್ಗೆ ವಿವರವಿದೆ.[7] ತುಂಗಭದ್ರಾ ನದಿ ತೀರದಲ್ಲಿ ಹಂಪಿಯ ವಿಠ್ಠಲ ದೇವಾಲಯವಲ್ಲದೆ ಬೇರೆ ವಿಠ್ಠಲ ದೇವಾಲಯಗಳಿಲ್ಲ. ಹಾಗಾಗಿ ಶಾಸನೋಕ್ತ ವಿಠ್ಠಲ ಹಂಪಿಯ ವಿಠ್ಠಲನೇ ಸರಿ.

ಹೀಗೆ ಈ ಎಲ್ಲಾ ದಾಖಲೆಗಳು ವಿಠ್ಠಲ ದೇವಾಲಯವು ಸಂಗಮರ ಕಾಲದಲ್ಲೇ ಅಸ್ತಿತ್ವದಲ್ಲಿತ್ತೆನ್ನುವುದನ್ನು ಸ್ಪಷ್ಟವಾಗಿ ತಿಳಿಸುತ್ತವೆ. ಆದಾಗ್ಯೂ ಇದು ಕೃಷ್ಣದೇವರಾಯನ ನಿರ್ಮಾಣವೆನ್ನುವ ಪ್ರತೀತಿ ಬೆಳೆಯುವುದಕ್ಕೆ ಆತನ ಕಾಲದಲ್ಲಾದ ವೈಷ್ಣವ ಧರ್ಮದ ಬೆಳವಣಿಗೆಯೇ ಕಾರಣವಾಗಿದೆ. ದೇವಾಲಯ, ಶಿಲ್ಪಗಳ ನಿರ್ಮಾಣಗಳಿಂದ ಕೂಡಿದ ಈ ವೈಷ್ಣವ ಉತ್ಕರ್ಷದ ಅಬ್ಬರವು ವಿಠ್ಠಲ ದೇವಾಲಯದ ನಿರ್ಮಾಣತ್ವವನ್ನು ತನ್ನದಾಗಿಸಿಕೊಂಡಿದೆ. ಜೊತೆಗೆ ಸಂಗಮ ಅರಸರು ಶೈವರೆನ್ನುವ ಸಂಗತಿಯು ಇದಕ್ಕೆ ಪೂರಕವಾದ ನಂಬಿಕೆಯನ್ನು ಬೆಳೆಸಿದೆ. ಆದರೆ ಸಂಗಮ ದೊರೆಗಳು ಕೃಷ್ಣದೇವರಾಯನಂತೆ ಪರಮತ ಸಹಿಷ್ಣುಗಳಾಗಿದ್ದರೆನ್ನುವುದನ್ನು ಗಮನಿಸಬೇಕು. ಬುಕ್ಕರಾಯನ ಶ್ರವಣಬೆಳಗೊಳ ಶಾಸನವು ಆ ಕಾಲದಲ್ಲಿ ವೈಷ್ಣವರ ಪ್ರಾಬಲ್ಯವನ್ನು ತಿಳಿಸಿದರೆ, ಅವನ ಸೊಸೆ (ಕಂಪಣನ ರಾಣಿ) ಗಂಗಾದೇವಿಯು ತನ್ನ ಮಧುರಾವಿಜಯಂ ಎಂಬ ಕೃತಿಯಲ್ಲಿ ವೈಷ್ಣವ ದೇವರು ಶ್ರೀರಾಮನನ್ನು ಸ್ತುತಿಸಿರುವುದು,[8] ಪ್ರೌಢದೇವರಾಯನು ಕನಕಗಿರಿಯ ಕನಕಾಚಲ ಲಕ್ಷ್ಮೀನರಸಿಂಹ ದೇವರಿಗೆ ದಾನ ನೀಡಿರುವುದು[9] ಅವರು ವೈಷ್ಣವ ಮತವನ್ನು ಗೌರವಿಸುತ್ತಿದ್ದ ಬಗ್ಗೆ ದಾಖಲೆಗಳು. ಹೀಗೆ ಈ ಎಲ್ಲಾ ದಾಖಲೆಗಳ ಮಾಹಿತಿಗಳನ್ವಯ ವಿಠ್ಠಲ ದೇವಾಲಯವು ಮೂಲತಃ ಸಂಗಮರ ಕಾಲದ್ದು ಎನ್ನುವುದು ಸ್ಪಷ್ಟ.

ದೇವಾಲಯದ ವಾಸ್ತು ವಿವರ ಹಾಗೂ ನಿರ್ಮಾಣ ಪರಂಪರೆ[10]

ವಿಠ್ಠಲ ದೇವಾಲಯವು ವಾಸ್ತುಶೈಲಿ ದೃಷ್ಟಿಯಿಂದ ವೈಶಿಷ್ಟ್ಯಪೂರ್ಣವಾಗಿದೆ. ಅದು 15.20 ಮೀಟರ್ x 94.5 ಮೀಟರ್ ವಿಶಾಲವಾದ ಸಂಕೀರ್ಣದ ಮಧ್ಯದಲ್ಲಿ ರಚಿತವಾಗಿದೆ. ದೇವಾಲಯ ಒಟ್ಟು ಸಂಕೀರ್ಣವು ಮುಖ್ಯ ದೇವಾಲಯ, ದೇವಿಯ ದೇವಾಲಯ, ಕಲ್ಯಾಣ ಮಂಟಪ, ಉತ್ಸವ ಮಂಟಪ, ನೂರು ಕಂಬದ ಹಜಾರ ಮತ್ತು ರಥದ ಮಾದರಿಯ ಗರುಡನ ಗುಡಿ (ಕಲ್ಲಿನ ರಥ)ಗಳನ್ನು ಒಳಗೊಂಡಿದೆ. ಇವೆಲ್ಲವನ್ನು ಸುತ್ತುವರದ ಪ್ರಾಕಾರವಿದೆ. ಈ ಒಟ್ಟು ಸಂಕೀರ್ಣವು ಕ್ರಮವಾಗಿ ಸಂಗಮರ ಮತ್ತು ತುಳುವರ ಕಾಲದಲ್ಲಿ ನಿರ್ಮಾಣಗೊಂಡಿದೆ.

ಸಂಗಮರ ನಿರ್ಮಾಣ: ಸಂಗಮರ ಕಾಲದಲ್ಲಿ ನಿರ್ಮಾಣಗೊಂಡ ಮುಖ್ಯ ದೇವಾಲಯವು ಗರ್ಭಗೃಹ, ಸುಖನಾಸಿ, ಪ್ರದಕ್ಷಿಣಾಪಥ, ಹದಿನಾರು ಕಂಬಗಳಿರುವ ಒಂದು ರಂಗಮಂಟಪ, ಪಾರ್ಶ್ವಗಳಲ್ಲಿ ಎರಡು ಮುಖಮಂಟಪಗಳು ಮತ್ತು ಒಂದು ವಿಶಾಲವಾದ ಮಹಾರಂಗಮಂಟಪಗಳನ್ನು ಹೊಂದಿದೆ. ಗರ್ಭಗೃಹದ ಸುತ್ತಲ ಪ್ರದಕ್ಷಿಣಾಪಥವು ವಿಶಾಲವಾಗಿದ್ದು, ನೆಲಹಂತದಲ್ಲಿದೆ. ಮಹಾರಂಗಮಂಟಪವು* ಒಂದು ಆಶ್ಚರ್ಯಕರವಾದ ರಚನೆ. ಇಲ್ಲಿ ಸುಂದರವಾದ 56 ಕಂಬಗಳಿವೆ. ಇವು ಪ್ರತಿಯೊಂದು 3.6 ಮೀಟರ್ ಎತ್ತರವಾಗಿಯೂ, 1.5 ಮೀಟರ್ ಅಗಲವಾಗಿಯೂ ಇವೆ. ಇವುಗಳು ವಿನ್ಯಾಸ ಮತ್ತು ಕೆತ್ತನೆಯಿಂದ ನೈಪುಣ್ಯ ರಚನೆಗಳಾಗಿವೆ. ಈ ಕಂಬಗಳಲ್ಲಿ ಎರಡು ಭಾಗಗಳಿವೆ. ಮಧ್ಯದಲ್ಲಿ ಚಚ್ಚೌಕ ಪ್ರಧಾನವಾದ ಕಂಬ, ಅದರ ಸುತ್ತಲೂ ಚಿಕ್ಕ ಚಿಕ್ಕ ಅಳತೆಯ ಉಪಕಂಬಗಳಿವೆ. ಕಂಬಗಳನ್ನು ಕುಳಿತ ಸಿಂಹಗಳು ಹೊತ್ತಿವೆ. ಉಪಕಂಬಗಳನ್ನು ಸಂಗೀತ ಕಂಬಗಳೆಂದು ಕರೆಯಲಾಗುತ್ತಿದೆ. ಕಂಬಗಳ ಮೇಲೆ ನರಸಿಂಹ, ಕಾಳಿಂಗಮರ್ದನ ಕೃಷ್ಣ, ಗೊಲ್ಲತಿ, ಮಂಡಲ, ನಾಗಬಂಧ ಇತ್ಯಾದಿ ಅನೇಕ ಉಬ್ಬು ಶಿಲ್ಪಗಳಿವೆ. ಕಂಬಗಳ ಮೇಲ್ಭಾಗದಲ್ಲಿ ಸುಂದರವಾದ ದೊಡ್ಡ ಪುಷ್ಪ ಬೋದುಗೆಗಳಿವೆ.

ಮಹಾರಂಗಮಂಟಪಕ್ಕೆ ಮಧ್ಯದಲ್ಲಿ ಅಗಲವಾದ ಅಂಕಣವಿದೆ. ಇದಕ್ಕೆ ಕಲ್ಲು ಚಪ್ಪಡಿಗಳನ್ನು ಹಾಸಿ ಛಾವಣಿಯನ್ನು ನಿರ್ಮಿಸಲಾಗಿತ್ತು. ಇದರ ಅಧಿಷ್ಠಾನವು ಸಾಕಷ್ಟು ಎತ್ತರವಾಗಿದೆ. ಅದರ ಪಟ್ಟಿಕೆಗಳಲ್ಲಿ ಕುದುರೆಗಳ, ಯೋಧರ, ಹಂಸಗಳ, ವಿಷ್ಣುವಿನ ದಶಾವತಾರ ಶಿಲ್ಪಗಳ, ಬಳೆ ರೀತಿಯ ಮಡಿಕೆಗಳ ಹಾಗೂ ಪೋರ್ಚುಗೀಸ್ ಕುದುರೆ ವರ್ತಕರ ಶಿಲ್ಪಗಳನ್ನು ಆಕರ್ಷಕವಾಗಿ ಕೆತ್ತಲಾಗಿದೆ. ಈ ಮಂಟಪ ಮತ್ತು ಇತರ ಮಂಟಪಗಳ ಕಪೋತಗಳು ಅಗಲವಾಗಿದ್ದು, ಆಳವಾಗಿಯೂ ಇವೆ. ಮೂಲೆಗಳಲ್ಲಿ ದಪ್ಪವಾದ ಕಲ್ಲಿನ ಬಳೆಗಳಿವೆ. ಹೀಗೆ ಈ ಎಲ್ಲಾ ಭಾಗಗಳು ಸಂಗಮರ ಕಾಲದವು.

ತುಳುವರ ನಿರ್ಮಾಣ: ವಿಠ್ಠಲ ದೇವಾಲಯವು ತುಳುವರ ಕಾಲದಲ್ಲಿ ಕೆಲವು ಭಾಗಗಳನ್ನು ಹೊಂದಿ ವಿಸ್ತೃತವಾಗುತ್ತದೆ. ಪ್ರಖ್ಯಾತ ದೊರೆ ಕೃಷ್ಣದೇವರಾಯನು ಕ್ರಿ.ಶ. 1516ರಲ್ಲಿ ವಿಠ್ಠಲ ದೇವಾಲಯ ಸಂಕೀರ್ಣದಲ್ಲಿ ನೂರು ಕಂಬಗಳ ಮಂಟಪವನ್ನು ನಿರ್ಮಿಸಿದನು. ಅವನ ರಾಣಿಯರಾದ ತಿರುಮಲಾದೇವಿ ಮತ್ತು ಚಿನ್ನಾದೇವಿಯವರು ಕ್ರಿ.ಶ. 1513ರಲ್ಲಿ ಇದೇ ದೇವಾಲಯಕ್ಕೆ ಗೋಪುರಗಳನ್ನು ಕಟ್ಟಿಸಿಕೊಟ್ಟರು. ಕೃಷ್ಣದೇವರಾಯನ ನಂತರ ಪಟ್ಟಕ್ಕೆ ಬಂದ ಅವನ ಸಹೋದರ ಅಚ್ಯುತದೇವರಾಯನ ಕಾಲದಲ್ಲಿ ಮುಖ ಮಂಟಪ, ಕಲ್ಯಾಣ ಮಂಟಪ ಮತ್ತು ಪ್ರಾಕಾರದ ಗೋಡೆಗೆ ಹೊಂದಿಕೊಂಡಿರುವ ಕೆಲವು ಮಂಟಪಗಳು ನಿರ್ಮಾಣಗೊಂಡವು. ಉಳಿದಂತೆ ಮಂಟಪಗಳ ನಿರ್ಮಾಣ ಕಾರ್ಯವು ಸದಾಶಿವರಾಯನ ಕಾಲದಲ್ಲಿ ನಡೆಯಿತು. ಈ ಎಲ್ಲ ಮಂಟಪಗಳಲ್ಲಿ ಕಲ್ಯಾಣ ಮಂಟಪವು ಶ್ರೇಷ್ಠ ರಚನೆಯಾಗಿದೆ. ಇಲ್ಲಿರುವ ನಲವತ್ತೆಂಟು ಕಂಬಗಳು ಸುಂದರ ಕೆತ್ತನೆಗಳಿಂದ ಕೂಡಿ ಆಕರ್ಷಕವಾಗಿವೆ.

ದೇವಾಲಯದ ಎದುರಿಗೆ ಇರುವ ಕಲ್ಲಿನ ರಥವು ಮೂಲತಃ ಗರುಡನ ಗುಡಿ. ಇಟ್ಟಿಗೆಗಳಿಂದ ನಿರ್ಮಿಸಿದ ಇದರ ಶಿಖರ ಈಗ ನಾಶವಾಗಿದೆ. ಇದರ ಚಕ್ರಗಳನ್ನು ಚಲಿಸುವ ರೀತಿಯಲ್ಲಿ ಜೋಡಿಸಲಾಗಿದೆ. ರಥದ ಹಿಂದೆ ಕಟ್ಟೆ ಮತ್ತು ಧ್ವಜ ಸ್ತಂಭದ ಪೀಠ ಇವೆ. ದೇವಾಲಯದ ಪ್ರಾಕಾರಕ್ಕೆ ಪೂರ್ವ, ಉತ್ತರ ಮತ್ತು ದಕ್ಷಿಣ ದಿಕ್ಕುಗಳಲ್ಲಿ ಮಹಾದ್ವಾರಗಳಿದ್ದು ಅವುಗಳ ಮೇಲೆ ಗೋಪುರಗಳಿವೆ. ಪೂರ್ವದ ಗೋಪುರದೆದುರಿಗೆ ಎತ್ತರವಾದ ದೀಪಸ್ತಂಭವೊಂದಿದ್ದು ಈಗ ತುಂಡಾಗಿದೆ. ಈ ದೇವಾಲಯಕ್ಕೂ ರಥಬೀದಿಯಿದ್ದು, ಎರಡು ಕಡೆ ಮಂಟಪಗಳಿವೆ. ಪೂರ್ವಕ್ಕೆ ಸ್ವಲ್ಪ ಅಂತರದಲ್ಲಿ ವಿಠ್ಠಲನ ತೆಪ್ಪೋತ್ಸವ ಕೊಳ (ಪುಷ್ಕರಣಿ)ವಿದೆ. ಅದರ ಮಧ್ಯದಲ್ಲಿ ಶಿಖರವುಳ್ಳ ಮಂಟಪವಿದೆ.

ಸಂದ ದಾನಗಳು

ವಿಜಯನಗರದಲ್ಲಿ ತುಳುವ ವಂಶದ ಆಳ್ವಿಕೆಯೊಂದಿಗೆ ವಿಠ್ಠಲದೇವರ ಆರಾಧನೆ ಲೋಕಪ್ರಿಯವಾಗುತ್ತದೆ. ಸ್ವತಃ ವೈಷ್ಣವ ಅನುಯಾಯಿಯೂ, ವಿಠ್ಠಲ ಭಕ್ತನೂ ಆಗಿದ್ದ ಕೃಷ್ಣದೇವರಾಯನು ವಿಠ್ಠಲ ದೇವಾಲಯದ ಅಭಿವೃದ್ಧಿಗೆ ಸಂಕಲ್ಪಿಸಿ ಮಂಟಪ, ಗೋಪುರಗಳನ್ನು ಕಟ್ಟಿಸಿ, ದಾನಗಳನ್ನು ಅರ್ಪಿಸುತ್ತಾನೆ. ಹೀಗೆ 'ಅರಸರದೈವ - ಪ್ರಜೆಗಳ ದೈವವೂ' ಆಯಿತು. ಅರಸನನ್ನು ಅನುಸರಿಸಿ ಮಹಾಮಂಡಲೇಶ್ವರರು, ಅಧಿಕಾರಿಗಳು, ವರ್ತಕರು, ಶ್ರೀಮಂತರು ವಿಠ್ಠಲ ದೇವರಿಗೆ ದಾನ ದತ್ತಿಗಳನ್ನರ್ಪಿಸಿ ದೇವ-ದೊರೆಯ ಕೃಪೆಗೆ ಪಾತ್ರರಾದರು. ವಿಠ್ಠಲ ದೇವಾಲಯದ

* ಮಹಾರಂಗಮಂಟಪವು ವಾಸ್ತು ಶೈಲಿ ದೃಷ್ಟಿಯಿಂದ 16ನೇ ಶತಮಾನದ್ದು (ಸಂಪಾದಕರು).

ಭಂಡಾರ ಶ್ರೀಮಂತವಾಯಿತು. ಪೂಜಾ ವಿಧಿಗಳು ವಿಸ್ತೃತಗೊಂಡು, ನಿತ್ಯ ನಿರಂತರ ನೆರವೇರತೊಡಗಿದವು. ಉತ್ಸವಗಳು ಪಕ್ಷ, ಮಾಸೋತ್ಸವಗಳಾಗಿ ಅಧಿಕಗೊಂಡವು. ಜಾತ್ರೆ ಅದ್ದೂರಿಗೊಂಡಿತು.

ಅರಸರಿಂದ: ವಿಠ್ಠಲ ದೇವಾಲಯ ಸಂಗಮರ ಕಾಲದಲ್ಲಿ ಅಸ್ತಿತ್ವದಲ್ಲಿದ್ದರೂ, ಆ ಮನೆತನದ ಅರಸರ ಒಂದೂ ದಾನ ಶಾಸನ ದೊರೆಯದೇ ಇರುವುದು ಆಶ್ಚರ್ಯಕರವಾಗಿದೆ. ದಾನ ಶಾಸನಗಳು ಕೃಷ್ಣದೇವರಾಯನ ಕಾಲದಿಂದ ಲಭ್ಯವಾಗುತ್ತಿದ್ದು, ಅವುಗಳಿಂದ ತಿಳಿದು ಬರುವಂತೆ ವಿಠ್ಠಲ ದೇವಾಲಯಕ್ಕೆ ಸಂದ ದಾನದ ವಿವರಗಳು ಇಂತಿವೆ.

ಕೃಷ್ಣದೇವರಾಯನು ಕ್ರಿ.ಶ. 1513ರಲ್ಲಿ ತಮ್ಮ ತಂದೆ ನರಸಣ್ಣನಾಯಕವೊಡೆಯ ಹಾಗೂ ತಾಯಿ ನಾಗಾಜಿದೇವಿ ಅಮ್ಮನವರಿಗೆ ಪುಣ್ಯವಾಗಬೇಕೆಂದು ವಿಠ್ಠಲ ದೇವರ ನಿತ್ಯೋತ್ಸವ, ಪಕ್ಷೋತ್ಸವ, ವಾರ್ಷಿಕೋತ್ಸವ ಹಾಗೂ ಫಾಲ್ಗುಣ ವೈಶಾಖ ಮಾಸದಲ್ಲಿ ನಡೆಯುತ್ತಿದ್ದ ರಥೋತ್ಸವಕ್ಕಾಗಿ ಹೊಸಊರು ಮಾಗಣಿಯ ವಿರುಪಾಪುರವನ್ನು ಸಮರ್ಪಿಸುತ್ತಾನೆ.[11] ಅದೇ ವರ್ಷ ಅವನ ರಾಣಿಯರಾದ ತಿರುಮಲಾದೇವಿ ಮತ್ತು ಚಿನ್ನಾದೇವಿಯರು ಸಹ ವಿಠ್ಠಲದೇವಾಲಯದ ಗೋಪುರಗಳನ್ನು ನಿರ್ಮಾಣ ಮಾಡಿಸಿದರು.[12] ಮುಂದೆ ಕ್ರಿ.ಶ. 1516ರಲ್ಲಿ ರಾಯನು ದೇವಾಲಯ ಸಂಕೀರ್ಣದಲ್ಲಿ ನೂರು ಕಂಬಗಳ ಮಂಟಪವನ್ನು ಕಟ್ಟಿಸಿ ಕೊಡುತ್ತಾನೆ.[13] ಹೀಗೆ ರಾಯನು ವಿಠ್ಠಲ ದೇವರಿಗೆ ಅಷ್ಟೆ ಅಲ್ಲದೇ ದೇವರ ಪೂಜಾರಿಗೂ ದತ್ತಿ ನೀಡಿರುವುದು ವಿಶೇಷ. ಕ್ರಿ.ಶ. 1517ರ ಕಾಲದ ಒಂದು ಶಾಸನದಿಂದ ತಿಳಿಯುವಂತೆ ವಿಠ್ಠಲದೇವರ ಪೂಜೆಯನ್ನು ನಡೆಯಿಸಿಕೊಂಡು ಹೋಗುವುದಕ್ಕಾಗಿ ಕಾಶ್ಯಪ ಗೋತ್ರ, ಆಪಸ್ತಂಭ ಸೂತ್ರ, ಯಜುಶ್ಯಾಖದ ಗೋಪಿನಾಥನ ಮಗ ಶ್ರೀನಿವಾಸನಿಗೆ ತೆರಕಣಾಂಬಿ ರಾಜ್ಯದಲ್ಲಿಯ ಕೃಷ್ಣಸಾಗರ ಮದಲವಾಡಿ ಎಂಬ ಗ್ರಾಮವನ್ನು ದತ್ತಿ ನೀಡಿದನು.[14]

ಕೃಷ್ಣದೇವರಾಯನ ನಂತರ ಪಟ್ಟಕ್ಕೆ ಬಂದ ಅವನ ಮಲ ಸಹೋದರ ಅಚ್ಯುತದೇವರಾಯನು ಸಹ ವಿಠ್ಠಲ ಭಕ್ತನಾಗಿದ್ದನು. ದೇವರ ನಿತ್ಯ ನೈವೇದ್ಯದ ಕಟ್ಟಳೆಗಾಗಿ ಹೊಂನುರುಕೆ, ಕೊಳಗಟೆ ಮತ್ತು ಕಂಪಿಲಾಪುರಗಳೆಂಬ ಮೂರು ಗ್ರಾಮಗಳನ್ನು ಕ್ರಿ.ಶ. 1531ರಲ್ಲಿ ಸಮರ್ಪಿಸಿ,[15] ಕ್ರಿ.ಶ. 1533ರಲ್ಲಿ ಸುವರ್ಣಮೇರು ದಾನವನ್ನು ಮಾಡುತ್ತಾನೆ.[16] ಅಚ್ಯುತದೇವರಾಯ ಮರಣಹೊಂದಿದ ನಂತರ ಸ್ವರ್ಗಸ್ತನಾಗಿರುವ ಆತನಿಗೆ ಪುಣ್ಯಪ್ರಾಪ್ತಿಯಾಗಲೆಂದು ವಿಠ್ಠಲ ದೇವರಿಗೆ ನಿಟ್ಟೂರ ಅಗ್ರಹಾರವನ್ನು ಸಮರ್ಪಿಸಿದ ಸಂಗತಿ ಸದಾಶಿವದೇವರಾಯನ ನಿಟ್ಟೂರ ಶಾಸನದಿಂದ ತಿಳಿಯುತ್ತದೆ.[17]

ಮಹಾಮಂಡಲೇಶ್ವರರಿಂದ: ಅರಸರಲ್ಲದೆ ಅನೇಕ ಮಹಾಮಂಡಲೇಶ್ವರರು ವಿಠ್ಠಲ ದೇವಾಲಯಕ್ಕೆ ದಾನ ದತ್ತಿಗಳನ್ನು ನೀಡಿರುತ್ತಾರೆ. ಕ್ರಿ.ಶ. 1550ರಲ್ಲಿ ಕಲಮಿಲಿ ಬೊಪ್ಪರಾಜ ಗೋಪರಾಜ ಮಹಾಅರಸನ ಮಗ ಮಹಾಮಂಡಲೇಶ್ವರ ಸಿದೇದೇವ ಮಹಾಅರಸನು ತನ್ನ ತಂದೆ ತಾಯಿಗಳಿಗೆ ಪುಣ್ಯವಾಗಲೆಂದು ತನ್ನ ನಾಯಕತನಕ್ಕೆ ಅರಸರಿಂದ ಬಳುವಳಿಯಾಗಿ ಬಂದ ಹರನಹಳ್ಳಿ ಸೀಮೆಯ ಕೆರೆಯಸಂತೆ ಗ್ರಾಮದ ಕೆರೆಯ ಕೆಳಗಿನ ನೂರು ಕಂಬದ ಖುಷ್ಕಿ ಭೂಮಿಯನ್ನು ವಿಠ್ಠಲದೇವರ ಸೇವೆಗಾಗಿ ಸಮರ್ಪಿಸುತ್ತಾನೆ.[18]

ಕ್ರಿ.ಶ. 1554ರಲ್ಲಿ ಅರವೀಟಿ ರಾಮರಾಜಯ್ಯ ಕೊಂಡಯದೇವ ಮಹಾಅರಸನ ಮೊಮ್ಮಗನು ಕೊನೆಟಯ್ಯದೇವ ಮಹಾಅರಸನ ಮಗನು ಆದ ಉದಗಿರಿ ತಿಮ್ಮರಾಜಯ್ಯ ಮಹಾ ಅರಸನು ಪ್ರಥಮ ಏಕಾದಶಿ ಹಾಗೂ ದ್ವಾದಶಿ ಹಬ್ಬಗಳ ದಿನಗಳಲ್ಲಿ ವಿಠ್ಠಲ ದೇವರ ಪೂಜಾಸೇವೆ ಹಾಗೂ ಕಾಣಿಕೆಗಳ ಸಲ್ಲಿಕೆಗಾಗಿ ಆರುನೂರು ಗದ್ಯಾಣಗಳ ಆದಾಯವುಳ್ಳ ಗುತ್ತಿಯ ಸೀಮೆಯ ಪುಲಿಯೇರು ಮಾಗಣೆಯಲ್ಲಿರುವ ಕೊಂಡಕುಂದಿಯ ಉಪನಗರ ತಿರುಮಲಾಪುರವನ್ನು ವಿಠ್ಠಲ ದೇವಾಲಯಕ್ಕೆ ಸಲ್ಲಿಸಿದನು.[19] ಅದೇ ವರ್ಷ ಸದಾಶಿವದೇವರಾಯನ ಮಹಾಮಂಡಲೇಶ್ವರನಾದ ಮುಸ್ಲಿಮಡುವಿನ ರಾಮರಾಜ ತಿಮ್ಮರಾಜಯ್ಯನ ಮಗ (ಹೆಸರು ತ್ರುಟಿತ) ವಿಠ್ಠಲ ದೇವರ ಹಾಗೂ ಲಕ್ಷ್ಮೀದೇವಿಯ ಪೂಜೆಗಾಗಿ ವಿಜಯನಗರಕ್ಕೆ ಪೂರ್ವದಿಕ್ಕಿನಲ್ಲಿರುವ ಉದಯಗಿರಿಬಾಗಿಲ ಮುಂದಣ ಗ್ರಾಮ ಅನಂತಪುರವನ್ನು ಮತ್ತು ವಿಜಯಸಮುದ್ರ ಅಗ್ರಹಾರ, ಮಾರಕೊಂಬನ ಹಳ್ಳಿ (ತಿಮ್ಮಸಾಗರ) ಅಗ್ರಹಾರ ಸಹಿತ ಇತರ ಹಳ್ಳಿಗಳ ವಾರ್ಷಿಕ ಮೂರು ನೂರು ವರಾಹ ಆದಾಯವುಳ್ಳ ಪ್ರದೇಶವನ್ನು ವಿಠ್ಠಲ ದೇವಾಲಯಕ್ಕೆ ಸಮರ್ಪಿಸುತ್ತಾನೆ.[20]

ಕ್ರಿ.ಶ. 1562ರಲ್ಲಿ ಸದಾಶಿವರಾಯನ ಮಹಾಮಂಡಲೇಶ್ವರ ಅಳಿಯ ರಾಮರಾಜಯ್ಯದೇವ ಮಹಾಅರಸನು ವಿಠ್ಠಲದೇವರ ಪೂಜೆ ಪುನಸ್ಕಾರಕ್ಕಾಗಿ ದೇವಸಮುದ್ರ ಗ್ರಾಮವನ್ನು ಸಲ್ಲಿಸುತ್ತಾನೆ.[21] ಕ್ರಿ.ಶ. 1535ರಲ್ಲಿ ಚಿಕ್ಕ ತಿಮ್ಮಪ್ಪ (ಮಹಾಮಂಡಲೇಶ್ವರ)ನು ವಿಠ್ಠಲದೇವರ ಗರ್ಭಗುಡಿಯ ನಂದಾದೀವಿಗೆಗಾಗಿ ಭಂಡಾರಕ್ಕೆ ಹಣವನ್ನರ್ಪಿಸುತ್ತಾನೆ.[22]

ಆಸ್ಥಾನಿಕರಿಂದ: ಅರಸರ ಆಸ್ಥಾನದ, ಸೇವೆಯಲ್ಲಿದ್ದ ಕೆಲವು ಅಧಿಕಾರಿಗಳೂ ಕೂಡ ವಿಠ್ಠಲ ದೇವಾಲಯಕ್ಕೆ ದಾನ ದತ್ತಿಗಳನ್ನಿತ್ತಿದ್ದಾರೆ. ಕ್ರಿ.ಶ. 1536ರಲ್ಲಿ ಊಳಿಗದ ಹಿರಿಯ ಮಲ್ಲಪ್ಪನಾಯಕನು ತನ್ನ ವೊಡೆಯ ಅಚ್ಯುತದೇವರಾಯ ಹಾಗೂ ಚಿಕ್ಕರಾಯ ತಮ್ಮಿನಾಯಕರಿಗೆ ಪುಣ್ಯವಾಗಲೆಂದು, ವಿಠ್ಠಲ ಸ್ವಾಮಿಯ ನಿತ್ಯ ನೈಮಿತ್ಯಗಳಿಗಾಗಿ ದೇವಾಲಯದ ಭಂಡಾರಕ್ಕೆ ಎರಡು ನೂರು ವರಾಹಗಳನ್ನು ನೀಡುತ್ತಾನೆ.[23] ಕ್ರಿ.ಶ. 1538ರಲ್ಲಿ ಉದ್ದಿಯ ತಿಮ್ಮಪ್ಪನಾಯಕನ ಮಗ ರಾಯರ ಚಪರದ ಹಿರಿಯ ತಿಮ್ಮಪ್ಪನಾಯಕನು ವಿಠ್ಠಲ ದೇವಾಲಯದ ಪೂರ್ವ ಗೋಪುರಕ್ಕೆ

ಕಳಶ ಸೇವೆಗಾಗಿ ಕೆಲವು ಸುವರ್ಣ ನಾಣ್ಯಗಳನ್ನು ಅರ್ಪಿಸುತ್ತಾನೆ.[24] ಅವನ ಸಹೋದರ ರಾಘುವಪ್ಪ ನಾಯಕನು ಕೂಡ ಉತ್ತರದ ಗೋಪುರಕ್ಕೆ ಕಳಶ ಸೇವೆಯನ್ನು ಮಾಡಿಸುತ್ತಾನೆ.[25]

ಗಣ್ಯರಿಂದ: ಅರಸರು, ಮಹಾಮಂಡಲೇಶ್ವರರು, ಆಸ್ಥಾನಿಕರಂತೆ ಸಮಾಜದ ಅನೇಕ ಗಣ್ಯ ವ್ಯಕ್ತಿಗಳು, ಧರ್ಮ ಮುಖಂಡರು ಕೂಡ ವಿಠ್ಠಲ ದೇವಾಲಯಕ್ಕೆ ದಾನಗಳನ್ನು ಸಲ್ಲಿಸಿದ್ದಾರೆ.

ಕ್ರಿ.ಶ. 1534ರಲ್ಲಿ ಅಧಿಕಾರಿ ತಿಪ್ಪಿಶೆಟ್ಟಿಯ ಮಗ ವಣಿಜ ವೈಶ್ಯನಗರದ ಶೆಟ್ಟಾಣ ಗಂಧದ ತಿಪ್ಪಿಶೆಟ್ಟಿಯು ಅಚ್ಯುತದೇವರಾಯರಿಗೆ ಪುಣ್ಯವಾಗಲೆಂದು ವಿಠ್ಠಲ ದೇವಾಲಯದ ಸಂಕೀರ್ಣದಲ್ಲಿಯ ನಲ್ವತ್ತನಾಲ್ಕು ಅಂಕಣದ ದೇವಾಲಯದಲ್ಲಿ ತಾನು ಪ್ರತಿಷ್ಠಾಪಿಸಿದ ತಿರುಕಾಚಿನಂಬಿ ಆಳ್ವಾರ್ ಸಹಿತ ಹದಿಮೂರು ಆಳ್ವಾರರ ಪೂಜೆಗೋಸ್ಕರ ವಿಠ್ಠಲ ದೇವಾಲಯದ ಭಂಡಾರಕ್ಕೆ ನೂರು ಗದ್ಯಾಣಗಳನ್ನು ಅರ್ಪಿಸುತ್ತಾನೆ.[26] ಕ್ರಿ.ಶ. 1543ರಲ್ಲಿ ಶಠಮರುಶಣ ಗೋತ್ರ, ಅಪಸ್ತಂಭ ಸೂತ್ರ, ಯಜುಶ್ಶಾಖ ತಿರುಮಲ ಕುಟುಂಬದ ಅವುಕುತಾತಾಚಾರ್ಯರ ಮಗ ತಿರುವೆಂಗಳಾಚಾರ್ಯನು, ತಾನು ಅರಸರಿಂದ ಪಡೆದುಕೊಂಡಿದ್ದ ತೆಕ್ಕಲುಕೋಟೆ ಸೀಮೆಯ ನಿಟ್ಟೂರ ಗ್ರಾಮವನ್ನು ಮತ್ತು ಆನೆಗೊಂದಿ ಗ್ರಾಮದಲ್ಲಿರುವ ಭೂಮಿ ಹಾಗೂ ತೋಟವನ್ನು ವಿಠ್ಠಲ ದೇವರ ಪೂಜೆ-ಪುನಸ್ಕಾರಗಳಿಗಾಗಿ ದಾನಗೈಯುತ್ತಾನೆ.[27] ಕ್ರಿ.ಶ. 1545ರಲ್ಲಿ ಕೊಂಡರಾಜನ ಮಗ ಕೊನೇಟಿ ತಿಮ್ಮರಾಜಯ್ಯನು ತನ್ನ ತಂದೆಗೆ ಪುಣ್ಯವಾಗಲೆಂದು ವಿಠ್ಠಲ ದೇವರಿಗಾಗಿ ಉಡುಗೊರೆ ರೊಕ್ಕ, ಗಾಣದ, ಅಂಗಡಿಗಳಿಂದ ಬಂದ ಹಣದ ಆದಾಯಗಳನ್ನು ವಿಠ್ಠಲ ದೇವಾಲಯಕ್ಕೆ ಸಮರ್ಪಿಸುತ್ತಾನೆ.[28] ಕ್ರಿ.ಶ. 1561ರಲ್ಲಿ ಸೂರ್ಯವಂಶ, ಕಾಶ್ಯಪ ಗೋತ್ರದ ಓಬುಳರಾಜುನ ಮಗ ಕುರುಚೇಟಿ ಶ್ರೀರಂಗರಾಜು ವಿಠ್ಠಲ ದೇವರಿಗೆ ವಾರ್ಷಿಕ ಒಂದು ಗಟ್ಟಿ ವರಾಹ ಸಲ್ಲಿಸುವ ಕರಾರು ಮಾಡಿಕೊಳ್ಳುತ್ತಾನೆ.[29]

ಕ್ರಿ.ಶ. 1563ರಲ್ಲಿ ವಿಠ್ಠಲ ದೇವಾಲಯದ ನಮ್ಮಾಳ್ವಾರರು ತಮಗೆ ಅರಸರಿಂದ ಕಾಣಿಕೆಯಾಗಿ ಬಂದ ಕಂಪಿಲೆಯ ಮಾಗಣಿಯ ರಾಮಸಾಗರ ಗ್ರಾಮದಲ್ಲಿದ್ದ ಜಮೀನಿನ ಆದಾಯವನ್ನು ವಿಠ್ಠಲ ದೇವರ ಮುಂಜಾನೆಯ ಸೇವೆಗಾಗಿ ಅರ್ಪಿಸುವ ಕಾಣಿಕೆಗಳಿಗಾಗಿ ಭಂಡಾರಕ್ಕೆ ಸಲ್ಲಿಸುತ್ತಾರೆ.[30] ಅದೇ ರೀತಿ ತಾಳಪಾಕ ತಿರುಮಲಯ್ಯನು ಕ್ರಿ.ಶ. 1532ರಲ್ಲಿ ಮೂರು ಗ್ರಾಮಗಳನ್ನು,[31] ಶ್ರೀದಪ್ಪನಾಯಕನು ಕ್ರಿ.ಶ. 1534ರಲ್ಲಿ ನಿತ್ಯ ನೈವೇದ್ಯಕ್ಕಾಗಿ 400 ಗಟ್ಟಿ ವರಾಹಗಳನ್ನು ಠೇವಣಿಯಾಗಿ ಅರ್ಪಿಸುತ್ತಾರೆ.[32]

ಹೀಗೆ ಸರ್ವಮಾನ್ಯವಾಗಿ ಬೆಳೆದು-ಬೆಳಗಿದ ವಿಠ್ಠಲ ದೇವಾಲಯ ಕ್ರಿ.ಶ. 1565ರ ತಾಳಿಕೋಟೆ ಯುದ್ಧಾನಂತರ ಶತ್ರುಗಳ ದಾಳಿಯಿಂದ ಭಗ್ನಗೊಂಡಿತು. ಗರ್ಭಗೃಹದಲ್ಲಿದ್ದ ವಿಠ್ಠಲನ ಮೂರ್ತಿಯನ್ನು ಪಂಢರಾಪುರಕ್ಕೆ ಸಾಗಿಸಿ ಅಲ್ಲಿ ಪ್ರತಿಷ್ಠಾಪಿಸಲಾಯಿತೆಂದು ಎಸ್.ಕೆ. ಜೋಶಿಯವರು ಅಭಿಪ್ರಾಯ ಪಡುತ್ತಾರೆ.[33] ಹೀಗೆ ಶಿಥಿಲವಾದ, ದೇವರಿಲ್ಲದ ದೇವಾಲಯದ ಬಗ್ಗೆ ಕಾಲಾನಂತರದಲ್ಲಿ ಅನೇಕ ಊಹಾಪೋಹಗಳು ಹುಟ್ಟಿಕೊಂಡವು. ಅವುಗಳಲ್ಲಿ ಮುಖ್ಯವಾಗಿ ದೇವಾಲಯ ಇನ್ನೂ ಪೂರ್ಣ ನಿರ್ಮಾಣಗೊಂಡಿರಲಿಲ್ಲ. ಆಗಲೇ ವಿಜಯನಗರ ಪತನಗೊಂಡಿತೆಂದು, ಅಲ್ಲದೆ ವಿಠ್ಠಲನ ಮೂರ್ತಿಯನ್ನು ಇಲ್ಲಿಗೆ ತಂದು ಪ್ರತಿಷ್ಠಾಪಿಸಬೇಕಿದ್ದಿತು, ಆದರೆ ಎಷ್ಟೇ ಪ್ರಯತ್ನಿಸಿದರೂ ಆ ವಿಗ್ರಹವನ್ನು ಇಲ್ಲಿಗೆ ತರಲು ಸಾಧ್ಯವಾಗಲೇ ಇಲ್ಲ. ಹಾಗಾಗಿ ದೇವಾಲಯ ಪೂರ್ಣಗೊಳ್ಳಲಿಲ್ಲ. ಅಲ್ಲಿ ಯಾವುದೇ ಪೂಜೆ-ಪುನಸ್ಕಾರಗಳು ನಡೆಯಲೇ ಇಲ್ಲ ಎಂಬಿತ್ಯಾದಿ ನಂಬಿಕೆಗಳು ಹಂಪಿ ನೆರೆಹೊರೆಯ ಪ್ರದೇಶದ ಜನಸಾಮಾನ್ಯರಲ್ಲಿವೆ. ಆದರೆ ಪ್ರಸ್ತುತ ಶಾಸನಗಳ ಅವಲೋಕನವು ಈ ತಪ್ಪು ನಂಬಿಕೆಗಳನ್ನು ಅಳಿಸಿ ಹಾಕಿ, ದೇವಾಲಯ ಪೂರ್ಣ ನಿರ್ಮಾಣಗೊಂಡಿತ್ತು, ಅಲ್ಲಿ ವಿಠ್ಠಲ ದೇವರ ಆರಾಧನೆ ವೈಭವದಿಂದ ನೆರವೇರುತ್ತಿತ್ತೆನ್ನುವುದನ್ನು ತಿಳಿಸುತ್ತವೆ.

ಟಿಪ್ಪಣಿಗಳು

1. ಷೇಕ್ ಅಲಿ, 1997, *ಕರ್ನಾಟಕ ಚರಿತ್ರೆ,* ಸಂ. 3, ಪುಟ 351.
2. Pierre-Sylvain Filliozat and Vasundhara Filliozat, 1988, *The Temple of Vithala.*
3. ರಾಜಶೇಖರ ಎಸ್., 1983, *ಕರ್ನಾಟಕ ಕಲೆ ಮತ್ತು ವಾಸ್ತುಶಿಲ್ಪ.*
4. *SII,* IX, pt. II, 502 (Kannada); *SII,* XVI, 56 (Telugu) and *SII,* IV, 273 and 278; *ARIE,* No. 44 and 499 of 1889.
5. Tallapakam Telugu Works, Sringara Samkirtanalu, Tirupati Devastanam.
6. Neelakanta Sastri K.A. and Venkataramanayya N., 1946, *Further Sourcess of Vijayanagara History,* Vol. I, p. 108-9, Madras.

7. *EC*, VIII, 222, p. 380, 733.

8. Tiruvenkatachari S. (Ed.), 1957, *Madhuravijayam of Gangadevi*, Annamalai Uni.

9. *ARIE*, 1972-73, No. B 129; Channabasappa S. Patil and Vinoda C. Patil (Eds.), 1998, *Inscriptions of Koppal District*, No. 68.

10. ಕ್ರಮ ಸಂಖ್ಯೆ 2 ಮತ್ತು 3ರಂತೆ ಹಾಗೂ ವಸುಂಧರಾ ಫಿಲಿಯೋಜಾ, 1979, *ಹಂಪೆ*, ಧಾರವಾಡ; Rajashekhar S., 1983, *Masterpieces of Vijayanagara Art*, Bombay. ಚನ್ನಬಸಪ್ಪ ಎಸ್ ಪಾಟೀಲ, 'ಕಲೆ ಮತ್ತು ವಾಸ್ತು ಶಿಲ್ಪ' *ಕರ್ನಾಟಕ ಚರಿತ್ರೆ* ಸಂ. 3, 1997, ಪುಟ 357-378.

11. *ARIE*, 1922, No. 687; *SII*, IX, pt. II, No. 490; *VI*, I, 392.

12. *SII*, IV, 273 and 278; *ARIE*, No. 448, 449 of 1889.

13. *SII*, IX, pt. II, 502 (Kan.); *SII*, XVI, 56 (Telugu).

14. *EC*, III (Rev. 1974), Gu.1; IV, Gu.30; *VI*, III, No. 1712.

15. *ARIE*, 1904, No. 3; *SII*, IX, pt. II, No. 534; *SII*, XVII, No. 3; *VI*, I, 331.

16. *SII*, Vol. IX, pt. ii, No. 557 and 558; *ARIE*, No. 9 of 1904 and No. 708 of 1922.

17. *ARIE*, 1977-78, No. 110; *VI*, I, No. 419.

18. *MAR*, 1944, No. 8; *VI*, II, No. 448.

19. *ARIE*, 1904, No. 12; *SII*, IX, pt. II, No. 616; *SII*, XVII, No. 13; *VI*, I, No. 349.

20. *ARIE*, 1904, No. 14; *SII*, IX, pt. II, No. 654; *SII*, XVII, No. 15.

21. *EC*, XI, Mk. 2; *VI*, II, No. 636.

22. *SII*, IV, No. 274; *ARIE*, No. 45 of 1909.

23. *ARIE*, 1904, No. 5; *SII*, IX, pt. II, No. 574; *SII*, XVII, No. 5; *VI*, I, No. 338.

24. *ARIE*, 1904, No. 2; *SII*, IX, pt. II, No. 506; *SII*, XVII, No. 2; *VI*, I, No. 338.

25. *ARIE*, 1922, No. 704; *SII*, IX, pt. II, No. 589; *VI*, I, No. 341.

26. *ARSIE*, 1904, No. 10; *SII*, IX, pt. II, No. 556; *SII*, XVII, No. 11; *VI*, I, No. 336.

27. *ARSIE*, 1904, No. 6; *SII*, IX, pt. II, No. 607; *VI*, I, No. 346.

28. *ARSIE*, 1904, No. 15; *SII*, IX, pt. II, No. 616.

29. *ARSIE*, 1904, No. 15; *SII*, XVI, No. 251; *VI*, I, No. 362.

30. *ARSIE*, 1904, No. 11; *SII*, IX, pt. II, No. 672; *SII*, XVII, No. 12; *VI*, I, No. 363.

31. *SII*, IX, pt. II, No. 543; AR No. 8 of 1904.

32. *ARIE*, 1904, No. 4.

33. ಪರಮೇಶ್ವರಪ್ಪ ಟಿ., 1996, *ಹಂಪಿ ಪರಂಪರೆ*, ಹೊಸಪೇಟೆ, ಪು. 88-99.

7. ವಿಜಯನಗರ ಕಾಲದ ಅರಮನೆಗಳು

ಸಿ.ಟಿ.ಎಂ. ಕೊಟ್ರಯ್ಯ

'ಕಣ್ಣುಗಳು ಕಂಡರಿಯದ, ಕಿವಿಗಳು ಕೇಳಿ ತಿಳಿಯದಂತಹ' ವೈಭವಯುಕ್ತ ನಗರವೆಂದು, ಪರ್ಶಿಯಾ ದೇಶದಿಂದ ಕ್ರಿ.ಶ. 1443ರ ಸುಮಾರಿನಲ್ಲಿ ಬಂದು ಸಂದರ್ಶಿಸಿದ ಅಬ್ದುರ್ ರಜಾಕನೆಂಬ ರಾಯಭಾರಿಯ ಮುಕ್ತ ಪ್ರಶಂಸೆ, ಗುಣಗಾನಕ್ಕೆ ಪಾತ್ರವಾಗಿದ್ದ ಆ ವಿಜಯನಗರ ಮಹಾಪಟ್ಟಣದ ನಿವೇಶನವು, ಈಗ ಹಾಳು ಪಟ್ಟಣವೆಂದು ಕರೆಯಲಾಗುತ್ತಿದ್ದರೂ, ಈಗಲೂ ಅಲ್ಲಿ ಕಾಣಬರುವ, ಅಳಿದುಳಿದಿರುವ ಹಲವೇ ರಾಜಪೋಷಿತವಾಗಿದ್ದ ದೇವಮಂದಿರಗಳು, ಮಹಲುಗಳು, ಅರಮನೆಗಳ ನೆಲಗಟ್ಟುಗಳು, ಮಂಟಪಗಳು, ಮುಂತಾದ ನಾಗರಿಕ (civil) ಕಟ್ಟಡಗಳು ಆ ಗತವೈಭವವನ್ನು ಸಾರಿ ಹೇಳುವ ಪ್ರತೀಕಗಳಾಗಿವೆ. ಈ ರೀತಿಯಾಗಿ ವಿವಿಧ ಪುರಾತನ ಕಟ್ಟಡಗಳು ದಕ್ಷಿಣ ಹಿಂದೂಸ್ತಾನದ ಇನ್ನಾವುದೇ ಚಾರಿತ್ರಿಕ ನಿವೇಶನದಲ್ಲಿ ಲಭ್ಯವಿಲ್ಲದಿರುವುದರಿಂದ, ಹಂಪೆ—ವಿಜಯನಗರವು ಒಂದು ಪ್ರಮುಖ ಪುರಾತತ್ವ ಅಧ್ಯಯನಯೋಗ್ಯ ಪ್ರದೇಶವಾಗಿದೆ. ಅದರ ಬಹುಮುಖ ಸಾಧನೆ, ಪ್ರತಿಭೆಗಳ ಅಧ್ಯಯನ, ಸಂಶೋಧನೆಗಳಿಗೆ ನಿರಂತರ ಅವಕಾಶ, ಅಹ್ವಾನಗಳನ್ನೊದಗಿಸುವಂತಹ ಒಂದು ಅಸಾಧಾರಣ ಹಾಗೂ ವಿಶಿಷ್ಟವಾದ ಸ್ಥಳವಾಗಿದೆ.

ಪ್ರಸ್ತುತದಲ್ಲಿ ಆ ಕಾಲದ ಅರಮನೆಗಳು ಮತ್ತು ಅವುಗಳ ಸಂಕೀರ್ಣಗಳನ್ನು ಕುರಿತು ತಿಳಿಯೋಣ. ಅವುಗಳ ಅಧ್ಯಯನಕ್ಕೆ ಸಹಾಯವಾಗುವ ಮೂಲ ಆಕರಗಳು ನಾಲ್ಕು ತೆರ. ಎಂದರೆ,

1. ಈಗಲೂ ಅಲ್ಲಲ್ಲಿ ಕಾಣಬರುವ, ಹಾನಿಗೊಳಗಾಗಿದ್ದರೂ ಗತವೈಭವವನ್ನು ಬಿಂಬಿಸುವ, ಪ್ರತಿನಿಧಿಸುವ ಅರಮನೆಗಳು, ಮಹಲುಗಳು ಮುಂತಾದವುಗಳು.
2. ಈಚೆಗೆ ಜರುಗಿಸಲಾದ ಉತ್ಖನನ ಸಮಯದಲ್ಲಿ ಬೆಳಕಿಗೆ ಬಂದಿರುವ ಅರಮನೆಗಳ, ಮಂಟಪಗಳ ನೆಲಗಟ್ಟುಗಳು.
3. ಸಮಕಾಲೀನ ವಿದೇಶಿ ಪ್ರವಾಸಿಗಳು ದಾಖಲಿಸಿ ಹೇಳಿರುವ ವಿವರಗಳು.
4. ಸಮಕಾಲೀನ ಕನ್ನಡ ಸಾಹಿತ್ಯದ ಕಥಾನಿರೂಪಣಾತ್ಮಕ ಗ್ರಂಥಗಳಲ್ಲಿ ವರ್ಣಿತವಾಗಿರುವ ವಿವರಣೆಗಳು.

ಯಾವುದೇ ರೀತಿಯಲ್ಲಿ ಅಖಂಡವಾಗಿರುವ ಅರಮನೆಗಳು ಎಲ್ಲಿಯೂ ಲಭ್ಯವಿಲ್ಲದಾಗ್ಯೂ, ಅವುಗಳ ಗತವಿನ್ಯಾಸ, ರಚನಾಕ್ರಮ, ಶೈಲಿ, ವೈಶಿಷ್ಟ್ಯಗಳು, ಉಪಯುಕ್ತತೆ ಮುಂತಾದ ವಿಷಯಾಂಶಗಳನ್ನು ವಿಶದೀಕರಿಸುವ ವಿದ್ವತ್ಪೂರ್ಣ, ಸಂಶೋಧನಾತ್ಮಕ ಗ್ರಂಥಗಳು ಈಗಾಗಲೇ ಇಂಗ್ಲೀಷು ಭಾಷೆಯಲ್ಲಿ ಪ್ರಕಟಗೊಂಡಿವೆ.[1] ಅವುಗಳೆಲ್ಲವೂ ವಿಜಯನಗರ, ಅನೆಗೊಂದಿ, ಪೆನುಗೊಂಡೆ ಮತ್ತು ಚಂದ್ರಗಿರಿಗಳಲ್ಲಿ ಈಗಲೂ ಕಾಣಬರುವ ಕಟ್ಟಡಗಳ ಅವಶೇಷಗಳು, ವಿಜಯನಗರದ ನಿವೇಶನದ ಉತ್ಖನನ ಸಮಯದಲ್ಲಿ ಬಹಿರಂಗಗೊಳಿಸಲಾದ ನೆಲಗಟ್ಟುಗಳು ಮತ್ತು ಸಮಕಾಲೀನ ವಿದೇಶಿ ಪ್ರವಾಸಿಗರು ಬರೆದಿಟ್ಟಿರುವ ವಿರಣೆಗಳನ್ನಾಧರಿಸಿ ಅಧ್ಯಯನ ಮಾಡಿ ಪ್ರಕಟಿಸಲಾದ ಗ್ರಂಥಗಳಾಗಿವೆ.

ಅ. ಮೇಲೆ ತಿಳಿಸಿರುವ ಸ್ಥಳಗಳಲ್ಲಿ ಈಗಲೂ ಕಾಣಬರುವ ಅರಮನೆಗಳ ಸಂಕೀರ್ಣಕ್ಕೆ ಸೇರಿದವುಗಳೆಂದು ಗುರುತಿಸಲಾಗಿರುವ ಕಟ್ಟಡಗಳನ್ನು ಕುರಿತು ಆಳವಾಗಿ ಅಧ್ಯಯನ ಮಾಡಿರುವ ಜಾರ್ಜ್ ಮಿಶಲ್ ಎಂಬ ವಿದ್ವಾಂಸರು ತಮ್ಮ ಅಧ್ಯಯನದ ಫಲಿತಾಂಶಗಳನ್ನು ಇಂಗ್ಲೀಷು ಭಾಷೆಯಲ್ಲಿ ಬರೆಯಲಾದ ಎರಡು ಗ್ರಂಥಗಳಲ್ಲಿ ಹೊರತಂದಿರುತ್ತಾರೆ.[2] ಆ ವಿದ್ವತ್ಪೂರ್ಣ ಗ್ರಂಥಗಳಲ್ಲಿ, ವಿಜಯನಗರ ಕಾಲದ ಅರಮನೆಗಳು, ಅವುಗಳ ಸಂಕೀರ್ಣದಲ್ಲಿದ್ದ ಇತರ ಕಟ್ಟಡಗಳನ್ನು ಕುರಿತು ನೀಡಿರುವ ವಿವರಗಳು ಸಂಕ್ಷಿಪ್ತವಾಗಿ ಈ ಕೆಳಗಿನಂತಿವೆ.

1. ಅವುಗಳ ನಿರ್ಮಾಣ ಕಾಲವನ್ನು ಖಚಿತವಾಗಿ ಹೇಳುವ ದಾಖಲೆಗಳಾವೂ ಲಭ್ಯವಿಲ್ಲದಿದ್ದರೂ, ಸಂದರ್ಭೋಚಿತ ಹಾಗೂ ವಾಸ್ತುಶೈಲಿಗಳನ್ನಾಧರಿಸಿ ಅವುಗಳು ಕ್ರಿ.ಶ. 16ನೇ ಮತ್ತು 17ನೇ ಶತಮಾನಗಳಲ್ಲಿ ಅಸ್ತಿತ್ವಕ್ಕೆ ಬಂದವುಗಳೆಂದು ತಿಳಿಯುತ್ತದೆ.
2. ಅವುಗಳೆಲ್ಲವೂ ಸಮಕಾಲೀನ ರಾಜವೈಭವದ ಪ್ರತೀಕಗಳಾಗಿದ್ದು, ದಕ್ಷಿಣ ಹಿಂದೂಸ್ಥಾನದಲ್ಲೇ ಮೊದಲಬಾರಿಗೆ ಲಭ್ಯವಿರುವ ಅರಸೊತ್ತಿಗೆಯ ಕಟ್ಟಡಗಳ ಸಮೂಹಗಳಾಗಿವೆ.
3. ಆ ಪ್ರದೇಶಗಳು ರಾಜನ, ರಾಜಪರಿವಾರದ, ಅವರ ಸಿಬ್ಬಂದಿ, ಪ್ರಜೆಗಳ, ಮುಂತಾದವರ ಬಹುವಿಧ ಅವಶ್ಯಕತೆಗಳನ್ನು ಪೂರೈಸುವ ರಾಜಾಲಯಗಳು, ವಾಸಸ್ಥಳಗಳು, ಮಹಲುಗಳು, ವಿವಿಧೋಪಯೋಗಿ ಪ್ರಾಂಗಣಗಳು, ಶಾಲೆಗಳು, ಗೃಹಗಳು, ಉಪವನಗಳು,

ಬಜಾರುಗಳು, ನೀರಿನ ವ್ಯವಸ್ಥೆಗಳು, ಕೊಳಗಳು, ದೇವಮಂದಿರಗಳು, ಮಠಗಳು ಮುಂತಾದವುಗಳಿಂದ ಕೂಡಿದ ಒಂದು ಸ್ವಪರಿಪೂರ್ಣ ನಗರದೋಪಾದಿಯಲ್ಲಿ ವ್ಯವಸ್ಥೆಗೊಂಡಿರುತ್ತಿದ್ದುವು.

4. ಆ ಕಟ್ಟಡಗಳೆಲ್ಲವೂ ಒಂದು ನಿರ್ದಿಷ್ಟ ಪರಿಸರ, ಎಂದರೆ ಬೆಟ್ಟ, ಗುಡ್ಡ, ಕಾಡು ಮೇಡುಗಳ ಪ್ರದೇಶಗಳಿಗೆ ಹೊಂದಿಕೊಂಡಂತೆ ವಿಶಿಷ್ಟ ಪರಿಸರದಲ್ಲಿ ನಿರ್ಮಿತವಾದವುಗಳಾಗಿವೆ.

5. ಸಾಮಾನ್ಯವಾಗಿ, ಆ ಕಟ್ಟಡಗಳು ನಿರ್ದಿಷ್ಟ ಆವರಣಗಳಲ್ಲಿ ಮತ್ತು ಸುತ್ತುವರಿದ ಬಲವಾದ ಕೋಟೆ, ಒಳಕೋಟೆಗಳ ಮಧ್ಯದೊಳಗೆ ಕಾಣಬರುತ್ತವೆ.

6. ಅವುಗಳ ಜೊತೆಯಲ್ಲಿ, ಆ ಆವರಣಗಳಲ್ಲಿಯೇ ದೇವಮಂದಿರಗಳು, ಧಾರ್ಮಿಕ ಕಟ್ಟಡಗಳು, ಮಂಟಪಗಳು ಮುಂತಾದವುಗಳೂ ಸಹಾ ಕಾಣಬರುತ್ತಿದ್ದು, ಅವುಗಳೊಳಗೆ ನಿಕಟ ಸಂಬಂಧ, ಸಂಪರ್ಕಗಳಿದ್ದುದಾಗಿಯೂ ವೇದ್ಯವಾಗುತ್ತದೆ.

7. ಅವುಗಳ ಪ್ರದೇಶಗಳಲ್ಲಿ ಜೀವನಾವಶ್ಯಕಗಳಲ್ಲೊಂದಾದ ನೀರಿನ ಸೌಕರ್ಯದ ವ್ಯವಸ್ಥೆಗಳನ್ನು, ಬಾವಿ, ಕೊಳ, ಕಾಲುವೆ, ಕೆರೆ, ಕಟ್ಟೆ, ನೀರಿನ ಕೊಳವೆ ಮುಂತಾದವುಗಳನ್ನು ನಿರ್ಮಿಸಿ ಬಹು ಪ್ರಯೋಜನಕಾರಿಯಾಗಿ ಏರ್ಪಡಿಸಲಾಗಿತ್ತು.

8. ರಾಜ, ಆತನ ಪರಿವಾರ, ಮುಂತಾದ ಗಣ್ಯರ ಮನೋರಂಜನೆ, ವಿಹಾರ, ವಿನೋದಗಳಿಗಾಗಿ ಉಪ್ಪರಿಗೆಯ ಮಹಲುಗಳು, ಮಂಟಪಗಳು, ಉಪವನಗಳು, ಕ್ರೀಡಾಕೊಳಗಳು ನಿರ್ಮಿತಗೊಂಡಿದ್ದುವು.

9. ಅವುಗಳ ತಲವಿನ್ಯಾಸಗಳು ವಿವಿಧತೆಗಳನ್ನು ಹೊಂದಿದ್ದರೂ, ಒಟ್ಟಿನಲ್ಲಿ ಅವು ಚೌಕಾಕಾರ, ಆಯತಾಕಾರ ಇಲ್ಲವೆ ಅಷ್ಟಭುಜಾಕಾರಗಳಲ್ಲಿದ್ದು, ಬಹು ಕೊಠಡಿಗಳನ್ನೊಳಗೊಂಡಿದ್ದುವೆಂದು ದೃಢಪಟ್ಟಿದೆ. ಮತ್ತು ಅಲ್ಲಿಯ ಕೊಠಡಿಗಳಲ್ಲಿ ಒಂದರಿಂದ ಮತ್ತೊಂದಕ್ಕೆ ಹೋಗಲು ತೆರೆದ ಪ್ರವೇಶಮಾರ್ಗ, ಸಂಪರ್ಕಗಳನ್ನು ಹೊಂದಿರುವಂತೆ ಹಾಗೂ ಮಧ್ಯದ ಪ್ರಮುಖ ಪ್ರಾಂಗಣ ಅಥವಾ ಸಭಾಂಗಣಕ್ಕೆ ಸಂಪರ್ಕವನ್ನು ಕಲ್ಪಿಸುವಂತೆಯೂ, ಸಂಕೀರ್ಣರೂಪದಲ್ಲಿ ರಚಿತವಾದುವುಗಳಾಗಿದ್ದುವು.

10. ಅವುಗಳೆಲ್ಲವೂ ಉಪ್ಪರಿಗೆಗಳಿಂದ ಕೂಡಿದ ನಿವಾಸಗಳಾಗಿದ್ದುವು ಮತ್ತು ಒಳಗಡೆ ವಿವಿಧ ಹಂತಗಳಲ್ಲಿ ನೆಲವನ್ನು ಹೊಂದಿದ್ದವು.

11. ಆ ಬಹು ಅಂತಸ್ತಿನ ಕಟ್ಟಡಗಳಲ್ಲಿ, ಉಪ್ಪರಿಗೆಯಿಂದ ಉಪ್ಪರಿಗೆಗೆ ಮೇಲೇರಲು ಅನುಕೂಲವಾಗುವಂತೆ ಮೆಟ್ಟಿಲುಗಳನ್ನು, ಒಂದು ಪಕ್ಕದಲ್ಲಾಗಲೀ, ಎರಡೂ ಪಕ್ಕಗಳಲ್ಲಾಗಲೀ, ಅಥವಾ ಮರುಸುತ್ತಿನ (spiralling) ವಿನ್ಯಾಸದಲ್ಲಾಗಲೀ ಒದಗಿಸಿರುತ್ತಿದ್ದರು. ಇಲ್ಲಿ ಚಂದ್ರಗಿರಿಯಲ್ಲಿ ಈಗಲೂ ಕಾಣಬರುವ 'ರಾಜಾಮಹಲು' ಎಂದೇ ಹೆಸರಾಗಿರುವ ಅರಮನೆಯನ್ನು ಉದಾಹರಿಸಬಹುದು. ಅದು ಪೂರ್ಣವಾದ ಮೂರು ಅಂತಸ್ತುಗಳನ್ನು ಹೊಂದಿರುವುದಲ್ಲದೆ, ಕೊನೆಯ ಮಾಡಿನ (ಮಾಳಿಗೆ) ಮೇಲೆ ಉನ್ನತವಾದ ಶಿಖರದಿಂದ ಕೂಡಿರುವ ಮಧ್ಯಮಂಟಪವನ್ನೂ ಹೊಂದಿರುತ್ತದೆ. ಇಲ್ಲಿ ಎಲ್ಲಾ ಹಂತಗಳಲ್ಲಿ ಅನೇಕ ಕೊಠಡಿಗಳೂ ಇವೆ. ಅವುಗಳೆಲ್ಲವುಗಳಿಗೆ ಮಧ್ಯದಲ್ಲಿ, ಬಹು ಉನ್ನತವಾದ ಮತ್ತು ವಿಶಾಲವಾಗಿರುವ ಹಾಗೂ ಚೌಕಾಕಾರದಲ್ಲಿರುವ ರಾಜಸಭಾಪ್ರಾಂಗಣವಿದೆ.

12. ಅವುಗಳ ನಿರ್ಮಾಣಕ್ಕಾಗಿ ಕಲ್ಲು, ಬಂಡೆಗಳು, ಇಟ್ಟಿಗೆ, ನಯವಾದ ಸೋಸಿದ ಮಣ್ಣು, ಸುಣ್ಣ ಮಿಶ್ರಿತ ಗಾರೆಗಳನ್ನು ಸಾಮಾನ್ಯವಾಗಿ ಬಳಸಿರುತ್ತಾರೆ.

13. ಅವುಗಳ ಗೋಡೆಗಳಲ್ಲಿ ಕಮಾನುಗಳನ್ನು ಅಳವಡಿಸಿಕೊಂಡಿರುವುದನ್ನು ನೋಡುತ್ತೇವೆ ಮತ್ತು ಮಾಳಿಗೆಗಳ ಮೇಲೆ ಸಾಧಾರಣ ಎತ್ತರದ ಶಿಖರ ಇಲ್ಲವೇ ಗುಮ್ಮಟಗಳನ್ನು ಸೂಕ್ತ ರೀತಿಯಲ್ಲಿ, ಭಿನ್ನಭಿನ್ನ ರೀತಿಯಲ್ಲಿ ಅಳವಡಿಸಿ ರಚಿಸಿರುವುದನ್ನೂ ನೋಡುತ್ತೇವೆ. ಅವುಗಳಲ್ಲಿ, ಸಮಕಾಲೀನ ಇಸ್ಲಾಂ ಧರ್ಮದವರ ಕಟ್ಟಡಗಳ ಮಾದರಿ, ಅಲಂಕಾರ ನಮೂನೆಗಳಿಂದ ಪ್ರಭಾವಿತವಾಗಿರುವುದನ್ನು ಗುರುತಿಸಬಹುದು. ಮತ್ತು ಇಸ್ಲಾಮೀಯರ ವಾಸ್ತು ವೈಶಿಷ್ಟ್ಯಗಳ ಅನುಕರಣೆಯ ಜೊತೆಗೆ ಹಿಂದೂ ದೇವಮಂದಿರಗಳ ವಾಸ್ತು ಶೈಲಿಯ ವೈಶಿಷ್ಟ್ಯಗಳನ್ನೂ ಸಮ್ಮಿಳಿತಗೊಳಿಸಲಾಗಿದ್ದು, ಒಂದು ಚತುರ, ಪ್ರಾಜ್ಞ ಹಾಗೂ ಆಕರ್ಷಕ ಮಿಶ್ರ ಸಂಯೋಜನೆಯನ್ನು ಅವು ಪ್ರತಿಬಿಂಬಿಸುತ್ತವೆ. ಎಂದರೆ ಒಂದು ಉದಾತ್ತ, ಅನುಕೂಲವಾದ ಹಾಗೂ ವಿಶಾಲ ಮನೋಧರ್ಮವನ್ನು ಪ್ರತಿನಿಧಿಸುವ ವಾಸ್ತು ಶೈಲಿಯನ್ನು ಪ್ರೋತ್ಸಾಹಿಸಿ, ಆಚರಣೆಯಲ್ಲಿ ತಂದಿರುವುದನ್ನು ಇವುಗಳಲ್ಲಿ ಕಾಣುತ್ತೇವೆ.

14. ಇವುಗಳಲ್ಲಿ ಅಲಂಕಾರಿಕ ಕೆಲಸಗಳಿಗಾಗಿ ಇಟ್ಟಿಗೆಗಳನ್ನು ಮತ್ತು ಸುಣ್ಣ ಮಿಶ್ರಿತ ಗಾರೆಯನ್ನು ಯಥೇಚ್ಛವಾಗಿ ಉಪಯೋಗಿಸಿರುತ್ತಾರೆ.

15. ಇಲ್ಲಿ ಕಾಣಬರುವ ವಾಸ್ತುಶೈಲಿಯ ಮುಂದುವರಿದ ಪ್ರಭಾವವು, ನಂತರದ ರಾಜರ, ನಾಯಕರ ಆಳ್ವಿಕೆಯ ಕಾಲದಲ್ಲಿ, ಜಿಂಜಿ, ತಂಜಾವೂರು, ಮದುರೈ ಮುಂತಾದ ಸ್ಥಳಗಳಲ್ಲಿ ಅಸ್ತಿತ್ವಕ್ಕೆ ಬಂದ ಅರಮನೆಗಳ ಸಂಕೀರ್ಣ ಕಟ್ಟಡಗಳಲ್ಲಿಯೂ ಕಾಣಬರುತ್ತದೆ.

ಆ. ಈಚಿಗೆ ಹಂಪೆಯಲ್ಲಿ ಕೈಗೊಳ್ಳಲಾದ ಉತ್ಖನನಾ ಕಾರ್ಯಗಳ ಸಮಯದಲ್ಲಿ, ಸುಮಾರು 32ಕ್ಕೂ ಹೆಚ್ಚು ಅರಮನೆಗಳ ನಿವೇಶನಗಳ (mounds) ಇರುವಿಕೆಯನ್ನು ಗುರುತಿಸಲಾಗಿದೆ. ಅಲ್ಲದೆ, ಕೆಲವನ್ನು ಶೋಧಿಸಿ ಬಹಿರಂಗಗೊಳಿಸಲಾಗಿದೆ (exposed). ಆ ಉತ್ಖನನ ಕಾರ್ಯಗಳಲ್ಲಿ ಸಕ್ರಿಯ ಪಾತ್ರವಹಿಸಿದ್ದ ಪುರಾತತ್ವವಿದ ಸಿ.ಎಸ್. ಪಾಟೀಲರು ವಿಜಯನಗರ ಕಾಲದ ಆ ಅರಮನೆಗಳ ಅವಶೇಷಗಳನ್ನು ಕುರಿತು ಒಂದು ವಿದ್ವತ್‌ಪೂರ್ಣ ಹಾಗೂ ಬಹುವಿವರಣೆಗಳಿಂದ ಕೂಡಿದ ಪ್ರಬಂಧವನ್ನು ಪ್ರಕಟಗೊಳಿಸಿರುತ್ತಾರೆ.[3] ಅಲ್ಲಿ ಸ್ಥಿರಪಡಿಸಲಾದ ವಿಷಯಾಂಶಗಳು ಮತ್ತು ವೈಶಿಷ್ಟ್ಯಗಳನ್ನು ಸಂಕ್ಷಿಪ್ತವಾಗಿ ಈ ಕೆಳಗೆ ತಿಳಿಸಲಾಗಿದೆ.

1. ಅವುಗಳೆಲ್ಲವೂ ಆ ಮಹಾನಗರದ ಕೇಂದ್ರ ಪ್ರದೇಶದಲ್ಲಿ, ಆದರೆ ಒಳಸುತ್ತಿನ ಕೋಟೆಯ ಬೇರೆ ಬೇರೆ ಆವರಣಗಳಲ್ಲಿ ನಿರ್ಮಿತವಾಗಿದ್ದುವು.[4]

2. ಈಗ ಕಾಣಬರುವಂತೆ, ಅವುಗಳ ನೆಲಗಟ್ಟುಗಳು ಮಾತ್ರ ಉಳಿದಿದ್ದು, ಅಲ್ಲಲ್ಲಿ ಗಣನೀಯವಲ್ಲದ ಎತ್ತರಕ್ಕೆ ಗೋಡೆಗಳಿದ್ದರೂ, ಮೇಲಿನ ಭಾಗಗಳೆಲ್ಲಾ ನಾಶವಾಗಿವೆ.

3. ಅವುಗಳು ಪೂರ್ವ ಅಥವಾ ಉತ್ತರಾಭಿಮುಖವಾಗಿ ನಿರ್ಮಿತವಾಗಿದ್ದುವು.

4. ಅವುಗಳಿಗೆ ಸುತ್ತಲೂ ಪ್ರತ್ಯೇಕವಾಗಿ ಇಲ್ಲವೆ ಎರಡು ಮೂರು ಕಟ್ಟಡಗಳಿಗೆ ಸೇರಿ ಒಂದರಂತೆ ಭದ್ರವಾದ ಕಲ್ಲಿನಿಂದ ನಿರ್ಮಿತವಾದ ಪ್ರಾಕಾರಗಳನ್ನೊದಗಿಸಲಾಗಿತ್ತು.

5. ಅವುಗಳು ಸಾಮಾನ್ಯವಾಗಿ ನಾಲ್ಕು ಮೂಲೆಗಳ ಚೌಕಾಕಾರ ಅಥವಾ ಆಯತಾಕಾರದ ಸರಳ ರಚನಾಕ್ರಮಗಳಾಗಿರದೆ, ಬಹು ಮೂಲೆ ಕೋನಗಳನ್ನು ಮತ್ತು ಮುಂದೆ ಚಾಚಿರುವ ಭಾಗಗಳನ್ನು (projections) ಪ್ರದರ್ಶಿಸುವ ಚತುರ ಜ್ಯಾಮಿತಿ (geometrical) ವಿನ್ಯಾಸಗಳಲ್ಲಿ ನಿರ್ಮಿತವಾಗಿವೆ.

6. ಅವುಗಳ ಅಧಿಷ್ಠಾನಗಳು ಬಹು ನುಣುಪಾಗಿಸಿದ ಕಲ್ಲಿನಲ್ಲಿ (dressed granite stones) ನಿರ್ಮಿತವಾಗಿದ್ದು, ಅಲ್ಲಲ್ಲಿ ಬಹು ವಿಧ ಅಲಂಕಾರಿಕ ಪಟ್ಟಿಗಳನ್ನು (moulded basements) ಹೊಂದಿರುತ್ತವೆ.

7. ಅವುಗಳ ಒಳಾಂಗಣಗಳ ನೆಲ (floor area) ಮತ್ತು ಹೊರ ಸುತ್ತಿನ ನೆಲವನ್ನು ಜಲ್ಲಿ ಕಲ್ಲು ಮತ್ತು ಸುಣ್ಣ ಮಿಶ್ರಿತ ಗಾರೆಗಳ ಮಿಶ್ರಣವನ್ನುಪಯೋಗಿಸಿ ಗಟ್ಟಿಗೊಳಿಸಿ, ಸುಂದರಗೊಳಿಸುತ್ತಿದ್ದರು.

8. ಅಧಿಷ್ಠಾನದ ಮೇಲಿರುತ್ತಿದ್ದ ಗೋಡೆಗಳು ಸರಳವಾಗಿದ್ದು, ಅವುಗಳ ನಿರ್ಮಾಣಕ್ಕೆ ಒರಟು ಕಲ್ಲುಗಳು (rubble stones), ಶೋಧಿಸಿದ ಮಣ್ಣನ್ನುಪಯೋಗಿಸಿದ್ದರೆ, ಗಿಲಾವು (plaster) ಕೆಲಸಕ್ಕೆ ಶೋಧಿಸಿದ ನಯವಾದ ಕೆಸರುಮಣ್ಣು, ಸುಣ್ಣದ ಗಾರೆ ಮುಂತಾದವುಗಳನ್ನು ಉಪಯೋಗಿಸುತ್ತಿದ್ದರು.

9. ಸ್ಥಳದಲ್ಲಿಯೇ ದೊರೆತ ಇಜ್ಜಲು, ಕಬ್ಬಿಣದ ಮೊಳೆಗಳ ಆಧಾರವನ್ನನುಸರಿಸಿ, ಆ ಕಟ್ಟಡಗಳಲ್ಲಿ ಸ್ತಂಭ, ತೊಲೆ, ಬೋದಿಗೆ, ಜಂತಿಗೆ ಮುಂತಾದವುಗಳಿಗಾಗಿ ಮರಮುಟ್ಟುಗಳನ್ನುಪಯೋಗಿಸುತ್ತಿದ್ದರೆಂದು ತಿಳಿಯುತ್ತದೆ.

10. ಅವುಗಳ ಮಾಳಿಗೆ ಮತ್ತು ಮೇಲು ಛಾವಣಿಗಳನ್ನು ಇಟ್ಟಿಗೆ, ಸುಣ್ಣದ ಗಾರೆಗಳನ್ನುಪಯೋಗಿಸಿ ಹೊದಿಸಿರುತ್ತಿದ್ದರು.

11. ಅಲಂಕಾರಕ್ಕಾಗಿ ಸೌಧಗಳ ಮೇಲೆ ಹಿತ್ತಾಳೆ ಅಥವಾ ದಂತದ ಕಲಶಗಳನ್ನು ಬಳಸುವ ಪದ್ಧತಿ ಇತ್ತು.

12. ಆ ನೆಲಗಟ್ಟುಗಳು ಮುಂದಿನ ಪ್ರವೇಶದ್ವಾರದಿಂದ ಆರಂಭಿಸಿ ಒಳಗೆ ಹೋಗುತ್ತಾ ಎರಡು-ಮೂರು ಎತ್ತರ-ಹಂತಗಳಲ್ಲಿ, ಆರೋಹಣಾ ಪದ್ಧತಿಯಲ್ಲಿ ನಿರ್ಮಿತವಾಗಿರುವುದೂ ವೇದ್ಯವಾಗುತ್ತದೆ.

13. ಮತ್ತು ಒಂದು ಹಂತದಿಂದ ಇನ್ನೊಂದು ಹಂತಕ್ಕೆ ಏರಿ ಹೋಗಲು ಸೋಪಾನಗಳ ಹಾಗೂ ಶಿಲ್ಪಾಲಂಕೃತ ಪಕ್ಕಪಟ್ಟಿಗಳ (balustades) ವ್ಯವಸ್ಥೆಗಳೂ ಕಾಣಬರುತ್ತವೆ.

14. ಆ ಕಟ್ಟಡಗಳ ಮುಂಭಾಗದಲ್ಲಿ (forecourt) ಇಂಗ್ಲೀಷ್ ಅಕ್ಷರ ಯು (U) ಆಕಾರದ ಸಭಾಂಗಣ ಅಥವಾ ಸಭಾಸ್ಥಾನವಿದ್ದು, ಅದರ ಇತರ ಮೂರು ಕಡೆಗೆ ಪಡಸಾಲೆ(corridor)ಗಳಿದ್ದಂತೆ ತಿಳಿದುಬರುತ್ತದೆ.

15. ಎಲ್ಲವುಗಳಿಗಿಂತ ಮೇಲಿನ ಹಂತದಲ್ಲಿ ಸ್ವಉಪಯೋಗಿ ಕೊಠಡಿಗಳನ್ನು ಬಹು ಜಾಣ್ಮೆಯಿಂದ ವ್ಯವಸ್ಥೆಗೊಳಿಸಿರುವುದನ್ನು ನೋಡಬಹುದು.[5]

ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಆ ಕಟ್ಟಡಗಳಲ್ಲಿ ಹಲ ಕೆಲವು ಚಿಕ್ಕ ವ್ಯತ್ಯಾಸಗಳು, ಪ್ರಭೇದಗಳು ಕಾಣಬರುತ್ತಿದ್ದು, ಮೇಲಿನ ವಿವರಣೆಗಳು ಸಾಮಾನ್ಯವಾಗಿ ಗುರುತಿಸಲಾದವುಗಳೆಂದು ತಿಳಿಯಬೇಕು. ಆ ಕಟ್ಟಡಗಳಲ್ಲಿ ಉಪಯೋಗಿಸಲಾಗಿದ್ದ ಸ್ತಂಭ ಮುಂತಾದ ಮರಮುಟ್ಟು, ಸಾಧನ ಸಾಮಗ್ರಿಗಳು, ಅಲಂಕಾರಿಕ ವಸ್ತುಗಳು, ಪರಿಕರಗಳು ನಾಶವಾಗಿ ಹೋಗಿರುವುದರಿಂದ ಈಗ ಅವು ಲಭ್ಯವಿಲ್ಲ.

16. ಆ ಕಟ್ಟಡಗಳಿಗೆ ನೀರು ಸರಬರಾಜಿನ ವ್ಯವಸ್ಥೆಯನ್ನು ಅವಶ್ಯವಾಗಿ ಮತ್ತು ಪರಿಣಾಮಕಾರಿಯಾಗಿ ಏರ್ಪಡಿಸಲಾಗಿರುತ್ತಿತ್ತೆಂಬುದು ಮತ್ತೊಂದು ಗಮನಾರ್ಹ ವಿಷಯವು.[6]

ಇ. ಈಗ ಸಮಕಾಲೀನ ವಿದೇಶಿ ಪ್ರವಾಸಿಗಳು ಬಣ್ಣಿಸಿರುವಂತೆ, ವಿಜಯನಗರದ ಅರಮನೆಗಳನ್ನು ಕುರಿತು ಮಾತ್ರ ತಿಳಿಯೋಣ. ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ, ಎರಡನೇ ದೇವರಾಯನ ಆಳ್ವಿಕೆಯ ಕಾಲದಲ್ಲಿ ಕ್ರಿ.ಶ. 1443ರಲ್ಲಿ ಸಂದರ್ಶಿಸಿದ ಪರ್ಶಿಯಾ ದೇಶದ ರಾಯಭಾರಿ ಅಬ್ದುರ್ ರಜಾಕ್, ಕೃಷ್ಣದೇವರಾಯರ ಕಾಲದಲ್ಲಿ ಸಂದರ್ಶಿಸಿದ ಪೋರ್ಚುಗಲ್ ದೇಶದ ದುಆರ್ತೆ ಬಾರ್ಬೊಸಾ ಹಾಗೂ ಡಾಮಿಂಗೋ ಪಾಯೆಸ ಮತ್ತು ಅಚ್ಯುತರಾಯನ ಕಾಲದಲ್ಲಿ ಬಂದಿದ್ದ ಫೆರ್ನಾವೋ ನೂನಿಜ್, ಇವರುಗಳ ವಿವರಣೆಗಳು ಮುಖ್ಯ.[7]

1. ಅಬ್ದುರ್ ರಜಾಕ್: .... ನಗರವನ್ನು ಹೇಗೆ ನಿರ್ಮಿಸಿದ್ದಾರೆಂದರೆ, ಏಳು ದುರ್ಗಗಳೂ, ಏಳು ಕೋಟೆಗಳೂ ಒಂದನ್ನೊಂದು ಆವರಿಸಿಕೊಂಡಿವೆ. ... ಎಲ್ಲಾ ಕೋಟೆಗಳ ಮಧ್ಯದಲ್ಲಿರುವ ಏಳನೆಯ ಕೋಟೆ .... ಇಲ್ಲಿ ರಾಜನು ವಾಸಮಾಡುವ ಅರಮನೆ ಇದೆ. ... ರಾಜನ ಅರಮನೆಯ ಹೆಬ್ಬಾಗಿಲಿನಲ್ಲಿ ಎದುರುಬದರಾಗಿ ನಾಲ್ಕು ಅಂಗಡಿಬೀದಿಗಳಿವೆ. ಉತ್ತರದಲ್ಲಿ ರಾಯನ ಅರಮನೆ ದ್ವಾರವಿದೆ. ... ಆದರೆ ರಾಯನ ಅರಮನೆಯಲ್ಲಿರುವ ಸಭಾಮಂಟಪವು ಇದೆಲ್ಲಕ್ಕಿಂತಲೂ ಎತ್ತರವಾಗಿದೆ. ... ರಾಜನ ಅರಮನೆಯಲ್ಲಿ ಸೊಗಸಾಗಿ ಗೆಯ್ದ ಕಲ್ಲಿನಿಂದ ನಿರ್ಮಿಸಿದ ಕಾಲುವೆಗಳಲ್ಲಿ ಹರಿಯುವ ನೀರಿನ ಝರಿಗಳನ್ನು ನೋಡಬಹುದು. ... ರಾಜನ ಅರಮನೆಯ ದ್ವಾರದ ಎಡಗಡೆ, ಅರಮನೆಯೋಪಾದಿಯಲ್ಲಿ ಕಾಣುವ ಬಹು ದೊಡ್ಡದಾದ ದಿವಾನಖಾನೆಯಿದೆ. ಇದರ ಮುಂದೊಂದು ಹಜಾರವಿದೆ. ಇದು ಮನುಷ್ಯನ ಎತ್ತರದಷ್ಟಿದ್ದು, ಮೂವತ್ತು ಗಜ ಉದ್ದವೂ, ಹತ್ತು ಗಜ ಅಗಲವೂ ಇದೆ. ಇಲ್ಲಿ ದಫ್ತರಖಾನೆ ಇದೆ. ಅಲ್ಲದೆ ಇಲ್ಲಿ ಕಾರ್ಖೂನರು ಕುಳಿತುಕೊಳ್ಳುತ್ತಾರೆ. ... ಈ ಅರಮನೆಯ ಮಧ್ಯೆ (ಅಂದರೆ ದಿವಾನಖಾನೆಯ ಮಧ್ಯೆ) ಎತ್ತರವಾದ ವೇದಿಕೆಯ ಮೇಲೆ ದೈಯ್ಯಾಂಗ (ಡಣಾಯಕ ಅಥವಾ ದಿವಾನ) ಎಂದು ಕರೆಯಲ್ಪಡುವ ಖೋಜಾ ಕುಳಿತಿರುತ್ತಾನೆ. .... ರಾಜನಿರುವ ಅರಮನೆಯನ್ನು ಮುಟ್ಟುವ ಮುನ್ನ ಏಳು ಬಾಗಿಲುಗಳನ್ನು ದಾಟಿಹೋಗಬೇಕು. ಪ್ರತಿಯೊಂದು ಬಾಗಿಲನ್ನು ಒಬ್ಬೊಬ್ಬ ದ್ವಾರಪಾಲಕ ಕಾಯುತ್ತಾನೆ. ... ರಾಜನ ಅರಮನೆಯ ಹಿಂಭಾಗದಲ್ಲಿ ದೈಯ್ಯಾಂಗ(ದಿವಾನ)ನ ವಾಸದ ಅರಮನೆಯಿದೆ. ... ಅರಮನೆಯ ಎಡಭಾಗದಲ್ಲಿ ದರಬ್‌ಖಾನ (ಟಂಕಸಾಲೆ) ಇದೆ. ... ರಾಜನ ಅರಮನೆಯ ನೆಲಮಾಳಿಗೆಯಲ್ಲಿ ಚಿನ್ನದ ಗಟ್ಟಿಗಳನ್ನು ರಾಶಿಹಾಕಿದ್ದಾರೆ. ... ದಿವಾನಖಾನೆಗೆ ಎದುರಾಗಿ ಫಿಲ್‌ಖಾನೆ (ಗಜಶಾಲೆ) ಇದೆ. ರಾಜನಿಗೆ ಸೇರಿದ ಅನೇಕ ಆನೆಗಳು, ಅರಮನೆಯ ಬಳಿ ಅಂದರೆ ಮೊದಲನೆ ಮತ್ತು ಎರಡನೆಯ ಕೋಟೆಗಳ ಮಧ್ಯೆ ಇರುವ ಉತ್ತರ ಪಶ್ಚಿಮ ಜಾಗದಲ್ಲಿರುತ್ತವೆ. .... ದರಬ್‌ಖಾನೆಗೆ (ಟಂಕಸಾಲೆಗೆ) ಎದುರಾಗಿ ರಾಜ್ಯಪಾಲನ ಮನೆಯಿದೆ. ... ಒಂದು ದಿನ .... ಸಾಯಂಕಾಲ ನಾನು ರಾಜನನ್ನು ನೋಡಲು ಹೋದೆ. ... ರಾಜನು ಸಭಾಮಂಟಪದಲ್ಲಿ ಕುಳಿತು ಭವ್ಯವಾದ ವೈಭವದೊಡಗೂಡಿ ಒಡ್ಡೈಸುತ್ತಿದ್ದನು. ಅವನ ಎಡಗಡೆ ಮತ್ತು ಬಲಗಡೆ ಚಕ್ರಾಕಾರವಾಗಿ ಅಸಂಖ್ಯಾತ ಜನಸಂದಣಿ ಸೇರಿತ್ತು. ... ಜನಗಳು ಹೇಳುವುದು ನಿಜವಾದರೆ .... ರಾಜನ ಅಂತಃಪುರದಲ್ಲಿ ಇರುವ ರಾಣಿಯರು ಮತ್ತು ಇಟ್ಟುಕೊಂಡವರು ಏಳು ನೂರು .... ಪ್ರತಿಯೊಬ್ಬಳಿಗೂ ಬೇರೆ ಬೇರೆ ವಾಸಗೃಹ .... ಸಿಂಹಾಸನ .... ಬಹು ದೊಡ್ಡದಾದ ಆ ಸಿಂಹಾಸನವನ್ನು ಚಿನ್ನದಿಂದ ಮಾಡಿ ಅಪಾರ ಬೆಲೆಯ ವಜ್ರ ವೈಢೂರ್ಯಗಳಿಂದ ಅಲಂಕಾರ ಮಾಡಿದ್ದರು. ... ಸಿಂಹಾಸನದ ಮುಂದೆ ಚಚ್ಚೌಕವಾದ ಒಂದು ಮೆತ್ತೆ ಇತ್ತು. ಅದರ ಅಂಚಿಗೆ ಮೂರು ಸುತ್ತು ಅತ್ಯಂತ ಸುಂದರವಾದ ಬಿಳಿ ಮುತ್ತುಗಳನ್ನು ಹೆಣೆದಿದ್ದರು. .... ನಾನು ಅರಮನೆಗೆ ಹೋದಾಗ ನನ್ನನ್ನು ನಾಲ್ಕು ಮಂಟಪಗಳ ಬಳಿಗೆ ಕರೆದೊಯ್ದರು. ಈ ಮಂಟಪಗಳು ಒಂದೊಂದು ಹತ್ತು ಗಜ ಉದ್ದ ಮತ್ತು ಅಷ್ಟೇ ಅಗಲವಾಗಿದ್ದುವು. ಇವುಗಳ ಮೇಲ್ಭಾವಣಿಯನ್ನೂ, ಗೋಡೆಯನ್ನೂ ಚಿನ್ನದ ತಗಡುಗಳಿಂದ ಹೊದಿಸಿ ವಜ್ರಗಳಿಂದ ಅಲಂಕರಿಸಿದ್ದರು. ತಗಡು ಕತ್ತಿಯ ಅಲಗಿನಷ್ಟು ಮಂದವಾಗಿತ್ತು. ಚಿನ್ನದ ಮೊಳೆಗಳನ್ನೇ ಉಪಯೋಗಿಸಿ ತಗಡನ್ನು ಜೋಡಿಸಿದ್ದರು. ಮುಂಭಾಗದ ವೇದಿಕೆಯ ಮೇಲೆ ಸಿಂಹಾಸನವಿತ್ತು........[8]

2. ದುಆರ್ತೆ ಬಾರ್ಬೊಸಾ: .... ರಾಜನು ಸುಂದರವಾದ ಹಾಗೂ ದೊಡ್ಡದಾದ ಅರಮನೆಗಳನ್ನು ಕಟ್ಟಿಸಿದ್ದಾನೆ. ಅಲ್ಲಲ್ಲಿ ಅನೇಕಾನೇಕ ಅಂಗಳಗಳಿವೆ. ಆ ಅಂಗಳಗಳಲ್ಲಿ ಅನೇಕ ದಿಬ್ಬಗಳೂ, ಕೊಳಗಳೂ, ಹೂಗಿಡಗಳೂ, ಇವೆ. ... ಮರಗಳಿಂದಲೂ ಹೂಗಿಡಗಳಿಂದಲೂ ತುಂಬಿದ ತೋಟಗಳಿವೆ. ... ಅರಮನೆಯ ಎಲ್ಲಾ ಕೆಲಸವೂ ಸ್ತ್ರೀಯರಿಂದಲೇ ನಡೆಯಬೇಕಾದ್ದರಿಂದ .... ಇವರಿಗೆ ಅರಮನೆಯೊಳಗೇ ವಾಸಕ್ಕೆ ಮನೆಗಳನ್ನು ಕಟ್ಟಿ ಬೇಕಾದುದನ್ನು ಒದಗಿಸುತ್ತಾರೆ. .... ಹಿಂದೆ ನಾನು ಹೇಳಿದ ಕೊಳಗಳಲ್ಲಿ ಸ್ತ್ರೀಯರು ನಿತ್ಯವೂ ಸ್ನಾನಮಾಡಿ, ವಾದ್ಯಬಾರಿಸಿ, ಹಾಡಿ ನಲಿಯುತ್ತಾರೆ. .... ರಾಜನು ಪ್ರತ್ಯೇಕವಾದ ಓಲಗಶಾಲೆಯಲ್ಲಿ ತನ್ನ ಶ್ರೀಮಂತ ಸರದಾರರು ಮತ್ತು ಅಧಿಕಾರಿಗಳೊಡನೆ ಕುಳಿತು ರಾಜ್ಯ ವ್ಯವಹಾರಗಳನ್ನು ಪರಿಶೀಲಿಸುತ್ತಾನೆ. ... ಅರಮನೆಯ ಪಾಕಗೃಹಗಳು ದೊಡ್ಡದಾಗಿವೆ....[9]

3. ಡಾಮಿಂಗೋ ಪಾಯೇಸ್: .... ಅರಮನೆಯ ಆವರಣವನ್ನು ಪ್ರವೇಶಿಸಲು ಎರಡು ಬಾಗಿಲುಗಳಿವೆ. ... ಇವೆರಡು ಬಾಗಿಲುಗಳ ಮಧ್ಯೆ ಬಹು ದೊಡ್ಡ ಅಂಗಳವಿದೆ. ಇದರ ಸುತ್ತ ಪಡಸಾಲೆ ಇದೆ. .... ರಾಜನ ಹೆಂಡತಿಯರು ತಮ್ಮದೇ ಆದ ಮನೆಗಳಲ್ಲಿ ಸಖಿಯರು ಮತ್ತು ಅವ್ವೆಯರೊಡಗೂಡಿ ಬೇರೆ ಬೇರೆ ಇರುತ್ತಾರೆ. ... ಈ ಸಖಿಯರೂ ಸೇರಿ ಅಂತಃಪುರದಲ್ಲಿ ಹನ್ನೆರಡು ಸಾವಿರ ಹೆಂಗಸರಿದ್ದಾರೆಂದು ತಿಳಿಯಿತು. ... ಮೂವರು ಪಟ್ಟಮಹಿಷಿಯರ ಬಳಿಯಲ್ಲಿಯೂ ಸಮಾನ ಸಂಖ್ಯೆಯಲ್ಲಿ ಊಳಿಗದವರಿದ್ದಾರೆ. ... ಇವರಿಂದ ಅರಮನೆಯ ಆವರಣದಲ್ಲಿರುವ ಜನರೆಷ್ಟು, ಅವರಿರುವ ಮನೆಗಳೆಷ್ಟು, ಬೀದಿಗಳೆಷ್ಟು ಎಂಬುದನ್ನು ನೀವೇ ಊಹಿಸಿಕೊಳ್ಳಿ. .... ರಾಜನು ಅರಮನೆಯೊಳಗೆ ತಾನೇ ಬೇರೆ ಇರುತ್ತಾನೆ. ... (ರಾಜನು) ಸ್ನಾನ ಮಾಡಿದ ನಂತರ ಅರಮನೆಯೊಳಗೆ ಇರುವ ದೇವಸ್ಥಾನಕ್ಕೆ ಹೋಗಿ ದೇವರನ್ನು ಪೂಜೆ ಮಾಡುತ್ತಾನೆ. ... ಅನಂತರ ಸುಂದರವಾಗಿ ಅಲಂಕೃತವಾದ ಅನೇಕ ಕಂಬಗಳುಳ್ಳ ತೊಟ್ಟಿಯಲ್ಲಿ ಕುಳಿತು ತನ್ನ ಆಪ್ತ ಮಂತ್ರಿಗಳು ಮತ್ತು ಅಧಿಕಾರಿಗಳೊಡನೆ ರಾಜಕಾರ್ಯ ನಿರ್ವಹಣೆಯಲ್ಲಿ ಮಗ್ನನಾಗುತ್ತಾನೆ. ಈ ತೊಟ್ಟಿಯ ಕಂಬಗಳಲ್ಲಿ ಸೊಗಸಾಗಿ ಮಾಡಿದ ಸ್ತ್ರೀ ವಿಗ್ರಹಗಳಿವೆ. ... ಸ್ವಲ್ಪ ದೂರ ಹೋದರೆ ಒಂದು ಒಳಕೋಟೆಯೂ, ಅದನ್ನು ಪ್ರವೇಶಿಸಲು ಒಂದು ಹೆಬ್ಬಾಗಿಲೂ ಇದೆ. ಇಲ್ಲಿಂದ ಒಳಗಡೆ ಹೋದರೆ ರಾಜನ ಅರಮನೆಯವರೆಗೂ ದಳವಾಯಿಗಳ, ಶ್ರೀಮಂತರ ಮತ್ತು ವರ್ತಕರ ಸುಂದರವಾದ ಬೀದಿಗಳೋ ಬೀದಿಗಳು; ಮನೆಗಳೋ ಮನೆಗಳು .... ರಾಜಬೀದಿಯನ್ನೇ ಹಿಡಿದು ಹೋದರೆ ಅರಮನೆಯ ಮುಂದಿನ ಮೈದಾನ .... ಊರಿನ ನಟ್ಟ ನಡುವೆ ಇರುವುದರಿಂದ ಎಲ್ಲರಿಗೂ ಬೇಕಾದ ಸ್ಥಳ .... (ಅರಮನೆಯಲ್ಲಿ) ಒಂದು ಕಡೆ ಪೋರ್ಚುಗೀಸರಿಂದ ಹಿಡಿದು ಎಲ್ಲಾ ಪರದೇಶೀ ಜನರ ನಡತೆಗಳ ಚಿತ್ರಗಳಿದ್ದುವು (ಗೋಡೆಗಳ ಮೇಲೆ). ಈ ಚಿತ್ರಗಳನ್ನು ಅರಮನೆಯಲ್ಲಿಯೇ ಇರುವ ರಾಣಿಯರಿಗೋಸ್ಕರ ಬರೆಯಿಸಿದ್ದರು. ಇನ್ನೊಂದು ಕಡೆ ಮೃಗಗಳ ಕಾದಾಟಕ್ಕೆ ಮಾಡಿದ್ದ ಅಖಾಡವನ್ನು ನೋಡಿದೆವು. ಒಂದು ಕಡೆ ರಾಜನ ಆಜ್ಞೆಯಂತೆ ಬಿಲ್ಲು ಬಾಣಗಳನ್ನು ಹಿಡಿದ ಸ್ತ್ರೀಯರ ಚಿತ್ರಗಳನ್ನು ಚಿತ್ರೀಕರಿಸಿದ್ದರು. .... ಅನಂತರ ನೃತ್ಯಶಾಲೆಯನ್ನು ನೋಡಿದೆವು. ... ಬಹು ಉದ್ದವಾಗಿದೆ; ಅಗಲ ಕಡಿಮೆ. ಕಲ್ಲಿನಲ್ಲಿ ಕಡೆದ ಕಂಬಗಳು. ಈ ಕಂಬಗಳ ಪಾದಗಳನ್ನು ಆನೆ ಮುಂತಾದ ಪ್ರಾಣಿಗಳ ಆಕಾರಕ್ಕೆ ಕೆತ್ತಿದ್ದಾರೆ. ನಾನಾ ತರಹದ ವಿಗ್ರಹಗಳನ್ನು ಕೊರೆದಿದ್ದಾರೆ. ಎಲ್ಲ ಕಂಬಗಳ ಮೇಲೂ ನರ್ತಕಿಯರ ಚಿತ್ರ ಕೆತ್ತಿದ್ದಾರೆ. ... ಈ ನೃತ್ಯ ಶಾಲೆಯ ಕೊನೆಯಲ್ಲಿ ಚಿತ್ರಿತವಾದ ವಿಶ್ರಾಂತಿ ಕೋಣೆ ಇದೆ....[10]

4. ಫೆರ್ನಾವೋ ನೂನಿಜ್: .... ಕೃಷ್ಣರಾಯನು ವಿಜಯನಗರದಲ್ಲಿದ್ದ ಚಿನ್ನಾದೇವಿಯಲ್ಲಿ ಇಟ್ಟಿದ್ದ ಅಪಾರ ಪ್ರೇಮದಿಂದಾಗಿ .... ಮಂತ್ರಿ ತಿಮ್ಮರಸನು ಅರಮನೆಗೆ ಸೇರಿದಂತೆ ಒಂದು ಎತ್ತರವಾದ ಹಾಗೂ ದೊಡ್ಡದಾದ ಗೋಪುರವನ್ನು ಕಟ್ಟಿಸಿ ಅದರಲ್ಲಿ ಆ ಚಿನ್ನಾದೇವಿಯನ್ನಿಟ್ಟನು. ... ರಾಜನ ಅರಮನೆಯು ದೊಡ್ಡದಾಗಿದ್ದು, ಅದರಲ್ಲಿ ವಿಶಾಲವಾದ ಕೋಣೆಗಳಿವೆ. ಪ್ರತಿಯೊಬ್ಬ ಹೆಂಡತಿಗೂ ಬೇರೆ ಬೇರೆ ಕೋಣೆ .... (ರಾಜನ) ಅಡುಗೆ ಮನೆಯಲ್ಲಿ ಸುಮಾರು ಇನ್ನೂರು ಜನ ಉಸ್ತುವಾರಿ ನೋಡಿಕೊಳ್ಳುವ ಜನರಿದ್ದಾರೆ....[11]

ಈ. ನಮಗೆಲ್ಲಾ ವಿದಿತವಿರುವಂತೆ, ಕನ್ನಡದಲ್ಲಿ ರಚಿಸಲಾಗಿರುವ ಹಲವು ಸಮಕಾಲೀನ ಕಥಾನಿರೂಪಣಾ ಕವಿತಾ ಗ್ರಂಥಗಳಲ್ಲಿ ರಾಜರ ಅರಮನೆಗಳು, ಅವುಗಳ ಉಪವಿಭಾಗಗಳು (auxiliary structures), ವೈಭವ, ವಿವಿಧೋದ್ದೇಶ, ಉಪಯುಕ್ತತೆ ಮುಂತಾದ ವಿಷಯಗಳನ್ನು ಕುರಿತು ವಿವರಣೆಗಳು ವಿಪುಲವಾಗಿ, ಸಾಂದರ್ಭಿಕವಾಗಿ ದೊರೆಯುತ್ತವೆ. ಆದರೆ ಅವುಗಳ ರಚನಾಕ್ರಮ, ವಿನ್ಯಾಸ ಮುಂತಾದವುಗಳ ಬಗೆಗೆ ಏನೂ ದೊರೆಯುವುದಿಲ್ಲ. ಆದರೂ, ಆ ವಿವರಣೆಗಳಿಗೆಲ್ಲ ಗ್ರಂಥಕರ್ತ ಕವಿಯು ಸ್ವತಃ ನೋಡಿ, ಅನುಭವಿಸಿ, ಅಥವಾ ಕೇಳಿ ತಿಳಿದು ಸಂಗ್ರಹಿಸಿದ ಸಂಗತಿಗಳೇ ಆಧಾರವೆಂಬುದರಲ್ಲಿ ಸಂಶಯವಿಲ್ಲ. ಕೆಲವರಂತೂ, ತಮ್ಮ ಗ್ರಂಥ ರಚನಾ ಕಾರ್ಯಗಳನ್ನು ಆ ವಿಜಯನಗರ ಪಟ್ಟಣದಲ್ಲಿ ವಾಸವಾಗಿದ್ದುಕೊಂಡೇ ನಿರ್ವಹಿಸಿದರು; ಉದಾಹರಣೆಗೆ ಚಾಮರಸ, ತಿಮ್ಮಣಕವಿ, ವಿರೂಪಾಕ್ಷ ಪಂಡಿತ, ಮುಕ್ಕು ತಿಮ್ಮಯ, ಮಲ್ಲಯ ಮುಂತಾದವರು. ಇಲ್ಲಿ ಗಮನದಲ್ಲಿರಿಸಿಕೊಳ್ಳಬೇಕಾದ ಒಂದು ಮುಖ್ಯ ಅಂಶವೆಂದರೆ, ಕವಿಗಳು ಕವಿ ಸಮಯಕ್ಕನುಗುಣವಾಗಿ ತಮ್ಮ ಕೃತಿಗಳಲ್ಲಿ ಬರುವ ಕಥಾ ನಾಯಕ/ಅರಸರನ್ನು ವಿಜಯನಗರದ ಅರಸರ ಹೆಸರುಗಳಿಂದಾಗಲೀ, ಅವರ ನಗರ/ರಾಜಧಾನಿಯನ್ನು ಆ ಮಹಾಪಟ್ಟಣ ವಿಜಯನಗರವೆಂದಾಗಲೀ ಹೆಸರಿಸದೇ ಇದ್ದಾಗಲೂ ಅಲ್ಲಿ ಬರುವ ವಿವರಣೆಗಳು ಕವಿಯ ಸಮಕಾಲೀನ ಅರಸರಿಗೆ ಮತ್ತು ಸುಪ್ರಸಿದ್ಧ ಆ ವಿಜಯನಗರ ಪಟ್ಟಣಕ್ಕೇ ಪರೋಕ್ಷವಾಗಿ ಅನ್ವಯಿಸುತ್ತಿದ್ದುವೆಂದು ತಿಳಿಯಬೇಕಾಗುತ್ತದೆ. ಹಾಗಾಗಿ, ಪ್ರಸ್ತುತ ವಿಷಯಕ್ಕೆ ಅವುಗಳನ್ನು ಕಡೆಗಣಿಸದೆ ತಿಳಿಯುವುದೂ ಬಹು ಮುಖ್ಯ ಹಾಗೂ ಉಪಯುಕ್ತ.

ಆ ಸಾಹಿತ್ಯ ಗ್ರಂಥಗಳೆಲ್ಲವೂ, ಒಂದೆರಡರ ವಿನಹ, ಕಾವ್ಯ ಗ್ರಂಥಗಳಾಗಿರುವುದರಿಂದ ಕವಿ ಸಮಯಕ್ಕೆ ಸಹಜವಾದ ಉತ್ಪ್ರೇಕ್ಷೆಗೆ ಅವಕಾಶವಿರುವುದು ಸಾಮಾನ್ಯ ಮತ್ತು ಹಿಂದಿನಿಂದಲೂ ಅನುಸರಿಸಲಾಗಿರುವ ಪದ್ಧತಿ. ಹಾಗಿದ್ದಾಗಲೂ, ಅಂತಹ ವರ್ಣನೆಗಳಿಂದ ವಾಸ್ತವಾಂಶಗಳನ್ನು, ಮೂಲ ಸ್ವರೂಪಗಳನ್ನು ಹುಡುಕಿ ಹೊರತೆಗೆದು ಅರ್ಥಮಾಡಿಕೊಳ್ಳುವುದು ಅಸಾಧ್ಯವಾದುದೇನಲ್ಲ. ಪ್ರಸ್ತುತದಲ್ಲಿ ಅಂತಹ ಕವಿತಾ ಸಾಹಿತ್ಯದ ವರ್ಣನೆಗಳಿಂದ ಸಮಕಾಲೀನ ಅರಮನೆಗಳನ್ನು ಕುರಿತು ಹೆಕ್ಕಿ ತೆಗೆಯಲಾದ ವಾಸ್ತವಾಂಶಗಳನ್ನು, ರೂಪರೇಷೆಗಳನ್ನು ವಿವರಿಸಲಾಗಿದೆ. ಇವು ವಿಜಯನಗರ ಕಾಲದ ಅರಮನೆಗಳನ್ನು ಕುರಿತು ಇತರ ಮೂಲ ಸಾಮಗ್ರಿಗಳನ್ನಾಧರಿಸಿ ಈಗಾಗಲೇ ಮಾಡಲಾಗಿರುವ ಅಧ್ಯಯನ, ಸಂಶೋಧನೆ ಹಾಗೂ ಪ್ರಕಟಣೆಗಳಿಗೆ ಪೂರಕವಾದ ಮತ್ತು ಮುಂದುವರಿದವುಗಳಾಗಿವೆ.

1. ಅರಮನೆ: ರಾಜನ ವಾಸಸ್ಥಳವು 'ರಾಜಾಲಯ', 'ಅರಮನೆ', 'ರಾಜಭವನ' ಎಂದು ಮುಂತಾಗಿ ಕರೆಯಲ್ಪಡುತ್ತಿದ್ದು, ಅದು ಒಳಕೋಟೆಯ ಮಧ್ಯದಲ್ಲಿ ಕಾಣಬರುತ್ತಿತ್ತು. ಅದು 'ಪುರವನಿತೆಯ ಮುಖ ಬಿಂಬದಂತೆ' ಕೇಂದ್ರ ಪ್ರದೇಶದಲ್ಲಿದ್ದು ಪ್ರಮುಖ ಹಾಗೂ ಆಕರ್ಷಕ ಕಟ್ಟಡವಾಗಿತ್ತು. ಅದರೊಳಗೆ ರಾಜನು ತನ್ನ ಪರಿವಾರ ಸಮೇತ 'ಸಕಲ ಸೌಭಾಗ್ಯದಿಂದಿರುತಿರ್ದನು' [ಚ.ಪು., ಸಂದಿ 11, ಪದ್ಯ 47, 48]. ಲಕ್ಷ್ಮೀಶ ಕವಿಯು, ರಾಜನ ಅರಮನೆಯನ್ನು (ನೃಪಾಗಾರವನ್ನು) ಚಲುವಿನ ನಾರಿಯಂತಿರ್ದ ಆ ಮಹಾನಗರದ ಮುಖಾಂಬುಜವೆಂದು ವರ್ಣಿಸಿರುತ್ತಾನೆ [ಜೈ.ಭಾ., ಸಂ.17 ಪ.8]. ಗೋವಿಂದ ವೈದ್ಯನು ರಾಜನ ಅರಮನೆ ಸಂಕೀರ್ಣವು ಒಂದು ಭದ್ರವಾದ ಒಳಕೋಟೆ, ವಜ್ರದ ಕೋಟೆಯಂತೆ ಇತ್ತೆಂದು ಹೇಳುತ್ತಾ ಅದನ್ನು 'ಲಕ್ಷ್ಮೀ ಬೀಡಾರ'ವೆಂದೂ ಹೊಗಳಿರುತ್ತಾನೆ [ಕಂ.ವಿ.; ಸಂ.7, ಪ.23]. ಕವಿ ಕನಕದಾಸನು ರಾಯನರಮನೆಯನ್ನು, ಸುಂದರವಾದ ಒಂದು ತಾವರೆ ಹೂವಿನ ಮಧ್ಯದಲ್ಲಿ ಆಕರ್ಷಕವಾಗಿ ಕಾಣಬರುತ್ತಿದ್ದ ಕರ್ಣಿಕೆಯಂತೆ ಶೋಭಿಸುತ್ತಿತ್ತು ಎಂದು ವರ್ಣಿಸಿರುತ್ತಾನೆ [ಮೋ.ತ., ಸಂ.3, ಪ.62]. ಕಲ್ಯಾಣಕೀರ್ತಿಯ ವರ್ಣನೆಯ ಪ್ರಕಾರ, ರಾಜನ ಅರಮನೆಯು ಮೂರು ಸುತ್ತುಗಳ ಒಳಕೋಟೆಗಳ ಮಧ್ಯದಲ್ಲಿ ನಿರ್ಮಿತವಾಗಿತ್ತು. ಆ ಕೋಟೆಗೋಡೆಗಳಲ್ಲಿ ಅಲ್ಲಲ್ಲಿ ಸೂಕ್ತರೀತಿಯಲ್ಲಿ ಹಾಗೂ ಅವಶ್ಯಕತೆಗಳಿಗನುಗುಣವಾಗಿ ಗೋಪುರದ್ವಾರಗಳು, ಹೆಬ್ಬಾಗಿಲುಗಳು, ಬಾಗಿಲುಗಳನ್ನೊದಗಿಸಲಾಗಿತ್ತು. ಅಲ್ಲಿ ಅನೇಕ ಕೊಠಡಿಗಳು ಕಾಣಬರುತ್ತಿದ್ದುವಲ್ಲದೆ, ಗಾಳಿ ಬೆಳಕುಗಳಿಗಾಗಿ ಸರಿಯಾದ ವ್ಯವಸ್ಥೆಗಳನ್ನೂ ಮಾಡಲಾಗಿತ್ತು. ಆ ಅರಮನೆಯ ಸಂಕೀರ್ಣದ ಮೇಲೆ ಮಿನುಗುವ ಕಲಶಗಳು ಹಾಗೂ ಹಾರಾಡುವ ಧ್ವಜ ಪತಾಕೆಗಳು ಕಂಗೊಳಿಸುತ್ತಿದ್ದುವು. ಹಾಗಾಗಿ, ಕವಿಯ ಮಾತಿನಲ್ಲಿ, ಆ ಅರಮನೆಯು ಸುರಲೋಕದಿಂದ ಭೂಮಿಗೆ ಇಳಿದು ಬಂದಿರುವ ವಿಮಾನದೋಪಾದಿಯಲ್ಲಿ ಶೋಭಿಸುತ್ತಿತ್ತು [ಜ್ಞಾ.ಚ., ಸಂ.6, ಪ.97, 98].

2. ಅಲಂಕಾರ: ಆ ಅರಮನೆಯಾದರೋ ಹೆಚ್ಚಿನ ಬಿನ್ನಾಣದಿಂದ ನಿರ್ಮಿತವಾದ ಹೊನ್ನ ಕುರುಮಾಡವಾಗಿದ್ದು, ಅದರ ಸುತ್ತಲೂ ಎತ್ತರದಲ್ಲಿ ಅನೇಕ ರಾಜಪತಾಕೆಗಳು ಅಲ್ಲಲ್ಲಿ ಹಾರಾಡುತ್ತಿದ್ದುವು [ದ.ಪು., ಸಂ.4, ಪ.32]. ಅರಮನೆ ಸೇರಿದಂತೆ ಅಲ್ಲಿಯ ಸಂಕೀರ್ಣದ ಕಟ್ಟಡಗಳು ಸಹಾ ಬಹು ಸುಂದರ ಹಾಗೂ ಉನ್ನತವಾದ ಕಟ್ಟಡಗಳಾಗಿದ್ದು ಮತ್ತು ಎತ್ತರದಲ್ಲಿ ಹಾರಾಡುತ್ತಿದ್ದ ರಾಜಧ್ವಜ, ಪತಾಕೆಗಳಿಂದಾಗಿ, ಅದು ಒಂದು ಕ್ರಮಾನುಸಾರವಾಗಿ ನಿರ್ಮಿಸಲಾದ ಬೃಹತ್ ಹಡಗವೇನೋ ಮತ್ತು ಅದನ್ನು ಮಹಾಪಟ್ಟಣವೆಂಬ ಸಮುದ್ರದ ಮಧ್ಯದಲ್ಲಿ ಲಂಗರು ಹಾಕಿ ನಿಲ್ಲಿಸಿರುವರೇನೋ ಎಂಬಂತೆ ಭಾಸವಾಗುತ್ತಿತ್ತು [ರಾ.ಚ., ಸಂ.5, ಪ.1]. ಆ ಉನ್ನತವಾದ ಸೌಧಗಳ ಶಿಖರಗಳನ್ನು ಕಣ್ಣುಕೋರೈಸುವಂತೆ ಹೊಳೆಯುತ್ತಿದ್ದ ಮಣಿಖಚಿತವಾದ ಕಲಶಗಳಿಂದಲೂ ಅಲಂಕರಿಸಲಾಗಿತ್ತು [ವಿ.ಚ., ಸಂ.1, ಪ.79]. ಮತ್ತು ಆ ಪುರದ ಮಧ್ಯದ ಮಣಿಮಯದ ಹೊಂಗೋಟೆಯೊಳಗೆ, ಸುರಗಿರಿಯ ಮೇಲೆ ಅತುಳ ಗಿರಿಗಳನ್ನು ಇರಿಸಿರುವಂದದಿ ಅಲ್ಲಿಯ ಕನಕಮಯವಾದ ಉಪ್ಪರಿಗೆ ಮನೆಗಳು ರಂಜಿಸುತ್ತಿದ್ದುವು ಮತ್ತು ಅಲ್ಲಿಯ ಪ್ರಮುಖವಾದ ಮಹಾಮಂದಿರದೊಳಗೆ ಮಹೀಪಾಲನು ಒಲವಿಂದಿರ್ದನು [ಜೀ.ಚ., ಸಂ.2, ಪ.39, 41]. ಆ ರಾಜಾಲಯದ ನಾಲ್ಕು ಮೂಲೆಗಳ ಮೇಲೆ ನಾಲ್ಕು ಮತ್ತು ಮಧ್ಯದಲ್ಲಿ ಒಂದರಂತೆ ಬಹು ಉನ್ನತವಾದ ಶಿಖರಗಳು ಶೋಭಿಸುತ್ತಿದ್ದುವು. ಅವುಗಳನ್ನು ರಾಜನಿಗೆ ಒಲಿದಿದ್ದ ಜಯಸಿರಿ, ಭಾಗ್ಯಸಿರಿ, ಶಾರದೆ, ಲಕ್ಷ್ಮಿ, ಧೈರ್ಯಲಕ್ಷ್ಮಿಯರ ಹೆಸರುಗಳಿಂದ ಸಂಭೋಧಿಸಲಾಗುತ್ತಿತ್ತು [ಕಂ.ವಿ., ಸಂ.7 ಪ.21-25].

3. ಬೀದಿಗಳು: ಅರಮನೆಯ ಸಂಕೀರ್ಣವನ್ನು ಕೇಂದ್ರವನ್ನಾಗಿರಿಸಿಕೊಂಡು, ನೇರವಾದ ಬೀದಿಗಳು ದಿಕ್ಕುದಿಕ್ಕುಗಳಲ್ಲಿ ಹರಡಿಕೊಂಡಿರುತ್ತಿದ್ದುವು. ಅವುಗಳನ್ನು ಸೋಮವೀದಿ, ಸೂರ್ಯವೀದಿಗಳೆಂದು ಕರೆಯುತ್ತಿದ್ದರು [ವಿ.ಚ., ಸಂ.1, ಪ.78]. ವಿರೂಪಾಕ್ಷ ಪಂಡಿತನ ಪ್ರಕಾರ ಆ ಮಹಾನಗರದಲ್ಲಿ ಸೂರ್ಯಬೀದಿಗಳು 120 ಮತ್ತು ಶಶಿಬೀದಿಗಳು 120 ಇದ್ದುವು. ರಾಜನ ಅರಮನೆಯ ಮುಂದಿನಿಂದ ಹೋಗುತ್ತಿದ್ದ ಮುಖ್ಯ ಬೀದಿಯೇ 'ರಾಜಬೀದಿ' [ಚ.ಪು., ಸಂ.11, ಪ.34 ಮತ್ತು ಕಂ.ವಿ., ಸಂ.2, ಪ.68]. ಅದನ್ನು 'ರಾಜಮಾರ್ಗ'ವೆಂದೂ ಕರೆಯಲಾಗುತ್ತಿತ್ತು [ಜೈ.ಭಾ., ಸಂ.7, ಪ.8]. ಪೂರ್ವ-ಪಶ್ಚಿಮವಾಗಿದ್ದ ಬೀದಿಗಳನ್ನು ಸೂರ್ಯಬೀದಿಗಳೆಂದೂ ಮತ್ತು ಉತ್ತರ-ದಕ್ಷಿಣವಾಗಿರುತ್ತಿದ್ದ ಬೀದಿಗಳನ್ನು ಶಶಿಬೀದಿಗಳೆಂದೂ ಕರೆಯುವುದು ರೂಢಿಯಲ್ಲಿತ್ತು.[12]

4. ರಾಜಾಲಯ ಸಂಕೀರ್ಣ: ರಾಜಾಲಯದ ಅಂತರಂತರದಲ್ಲಿ ಅನೇಕ ಹಾಗೂ ವಿವಿಧೋಪಯೋಗಿ ಸೌಧಗಳು ಸಾಲುಸಾಲಾಗಿ ಕಾಣಬರುತ್ತಿದ್ದವು [ಚ.ಪು., ಸಂ.11, ಪ.49]. ಅವುಗಳೆಂದರೆ, ದೊರೆಗಳ ನಿವಾಸಗಳು, ಅರಸು ಮಕ್ಕಳ ಗೃಹಗಳು, ವರಮಂತ್ರಿ ವರ್ಗದವರ ಆಲಯಗಳು, ಕರಣಿಕ ಜೋಯಿಸರ ವಾಸಸ್ಥಳಗಳು, ಮುಂತಾದವುಗಳು [ವಿ.ಚ., ಸಂ.1, ಪ.80]. ಅಲ್ಲದೆ ರಾಜನಿಗೆ ಸೇರಿದ ಗಜಶಾಲೆ, ಹಯಶಾಲೆ, ಆಯುಧಶಾಲೆ, ಸಕಲ ಭಂಡಾರದ ಶಾಲೆ ಮುಂತಾದವುಗಳು ಸಹಾ ಅರಮನೆಯ ಪರಿಸರದಲ್ಲಿಯೇ ನಿರ್ಮಾಣವಾಗಿರುತ್ತಿದ್ದುವು [ಚ.ಪು., ಸಂ.11, ಪ.47]. ಅಲ್ಲದೆ ಕರಣಶಾಲೆ (secretariat) ಎಂದು ಕರೆಯಲ್ಪಡುತ್ತಿದ್ದ, ರಾಜ್ಯಾಡಳಿತಕ್ಕೆ ಸಂಬಂಧಿಸಿದ ಕಾರ್ಯಾಲಯವು ಸಹಾ ಆ ಸಂಕೀರ್ಣದಲ್ಲಿಯೇ ಕಾಣಬರುತ್ತಿತ್ತು. ಅಲ್ಲಿ ಹದಿನಾರು ವಿಭಾಗಗಳ ಕರಣದವರು (ಕರಣಿಕರು), ತಮಗೆ ವಹಿಸಲಾದ ವಿವಿಧ ರಾಜ್ಯ ಕಾರ್ಯಗಳಲ್ಲಿ ನಿರತರಾಗಿರುತ್ತಿದ್ದರು [ಪ.ಪು., ಸಂ.4, ಪ.23, 24]. ಮತ್ತು ವಾಸ್ತುಶಾಸ್ತ್ರಜ್ಞರಿಂದ ಬಹು ಕುಶಲತೆಯಿಂದ ಹಾಗೂ ವಾಸ್ತುಶಾಸ್ತ್ರಕ್ಕನುಗುಣವಾಗಿ ನಿರ್ಮಿಸಲಾಗಿದ್ದ ಸ್ನಾನಗೃಹ, ಅಡುಗೆಶಾಲೆ, ಭೋಜನಶಾಲೆ, ಮಂತ್ರಾಲೋಚನೆಯ ಗೃಹ, ಶಯನಗೃಹ, ವಸ್ತ್ರಭಂಡಾರ,

ಓಲಗಶಾಲೆ, ನರ್ತನಶಾಲೆ, ಸಂಗೀತದ ಶಾಲೆ, ಖಜಾನೆ ಭಂಡಾರ ಗೃಹ, ತೈಲ, ತುಪ್ಪ ಇತರ ರಸಭಾಂಡಗಳ, ದವಸ ಧಾನ್ಯಗಳ ಉಗ್ರಾಣಗಳು ಮುಂತಾದ ಅವಶ್ಯವಿದ್ದ ಕಟ್ಟಡಗಳನ್ನೂ ಅಲ್ಲಿಯೇ ನೋಡಬಹುದಾಗಿತ್ತು [ಚ.ಪು., ಸಂ.5, ಪ.47-50]. ಮೇಲಿನ ಅಂಶಗಳನ್ನು ವಿವರಿಸುವ ಪದ್ಯ ಭಾಗಗಳು ಈ ಕೆಳಗಿನಂತಿವೆ.

....
ಪೇಳಲಚ್ಚರಿಯಾದುದರಮನೆಯದಾ ವಿಶ್ವಕರ್ಮನಿರ್ಮಿತದಂತಿರೆ ॥ 48 ॥
ಎಸೆದುವಲ್ಲಲ್ಲಿ ವಾಸ್ತುಕ್ರಮಂಬಿಡಿದು ರಂ
ಜಿಸುವ ಮಜ್ಜನಶಾಲೆಯುಂ ಸೂಪಶಾಲೆ ಶೋ
ಭಿಸುವ ಭೋಜನಶಾಲೆಯುಂ ಮಂತ್ರಶಾಲೆ ನರ್ತನಶಾಲೆ ವಸ್ತ್ರಶಾಲೆ
ಮಿಸುಪ ಹಯಶಾಲೆ ಗಜಶಾಲೆಯೋಲಗಶಾಲೆ
ಪೊಸಗೀತಶಾಲೆಯೊಪ್ಪುವ ಶಯನಶಾಲೆ ಭಾ
ವಿಸಲರಸುರೀವಿಗುಳ್ಳನಿತು ಶಾಲೆಗಳೊಪ್ಪಿದುವು ...... ॥ 49 ॥
ಸಕಲ ಕೋಶದ ಗೃಹಂಗಳ ತೈಲ ಘೃತಗುಡ
ಪ್ರಕರ ರಸಭಾಂಡದುಗ್ರಾಣದೊಳ್ಪನೆಗಳು
ಸುಕರ ಧಾನ್ಯದ ಕಣಜಗಳ ...... ॥ 50 ॥

ಮತ್ತು ಆ ಅರಮನೆಗೆ ಹೇಮಮಯವಾಗಿದ್ದ ದ್ವಾರಬಾಗಿಲುಗಳಿದ್ದುವು. ಅವುಗಳ ಮೇಲೆ ಬಹು ಎತ್ತರಕ್ಕೆ ಮಣಿಖಚಿತವಾದ ಉಪ್ಪರಿಗೆಗಳು (ಗೋಪುರಗಳು) ಕಾಣುತ್ತಿದ್ದುವು [ಚ.ಪು., ಸಂ.5, ಪ.52]. ಮೇಲಿನ ವಿಷಯಾಂಶಗಳನ್ನೇ ಸುಮರ್ಥಿಸುತ್ತಾ ಭಾಸ್ಕರ ಕವಿಯು ಹೇಳುವಂತೆ, ಪುರದ ಮಧ್ಯದ ವಜ್ರದ ಹೊಂಗೋಟೆಯ ಮಧ್ಯದಲ್ಲಿ ಕನಕಮಯವಾದ ಉಪ್ಪರಿಗೆಗಳಿಂದ ಕೂಡಿದ ಅರಮನೆಯ ಸಂಕೀರ್ಣವು ರಂಜಿಸುತ್ತಿತ್ತು. ಆ ಸಂಕೀರ್ಣದಲ್ಲಿ ಸಚಿವರ ಮನೆಗಳು, ಶಸ್ತ್ರಶಾಲೆ, ಹಯಶಾಲೆ, ಅರಸಿಯರ ಮಂದಿರಗಳು, ದೇವತಾರ್ಚನೆಯ ಮಂದಿರ, ದೊಡ್ಡ ಮಂಟಪ (ಓಲಗಶಾಲೆ), ಉದ್ಯಾನಗಳು ಮುಂತಾದವುಗಳು ರಂಜಿಸುತ್ತಿದ್ದುವು [ಜೀ.ಚ., ಸ.2, ಪ.39, 40]. ಆ ರಾಜಾಲಯವು ಒಂದರ ಮೇಲೊಂದರಂತೆ ಏಳು ಮಹಡಿಗಳಿಂದ ನಿರ್ಮಿತವಾದುದಾಗಿತ್ತು ('ಸಪ್ತಕಕ್ಷಾ ಸಮೇತ ... ಏಳು ನೆಲೆಗಳ ಮಾಡಂಗಳಿಂದಂ ....'). ಮತ್ತು ಅದು ಉನ್ನತವಾದ ಶಿಖರಗಳಿಂದ, ಅವುಗಳ ಮೇಲೆ ರತ್ನಖಚಿತವಾದ ಕಲಶಗಳಿಂದ ಅಲಂಕೃತವಾಗಿದ್ದುದಲ್ಲದೆ, ಆ ಅರಮನೆಯನ್ನು, ಅದರೊಳಗಿದ್ದ ಸಭಾಸದನವನ್ನು ಬಹು ವಿಧವಾಗಿ ಸಿಂಗರಿಸಲಾಗಿತ್ತು. ರಾಣಿಯರ ವಾಸದ ಮನೆಗಳೂ ಸಹಾ ಅದೇ ಸಂಕೀರ್ಣದಲ್ಲಿಯ ಮಹಡಿಗಳಲ್ಲಿ ವಿಶೇಷ ಅಲಂಕಾರಗಳಿಂದ ಶೋಭಿಸುತ್ತಿದ್ದುವು ('.... ರಾಣಿಯರ ಗೇಹಚಯಂ ಬಳಸಿರ್ದುದಂತದಂ .... ನೆಲೆ ಮಾಡಂಗಳ ಚೂಳಿಕಾಗ್ರಮುನಡರ್ದೇರಿರ್ದ ಕಾಂತಾಸ್ಯಮಂಡಳಮಂ ನೋಡಿ .....'). ಅಲ್ಲದೆ, ಆ 'ನರನಾಥನ ಚಾರುಗೇಹಂ ಬಳಸಿರ್ಕುಂ' ಹಯಶಾಲೆ, ಆನೆಶಾಲೆ, ಶಸ್ತ್ರಾಗಾರ ಮುಂತಾದವುಗಳು (ಧ.ಪು., ಸಂ.1, ವಚನ, ಪದ್ಯ 148-159). ಆ ಅರಮನೆಯ ಹಿಂದಿದ್ದ ಹಿತ್ತಲಿನಲ್ಲಿ ನೀರಿನ ಬಾವಿಗಳ ಏರ್ಪಾಡೂ ಇತ್ತು. ಮತ್ತು ಆ ರಾಜಭವನದೇಕ (ಏಕಾಂತ) ಪ್ರದೇಶದಲ್ಲಿ ಒಂದು ಪೂಜಾಗೃಹವೂ ಇತ್ತು (ದೇಹಾರ ಗೃಹಂ) [ಧ.ಪು., ಸಂ.1, ಪ.160, 163]. ಅದೇ ಸಂಕೀರ್ಣದಲ್ಲಿ ಮತ್ತೊಂದೆಡೆಯೊಳಗೆ, ನಾನಾ ರತ್ನಗಳನ್ನು ಶೇಖರಿಸಿಡಲಾಗಿದ್ದ 'ಬಂಡಾರಾಲಯಮಾ ನರಪ ನಿವಾಸದಲ್ಲಿ ರಂಜಿಸು'ತ್ತಿತ್ತು [ಧ.ಪು., ಸಂ.1, ಪ.64]. ನಂಜುಂಡ ಕವಿಯು ಮೇಲೆ ವಿವರಿಸಿದ ಉಪನಿವೇಶನಗಳಲ್ಲದೆ ಬೇರೆ ಕೆಲವು ಅಸ್ತಿತ್ವದಲ್ಲಿದ್ದ ವಿಷಯವನ್ನು ಹೇಳುತ್ತಾ ಅವುಗಳನ್ನು ನಾಟಕಶಾಲೆ, ಚಿತ್ರಶಾಲೆ, ಮಂತಣಶಾಲೆ, ವಿದ್ಯಾಮಂಟಪ, ಮೋಹನ ಮಂಟಪ, ಭದ್ರ ಮಂಟಪ, ಎತ್ತರವಾದ ಶಿಖರಗಳಿಂದ ಕೂಡಿದ ಉಪ್ಪರಿಗೆ ಮನೆಗಳು, ಪರಿಣಯ ಮಂಟಪ, ಹಜಾರ, ದಿವಾಣ ಚಾವಡಿ, ಮುಂತಾದ ಹೆಸರುಗಳಿಂದ ತಿಳಿಸಿರುತ್ತಾನೆ. ಅಲ್ಲದೆ ಅವುಗಳಲ್ಲಿ ಕಾಣಬರುತ್ತಿದ್ದ ವಿವಿಧ ಹಾಗೂ ವೈಭವಯುಕ್ತ ಅಲಂಕಾರಗಳನ್ನು ರಂಜನೀಯವಾಗಿ ವರ್ಣಿಸಿರುತ್ತಾನೆ [ರಾ.ಚ., ಸಂ.1, ಪ.1-5]. ಮೇಲಿನಂತೆ ವಿವಿಧೋಪಯೋಗಿ ಮಂಟಪ-ಶಾಲೆಗಳಲ್ಲದೆ, ವಿಶೇಷವಾದ ಅಲಂಕಾರಗಳಿಂದ ಕೂಡಿದ ಲಕ್ಷ್ಮೀವಿಲಾಸ, ದುರ್ಗಾಮಂಟಪ, ಶಾರದಾಮಂಟಪ, ಇಂದಿರಾಮಂದಿರ ಎಂಬ ದೇವಿಯರ ಹೆಸರಿನ ಮಂಟಪಗಳ ಇರುವಿಕೆಯನ್ನು ಕವಿಯು ಹೇಳಿರುತ್ತಾನೆ [ಕಂ.ವಿ., ಸಂ.7, ಪ.32-34]. ಮತ್ತು ಬಂಗಾರ ಚೌಕಿ, ಮಣಿಮಯ ಭವನ, ನಾಟಕ ಭವನಗಳಿದ್ದುದಾಗಿಯೂ ಹೇಳಿರುತ್ತಾನೆ [ಕಂ.ವಿ., ಸಂ.7, ಪ.37-38].

ರಾಜನ ಸ್ವಂತ ಉಪಯೋಗಕ್ಕಾಗಿ, ಅರಮನೆಯ ಸಂಕೀರ್ಣದಲ್ಲಿಯೇ ಭೋಜನ ಶಾಲೆ, ಪಾಕಗೃಹ, ರಾಜಭಂಡಾರ, ಉಗ್ರಾಣ, ಆಯುಧ ಶಾಲೆ, ಗರಡಿಮನೆ, ಅರಮನೆಯೊಳಗಡೆಯೇ ಹರಿಯುವ ನೀರಿನ ಕಾಲುವೆ, ವಿಧವಿಧವಾದ ಹೂವುಗಳಿಂದ ಕಂಗೊಳಿಸುತ್ತಿದ್ದ ಶೃಂಗಾರೋದ್ಯಾನ ಮುಂತಾದವುಗಳೂ ಕಾಣಬರುತ್ತಿದ್ದವು [ಕಂ.ವಿ., ಸಂ.7, ಪ.45-49].

5. ರಾಜೋದ್ಯಾನ: ಅವುಗಳಲ್ಲದೆ, ರಾಜಸೌಧಾವಳಿಗಳ ಹತ್ತಿರವೇ 'ಸರ್ವ ವಿನಿಯೋಗದವರಿಪ್ಪ ಚಾವಡಿಗಳೂ' ಇದ್ದುವು ಮತ್ತು ರಾಜ ಹಾಗೂ ಆತನ ಪರಿವಾರದವರ ವಿನೋದ ವಿಹಾರಗಳಿಗಾಗಿ ರಾಜೋದ್ಯಾನವೂ ಸನಿಹದಲ್ಲಿಯೇ ಇರುತ್ತಿತ್ತು. ಅಲ್ಲಿ ತರತರದ ಗಿಡ, ಮರ, ಬಳ್ಳಿಗಳನ್ನು ಬೆಳೆಯಿಸಿರುತ್ತಿದ್ದರಲ್ಲದೆ, ರತ್ನಗಳಿಂದ ಅಲಂಕರಿಸಲಾಗಿದ್ದ ಜಗಲಿಗಳು, ಮಂಟಪಗಳು, ಕೃತಕವಾದ ಗುಡ್ಡ, ದಿಣ್ಣೆ, ನೀರಿನಿಂದ ತುಂಬಿದ ಕೊಳಗಳು, ಕಾಲುವೆಗಳು ಮುಂತಾದವುಗಳನ್ನೂ ಏರ್ಪಡಿಸಿರುತ್ತಿದ್ದರು. ಅವು ಕೆಳಗಿನ ಪದ್ಯಭಾಗದಿಂದ ವೇದ್ಯವಾಗುತ್ತವೆ.

'.... ಸರ್ವ ವಿನಿಯೋಗದವರಿಪ್ಪ ಚಾವಡಿಗಳು
ಪ್ರಕಟತರತರುಲತೆಗಳುಂ ರನ್ನ ಜಗಲಿರ
ಮ್ಯಕಸರಿಸಿ ಕೃತಕಾದ್ರಿಗಳ ತರತರದೊಳಿರ
ಲ್ಕಕಳಂಕ ಕೇಳೀವನಂ ಮೆರೆದುದ .....' [ಚ.ಪು., ಸಂ.5, ಪ.50].

ಕವಿ ಕನಕದಾಸ, ರಾಜೋದ್ಯಾನವನ್ನು ಕುರಿತು ಹೆಚ್ಚು ಕುತೂಹಲಕಾರಿ ವಿವರಗಳನ್ನು ಒದಗಿಸಿರುತ್ತಾನೆ. ಮೇಲಿನಂತೆಯೇ, ಅರಮನೆ ಪ್ರದೇಶಕ್ಕೆ ಹೊಂದಿಕೊಂಡು ಒಂದು ರಾಜೋದ್ಯಾನವೂ ಇದ್ದು, ಅಲ್ಲಿ ಸುಂದರವಾದ ಗಿಡ, ಮರ, ಬಳ್ಳಿಗಳನ್ನು ಬೆಳೆಯಿಸಿದ್ದರಲ್ಲದೆ ಅನೇಕ ಕ್ರೀಡಾಕೊಳ, ಹೊಂಡಗಳೂ ನಿರ್ಮಿತವಾಗಿದ್ದುವು. ರಾಜ ದಂಪತಿಗಳು, ಅವರ ಪರಿವಾರದ ದಂಪತಿ ಜೋಡಿಗಳು, ಬೇರೆ ಬೇರೆಯಾಗಿ, ಏಕಕಾಲದಲ್ಲಿ ಬೇರೆ ಬೇರೆ ಕೊಳಗಳಲ್ಲಿ ಜಲಕ್ರೀಡೆಯಲ್ಲಿ ತೊಡಗಿ ಅವರವರ ಇಚ್ಛಾನುಸಾರ ಮನರಂಜನೆ ಪಡೆಯಲು ಅವುಗಳು ವ್ಯವಸ್ಥಿತವಾಗಿ ರಚಿತವಾಗಿದ್ದುವು [ಮೋ.ತ., ಸಂ.14, ಪ.38]. ಅವುಗಳೂ ಸಹ ಚಂದ್ರಕಾಂತ ಶಿಲೆಗಳಿಂದ ನಿರ್ಮಿತವಾಗಿದ್ದುವು. ಅವುಗಳನ್ನು ಆಗಾಗ್ಗೆ ಶುದ್ಧವಾದ ನೀರಿನಿಂದ ತುಂಬಿಸಲು ಮತ್ತು ನೀರಿನ ಆಳವನ್ನು ನಿಯಂತ್ರಿಸಲು ಅನುಕೂಲವಾಗುವಂತೆ ಅವಶ್ಯವಿದ್ದ ದೊಡ್ಡ ಗಾಲಿಗಳ ತೂಂಬುಗಳನ್ನು (ಪೆರ್‌ಗಾಲಿ ತೂಂಬು) ಅಳವಡಿಸಿದ್ದರು. ಅವುಗಳನ್ನು ಊಳಿಗದ ಹೆಂಗಸರೇ ನಿಭಾಯಿಸುತ್ತಿದ್ದರು. ಅದರಿಂದಾಗಿ ಆ ಕ್ರೀಡಾ ನಿರತ ಹೆಂಗಳೆಯರು ತಮಗೆ ಅನುಕೂಲವಾದ ಪ್ರಮಾಣದವರೆಗೆ ನೀರನ್ನು ತುಂಬಿಸಿಕೊಂಡ ನಂತರ ನೀರಾಟದಲ್ಲಿ ತೊಡಗುತ್ತಿದ್ದರು. ನೀರು ಬೀಳಲು ಏರ್ಪಡಿಸಿದ್ದ ಕಲ್ಲಿನ ಹರಿನಾಳಿಗೆಗಳು ಕೂಡ ಆನೆಯ ಸೊಂಡೆಯಾಕಾರಗಳಲ್ಲಿದ್ದು ನಿರ್ಮಾಪಕರ ಸುಂದರ ಭಾವನೆಗಳಿಗೆ ನಿದರ್ಶನಗಳಾಗಿದ್ದುವು. ಮತ್ತು ಆ ಪರಿಸರದಲ್ಲಿಯೇ ಒಂದು ಸುಂದರವಾಗಿ ಅಲಂಕರಿಸಲ್ಪಟ್ಟ ಮಂಟಪವೂ ಕಾಣಬರುತ್ತಿತ್ತು. ಆ ಮಂಟಪದ ಸ್ತಂಭಗಳಿಗೆ ಮಾನವ ಪ್ರಮಾಣದ, ನೃತ್ಯದ ವಿವಿಧ ಭಾವ ಭಂಗಿಗಳನ್ನು ಪ್ರತಿನಿಧಿಸುವಂತೆ ನಿಂತಿದ್ದ ನವಯೌವನದ ನೃತ್ಯಗಾರ್ತಿಯರ ಪುತ್ಥಳಿಗಳನ್ನು ಜೋಡಿಸಿ, ಉತ್ತಮ ಕಲಾರಸಿಕತೆಯನ್ನು ಪ್ರದರ್ಶಿಸಲಾಗಿತ್ತು. ಮತ್ತು ಆ ಮಂಟಪವನ್ನು ಬಣ್ಣಬಣ್ಣಗಳ ವಸ್ತ್ರಗಳಿಂದ, ಹೂವಿನಹಾರ, ಗೊಂಡೆಗಳಿಂದ ವಿಶೇಷವಾದ ಅಭಿರುಚಿಯಿಂದ ಅಲಂಕರಿಸಲಾಗಿತ್ತು. ಅಷ್ಟಲ್ಲದೆ, ಹತ್ತಿರದಲ್ಲಿಯೇ ವಿಹಾರಾರ್ಥಿಗಳ ಮನರಂಜನೆಗಾಗಿ ಅನೇಕ ಉಯ್ಯಾಲೆಗಳನ್ನೂ ಒದಗಿಸಿದ್ದರು. ಅವುಗಳಲ್ಲಿ ಕೆಲವು ಯಾಂತ್ರಿಕ ಕುಶಲತೆಯಿಂದ ತಯಾರಿಸಲಾಗಿದ್ದ 'ರಾಟಾಳದ ಉಯ್ಯಾಲೆ'ಗಳಾಗಿದ್ದುವು [ಮೋ.ತ., ಸಂ.14, ಪ.28, 32, 35, 36].

6. ರಾಣೀವಾಸದ ಭಾಗಗಳು: ಅರಮನೆಯ ಸಂಕೀರ್ಣದಲ್ಲಿ, ರಾಣಿಯರಿಗಾಗಿಯೇ 120 ಗೃಹಗಳಿದ್ದುದಾಗಿ ಕವಿಯೊಬ್ಬ ಹೇಳಿರುತ್ತಾನೆ [ಪ್ರೌ.ಕಾ., ಸಂ.21, ಪ.9]. ರಾಜಾಲಯಗಳಿಗೆ ಹೊಂದಿಕೊಂಡು ವಿವಿಧೋಪಯೋಗಿ ಕಟ್ಟಡಗಳನ್ನು ನಿರ್ಮಿಸಿದ್ದ ಪ್ರಕಾರವೇ ರಾಣೀವಾಸದವರ ಉಪಯೋಗಕ್ಕಾಗಿ ಪ್ರತ್ಯೇಕವಾಗಿ ಬೇರೆ ಬೇರೆ ಭಾಗಗಳಿದ್ದುದನ್ನು ಕವಿಗಳು ತಿಳಿಸಿರುತ್ತಾರೆ. ಎಂದರೆ, ರಾಣಿಯರ ಉಪಯೋಗಕ್ಕಾಗಿ, ಪ್ರತ್ಯೇಕವಾದ ಓಲಗಶಾಲೆ, ಮಂತಣಶಾಲೆ, ನಾಟಕಶಾಲೆ, ಬಿನದಶಾಲೆ, ಚಂದ್ರಶಾಲೆ, ಸುಚಿತ್ರಶಾಲೆ, ಮೋಹನ ಮಂಟಪ, ಲಕ್ಷ್ಮೀ ಮಂಟಪ, ಮಲಗುವ ಮನೆ ಮುಂತಾದವುಗಳಿದ್ದುವು [ರಾ.ಚ., ಸಂ.33, ಪ.41-43]. ಅವುಗಳನ್ನು ವಿವರಿಸಿದ ನಂಜುಡ ಕವಿಯು, ಪ್ರೇಮ ಜ್ವಾಲೆಯಿಂದ ವಿಹ್ವಲಳಾದ ರಾಣಿಯೊಬ್ಬಳ ತಾಳುಮೆಗೆಟ್ಟ ಸ್ಥಿತಿಯನ್ನು ವಿವರಿಸುವ ಸಂದರ್ಭದಲ್ಲಿ ಆ ರಾಣಿಯ ಉಪಯೋಗಕ್ಕೆಂದೇ ನಿರ್ಮಿಸಲಾಗಿದ್ದ ಇನ್ನೂ ಹಲವು ಕಟ್ಟಡಗಳನ್ನು ತಿಳಿಸಿರುತ್ತಾನೆ. ಹೆಸರುಗಳೇ ಸೂಚಿಸುವಂತೆ, ಅವುಗಳ ಸ್ವರೂಪ, ಉಪಯೋಗ ವೇದ್ಯವಾಗುತ್ತವೆ. ಅವುಗಳೆಂದರೆ, ಶಯ್ಯಾಗೃಹ, ಮಾಳಿಗೆಯ ಮೇಲಿದ್ದ ಚಂದ್ರಶಾಲೆ, ಚಿತ್ರಶಾಲೆ, ನಾಟಕಶಾಲೆ, ಓಲಗಸಾಲೆ, ವಿನೋದಶಾಲೆ, ಶೈತ್ಯಶಾಲೆ, ಭದ್ರಮಂಟಪ, ಲತಾ ಮಂಟಪ, ಮೋಹನ ಮಂಟಪ, ಮೇಲ್ಮಾಳಿಗೆಯಮನೆ ಮುಂತಾದವುಗಳು [ರಾ.ಚ., ಸಂ.24, ಪ.166; ಸಂ.25, ಪ.23; ಸಂ.26, ಪ.67-73].

ಕವಿ ಲಕ್ಷ್ಮೀಶನು ಸಹಾ, ಮದನತಾಪದಿಂದ ಪೀಡಿತೆಯಾಗಿದ್ದ ರಾಜಕುಮಾರಿಯೋರ್ವಳು ನೆಮ್ಮದಿಯನ್ನರಸುತ್ತಾ ರಾಣೀವಾಸದ ವಿವಿಧ ಮಂಟಪಗಳಿಗೆ, ಸ್ಥಳಗಳಿಗೆ ಹೋಗುತ್ತಿದ್ದ ಸಂದರ್ಭವನ್ನು ವಿವರಿಸುವಾಗ ಅವುಗಳ ಹೆಸರುಗಳನ್ನು ಈ ರೀತಿ ಹೇಳುತ್ತಾನೆ. ಅವಳು ಮೊದಲಿಗೆ ಒಂದು ತಂಪಾದ ಮಂಟಪಕ್ಕೆ ಹೋಗುತ್ತಾಳೆ. ಅಲ್ಲಿ ಜಲಜಂತ್ರಗಳ ಸಹಾಯದಿಂದ ನೀರು ತುಂತುರು ತುಂತುರಾಗಿ ಮೇಲಿನಿಂದ ಬೀಳುತ್ತಿರುವಂತೆ, ಮತ್ತು ಅದೇ ಸಮಯದಲ್ಲಿ ತಂಗಾಳಿಯು ತೀಡಿ ಬೀಸುತ್ತಿರುವಂತೆ ಏರ್ಪಾಡುಗಳಿದ್ದುವು. ಅವಳು ಸಂದರ್ಶಿಸಿದ ಇತರ ಸ್ಥಳಗಳೆಂದರೆ, ತಳಿರ ಹಾಸಿಗೆ ಇದ್ದ ತಾಣ, ಶಶಿಕಾಂತ ಶಿಲೆಯಿಂದ ನಿರ್ಮಿತವಾಗಿದ್ದ ವೇದಿಕೆ, ಲತೆಗಳಿಂದ ಮುಚ್ಚಲ್ಪಟ್ಟಿದ್ದ ಮಂಟಪ, ಹರಡಿದ್ದ ಮರಳು ಮತ್ತು ಮರಗಳ

ನೆರಳಿನಿಂದಾಗಿ ತಂಪಾಗಿದ್ದ ಕೊಳದ ದಂಡೆ ಹಾಗೂ ತುದಿಯ ಉಪ್ಪರಿಗೆಯ ಮೇಲಿದ್ದ ಚಂದ್ರಶಾಲೆ. ಕೊನೆಯಲ್ಲಿ ಅವಳು ಅರಮನೆಯ ಮೇಲಿದ್ದ ಏಳನೆಯ ಮಹಡಿಗೆ ಹೋಗಿ ತನ್ನ ಪ್ರೇಮಿಯು ಬರುವ ಮಾರ್ಗವನ್ನು ನಿರೀಕ್ಷಿಸುತ್ತಾ ನಿಲ್ಲುತ್ತಾಳೆ [ಜೈ.ಭಾ., ಸಂ.30, ಪ.36, 41].

ರಾಣಿಯರ ಉಪಯೋಗಕ್ಕಾಗಿಯೇ ಅವರ ಅಂತಃಪುರದೊಳಗೆ ಅಥವಾ ಅದಕ್ಕೆ ಹೊಂದಿಕೊಂಡು ನಿರ್ಮಿತವಾಗಿದ್ದ ಉಪಭಾಗಗಳು (auxiliary structures), ಎಂದರೆ, ಅವುಗಳಲ್ಲಿ ಮುಖ್ಯವಾದ ಸ್ನಾನದ ಮನೆ, ಶೃಂಗಾರ ಶಾಲೆ, ಪೂಜಾಗೃಹ, ಸೂತಿಕಾ ನಿಲಯ, ಶಯನ ಗೃಹಗಳನ್ನು ಕುರಿತು ವಿವರಗಳು ಲಭಿಸುತ್ತವೆ. ಈಗ ಆ ವಿವರಗಳನ್ನು ಒಂದೊಂದಾಗಿ ತಿಳಿಯೋಣ.

ರಾಣಿಯೋರ್ವಳ ಸ್ನಾನಗೃಹವು ಚಿನ್ನಮಯವಾಗಿದ್ದು (ಜಾಂಬೂನದ), ಅದರ ಮಧ್ಯದಲ್ಲಿ (ನಟ್ಟನಡುವೆ) ನುಣುಪಾದ ಮತ್ತು ಹೊಳೆಯುತ್ತಿದ್ದ ಅಮೃತಶಿಲೆಯ ಬಂಡೆಗಲ್ಲುಗಳನ್ನುಪಯೋಗಿಸಿ ನಿರ್ಮಿಸಲಾಗಿದ್ದ ಚೌಕಾಕಾರದ ತೊಟ್ಟಿಯಿತ್ತು ಮತ್ತು ಸ್ನಾನದ ಸಮಯದಲ್ಲಿ ಉಪಯೋಗಿಸುವುದಕ್ಕಾಗಿ ಬಂಗಾರದಿಂದ ಮಾಡಿದ ನೀರಿನ ಪಾತ್ರೆಗಳನ್ನು, ಕುಂಭಗಳನ್ನು ಒದಗಿಸಿಟ್ಟಿದ್ದರು [ಧ.ಪು., ಸಂ.6, ವಚನ ಮತ್ತು ಪ.101].

ಇನ್ನು ರಾಣಿಯ ಶೃಂಗಾರ ಗೃಹವು (ಶೃಂಗಾರಾಗರ) ಸನಿಹದಲ್ಲಿಯೇ ಇದ್ದಿರಬೇಕು. ಏಕೆಂದರೆ, ರಾಣಿಯೋರ್ವಳು ಸ್ನಾನಮಾಡಿದ ನಂತರ ಶೃಂಗಾರಾಗರಕ್ಕೆ ತೆರಳಿ, ಅಲ್ಲಿ ಉಡುಗೆ ತೊಡುಗೆ, ಶೃಂಗಾರ ಸಾಧನೆಗಳಿಂದ ಅಲಂಕರಿಸಿಕೊಳ್ಳುವುದರಲ್ಲಿ ನಿರತಳಾಗುತ್ತಾಳೆ [ದ.ಪು., ಸಂ.6, ವಚನ, ಪ.105-113]. ತದನಂತರ ಆ ರಾಣಿಯೇ ಪೂಜಾಗೃಹಕ್ಕೂ ಹೋಗಿ ಪೂಜಾ ಕೈಂಕರ್ಯಗಳನ್ನು ನೆರವೇರಿಸುತ್ತಾಳೆ [ಧ.ಪು., ಸಂ.6, ವಚನ, ಪ.115]. ಅವೂ ಕೂಡ ರಾಣಿಯ ಉಪಯೋಗಕ್ಕಾಗಿ ಹತ್ತಿರದಲ್ಲಿಯೇ ನಿರ್ಮಾಣವಾಗಿದ್ದುವೆಂದು ತಿಳಿಯಬೇಕಾಗುತ್ತದೆ.

ಅನಂತರ ಆ ರಾಣಿಯು ಊಟ ಮಾಡಿ, ಮಲಗುವ ಮನೆಗೆ ಹೋಗುತ್ತಾಳೆ [ಧ.ಪು., ಸಂ.6, ವಚನ, ಪ.115 ರ ನಂತರ]. ಮಲಗುವ ಮನೆಯ ವಿವರಗಳನ್ನು ಮುಂದೆ ಬೇರೆಡೆ ತಿಳಿಸಲಾಗಿದೆ.

ರಾಣಿಯರ ಅಂತಃಪುರಕ್ಕೆ ಹೊಂದಿಕೊಂಡು ಇದ್ದ ಇನ್ನೊಂದು ಪ್ರತ್ಯೇಕ ಭಾಗವೇ ಸೂತಿಕಾನಿಲಯ. ಅಲ್ಲಿ ಗರ್ಭಿಣಿಯರಾಗಿದ್ದ ರಾಣಿಯರಿಗೆ, ಪ್ರಸವ ಸಮಯದಲ್ಲಿ ಅವಶ್ಯಕವಿರುತ್ತಿದ್ದ ಎಲ್ಲಾ ವ್ಯವಸ್ಥೆಗಳೂ ಇರುತ್ತಿದ್ದವು [ಧ.ಪು., ಸಂ.7, ವಚನ, ಪ.16ರ ನಂತರ].

7. ರಾಜಮಾತೆ ಅರಮನೆ: ರಾಜನ ತಾಯಿಗಾಗಿಯೇ ಪ್ರತ್ಯೇಕವಾದ ಕಕ್ಷ ಅಥವಾ ಮನೆ ಇದ್ದ ವಿಷಯವೂ ಒಂದು ಸಂದರ್ಭದಲ್ಲಿ ತಿಳಿದುಬರುತ್ತದೆ. ರಾಜನು, ಒಂದು ಪಾರಾಯಣದ ದಿನ ತನ್ನ ರಾಣಿಯರನ್ನು ತನ್ನ ತಾಯಿಯ ಮನೆಗೆ ಹೋಗೆಂದು ಹೇಳುತ್ತಾನೆ. ಆಗ 'ಅನುರಾಗದಿಂದ (ಆ) ಹೆಣ್ಣುಗಳು (ರಾಣಿಯರು) ತಮ್ಮತ್ತೆಯ ಮನೆಗೈದರು'; ನೃಪನು, ಅತ್ತ ಮುನಿಗಳನ್ನು 'ಬೀಳ್ಕೊಟ್ಟು ವನಿತೆಯರೊಡಗೂಡಿ ಬರುತ್ತಿದ್ದನಮ್ಮನ ಮನೆಗಾಗ' ಎಂಬ ಪದ್ಯ ಭಾಗಗಳಿಂದ ಮೇಲಿನ ವಿಷಯವು ವೇದ್ಯವಾಗುತ್ತದೆ [ಭ.ವೈ., ಸಂ.17, ಪ.27-44].

8. ರಾಣಿಯ ಉದ್ಯಾನ: ರಾಣಿಯರಿಗಾಗಿಯೇ ಮತ್ತೊಂದು ಸೌಲಭ್ಯವನ್ನು ಒದಗಿಸಲಾಗಿರುತ್ತಿತ್ತು. ಅವರ ವಾಸದ ಮನೆಯ ಹಿತ್ತಲಿಗೆ ಹೊಂದಿಕೊಂಡು 'ಪ್ರಮೋದವನ'ವೆಂದು ಕರೆಯಲಾಗುತ್ತಿದ್ದ ಒಂದು ಉದ್ಯಾನವನವಿರುತ್ತಿತ್ತು. ಅಲ್ಲಿ ವಿಧವಿಧವಾದ ಹೂ, ಹಣ್ಣುಗಳನ್ನು ಕೊಡುತ್ತಿದ್ದ ಗಿಡ, ಮರ, ಬಳ್ಳಿಗಳನ್ನು ಬೆಳೆಯಿಸಿರುತ್ತಿದ್ದರು. ಮತ್ತು ಲತಾಮಂಟಪಗಳು, ಜಲಕ್ರೀಡೆಗಾಗಿ ಉಪಯುಕ್ತವಿದ್ದ ನೀರಿನ ಕೊಳಗಳೂ ಅಲ್ಲಿ ಕಾಣಬರುತ್ತಿದ್ದವು [ರಾ.ಚ., ಸಂ.32, ಪ.23-29]. ಅದೇ ಉದ್ಯಾನದಲ್ಲಿ ಒಂದು ದೊಡ್ಡ ಮಾವಿನ ಮರವನ್ನು ಬೆಳೆಯಿಸಲಾಗಿತ್ತು. ಆಗಾಗ, ರಾಣಿಯು ತನ್ನ ಪರಿವಾರದವರನ್ನು ಕೂಡಿ ಕೊಂಡು ಅಲ್ಲಿಗೆ ಹೋಗಿ, ಆ ಮರದ ನೆರಳಲ್ಲಿ ವಿಶ್ರಮಿಸುತ್ತಿದ್ದಳು. ಅಲ್ಲದೆ, ಅವರ ಮನರಂಜನೆಗಾಗಿ ಆ ಉದ್ಯಾನದಲ್ಲಿ ವಿಧವಿಧವಾದ ಪಕ್ಷಿಗಳನ್ನು, ಮೃಗಗಳನ್ನೂ ಸಾಕಿದ್ದರು [ರಾ.ಚ., ಸಂ.7, ಪ.56-59].

9. ಭೂಗತ ಅರಮನೆ: ಅಸಾಧಾರಣ ಸಂದರ್ಭಗಳಲ್ಲಿ ಭೂಗತ ಅರಮನೆಗಳನ್ನು ನಿರ್ಮಿಸುವ ಪದ್ಧತಿಯೂ ಇದ್ದುದಾಗಿ ತಿಳಿದು ಬರುತ್ತದೆ. ಒಮ್ಮೆ, ಕಥಾ ಸಂದರ್ಭಕ್ಕನುಗುಣವಾಗಿ, ರಾಜಕುಮಾರನೊಬ್ಬನು ಗೋಪ್ಯವಾದ ಜೀವನವನ್ನು ನಡೆಯಿಸಬೇಕಾಗಿ ಬರುತ್ತದೆ. ಆಗ ಸಹಾಯಕ್ಕೆ ನಿಂತ ಗುಣವಂತ ಮಂತ್ರಿಯು, ಆ ರಾಜಕುಮಾರನಿಗಾಗಿ ಒಂದು ಭೂಗತ ಅರಮನೆಯನ್ನೇ ಸೂಕ್ತ ನಿವೇಶನದಲ್ಲಿ ನಿರ್ಮಿಸುತ್ತಾನೆ. ಆಗಲೂ ಅದರೊಳಗೆ, ರಾಜಕುಮಾರನಿಗೆ ಯೋಗ್ಯವಾದ ರೀತಿಯಲ್ಲಿ ಏರ್ಪಾಡುಗಳನ್ನು ಕಲ್ಪಿಸಲಾಗಿತ್ತು. ಎಂದರೆ ಆ ಗೂಢ ರಾಜಾಲಯದೊಳಗೆ ಪ್ರಮುಖವಾದ ಒಂದು ಮಂಟಪ, ಮೊಗಸಾಲೆ, ವಿದ್ಯಾಭವನ, ಮಲಗುವ ಮನೆ, ಮಜ್ಜನಗೃಹ, ಭೋಜನಾಲಯ ಮುಂತಾದವುಗಳನ್ನೂ ಒದಗಿಸಲಾಗಿತ್ತು [ರಾ.ಚ., ಸಂ.37, ಪ.44-51]. ಮತ್ತು ಆ ಭೂಗತ ರಾಜಗೃಹದ ಸನಿಹದಲ್ಲಿಯೇ ರಾಜಕುಮಾರನ ಸಹಾಯಕರು ಹಾಗೂ ವೀರಭಟರಿಗಾಗಿಯೂ ಅವಶ್ಯವಿದ್ದ ಭವನಗಳನ್ನು ನಿರ್ಮಿಸಲಾಗಿತ್ತು. ರಾಜಕುಮಾರನ ಅನುಕೂಲಕ್ಕಾಗಿ ಅವಶ್ಯ ವಸ್ತುಗಳನ್ನು, ಸಲಕರಣೆಗಳನ್ನೂ ಅಲ್ಲಿ ಒದಗಿಸಿದ್ದರು. ಅವನ ಶಯ್ಯಾಗೃಹದಲ್ಲಿಯೇ ಐದು ತರಹೆಯ ಮಂಚಗಳನ್ನು ಅಳವಡಿಸಿದ್ದರು. ಯಥಾಪ್ರಕಾರ, ಅಲಂಕಾರಕ್ಕಾಗಿ ಸಕಲವಿಧದ ರತ್ನಗಳನ್ನುಪಯೋಗಿಸಿ ರಾರಾಜಿಸುವಂತೆ ನಿರ್ವಹಿಸಲಾಗಿತ್ತು [ರಾ.ಚ., ಸಂ.36, ಪ.44-51].

10. ಉಪ್ಪರಿಗೆ ಮನೆಗಳು: ಅರಮನೆ ಮತ್ತು ಸಂಕೀರ್ಣದ ಇತರ ಮನೆಗಳು ಉಪ್ಪರಿಗೆಗಳಿಂದ ಕೂಡಿದವುಗಳಾಗಿದ್ದುವೆಂಬುದು ಮುಂದಿನ ಪದ್ಯ ಭಾಗಗಳಿಂದ ವೇದ್ಯವಾಗುತ್ತದೆ. ಒಂದು ಸಂದರ್ಭದಲ್ಲಿ, ರಾಣಿಯೋರ್ವಳು ರಾಜನನ್ನು ಭೋಜನಕ್ಕೆ ಆಮಂತ್ರಿಸುವಾಗ '.... ಭೋಜನಕ್ಕಿನ್ನು ವೇಳೆ ವೇಗ್ಗಳಿಸಿದೆ ದೇವ ಮೇಲಣ ನೆಲೆಯ ಮಾಳಿಗೆಗೆ ಚಿತ್ತೈಸೆಂಬಿನ್ನವಿಸಿದಳು' [ಭ.ವೈ., ಸಂ.9, ಪ.84]. ಮತ್ತು ರಾಜನು ಭೋಜನ ಮಾಡಿದ ನಂತರ ಇನ್ನೂ ಮೇಲಿನ ಉಪ್ಪರಿಗೆ ಮನೆಗೆ ಹೋಗುತ್ತಾನೆ, '.... ಆರೋಗಿಸಿದ ಮೇಲ್ನೆಲೆಯಿಂದ ಮೇಲಕೆ ಸೇರಿದ ಸೋಪಾನವಿಡಿದು ಆರೋಹಿಸಿದನಾ ಹೂವಿನುಪ್ಪರಿಗೆಗೆ ನಾರಿಯ ಕೈಲಾಗುವಿಡಿದು ......' [ಭ.ವೈ., ಸಂ.10, ಪ.26]. ಆ ಹೂವಿನ ಉಪ್ಪರಿಗೆಯ ಮನೆಯಾದರೋ ರಾಜನಿಗಾಗಿ ನಿರ್ಮಿಸಲಾಗಿದ್ದ ಗೂಢವಾದ ಶಯನಮಂದಿರವಾಗಿತ್ತು ಮತ್ತು ಅಲ್ಲಿ ಶಕುನಿ ಮಂಚದ ವ್ಯವಸ್ಥೆಯೂ ಇತ್ತು [ಭ.ವೈ., ಸಂ.10, ಪ.27]. ಕವಿ ಕನಕದಾಸನೂ ಸಹಾ ಅಂತಹ ವ್ಯವಸ್ಥೆಯನ್ನು ದೃಢೀಕರಿಸುವಾಗ, ರಾಜಕುಮಾರಿಯೋರ್ವಳು '.... ಚಂದ್ರನ ನೋಡಪೋಪಂತೆ ನೆಲೆನೆಲೆಗಡರ್ದಳಾ ಕುವರಿ ....' ಎಂದು ವರ್ಣಿಸಿರುತ್ತಾನೆ. ಎಂದರೆ, ಆ ನಿವೇಶನಗಳು, ಬಹು ಉನ್ನತವಾದ ಉಪ್ಪರಿಗೆಗಳಿಂದ ಕೂಡಿದವುಗಳಾಗಿದ್ದುವು [ಮೋ.ತ., ಸಂ.27, ಪ.30]. ಅಂತಹ ಮಹಡಿಗಳ ನಿವೇಶನಗಳಲ್ಲಿ, ರಾಜಕುವರಿ, ಮಂತ್ರಿಯ ಮಗಳು ಮುಂತಾದ ಸಖಿಯರು, ಸೇವಕಿಯರೊಡಗೂಡಿ ಬಗೆ ಬಗೆಯ ವಿನೋದಾವಳಿಗಳಲ್ಲಿ, ಆಟಗಳಲ್ಲಿ ಸಮಯ ಕಳೆಯುತ್ತಿದ್ದರು ಎಂದೂ ವಿವರಿಸಲಾಗಿದೆ [ಮೋ.ತ., ಸಂ.27, ಪ.31, 32]. ಮತ್ತು ಆ ಮಹಡಿಗಳ ಮೇಲೆ ಉನ್ನತವಾದ ಬುರುಜುಗಳೂ ಅಥವಾ ಗೋಪುರ ಶಿಖರಗಳೂ, ಅವುಗಳೊಳಗೆ ಪ್ರಾಂಗಣ ಅಥವಾ ಸಭಾಂಗಣಗಳಿದ್ದು, ಹೆಂಗಳೆಯರಿಗೆ ಸಮಯ ಕಳೆಯಲು ಅನುಕೂಲವಾಗಿದ್ದುವು [ಮೋ.ತ., ಸಂ.28, ಪ.7, 28]. ಕೆಲವು ಬಾರಿ ರಾಜನೂ ಸಹಾ ಅಂತಹ ಉಪ್ಪರಿಗೆ ಮನೆಗಳಲ್ಲಿದ್ದ ಸಭಾಂಗಣಗಳಿಗೆ ಹೋಗಿ ರಾಣಿವಾಸದವರ ಜೊತೆಯಲ್ಲಿ ವಿನೋದಾವಳಿಗಳಲ್ಲಿ ಭಾಗವಹಿಸುತ್ತಿದ್ದನು. ಈ ಅಂಶವನ್ನು ವಿವರಿಸುವ ಪದ್ಯಭಾಗಗಳು ಇಂತಿವೆ. '.... ಮಹೀನಾಥನ್ .... ಇಂದು ಕಾಂತ ಶಿಲಾಮಯವಾದ .... ಅಗ್ರಸೌಧ ಶಿಖರಾಗ್ರದೊಳ್ .... ಮೇಳದ ವಿಳಾಸಿನೀಕಳಾಪದೊಡಗೂಡಿ ಲೀಲೆಯಿಂದೋಲಗಂಗೊಟ್ಟಿರ್ದು ....' [ಧ.ಪು., ಸಂ.5, ವಚನ] ಮತ್ತು '.... ಹುಣ್ಣಿಮೆಯಲ್ಲಿ ಚಂದ್ರಮುಖಿಯರ್ (ರಾಣೀವಾಸದವರು) ನೆಲೆಮಾಡದ ಚೂಳಿಕಾಗ್ರದೊಳ್ ....' ಎಂದು ಮುಂತಾಗಿ [ಧ.ಪು., ಸಂ.4, ಪ.34]. ಇಲ್ಲಿ, ಹಂಪೆಯಲ್ಲಿ ಈಗಲೂ ಕಾಣಬರುತ್ತಿರುವ 'ಕಮಲಮಹಲು', ಅದರ ಸನಿಹದಲ್ಲಿಯೇ ಇರುವ ನಾಲ್ಕು ಹಾಗೂ ಮೂರು ಹಂತಗಳಿಂದ ಕೂಡಿರುವ 'ಕಾವಲು ಗೋಪುರ' ಮತ್ತು ಚಂದ್ರಗಿರಿಯಲ್ಲಿರುವ 'ರಾಜಾಮಹಲು', 'ರಾಣೀ ಮಹಲು'ಗಳನ್ನು ಸ್ಮರಿಸಿಕೊಳ್ಳಬಹುದು. ಇಲ್ಲಿ 'ಧರ್ಮನಾಥ ಪುರಾಣ'ದಲ್ಲಿರುವ ವರ್ಣನೆಯನ್ನೂ ಗಮನಿಸಬಹುದು. ಅದರ ಪ್ರಕಾರ, ಆ ರಾಜಾಲಯದ ಕಟ್ಟಡಗಳು, ಒಂದರ ಮೇಲೆ ಒಂದರಂತೆ ಪೇರಿಸಿಟ್ಟ ಪಾತ್ರೆಗಳಂತೆ, ಏಳು ಹಂತಗಳಲ್ಲಿ ಬಹು ವಿಧ ಅಲಂಕಾರ ಸಹಿತವಾಗಿ ನಿರ್ಮಿತವಾದವುಗಳಾಗಿದ್ದುವು. ಅದನ್ನು ವಿವರಿಸುವ ಪದ್ಯಭಾಗಗವು ಹೀಗಿದೆ: '.... ಅಡಕಿಲ್ಗೊಂಡೊಪ್ಪು ವೇಳುಂ ನೆಲೆಗಳ ಮಣಿ ಮಾಡಂಗಳಿಂದಂ ರಾಜಾಲಯಮುಖಿಳನುತಂ ಸಪ್ತಕಕ್ಷಾ ಸಮೇತಂ ....' [ಧ.ಪು., ಸಂ.1 ಪ.154].

ಅದೇ ಕವಿಯು ಮುಂದುವರಿದು, ಕುತೂಹಲಕಾರಿ ವಿಷಯವನ್ನು ಬಹಿರಂಗ ಪಡಿಸಿರುತ್ತಾನೆ. ಎಂದರೆ, ರಾಜರು ಮತ್ತು ಕೆಲವು ಬಾರಿ ರಾಜರಾಣಿಯರು ಜೊತೆಯಾಗಿ ಆ ಉಪ್ಪರಿಗೆ ನಿವೇಶದಲ್ಲಿದ್ದು ಸಭಾಮಂಟಪಗಳಲ್ಲಿ ಒಡ್ಡೋಲಗಗಳನ್ನು ಸಕಲ ಪರಿವಾರ ಸಮೇತವಾಗಿ ಜರುಗಿಸುತ್ತಿದ್ದರು. ಆ ವಿಷಯವನ್ನು ವಿವರಿಸುವ ಪಠ್ಯ ಭಾಗಗಳು ಹೀಗಿವೆ: '.... ಮಹಿನಾಥನೊಂದು ದಿವಸಂ ಮೇಲಣ ನೆಲೆಯ ಚೂಳಿಕಾಗ್ರದೊಳಶೇಷ ಪರಿವಾರಂ ಬೆರಸುವೊಡ್ಡೋಲಗಂಗೊಟ್ಟಿರ್ಪ ಸಮಯದೊಳ್ ....' [ಧ.ಪು., ಸಂ.4, ವಚನ ಪ.53ರ ನಂತರ]; ಮತ್ತು '.... ಸರ್ವತೋಭದ್ರಮೆಂಬೇಳನೆಯ ನೆಲೆಯ ಮಣಿ ಮಾಡದ ಮಧ್ಯವೇದಿಕೆಯ ಮೇಲಣ ಬಿತ್ತರಂಬೆತ್ತ ಮುತ್ತಿನ ಮಂಡಪದಲ್ಲಿ ಪರಿಹಾಸಕರ, ನರ್ಮ ಸಚಿವರ, ಕಬ್ಬಿಗರ, ಕಳಾವತಿಯರ .... ಅಪರಿಮಿತವಾದ ವಿಳಾಸವತಿಯರೋಲಗದೊಳ್ ಶೃಂಗಾರವತಿ ದೇವಿ ಕುಳ್ಳಿರ್ದು ಪಟ್ಟಗದ್ದುಗೆಯರ್ಧದೊಳಾಕೆಯನೌಂಕಿಕುಳ್ಳಿರ್ದು .... ಮಹಾರಾಜಂ ..... [ಧ.ಪು., ಸಂ.14, ವಚನ, ಪ.37ರ ನಂತರ].

11. ವಾಸ್ತು ಶಾಸ್ತ್ರಜ್ಞ: ಮೇಲೆ ವಿವರಿಸಿದ ರಾಜನ ಅರಮನೆ ಮತ್ತು ಅದರ ಸಂಕೀರ್ಣದಲ್ಲಿ ಕಾಣಬರುತ್ತಿದ್ದ ವಿವಿಧೋಪಯೋಗಿ ಕಟ್ಟಡಗಳು, ಪರಿಣತರಾದ ವಾಸ್ತುಶಾಸ್ತ್ರಜ್ಞ ಶಿಲ್ಪಿಗಳಿಂದ, ರಾಜನ ಆಣತಿಯ ಮೇರೆಗೆ, ನಿರ್ಮಾಣವಾಗಿರುತ್ತಿದ್ದುವು. ಅವು ವಾಸ್ತು ಕ್ರಮಕ್ಕನುಗುಣವಾಗಿ, 'ಬಹುರಚನೆಯನೊಯ್ಯಾರದಿಂ', ಮತ್ತು 'ನಾನಾಕುಶಲ' ದಿಂದೊಪ್ಪುತ್ತಿದ್ದುವು [ಚ.ಪು., ಸಂ.5, ಪ.47, 49, 54]. ಶಿಲ್ಪಿಗಳ ಆ ಸಾಧನೆಗಳಿಗಾಗಿ ಉಡುಗೆ ತೊಡಿಗೆಗಳನ್ನು, ಮೆಚ್ಚುಗೆಯನ್ನು ವ್ಯಕ್ತಪಡಿಸುವುದರೊಂದಿಗೆ, ಕೊಡುವುದು ಒಂದು ಸತ್ಸಂಪ್ರದಾಯವಾಗಿತ್ತು. ಕವಿ ಬಾಹುಬಲಿ ಪಂಡಿತನೂ ಸಹ, ರಾಜಾಜ್ಞೆಗನುಸಾರವಾಗಿ ವಾಸ್ತುಶಾಸ್ತ್ರ ಪರಿಣತರು ('ಕಲ್ಪಜ ಶಿಲ್ಪಿಗಳು'–ದೇವಲೋಕದ ಶಿಲ್ಪಿಗಳು) ಅರಮನೆಯನ್ನು, ಅದರ ಮುಂದಣ ಮಹಾಸಭಾಮಂಟಪವನ್ನು ಅಲಂಕಾರ ಶಾಸ್ತ್ರಕ್ಕನುಸಾರವಾಗಿ ನಿರ್ಮಿಸಿದ್ದರೆಂದು ತಿಳಿಸುತ್ತಾನೆ [ಧ.ಪು., ಸಂ.9, ಪ.27ರ ನಂತರದ ವಚನ ಭಾಗ].

12. ಓಲಗಶಾಲೆ: ರಾಜಾಲಯ ಮತ್ತು ಅದರ ಸಂಕೀರ್ಣದಲ್ಲಿ ಕಾಣಬರುತ್ತಿದ್ದ ನಿವೇಶನಗಳೆಲ್ಲವುಗಳಿಗಿಂತ ಬಹು ಪ್ರಮುಖವಾದ ಹಾಗೂ ಪ್ರಧಾನ ಸ್ಥಾನವು ರಾಜನ ಒಡ್ಡೋಲಗ ಮಂಟಪ ಅಥವಾ ಆಸ್ಥಾನ ಮಂಟಪಕ್ಕೆ ಇತ್ತು. ಆಗಲೇ ತಿಳಿಸಿರುವಂತೆ, ಕವಿಗಳು ಅದನ್ನು ಬೇರೆ ಬೇರೆ

ಹೆಸರುಗಳಿಂದ ಸಂದರ್ಭೋಚಿತವಾಗಿ ಕರೆದಿರುತ್ತಾರೆ [ಧ.ಪು., ಸಂ.6, ವಚನ ಮತ್ತು ಸಂ.9, ವಚನ ಪ.27 ರ ನಂತರ]. ಆ ಓಲಗಶಾಲೆಯು ಅರಮನೆಯ ಮುಂಭಾಗದ ಹಜಾರದಲ್ಲಿದ್ದು ಅದನ್ನು 'ದಿವಾನ ಚಾವಡಿ'ಯೆಂದೂ ಕರೆಯಲಾಗುತ್ತಿತ್ತು. ಅದರಿಂದಾಚೆಗೆ ಮುಂದೆ ಅರಮನೆಯ ಪ್ರಮುಖದ್ವಾರ ಅಥವಾ ಹೆಬ್ಬಾಗಿಲಿದ್ದು, ಅದು ಸದಾ ಚಟುವಟಿಕೆಗಳ ತಾಣವಾಗಿತ್ತು [ರಾ.ಚ., ಸಂ.5, ಪ.5, 6, ಮತ್ತು ಧ.ಪು., ಸಂ.9, ವಚನ ಪ.27 ರ ನಂತರ].

ಆ ಮಹಾಸ್ಥಾನ ಮಂಟಪವು ಬಹು ವಿಶಾಲವಾದುದಾಗಿತ್ತು. ಅದು ಹತ್ತುಸಾವಿರ ಕಂಭಗಳ ಮಂಟಪವಾಗಿತ್ತೆಂದು ಕವಿತಾ ಶೈಲಿಯಲ್ಲಿ ಹೇಳಲಾಗಿದೆ [ಜೈ.ಭಾ., ಸಂ.17, ಪ.22]. ಕೆಲವು ಬಾರಿ ರಾಜಸಭೆಯನ್ನು ಸೂರ್ಯಾಸ್ತ ನಂತರವೂ ಕರೆಯಲಾಗುತ್ತಿತ್ತು. ಅದಕ್ಕಾಗಿ ಸೂಕ್ತ ಬೆಳಕಿನ ಏರ್ಪಾಟುಗಳನ್ನು ಮಾಡಲಾಗಿರುತ್ತಿತ್ತು. ಅಲ್ಲಿ ಸೇರುತ್ತಿದ್ದ ರಾಜಸಭೆಗಳಲ್ಲಿ, ರಾಜ್ಯಕ್ಕೆ ಸಂಬಂಧಿಸಿದ ಮಹತ್ವದ, ಪ್ರಮುಖವಾದ ಹಾಗೂ ವಿವಿಧ ವಿಷಯಗಳು ಪರಿಶೀಲನೆಗೊಳಗಾಗುತ್ತಿದ್ದುವು. ಹಾಗಾಗಿ ಅಂತಹ ರಾಜಸಭೆಗಳಲ್ಲಿ ಪ್ರಧಾನರು, ಮಂತ್ರಿಗಳು, ಸರದಾರರು ಮುಂತಾದ ಮುಖ್ಯ ಅಧಿಕಾರಿಗಳಲ್ಲದೆ ಸಾಮಂತರಾಜರು, ಮಾಂಡಲೀಕರು, ರಾಜಕುಮಾರರು, ಗಣ್ಯನಾಗರಿಕರು, ಶಾಸ್ತ್ರಕೋವಿದರು, ವಿದ್ವಾಂಸರು, ಪುರೋಹಿತರು, ಧಾರ್ಮಿಕ ಆಚಾರ್ಯರು, ಹಲವು ಬಾರಿ ಪರ ರಾಜ್ಯಗಳಿಂದ ಬಂದ ರಾಜ ಪ್ರತಿನಿಧಿಗಳು, ರಾಯಭಾರಿಗಳು, ರಾಜನ ಊಳಿಗದವರು, ಕಲಾವಿದರು ಮುಂತಾದವರು ಉಪಸ್ಥಿತರಾಗಿರುತ್ತಿದ್ದರು [ಧ.ಪು., ಸಂ.6, ಪ.1-15; ಚ.ಪು., ಸಂ.7 ಪ.6-18; ಮೊ.ತ., ಸಂ.20, ಪ.31-40 ಮುಂತಾಗಿ]. ಆ ಕಾರಣಗಳಿಂದಾಗಿ ಆ ಓಲಗಶಾಲೆಗೆ ಹೆಚ್ಚಿನ ಪ್ರಾಧಾನ್ಯತೆ ಇತ್ತು. ಆದುದರಿಂದ ಅಲ್ಲಿಯ ವ್ಯವಸ್ಥೆಗಳಿಗೆ, ಅಲಂಕರಣಗಳಿಗೆ ಹೆಚ್ಚಿನ ಗಮನಕೊಟ್ಟು ನಿರ್ವಹಿಸುತ್ತಿದ್ದರು. ಹಾಗಾಗಿ, ರಾಜನ ಓಲಗಶಾಲೆಯು 'ಸೌಭಾಗ್ಯ ಲಕ್ಷ್ಮಿಯ ದಿವ್ಯ ಸದನವೋ, ಮಧುನೃಪನ ನಿಳಯವೋ, ಶಾರದೆಯ ಮಂಟಪವೋ' ಎಂಬಂತೆ ಮೆರೆಯುತ್ತಿತ್ತು ಎಂದು ಗೋವಿಂದ ವೈದ್ಯನು ವರ್ಣಿಸಿರುತ್ತಾನೆ [ಕಂ.ವಿ., ಸಂ.8, ಪ.6].

ಇಲ್ಲಿ, ಕವಿ ಲಕ್ಷ್ಮೀಶನು ತನ್ನ ಗ್ರಂಥವಾದ 'ಜೈಮಿನಿ ಭಾರತ'ದಲ್ಲಿ ನಿರೂಪಿಸಿರುವ ವಿವರಣೆಗಳನ್ನೂ ಪರಿಗಣಿಸಬಹುದು. ಅವು, ರಾಜನ ಓಲಗ ಮಂಟಪವನ್ನು ಕುರಿತು ಬಹು ಚಿತ್ತಾಕರ್ಷಕ, ಕುತೂಹಲಕಾರಿ ಹಾಗೂ ಸ್ವಾರಸ್ಯಕರ ಚಿತ್ರವನ್ನು ನಮ್ಮ ಮುಂದಿರಿಸುವುದರೊಂದಿಗೆ ವಿಸ್ಮಯವನ್ನುಂಟುಮಾಡುತ್ತವೆ; ಸೋಜಿಗವನ್ನುಂಟುಮಾಡುತ್ತವೆ. ಏಕೆಂದರೆ ಅಲ್ಲಿಯ ವ್ಯವಸ್ಥೆಗಳು ಅಷ್ಟು ವಿನೂತನವಾಗಿದ್ದುವು. ಆದುದರಿಂದ ಇಲ್ಲಿ ಆ ವ್ಯವಸ್ಥೆಗಳ ವಿವರಗಳನ್ನು ಸಂಕ್ಷಿಪ್ತವಾಗಿಯಾದರೂ ತಿಳಿಯುವುದು ಅವಶ್ಯಕ [ಜೈ.ಭಾ., ಸಂ.17, ಪ.22-27].

ಈಗಾಗಲೇ ತಿಳಿಸಿರುವಂತೆ, ಆ ರಾಜಸಭಾಂಗಣವು ಹತ್ತು ಸಾವಿರ ಕಂಭಗಳಿಂದ ಕೂಡಿದ ಒಂದು ಬಹು ವಿಶಾಲವಾದ ಆಸ್ಥಾನ ಮಂಟಪವಾಗಿತ್ತು (ಇಲ್ಲಿ ಹಂಪೆಯಲ್ಲಿ ಈಗಾಲೂ ಕಾಣ ಬರುವ ನೂರು ಕಂಭಗಳನ್ನು ಹೊಂದಿದ್ದ ವಿಶಾಲ ಸಭಾಮಂಟಪ (audience hall), ಸ್ಮಾರಕ ಕಟ್ಟಡ(monument)ವನ್ನು ಜ್ಞಾಪಿಸಿಕೊಳ್ಳಬಹುದು). ಅದರ ನೆಲಗಟ್ಟನ್ನು ಅಮೃತಶಿಲೆಯಿಂದ ನಿರ್ಮಿಸಲಾಗಿತ್ತು; ಜಗುಲಿಯನ್ನು ಮರಕತಗಳಿಂದ, ಗೋಡೆಗಳನ್ನು ನೀಲರತ್ನಗಳಿಂದ, ಕಂಬಗಳನ್ನು ವಜ್ರಗಳಿಂದ, ಮದನ ಕೈಗಳನ್ನು (ನಾಗಂದಿಗೆಗಳನ್ನು) ಹೊಳೆಯುವ ವೈಢೂರ್ಯಗಳಿಂದ, ಬೋದಿಗೆಗಳನ್ನು ಗೋಮೇದಿಕ ರತ್ನಗಳಿಂದ, ತೊಲೆಗಳನ್ನು ಪುಷ್ಯರಾಗಗಳಿಂದ, ಲೋವೆಗಳನ್ನು ಮಾಣಿಕ್ಯಗಳಿಂದ ಅಲಂಕರಿಸಲಾಗಿತ್ತು. ಮತ್ತು ಬಂಗಾರದ ತಗಡಿನಿಂದ ಹೊದಿಸಲಾಗಿದ್ದ ಆ ಚಾವಡಿ ಮಂಟಪದ ನಾಲ್ದೆಸೆಗಳಲ್ಲಿ, ಅಲ್ಲಲ್ಲಿಗೆ ಮುತ್ತುಗಳ ಗೊಂಡೆ, ಗೊಂಚಲು, ಗುಚ್ಛಗಳಿಂದ ಶೃಂಗರಿಸಿದ್ದರು. ಅಲ್ಲದೆ ಅಲ್ಲಲ್ಲಿ ಹವಳಗಳಿಂದ ಅಲಂಕಾರ ಹೊಂದಿದ್ದ ಪುತ್ಥಳಿಗಳನ್ನೂ ಅಳವಡಿಸಿದ್ದರು [ಜೈ.ಭಾ., ಸಂ.17, ಪ.23]. ಇಲ್ಲಿ ಕವಿತಾ ಸಹಜ ಉತ್ಪ್ರೇಕ್ಷೆಗಳಿಗೆ ಗಮನಕೊಡದೆ, ಆ ರಾಜಸಭಾಮಂಟಪವು ಒಂದು ವಿಶಾಲ ಹಾಗೂ ರಮಣೀಯವಾಗಿ ಅಲಂಕರಿಸಲ್ಪಟ್ಟ ಸಭಾಂಗಣವು ಆದಾಗಿತ್ತೆಂದು ಮಾತ್ರ ಗ್ರಹಿಸಬೇಕು.

ಅಷ್ಟಲ್ಲದೆ, ಆ ಓಲಗಮಂಟಪದಲ್ಲಿ, ಸಜೀವವಾಗಿವೆಯೇನೋ ಎಂಬಂತೆ ಕಾಣಬರುತ್ತಿದ್ದ ನವರತ್ನ ಖಚಿತವಾದ ಪುತ್ಥಳಿಗಳನ್ನು ಅಲ್ಲಲ್ಲಿಗೆ, ಬಹುಶಃ ಗೋಡೆಗಳಿಗೆ, ಕಂಭಗಳಿಗೆ ಹೊಂದಿಕೊಂಡಂತೆ ನಿಲ್ಲಿಸಿ ಪ್ರದರ್ಶಿಸಿದ್ದರು. ಅವುಗಳೋ ವಿವಿಧ ಕ್ರಿಯೆ, ಭಾವ, ಭಂಗಿ, ಅಭಿನಯಗಳನ್ನು ನಿರೂಪಿಸುವ ಆಕರ್ಷಕ ಸ್ತ್ರೀರೂಪದ ಕಲಾಕೃತಿಗಳಾಗಿದ್ದವು. ಈ ವಿವರಗಳನ್ನು ದೃಢಪಡಿಸುವ ಪದ್ಯಭಾಗವು ಈ ಕೆಳಗಿನಂತಿದೆ.

....

ಸಜ್ಜುಕಂ ಮುಡಿವ, ತಿಲಕಮನಿಡುವ, ಮೊಗಮುರಿವ,
ಕಜ್ಜುಳಂ ಬರೆವ, ಕನ್ನಡಿಯ ನಿಟ್ಟಿಪ, ಪಾಡು
ವುಜ್ಜುಗದ, ನರ್ತನದ, ಕೊಪುಗಳ, ವೀಣಾದಿ, ವಾದ್ಯಮಂ, ಬಿತ್ತರಿಸುವ
ಕಜ್ಜದ ಪಲವು ಕಲೆಗಳಂ ತೋರುವಭಿನವದ
ಸಜ್ಜೀವಮಾಗಿರ್ದ ಪುತ್ಥಳಿಗಳವಯವದ
ಪಜ್ಜಳಿಪ, ನವರತ್ನ ಭೂಷಣದ ಕಾಂತಿಗೆಳ್ಕಣ್ಗೆಸೆದುವಾ ರಾಜಸಭೆಯೊಳು [ಜೈ.ಭಾ., ಸಂ.17, ಪ.24].

ಅದೇ ಸಭಾಭವನದಲ್ಲಿ, ಆ ಪುತ್ಥಳಿಗಳು ಮಾತ್ರವಲ್ಲದೆ ಬಹು ಕುಶಲತೆಯಿಂದ ತಯಾರಿಸಲಾದ (ಬಹುಶಃ ಎರಕಹೊಯ್ದು ತಯಾರಿಸಲಾದ) ವಿವಿಧ ಪಕ್ಷಿಗಳ ಮತ್ತು ಮೃಗಗಳ ಪ್ರತಿಕೃತಿಗಳೂ ಅಲ್ಲಲ್ಲಿ ಕಾಣಬರುತ್ತಿದ್ದವು [ಜೈ.ಭಾ., ಸಂ.17, ಪ.25]. ಅವುಗಳು ಮಾತ್ರವಲ್ಲದೆ, ಬಹು ಮನೋಹರವಾಗಿದ್ದ ನಾನಾದೇಶಗಳ (ಪ್ರಪಂಚಗಳ) ಚಿತ್ರಪಟಗಳೂ ಅಲ್ಲಿ ಪ್ರದರ್ಶಿತವಾಗಿದ್ದುವು – 'ವಿರಿಂಚಿ ಸೃಷ್ಟಿಯೊಳುಳ್ಳ ಮೂಜಗದ ಪ್ರಪಂಚಗಳ ಚಿತ್ರಪತ್ರಂಗಳೆಸೆದಿರ್ದುವಾ ಸಭೆಯೊಳ್ಮನೋಹರಮೆನೆ' [ಜೈ.ಭಾ., ಸಂ.17, ಪ.25].

ಮತ್ತು ಅದೇ ಸಭಾಮಂಟಪದಲ್ಲಿ ಅವಶ್ಯವಿದ್ದ ಬೆಳಕಿನ ವ್ಯವಸ್ಥೆಯನ್ನೂ ಬಹು ಜಾಣ್ಮೆ ಹಾಗೂ ವೈಚಾರಿಕತೆಯಿಂದ ಏರ್ಪಡಿಸಲಾಗಿತ್ತು. ಆ ಉದ್ದೇಶವನ್ನು ಸಾಧಿಸುವುದಕ್ಕಾಗಿ, ನಾನಾ ಜಾತಿಯ ಮತ್ತು ವಿವಿಧ ಬಣ್ಣ, ಹೊಳಪು ಅಥವಾ ಪ್ರಕಾಶಗಳನ್ನು ಹೊಂದಿದ್ದ ವಜ್ರಗಳು ಮುಂತಾದ ಅಮೂಲ್ಯ ಮಣಿರತ್ನಗಳನ್ನು ಉಪಯೋಗಿಸಿ, ಜೋಡಿಸಿ ವ್ಯವಸ್ಥೆಗೊಳಿಸಲಾಗಿತ್ತು. ಆ ವ್ಯವಸ್ಥೆಯು ಎಷ್ಟು ಪರಿಣಾಮಕಾರಿಯಾಗಿತ್ತೆಂದರೆ, ಅಲ್ಲಿ ಏರ್ಪಡಿಸಲಾಗಿದ್ದ ಆಹ್ಲಾದಕರವಾದ ಬೆಳಕಿನಲ್ಲಿ ಹಗಲಾವುದು ರಾತ್ರಿಯಾವುದೆಂಬ ಭೇದವೇ ತಿಳಿಯದಂತಿತ್ತು – '.... ದಿವಾರಾತ್ರಿಯುಂಟೆಂಬ ಕಾಲಭೇದವನರಿಯದಾ ಮಹಾಸಭೆ ....' [ಜೈ.ಭಾ., ಸಂ.17, ಪ.26].

ಮತ್ತೂ ಹೆಚ್ಚಿನ ವ್ಯವಸ್ಥೆಯೆಂದರೆ, ಆ ಸಭಾಗೃಹದಲ್ಲಿ ವಿವಿಧ ಸುವಾಸಿತ ದ್ರವ್ಯಗಳನ್ನೂ, ಕರ್ಪೂರ ತೈಲದ ದೀಪಗಳನ್ನೂ ಉಪಯೋಗಿಸುತ್ತಿದ್ದರು. ಹೀಗೆ ಸಕಲ ಸೌಭಾಗ್ಯಗಳಿಂದ ಒಪ್ಪುತ್ತಿದ್ದ ಆ ಮಹಾಸಭಾ ಭವನವು ಇಂದ್ರನ ಓಲಗ ಮಂಟಪದ ಸೌಭಾಗ್ಯಕ್ಕಿಂತ ಎಂಟು ಮಡಿ ಹೆಚ್ಚಾಗಿತ್ತೆಂದು ಕವಿಯು ವರ್ಣಿಸಿರುತ್ತಾನೆ [ಜೈ.ಭಾ., ಸಂ.17, ಪ.26, 27]. ಮೇಲಿನ ವಿವರಗಳನ್ನೆಲ್ಲಾ ಪರಿಗಣಿಸಿ, ಆ ಒಡ್ಡೋಲಗ ಶಾಲೆಯು ಒಂದು ಕುತೂಹಲಕಾರಿಯಾದ ಕಲಾಪ್ರದರ್ಶನ ಶಾಲೆ(museum)ಯ ಹಾಗೆ, ಕ್ರಿ.ಶ. 14ನೇ ಶತಮಾನದಲ್ಲಿಯೇ ವ್ಯವಸ್ಥೆಗೊಂಡು ರಂಜಿಸುತ್ತಿತ್ತೆಂದು ಹೇಳಬಹುದಲ್ಲವೇ?

ರಾಜನ ಒಡ್ಡೋಲಗ ಭವನದಲ್ಲಿ, ಎತ್ತರದ ವೇದಿಕೆಯ ಮೇಲೆ, ರಾಜನಿಗಾಗಿ ಬಂಗಾರದ ಸಿಂಹಾಸನವನ್ನು ಏರ್ಪಡಿಸಿರುತ್ತಿದ್ದರು. ಅದರ ಅಕ್ಕಪಕ್ಕಗಳಲ್ಲಿ, ಮಂತ್ರಿಗಳು, ಮಾಂಡಲೀಕರು ಮುಂತಾದ ಸಭಾಸದರಿಗಾಗಿ ಉಚಿತಗದ್ದುಗೆಗಳನ್ನು ವ್ಯವಸ್ಥೆಗೊಳಿಸಿರುತ್ತಿದ್ದರು [ಚ.ಪು., ಸಂ.7, ಪ.7-10].

ಬಹು ಮುಖ್ಯವಾದ, ಬೃಹತ್ ಪ್ರಮಾಣದಲ್ಲಿ ಆಚರಿಸಬೇಕಾಗಿದ್ದ ಹಬ್ಬಗಳ, ಸಾರ್ವಜನಿಕ ಸಮಾರಂಭಗಳ ವೈಭವಯುಕ್ತ ಆಚರಣೆಯ ಸಂದರ್ಭಗಳಲ್ಲಿ, ಅರಮನೆಯ ಸಂಕೀರ್ಣದ ಮುಂದೆ ಇರುತ್ತಿದ್ದ ವಿಶಾಲ ಪ್ರಾಂಗಣವನ್ನುಪಯೋಗಿಸುವುದು ಪರಿಪಾಠವಾಗಿತ್ತು. ಕವಿ ರತ್ನಾಕರವರ್ಣಿಯ ವಿವರಣೆಯ ಪ್ರಕಾರ, ಮಹಾನವಮಿ ಹಬ್ಬದ ಆಚರಣೆಯನ್ನು ಅರಮನೆಯ ಮುಂದಿನ 'ಕಡೆಯ ಹಜಾರದೊಳ್, ವಾರಣವೈರಿ ಪೀಠವನೇರಿ (ಸಿಂಹಾಸನವನ್ನೇರಿ) ಓಲಗಗೊಟ್ಟು' ನಡೆಯಿಸುತ್ತಿದ್ದನು [ಭ.ವೈ., ಸಂ.18, ಪ.17].

13. ರಾಣಿಯ ಓಲಗಶಾಲೆ: ಪಟ್ಟದರಾಣಿಯರಿಗಾಗಿ ಪ್ರತ್ಯೇಕವಾದ ಓಲಗಶಾಲೆಗಳಿರುತ್ತಿದ್ದುವೆಂದು ಕವಿಗಳು ಹೇಳಿರುತ್ತಾರೆ. ಅಲ್ಲಿ ರಾಣಿಯರು ನಡೆಯಿಸುತ್ತಿದ್ದ ಒಡ್ಡೋಲಗಗಳಲ್ಲಿ ಸ್ತ್ರೀಯರು ಮಾತ್ರವೇ ಭಾಗವಹಿಸುತ್ತಿದ್ದರೆಂದೂ ತಿಳಿದು ಬರುತ್ತದೆ. ಅಂತಹ ಸಮಯಗಳಲ್ಲಿ, ರಾಣಿಯು ಓಲಗಸಭೆಯ ಮಧ್ಯದಲ್ಲಿ ಸಿಂಹಾಸನದಲ್ಲಿ ಆಸೀನಳಾಗಿರುತ್ತಿದ್ದರೆ, ಇತರ 'ಭೂಪಾಳಕರರಸಿಯರ ನಿಕರಮುಂ, ಕ್ಷತ್ರಿಯ ಕುಮಾರಿಯರ ಮೊತ್ತಮುಂ ಸೇವಾ ವಿನೋದ ನಿಮಿತ್ತಂ ಬಂದು ಸುತ್ತಲು ಕಿಕ್ಕಿರಿಗಿರಿದು' ಕುಳ್ಳಿರುತ್ತಿದ್ದರೆಂದು ವರ್ಣಿಸಲಾಗಿದೆ [ಧ.ಪು., ವಚನ ಪ.52]. ಇನ್ನೊಂದೆಡೆ ಆ ವಿಷಯವನ್ನೇ ಹೇಳುತ್ತಾ ರಾಣಿಯ ಓಲಗಶಾಲೆಯು ಮೇಗಣ ನೆಲೆಯ ಉಪ್ಪರಿಗೆಯ ಮನೆ ಭಾಗದಲ್ಲಿದ್ದುದಾಗಿ ಕವಿಯು ತಿಳಿಸುತ್ತಾನೆ. ಒಂದು ದಿನ, ರಾಜನು ತನ್ನ ದಿನ ನಿತ್ಯದ ಕಾರ್ಯಗಳನ್ನು ಮುಗಿಸಿ ಅರಮನೆಗೆ ಹಿಂತಿರುಗಿ ಬಂದು, ರಾಜಾಂಗಣದಲ್ಲಿ ಅರಸು ಮಕ್ಕಳನ್ನು ಬೀಳ್ಕೊಟ್ಟನಂತರ, 'ಮೇಗಣ ನೆಲೆಯ ಉಪ್ಪರಿಗೆಯ ಕಳಕಳರವಮಂ ಕೇಳ್ದು ಪಟ್ಟಮಾದೇವಿಯೋಲಗ ಶಾಲೆಗಭಿಮುಖನಾಗಿ ನರನಾಥಂ ಬಂದು ಪೊಕ್ಕಂ ನಿಜಸತಿಯ ಸಭಾಗೇಹಂ' ಎಂದು ವಿವರಿಸಿರುವ ಪಠ್ಯಭಾಗದಿಂದ ವೇದ್ಯವಾಗುತ್ತದೆ [ಧ.ಪು., ಸಂ.2, ವಚನ, ಪ.69].

14. ಶಯನ ಗೃಹಗಳು: ಈಗ ರಾಜ, ರಾಣಿಯರ ಶಯನಗೃಹಗಳ ನಿರ್ಮಾಣದ ವಿವರಗಳನ್ನು ತಿಳಿಯೋಣ. 'ಭರತೇಶ ವೈಭವ' ಕಾವ್ಯ ಗ್ರಂಥದಲ್ಲಿ, ರಾಜನ ಶಯ್ಯಾಗೃಹಕ್ಕೆ 'ಪುಷ್ಕರಾವತಿ' ಎಂಬ ಹೆಸರಿದ್ದುದಾಗಿ ಕವಿಯು ಹೇಳಿರುತ್ತಾನೆ [ಭ.ವೈ., ಸಂ.15, ಪ.1]. ಮತ್ತು ರಾಜನ ಸೆಜ್ಜೆಮನೆಯು ಒಂದು ಭಾಗದಲ್ಲಿ, ಬಹುಶಃ ಚೌಕಾದ ಪ್ರಾಂಗಣದ ನಟ್ಟನಡುವೆ ಇದ್ದು, ರಾಣಿಯರ ಸೆಜ್ಜೆಮನೆಗಳು ಅದರ ಸುತ್ತಲೂ ನಾಲ್ಕು ದೆಸೆಗಳಲ್ಲಿ ನೇರವಾದ ಸಾಲುಗಳಲ್ಲಿ ನಿರ್ಮಿತವಾಗಿದ್ದುವು. ಆ ರಾಜನಿಗೆ ಅನೇಕ ರಾಣಿಯರಿದ್ದುದರಿಂದಾಗಿ ಆ ರೀತಿಯ ಏರ್ಪಾಟನ್ನು ಮಾಡಿದ್ದಿರಬೇಕು. ಆ ಎಲ್ಲಾ ರಾಣಿಯರ ಸಾಲು ಸೆಜ್ಜೆವನೆಗಳ ಮುಂದಿದ್ದ ಮೊಗಸಾಲೆಯಲ್ಲಿ (corridor) ಮದನಕೈಗಳಿಂದ ನೇತಾಡುತ್ತಿದ್ದ ಸಾಲುಗಳಲ್ಲಿ ದೀಪಗಳ ಸರಣಿಯನ್ನೇರ್ಪಡಿಸಲಾಗಿತ್ತು. ಆ ಮನೆಗಳೆಲ್ಲವೂ ಬಂಗಾರ, ನವರತ್ನಗಳಿಂದ ವಿಶೇಷವಾಗಿ ಅಲಂಕೃತವಾಗಿದ್ದುವೆಂಬುದು ಸಾಮಾನ್ಯ. ಅಲ್ಲಿ ಮಾತನಾಡುವ ಸಾಕಿದ ಗಿಳಿಗಳೂ ಇದ್ದವು. ರಾಜನ ಶಯ್ಯಾಗೃಹದಲ್ಲಿ ಒದಗಿಸಲಾಗಿದ್ದ ರಾಜ ಮಂಚಕ್ಕೆ 'ಸಿಂಹವಾಹಿನಿ' ಎಂಬ ಹೆಸರಿತ್ತು [ಭ.ವೈ., ಸಂ.15, ಪ.9-15].

ಕವಿ ಕನಕದಾಸ ವರ್ಣಿಸಿರುವಂತೆ, ಅರಮನೆಯಲ್ಲಿ ಸೆಜ್ಜೆಮನೆಯಿದ್ದಲ್ಲಿಗೆ ಹೋಗಲು ಇದ್ದ ಒಳಪಥದ (inner passage) ಉದ್ದಕ್ಕೂ, ಅಲ್ಲಲ್ಲಿಗೆ ಕೈಗಳಲ್ಲಿ ದೀಪಗಳನ್ನು ಹಿಡಿದುಕೊಂಡಿದ್ದ ಸುಂದರ ಪುತ್ಥಳಿಗಳು ಮತ್ತು ಅಲಂಕಾರಿಕ ಹೂಗಳ ಹಾರಗಳನ್ನು ಹಿಡಿದುಕೊಂಡಿದ್ದ ಮದನಕೈಗಳನ್ನೂ ಅಳವಡಿಸಲಾಗಿತ್ತು. ಆ ಸೆಜ್ಜೆಮನೆಯ ಒಳಗಡೆಯಲ್ಲೂ ಅಲ್ಲಲ್ಲಿಗೆ ದೀಪಗಳನ್ನು ಪ್ರದರ್ಶಿಸುತ್ತಿದ್ದ ಸ್ತ್ರೀ ರೂಪದ ಬಂಗಾರದ ಶಿಲ್ಪಮೂರ್ತಿಗಳನ್ನು ಜೋಡಿಸಲಾಗಿತ್ತು ಮತ್ತು ಅಲ್ಲಿಯ ಗೋಡೆಗಳನ್ನು ಬಹುಕುಶಲತೆ ಮತ್ತು ಅಭಿರುಚಿಯಿಂದ ಚಿತ್ರಿಸಲಾಗಿದ್ದ ವರ್ಣಚಿತ್ರಗಳಿಂದ ಸಿಂಗರಿಸಲಾಗಿತ್ತು. ಅವುಗಳು, ರತಿ ಮತ್ತು ಮದನ ಅವರ ಶೃಂಗಾರ, ಕ್ರೀಡಾವಿನೋದಗಳನ್ನು ವಿಧವಿಧವಾಗಿ ಪ್ರತಿನಿಧಿಸುತ್ತಿದ್ದುವು. ಆ ಶಯ್ಯಾಗೃಹದ ಮಧ್ಯದಲ್ಲಿ ಅತಿ ವೈಭವದಿಂದ ಅಲಂಕರಿಸಲಾಗಿದ್ದ ಚಪ್ಪರಮಂಚ ಮತ್ತು ಅದರ ಮೇಲೆ ಮೆತ್ತನೆಯ ಸುಪ್ಪತ್ತಿಗೆಯನ್ನು ಇರಿಸಿದ್ದರು [ಮೋ.ತ., ಸಂ.22, ಪ.2-12].

ರಾಣಿಯರಿಗಾಗಿಯೂ ಪ್ರತ್ಯೇಕವಾದ ಶಯ್ಯಾಗೃಹಗಳಿರುತ್ತಿದ್ದುವೆಂಬುದನ್ನು ಮೇಲೆಯೇ ತಿಳಿಸಿಯಾಗಿದೆ. ಅವುಗಳೂ ಸಹಾ ಯಥಾರೀತಿ ವೈಭವವನ್ನು ಪ್ರದರ್ಶಿಸುವ ಅಲಂಕಾರಗಳಿಂದ ಕೂಡಿದ್ದುವು. ಒಂದೆಡೆ ಕವಿಯು ಹೇಳುವಂತೆ, ರಾಣಿಯೊಬ್ಬಳ ಸೆಜ್ಜೆ ಮನೆಯಲ್ಲಿ ನಾಲ್ಕು ವಿಧವಾದ ರತ್ನಖಚಿತವಾದ ಶಯ್ಯಾ ಮಂಚಗಳನ್ನೇರ್ಪಡಿಸಲಾಗಿತ್ತು; ಅವುಗಳ ಹೆಸರುಗಳು ಚಪ್ಪರಮಂಚ, ಸೆಳೆಮಂಚ, ಶಕುನಿಮಂಚ ಮತ್ತು ತೂಗುಮಂಚ ಎಂದಾಗಿದ್ದುವು. ಅಲ್ಲದೆ ಅಲ್ಲಿ ವಿವಿಧ ಸುವಾಸನಾಯುಕ್ತ ದ್ರವ್ಯಗಳಿಂದ ತುಂಬಿದ್ದ ಭರಣಿಗಳನ್ನು ಮತ್ತಿತರ ಅಗತ್ಯ ವಸ್ತುಗಳನ್ನೂ ಒದಗಿಸಲಾಗಿತ್ತು [ರಾ.ಚ., ಸಂ.36, ಪ.47-49]. ಮತ್ತೊಂದು ಕಡೆ, ಅನೇಕ ಬಗೆಯ ಸುವಾಸನಾದ್ರವ್ಯಗಳನ್ನು ರಾಣಿಯ ಸೆಜ್ಜೆಮನೆಯಲ್ಲಿ ಹರಡಿ, ಸಿಂಪಡಿಸಿರುತ್ತಿದ್ದರು. ಅಲ್ಲದೆ, ಆ ಶಯನ ಮಂದಿರದಲ್ಲಿ ಸುವಾಸನಾಯುಕ್ತ ಬಾಳದಬೇರುಗಳಿಂದ ತಯಾರಿಸಲಾದ ತಡಕೆತೆರೆಗಳನ್ನುಪಯೋಗಿಸಿ, ಅವುಗಳ ಮೂಲಕ ಪನ್ನೀರು, ವಾಸನಾಯುಕ್ತ ತಂಗಾಳಿಯು ಒಳಗೆ ಹರಡುವ ವ್ಯವಸ್ಥೆಯನ್ನು ಮಾಡಲಾಗಿತ್ತು [ಧ.ಪು., ಸಂ.6, ವಚನ ಪ.116ರ ನಂತರ]. ಮತ್ತೊಂದು ಉದಾಹರಣೆಯ ಪ್ರಕಾರ ಸುಂದರ ಪುತ್ಥಳಿಗಳನ್ನಳವಡಿಸಿದ್ದ ಕಾಂಚನದ ಮಂಚ, ಅದರ ಮೇಲೆ ಹಂಸಗಳ ತುಪ್ಪಳಗಳಿಂದ ತಯಾರಿಸಲಾಗಿದ್ದ ಒಂದರಮೇಲೊಂದರಂತೆ ಏಳು ಹಾಸಿಗೆಗಳು, ಅವುಗಳ ಮೇಲೆ ರೇಶಿಮೆಯ ಹಾಸುಬಟ್ಟೆ, ಹೊದಿಕೆ, ಪರದೆ, ಹೂವಿನಹಾರಗಳು, ಬೆಳ್ಳಿಯ ಪಾತ್ರೆ ಮತ್ತು ಕರಂಡಕಗಳಲ್ಲಿ ಇತರ ಅವಶ್ಯಕ ವಸ್ತುಗಳು ಹಾಗೂ ಸಾಲುದೀಪಗಳನ್ನು ಅಲ್ಲಿ ವ್ಯವಸ್ಥೆಗೊಳಿಸಲಾಗಿತ್ತು [ಧ.ಪು., ಸಂ.6, ಪ.117 ಮತ್ತು ವಚನ]. ಆ ಎಲ್ಲಾ ಕಾರಣಗಳಿಂದಾಗಿ ಕೈ ದೀವಿಗೆಗಳ ನಟ್ಟನಡುವೆ ಕಾಮವಿಕಾರ ಕಾರಣೋಪಕರಣ ಸಜ್ಜೀಕೃತವಾದ ಸೆಜ್ಜಾಗೃಹವದಾಗಿತ್ತು [ಧ.ಪು., ಸಂ.6, ವಚನ ಪ.115ರ ನಂತರ.

ಕವಿ ಕನಕದಾಸನು, ಕಥಾ ಸಂದರ್ಭದಲ್ಲಿ ಬರುವ ಶೋಭನ ಪ್ರಸ್ತದ ಚಾವಡಿಯೂ ಸಹಾ ಮೇಲಿನಂತೆ ಸುಂದರವಾಗಿಯೂ, ಮನೋಹರವಾಗಿಯೂ, ಭವ್ಯವಾಗಿಯೂ ಸಿಂಗರಿಸಲಾಗಿತ್ತೆಂದು ತಿಳಿಸುತ್ತಾನಲ್ಲದೆ, ಆ ಚಾವಡಿಯು ಅನೇಕ ಕಂಬಗಳಿಂದ ಕೂಡಿದುದಾಗಿತ್ತು ಮತ್ತು ಅಲ್ಲಿಯ ವಾಸ್ತು ಭಾಗಗಳಿಗೆಲ್ಲ ಅಮೂಲ್ಯ ಮಣಿರತ್ನಗಳನ್ನು ಕೂಡಿಸಿ ಅಲಂಕರಿಸಲಾಗಿತ್ತೆಂದು ಹೇಳುತ್ತಾನೆ [ಮೋ.ತ., ಸಂ.16, ಪ.14-18].

ಕವಿ ದೇಪರಾಜನ ವಿವರಣೆಯ ಪ್ರಕಾರ ರಾಜಕುಮಾರಿಯೋರ್ವಳ ಶಯ್ಯಾಗೃಹವು, ಮಹಡಿಯ ತುತ್ತತುದಿಯಲ್ಲಿದ್ದುದಾಗಿ ತಿಳಿಯುತ್ತದೆ (ಕರುವಾಡದ ಅಗ್ರಶಾಲೆಯೊಳು). ಅದರೊಳಗೆ ಮಣಿಖಚಿತವಾದ ಮಂಚ, ಹಂಸ ತುಪ್ಪಳಗಳಿಂದ ತಯಾರಿಸಲಾದ ಮೆತ್ತನೆಯ ಹಾಸಿಗೆ, ಬೀಸಣಿಗೆ, ನೀರಿನ ಪಾತ್ರೆ, ಕರ್ಪೂರ ಮತ್ತಿತರ ಸುಗಂಧ ದ್ರವ್ಯಗಳ ಭರಣಿಗಳು, ವೀಣೆ, ದಂಡಿಗೆ ಮುಂತಾದ ಸಂಗೀತವಾದ್ಯ ವಿಶೇಷಗಳು, ಸಾಕಿದ ಮುದ್ದಿನ ಪಕ್ಷಿ ಪ್ರಾಣಿಗಳು, ತಾಂಬೂಲ ವೀಳೆಯಗಳ ಸಂಬಳಿಗೆಗಳು ಮುಂತಾದ ಸಲಕರಣೆಗಳನ್ನು ವ್ಯವಸ್ಥೆಗೊಳಿಸಲಾಗಿತ್ತು [ಸೊ.ಸೋ., ಸಂ.23, ಪ.24-32].

15. ನಾಟಕಶಾಲೆ: ಈ ಮೊದಲೇ ತಿಳಿಸಿರುವಂತೆ, ಅಂತಃಪುರದ ಸಂಕೀರ್ಣದಲ್ಲಿ ಮತ್ತೊಂದು ಆಕರ್ಷಕ ಕಟ್ಟಡ ಭಾಗವು, ನಾಟಕಶಾಲೆಯಾಗಿತ್ತು. ಅದು ರಾಜ, ರಾಣಿಯರ ವಿನೋದಕ್ಕಾಗಿ, ಮನೋರಂಜನೆಗಾಗಿ, ರಾಣಿಯ ಓಲಗಶಾಲೆಗೆ ಹತ್ತಿರವೇ ಇರುತ್ತಿತ್ತು. ಸಾಮಾನ್ಯವಾಗಿ ಅಲ್ಲಿಯ ಕಾರ್ಯಕ್ರಮಗಳಲ್ಲಿ ರಾಜನೂ ಉಪಸ್ಥಿತನಾಗಿರುತ್ತಿದ್ದನು. ಹಲವು ಬಾರಿ ಆತನ ಪರಿವಾರದವರೂ ಜೊತೆಯಲ್ಲಿರುತ್ತಿದ್ದರು [ಭ.ವೈ., ಸಂ.12, ಪ.5-9]. ಅಲ್ಲಿ ಹಾಡುಗಾರಿಕೆ, ಸಂಗೀತ, ವಾದ್ಯ ಸಂಗೀತ, ನೃತ್ಯ, ಜನಪದ ನೃತ್ಯ, ಭಾರತ, ರಾಮಾಯಣ, ಭಾಗವತ ಮುಂತಾದ ಕಾವ್ಯಗಳ ವಾಚನ ಮತ್ತಿತರ ಮನರಂಜನಾ ಕಾರ್ಯಗಳು ವಿದ್ವತ್‌ಪೂರ್ಣವಾಗಿ ಜರುಗುತ್ತಿದ್ದುವು [ಕಂ.ವಿ., ಸಂ.8, ಪ.49, 53, 55-81]. ಇನ್ನೊಂದು ವಿವರಣೆಯ ಪ್ರಕಾರ ಆ ಮನರಂಜನಾ ಶಾಲೆಯು ಅಮೃತ ಶಿಲೆಗಳಿಂದ ನಿರ್ಮಿತವಾಗಿತ್ತು— 'ಮಹೀನಾಥನು ಒಂದು ದಿನ ಇಂದುಕಾಂತ ಶಿಲಾಮಯವಾದ ಅಗ್ರಸೌಧ ಶಿಖರಾಗ್ರದೊಳ್ .... ಮೇಳದ ವಿಳಾಸಿನೀ ಕಳಾಪದೊಡಗೂಡಿ ಲೀಲೆಯಿಂದ ಓಲಗಗೊಟ್ಟಿರ್ದ .....' — ಮತ್ತು ಅದು ಉಪ್ಪರಿಗೆ ಮನೆಯ ಮೇಲಿನ ಮಹಡಿಯಲ್ಲಿ ರಚಿತವಾಗಿತ್ತು [ಧ.ಪು., ಸಂ.5 ವಚನ].

ಕವಿ ರತ್ನಾಕರವರ್ಣಿಯು ನಾಟಕಶಾಲೆಯನ್ನು ಕುರಿತು ಹೇಳಿರುವ ಹೃದಯಂಗಮ ವರ್ಣನೆಯು ಮುಂದಿನ ವಿವರಗಳಿಂದ ವೇದ್ಯವಾಗುತ್ತದೆ.

ರಾಜನು ಒಂದು ದಿನ ರಾಣಿಯಿಂದ ನಿಯೋಜಿತಳಾದ ಪರಿಚಾರಿಕೆಯೊಬ್ಬಳ ವಿನಂತಿಯ ಮೇರೆಗೆ, ಆ ದಿನದ ಮನರಂಜನಾ ಕಾರ್ಯಕ್ರಮಗಳನ್ನು ವೀಕ್ಷಿಸಲು ಅರಮನೆಯಿಂದಿಳಿದು 'ನಾಟಕಶಾಲೆ'ಗೆ ಹೋಗಿ ಅಲ್ಲಿ ಒದಗಿಸಲಾಗಿದ್ದ ಸಿಂಹಾಸನದಲ್ಲಿ ಆಸೀನನಾಗುತ್ತಾನೆ. ಆ ನಾಟಕ ಶಾಲೆಯು ಬಹುವಿಧ ಅಲಂಕಾರಗಳಿಂದ ಸಿಂಗರಿಸಲ್ಪಟ್ಟಿದ್ದು ಅದರ ಭವ್ಯ ವರ್ಣನೆಯನ್ನು 'ಕರ್ಣಾಟಿಸಿ ಪೇಳಲಾನರಿಯೆ' ಎಂದು ಹೇಳಿ ತನ್ನ ಅಸಹಾಯಕತೆಯನ್ನು ವ್ಯಕ್ತಪಡಿಸಿ, ಅದು ಕೋಟಿರತ್ನಗಳಿಂದ ಕೂಡಿದ 'ಸುರರ ವಿಮಾನಕೆ ಸಾಟಿ'ಯೆಂದು ಸಂಕ್ಷಿಪ್ತವಾಗಿ ಹೇಳಿರುತ್ತಾನೆ [ಭ.ವೈ. ಸಂ.12, ಪ.3-5]. ಆ ನಾಟಕಶಾಲೆಯ ಗೋಡೆಗಳ ಮೇಲೆ, ವಿವಿಧ ಭಂಗಿ, ಭಾವನೆ, ಕ್ರಿಯೆ, ವಿನೋದಾವಳಿಗಳಲ್ಲಿ ನಿರತರಾಗಿರುವುದು ಮುಂತಾದವುಗಳನ್ನು ಭಿತ್ತರಿಸುವಂತೆ ಚಿತ್ರಿತವಾದ ಹೆಣ್ಣುಗಂಡುಗಳ ಬಹು ಆಕರ್ಷಕ ವರ್ಣ ಚಿತ್ರಗಳೂ ರಂಜಿಸುತ್ತಿದ್ದುವು [ಭ.ವೈ. ಸಂ.12, ಪ.6-9]. ಅದು 'ಧರೆಗೆ ವಿಸ್ಮಯವಾದ ನಾಟಕಶಾಲೆ'ಯದಾಗಿತ್ತು [ಭ.ವೈ. ಸಂ.12, ಪ.10]. ಆ ನಾಟಕ ಶಾಲೆಗೆ 'ವರ್ಧನಾವತಿ' ಎಂಬ ಹೆಸರಿದ್ದುದಾಗಿ ಇನ್ನೊಂದೆಡೆ ಹೇಳಿರುತ್ತಾನೆ [ಭ.ವೈ. ಸಂ.15, ಪ.1].

ಮತ್ತೊಂದು ಸಂದರ್ಭದಲ್ಲಿ, ಅಂತಃಪುರದ ರಾಜನ ಹೆಂಡತಿಯರಿಗೆ ವಿವಿಧ ವಿಷಯಗಳಲ್ಲಿ ಅಭ್ಯಾಸ ಮಾಡಿಸುತ್ತಿದ್ದ 'ಪಂಡಿತೆ' ಎಂಬ ಸೇವಕಳು (ರಾಯನ ಪೆಂಡಿರಿಗೋದಿಸಿದವಳು) ಆ ದಿನದ ಅಂತಃಪುರದ ಮನರಂಜನಾ ಕಾರ್ಯಕ್ರಮಗಳಿಗೆ ರಾಜನನ್ನು ಆಮಂತ್ರಿಸುತ್ತಾಳೆ. ರಾಜನು ಸಮ್ಮತಿಸಿದುದನ್ನು ತಿಳಿದ ರಾಣಿಯರೆಲ್ಲಾ 'ಮೇರು ಸೌಧ'ವೆಂಬ ನಾಮದ ಉಪ್ಪರಿಗೆಯ ಮಂಟಪಕ್ಕೆ ತವಕದಿಂದ ಹೋಗುತ್ತಾರೆ [ಭ.ವೈ., ಸಂ.5, ಪ.5-7]. ಎಂದರೆ, ಅಂತಃಪುರದ ಮನೋರಂಜನಾ ಮಂಟಪ ಅಥವಾ ನಾಟಕ ಶಾಲೆಯನ್ನು ಬಹು ಎತ್ತರದಲ್ಲಿ ಉಪ್ಪರಿಗೆಯಲ್ಲಿ ವ್ಯವಸ್ಥೆಗೊಳಿಸಿರುತ್ತಿದ್ದರು. ಅಲ್ಲಿ ವಿಧವಿಧವಾದ ವಿನೋದಾವಳಿಗಳು, ಹಾಡುಗಾರಿಕೆ, ವಾದ್ಯ ಸಂಗೀತ, ನೃತ್ಯ, ನಾಟಕ, ಕಾವ್ಯವಾಚನ ಮುಂತಾದವುಗಳು ಜರುಗುತ್ತಿದ್ದುವೆಂಬುದನ್ನು ವಿವರಿಸುವುದಕ್ಕಾಗಿ ಕವಿಯು ಆರು ಸಂಧಿಗಳನ್ನೇ ಮುಡುಪಾಗಿರಿಸಿದ್ದಾನೆ [ಭ.ವೈ., ಸಂ.5-7, 12-14].

16. ಮಂತಣದ ಮನೆ: ಮಂತಣದ ಮನೆ ಅಥವಾ ಗೂಢಗೃಹವೆಂದು ಕರೆಯಲಾಗುತ್ತಿದ್ದ ಭಾಗವು ಅರಮನೆಯ ಸಂಕೀರ್ಣದಲ್ಲಿರುತ್ತಿತ್ತೆಂದು ಈ ಮೊದಲೇ ಸೂಚಿಸಲಾಗಿದೆ. ಅದು ರಾಜರ ಮಂತ್ರಾಲೋಚನೆಗಾಗಿ ವಿಶಿಷ್ಟವಾಗಿ ರಚಿಸಲ್ಪಟ್ಟುದಾಗಿತ್ತು. ಬಾಹುಬಲಿ ಪಂಡಿತನು ವಿವರಿಸಿರುವ ಪ್ರಕಾರ, ಮಥಣ ಶಾಲೆಗೆ ಗವಾಕ್ಷಗಳನ್ನೊದಗಿಸದೆ ನಿರ್ಮಿಸಿದ್ದರು (ನಿರಸ್ತ ಗವಾಕ್ಷ); ಕೋನಮೂಲೆಗಳಿಲ್ಲದ (ಪರಿಮುಕ್ತ ಕೋಣಮಂ—ಬಹುಶಃ ವೃತ್ತಾಕಾರದಲ್ಲಿದ್ದ) ರಚನಾವಿನ್ಯಾಸವನ್ನು ಹೊಂದಿತ್ತು ಮತ್ತು ಅಲ್ಲಿಯ ಬಹು ಮುಖ್ಯ ವೈಶಿಷ್ಟ್ಯವೆಂದರೆ ಆ ಕಟ್ಟಡದಿಂದ ಯಾವುದೇ ಶಬ್ದವೂ ಪ್ರತಿಧ್ವನಿತವೂ ಆಗದಂತೆ (ಪ್ರತಿಧ್ವನಿ ತ್ಯಾಗಕಲ) ಬಹು ಜಾಣ್ಮೆಯಿಂದ ರಚಿಸಲ್ಪಟ್ಟುದಾಗಿತ್ತು [ಧ.ಪು., ಸಂ.13, ಪ.8]. ಎಂದರೆ ಅಲ್ಲಿ ಜರುಗುತ್ತಿದ್ದ ಮಾತುಕತೆ ಮುಂತಾದ ವ್ಯವಹಾರಗಳ ಗೋಪ್ಯವನ್ನು ಕಾಪಾಡಿಕೊಳ್ಳುವುದಕ್ಕಾಗಿ ಅದರ ರಚನಾ ಕ್ರಮವನ್ನು ರೂಪಿಸಲಾಗಿತ್ತು.

17. ಅವಲೋಕನಾ ಶಾಲೆ: ಅರಮನೆಯ ಸಂಕೀರ್ಣದ ಉದ್ಯಾನದಲ್ಲಿಯೇ ಶಿಖರಪ್ರಾಯವಾದ, ಉನ್ನತವಾದ ಏಳು ಮಹಡಿಗಳಿಂದ ಕೂಡಿದ ಕಟ್ಟಡವಿತ್ತು. ಅದರ ಏಳನೆಯ ಹಂತವನ್ನು, ರಾಜ ಮತ್ತು ಆತನ ಪರಿವಾರದವರು ಅವಲೋಕನಾ/ದಿಶಾವಲೋಕನಾ ಸ್ಥಳವನ್ನಾಗಿ ಉಪಯೋಗಿಸುತ್ತಿದ್ದರು. ಆ ಸ್ಥಳದಿಂದ ಎಲ್ಲಾ ದಿಕ್ಕುಗಳಲ್ಲಿ ಸುಂದರವಾಗಿರುವುದನ್ನು ವೀಕ್ಷಿಸಿ ಸಂತೋಷಪಡುತ್ತಿದ್ದರು. ಆ ವಿಷಯವು ಕೆಳಗಿನ ಪದ್ಯಭಾಗಗಳಿಂದ ವೇದ್ಯವಾಗುತ್ತದೆ.

'.... ನಳನಳಿಸುವ ಶಿವಂಕರೋದ್ಯಾನದ ನಟ್ಟನಡುವಣ ದಿಶಾವಲೋಕನ ಪ್ರಸಾದ ಮಾದ, ಸರ್ವತೋಭದ್ರವೆಂಬೇಳನೆಯ ನೆಲೆಯ ಮಣಿಮಾಡದ ....' [ಧ.ಪು., ಸಂ.14, ಪ.32 ರ ನಂತರದ ವಚನ].... 'ವಲ್ಲಭಂ ನಿಜಪ್ರಾಣವಲ್ಲಭೆಯ ಕೆಲದೊಳಿರ್ದು ದಿಶಾ ಶೋಭಾವಲೋಕನಂಗೆಯ್ಯಾಗಳ್ .....' [ಧ.ಪು., ಸಂ.14, ಪ.34ರ ನಂತರದ ವಚನ]. ಆ ಪ್ರಾಸಾದದೊಳಗೆಯೇ ಒಂದು ಸಭಾಂಗಣವಿರುತ್ತಿದ್ದು, ಅಲ್ಲಿ ರಾಜ, ರಾಣಿ, ಪರಿವಾರದವರಿಗಾಗಿ ನೃತ್ಯ ಮುಂತಾದ ಕಲಾ ಪ್ರದರ್ಶನಾ ಕಾರ್ಯಗಳೂ ಜರುಗುತ್ತಿದ್ದುವೆಂದು ಕವಿಯು ವರ್ಣಿಸಿರುತ್ತಾನೆ. ಇಲ್ಲಿಯ ಸಂದರ್ಭದಲ್ಲಿ ವಸಂತಮಾಲೆ ಮತ್ತು ಕಾಮಲತೆ ಎಂಬ ಇಬ್ಬರು ನೃತ್ಯ ಪ್ರವೀಣೆಯರು 'ವಸಂತ ವಿಹರಣಂ' ಎಂಬ ನೃತ್ಯನಾಟಕವನ್ನು ಪ್ರದರ್ಶಿಸಿ, ವಸಂತ ಕಾಲದ ವನವಿಹರಣ ವಿನೋದಕ್ಕೆ ದಯಮಾಡಿಸಬೇಕೆಂದು ಸೂಚ್ಯವಾಗಿ ರಾಜನನ್ನು ಆಮಂತ್ರಿಸುತ್ತಾರೆ [ಧ.ಪು., ಸಂ.14, ಪ.34ರ ನಂತರದ ವಚನ].

18. ಪೂಜಾಗೃಹ: ರಾಜನ ಪೂಜಾಗೃಹವು ಅರಮನೆಯ ಪರಿಸರದಲ್ಲಿಯೇ ಅಥವಾ ಸಂಕೀರ್ಣದಲ್ಲಿಯೇ ರಚಿತವಾಗಿರುತ್ತಿತ್ತೆಂದು ತಿಳಿಯುತ್ತದೆ. ಅದು ಪೂಜಾಸಾಮಗ್ರಿಗಳನ್ನು ರಾಜನು ಸ್ವತಃ ಹಿಡಿದುಕೊಂಡು ನಡೆದುಹೋಗಿ ತಲಪುವಂತೆ ಅನತಿದೂರದಲ್ಲಿರುತ್ತಿತ್ತು. ಕವಿಯು ವಿವರಿಸಿರುವಂತೆ, ಒಂದು ದಿನ ಬೆಳಗಿನ ವೇಳೆ ಮಹಾರಾಜ ಸ್ನಾನಾದಿ ವಿಧಾನಗಳನ್ನು ತೀರಿಸಿದ ನಂತರ '.... ದೇವತಾರ್ಚನಾಯೋಗ್ಯ ದ್ರವ್ಯ ಸಂಸೇವ್ಯಂಗಳಪ್ಪ ರಜತ ಮಹಾ ರಜತಾದಿ ವಿರಚಿತ ಪಾತ್ರಂಗಳಂ ಪಿಡಿದು .... ಚೈತ್ಯಾಲಯಂ .... ಪೊಕ್ಕಿ .... ಭೂತಳಪತಿ ಪೂಜಿಸಿದಂ ....' [ಧ.ಪು., ಸಂ.15, ಪ.143ರ ನಂತರ ವಚನ].

19. ಭೋಜನಶಾಲೆ: ರಾಜ ಮತ್ತು ಆತನ ಪರಿವಾರದವರಿಗಾಗಿ ಪ್ರತ್ಯೇಕವಾದ ಭೋಜನ ಶಾಲೆ ಇರುತ್ತಿತ್ತು. ದಿನದ ಕಾರ್ಯಕಲಾಪಗಳು, ಒಡ್ಡೋಲಗ ಮುಗಿದ ನಂತರ, ರಾಜನು ತನ್ನ ಮಂತ್ರಿಗಳು, ದಳಪತಿಗಳು ಹಾಗೂ ಇತರ ಉನ್ನತ ಅಧಿಕಾರಿಗಳು ಮತ್ತು ಗಣ್ಯ ಬಂಧು ಜನರೊಡಗೂಡಿ ಆ ಭೋಜನ ಶಾಲೆಯಲ್ಲಿ ಪಂತಿಯೊಳು ಕುಳಿತು ಭೋಜನ ಮಾಡುತ್ತಿದ್ದನು. ಅಲ್ಲಿ ರಾಜನಿಗಾಗಿ ನವರತ್ನಗಳಿಂದ ಖಚಿತವಾದ ಪೀಠವಿರುತ್ತಿತ್ತು. ಊಟದ ಸಮಯದಲ್ಲಿ ಅನುಕೂಲವಾಗಿರುವಂತೆ ಸಾಲು ದೀಪಗಳನ್ನು ವ್ಯವಸ್ಥೆಗೊಳಿಸಿರುತ್ತಿದ್ದರು. ಊಟದ ಸಲಕರಣೆಗಳಾಗಿ ಬಂಗಾರದಿಂದ ತಯಾರಿಸಲಾದ ಹರಿವಾಣ, ಬಟ್ಟಲು, ಅಡ್ಡಣಿಗೆ ಮುಂತಾದ ಉಪಕರಣಗಳೂ ಇದ್ದುವು ಮತ್ತು ವಿಧವಿಧವಾದ ಸ್ವಾದಿಷ್ಠ ಭೋಜನ ಪದಾರ್ಥಗಳನ್ನು ಉಣಬಡಿಸುವವರು ಅರಮನೆಯ ಊಳಿಗದ ತರುಣಿಯರಾಗಿದ್ದರು [ಕಂ.ವಿ., ಸಂ.8, ಪ.81-92; ಸ.ಕೌ., ಸಂ.4, ಪ.9].

20. ಶೃಂಗಾರತೋಟ ಮತ್ತು ಜಲಕ್ರೀಡಾ ಸರೋವರ: ರಾಜರ ಮತ್ತು ಅವರ ಪರಿವಾರದವರ ವಿಹಾರ ವಿನೋದಗಳಿಗಾಗಿ ಒಂದು ರಾಜೋದ್ಯಾನವಿರುತ್ತಿತ್ತು. ಅದು 'ಶಿಂಗಾರದೋಟ'ವೆಂದಾಗಿದ್ದು, ಮಹಾನಗರದ (ರಾಜಧಾನಿಯ) ಹೊರವಲಯದಲ್ಲಿ ಸ್ವಲ್ಪ ದೂರದಲ್ಲಿರುತ್ತಿತ್ತು. ಅದನ್ನು ನೋಡಿಕೊಳ್ಳುವುದಕ್ಕಾಗಿಯೇ ರಾಜನಿಂದ ನಿಯೋಜಿತರಾದ ನುರಿತ ವನಪಾಲಕರೂ ಇರುತ್ತಿದ್ದರು. ಪ್ರತಿ ವರ್ಷ ವಸಂತರುತುವಿನ ಕಾಲದಲ್ಲಿ, ವನಪಾಲಕನು ಅರಮನೆಗೆ ಹೋಗಿ, ವಿಹಾರಾರ್ಥವಾಗಿ ರಾಜನನ್ನು ರಾಜೋದ್ಯಾನಕ್ಕೆ ಆಮಂತ್ರಿಸುವುದು ಒಂದು ಸಂಪ್ರದಾಯ.

ಒಮ್ಮೆ, ವಸಂತಕಾಲದಲ್ಲಿ, ವನಪಾಲಕನ ಭಿನ್ನಹದ ಮೇರೆಗೆ ರಾಜನು ತನ್ನ ಸಕಲ ಪರಿವಾರ ಸಮೇತ ರಾಜೋದ್ಯಾನಕ್ಕೆ ವಿಹಾರಾರ್ಥವಾಗಿ ಹೋಗುತ್ತಾನೆ. ಆತನು, ಆತನ ರಾಣಿಯೂ ಪಟ್ಟದಾನೆಯನ್ನು ಏರಿ ಹೋಗುತ್ತಾರೆ. ರಾಣಿಯರ ಸಖಿಯರು, ಊಳಿಗದವರು, ರಾಜಕುಮಾರರು ಮುಂತಾದವರು ಇತರ ಆನೆಗಳನ್ನೇರಿ ರಾಜನನ್ನು ಹಿಂಬಾಲಿಸುತ್ತಾರೆ. ಎಂದರೆ ರಾಜೋದ್ಯಾನವು, ಮಹಾನಗರದ ಹೊರವಲಯದಲ್ಲಿ ಸ್ವಲ್ಪದೂರದಲ್ಲಿತ್ತೆಂದು ತಿಳಿಯುತ್ತದೆ [ಧ.ಪು., ಸಂ.14, ಪ.35-37, 44-49, ವಚನ; ಪ್ರ್ರಾ. ಕಾ., ಸಂ.21, ಪ.9].

ದಟ್ಟವಾಗಿ ಬೆಳಸಲಾಗಿದ್ದ ವಿವಿಧ ಗಿಡ, ಮರ, ಬಳ್ಳಿಗಳಿಂದ ಬಹು ಸುಂದರವಾಗಿ ಕಾಣುತ್ತಿದ್ದ ಆ ಶೃಂಗಾರದೋಟದ ಮಧ್ಯದ ಬಯಲಿನಲ್ಲಿ 'ವಸಂತ ಮಂಟಪ'ವೆಂಬ ಒಂದು ಬಹು ವಿಧದಲ್ಲಿ ಅಲಂಕರಿಸಲ್ಪಟ್ಟ, ತಂಪಾದ ಕ್ರೀಡಾ ವಿನೋದ ಮಂಟಪವು ಶೋಭಿಸುತ್ತಿತ್ತು [ಧ.ಪು., ಸಂ.14, ವಚನ, ಪ.78, 79].

ಆ ವನದಲ್ಲಿಯೇ, ಮತ್ತೊಂದೆಡೆಯಲ್ಲಿ ವನಲಕ್ಷ್ಮಿಯ ನಾಭಿಯಂತೆ ಶೋಭಿಸುತ್ತಿದ್ದ, 'ಜಲಕ್ರೀಡಾ ಸರೋವರ' / 'ಲೀಲಾಸರೋವರ'ವೂ ವ್ಯವಸ್ಥೆಗೊಂಡಿರುತ್ತಿತ್ತು. ಅದರ ನಾಲ್ಕು ಪಕ್ಕಗಳಲ್ಲಿ ಚಂದ್ರಕಾಂತ ಶಿಲೆ ಮತ್ತು ಮಣಿರತ್ನಗಳಿಂದ ಅಲಂಕರಿಸಲಾಗಿದ್ದ ಸೋಪಾನಗಳ ಪಂತಿಗಳನ್ನು ನಿರ್ಮಿಸಿದ್ದರು. ಆ ಸೋಪಾನಗಳೋ, ಅಲ್ಲಿ ಭಾಗವಹಿಸುತ್ತಿದ್ದ ರಾಜಪರಿವಾರದ ಹೆಂಗಳೆಯರಿಗೆ ಶ್ರಮವಾಗದಿರಲೆಂಬ ಉದ್ದೇಶದಿಂದ, 'ಸೂಖಾರೋಹಣಾವರೋಹಣ' ಒದಗಿಸುವಂತೆ ರೂಪಿತವಾಗಿದ್ದ ಸೋಪಾನಗಳ ಪಂಕ್ತಿಗಳಾಗಿದ್ದುವು [ಧ.ಪು., ಸಂ.14, ಪ.122, ವಚನ]. ಮತ್ತು ಆ ತಟಾಕದ ಸುತ್ತಲೂ ದಡಗಳ ಮೇಲೆ ಬೆಳ್ಳಿಯಿಂದ ತಯಾರಿಸಲಾದ ದೊಡ್ಡದೊಡ್ಡ ಪಾತ್ರೆಗಳನ್ನಿರಿಸಿ, ಅವುಗಳಲ್ಲಿ ಕಸ್ತೂರಿ, ಕರ್ಪೂರ, ಚಂದನ, ಕುಂಕುಮ ಮಿಶ್ರಿತ ನೀರನ್ನು ಶೇಖರಿಸಿಟ್ಟು, ಕ್ರೀಡಾಸಮಯದಲ್ಲಿ, ಜಲಕೇಳೀ ಸಮಯದಲ್ಲಿ ಉಪಯೋಗಿಸಲು ಅನುಕೂಲವಾಗುವಂತೆ ವ್ಯವಸ್ಥೆಗೊಳಿಸಿದ್ದರು [ಧ.ಪು., ಸಂ.14, ವಚನ ಪ.122ರ ನಂತರ].

ಕವಿ ವಿರೂಪಾಕ್ಷ ಪಂಡಿತನು, ರಾಜನ ಕೇಳೀ ವನವನ್ನು 'ಚೈತ್ರ ರಥ'ವೆಂದು ಹೇಳುತ್ತಾ ಅದು ನಗರದ ತಪ್ಪಲೊಳಗೆ ಸಹಸ್ರ ಯೋಜನದಷ್ಟು ವಿಸ್ತಾರವಾಗಿತ್ತೆಂದು ವಿವರಿಸಿರುತ್ತಾನೆ. ಮುಂದುವರೆದು, ಅದು ತರತರದ ಹೂ, ಮೊಗ್ಗು, ಹಣ್ಣು, ಹಂಪಲುಗಳಿಂದ ಭರಿತವಾದ ಗಿಡ, ಮರ, ಬಳ್ಳಿಗಳಿಂದ ಮತ್ತು ತಂಪಾದ ನೀರಿನ ಕೊಳಗಳಿಂದ ಶೋಭಿಸುತ್ತಿತ್ತೆಂದು ವರ್ಣಿಸಿರುತ್ತಾನೆ. ಅಲ್ಲದೆ, ಅಲ್ಲಿ ತಳಿರ ಮನೆಗಳು, ತಳಿರ ಚಪ್ಪರಗಳು, ಚಾವಡಿಗಳು, ಮಲಗುವ ಮಾಡಗಳು, ತಳಿರ ಉಯ್ಯಾಲೆಗಳು, ನಿರಂತರ ಹರಿವ ನೀರಿನ ಕಾಲುವೆಗಳು, ಪರಿಮಳಯುಕ್ತ ಜಲವನ್ನು 'ಜೀರ್ಕೊಣವಿಯಿಂದೆಸೆವ ಪೂಗಳ ಬೊಂಬೆಗಳ ಸಾಲುಗಳು' ಮುಂತಾದವು ವನವಿಹಾರಾರ್ಥಿಗಳ ವಿನೋದ, ಮನರಂಜನೆಗಾಗಿ ಏರ್ಪಾಡಾಗಿದ್ದುವು. ಮತ್ತು ಅಲ್ಲಿ ಸುಂದರವಾಗಿ ನಿರ್ಮಿಸಲಾಗಿದ್ದ ಒಂದು ವಿಶಾಲವಾದ ಅಂತರಂತರದಲ್ಲಿ ಕ್ರಮಬದ್ಧವಾದ ಸೋಪಾನಗಳಿಂದ ಕೂಡಿದ್ದ ಸರೋವರವೂ ಇತ್ತು. ಅದು ರಾಜನ ಮತ್ತು ಅವನ ಪರಿವಾರದವರ ಜಲಕ್ರೀಡೆಗಳಿಗೆ ಸೂಕ್ತವಾಗಿ ನಿರ್ಮಾಣವಾಗಿತ್ತು [ಚ.ಪು., ಸಂ.45, ಪ.4-6, 18, 45, 57-64].

ಇನ್ನೊಬ್ಬ ಕವಿಯು, ಅದನ್ನು 'ರಾಜನ ಬಾಹ್ಯೋಪವನ'ವೆಂದು ಕರೆದು, ಅಲ್ಲಿ ವಿಹಾರಾರ್ಥಿಗಳ ಮನರಂಜನೆಗಾಗಿ, ಸಸ್ಯ ಸಂಪದವಲ್ಲದೆ, ಕೃತಕ ಗಿರಿ, ಕಂದರ, ಕಣಿವೆ, ಗವಿಗಳನ್ನೂ ನಿರ್ಮಿಸಿದ್ದರೆಂದು ವಿವರಿಸುತ್ತಾನೆ ಮತ್ತು ಚಂದ್ರಕಾಂತ ಶಿಲೆಯಿಂದ ರಚಿಸಲಾಗಿದ್ದ ಸುಂದರವಾದ ಸೋಪಾನಗಳನ್ನು ಹೊಂದಿದ್ದ ಸರಸಿಯೊಂದು ಇದ್ದುದಾಗಿ ಹೇಳುತ್ತಾನೆ [ರಾ.ಚ., ಸಂ.4, ಪ.31, 54, 59; ಸಂ.30, ಪ.12; ಸಂ.29, ಪ.45, 48].

ಭಾಸ್ಕರ ಕವಿಯು ವಿವರಿಸಿರುವಂತೆ, ಮೇಲಿನ ವ್ಯವಸ್ಥೆಗಳಲ್ಲದೆ, ರಾಜೋದ್ಯಾನದಲ್ಲಿ ಒಂದು ವನಮಂಟಪವಿತ್ತು. ರಾಜನ ಪರಿವಾರವು ಆನೆ, ಕುದುರೆಗಳ ಮೇಲೆ ಮತ್ತು ರಥಗಳಲ್ಲಿ ಪ್ರಯಾಣ ಮಾಡಿ ಆ ವನವನ್ನು ತಲುಪುತ್ತಾರೆ. ಮೊದಲಿಗೆ ವಸಂತನ ಪೂಜೆಯನ್ನು ನೆರವೇರಿಸಿ ಅನಂತರ ವನ ವಿಹಾರ, ಜಲಕ್ರೀಡೆ, ಉಯ್ಯಾಲೆಯಾಟ ಮುಂತಾದ ಮನರಂಜನಾ ಕಾರ್ಯಗಳಲ್ಲಿ ನಿರತರಾಗುತ್ತಾರೆ [ಜೀ.ಚ., ಸಂ.16, ಪ.7, 16, 32-62]. ಹೀಗೆ ಆ ಪರಿವಾರವು ಒಂದು ತಿಂಗಳ ಪರಿಯಂತ ಆ ಉದ್ಯಾನದಲ್ಲಿ ವಿವಿಧ ರೀತಿಯಲ್ಲಿ ಆನಂದಿಸುತ್ತಾರೆ [ಜೀ.ಚ., ಸಂ.16, ಪ.23].

ಮೋಹನ ತರಂಗಿಣಿಯಲ್ಲಿ ಆ ಶೃಂಗಾರ ವನವು ಪುರದ ಹೊರಗೆ ನಿರಂತರವಾಗಿ ನೀರಿನಿಂದ ತುಂಬಿ ಹರಿಯುತ್ತಿದ್ದ ನದಿ ದಂಡೆಯ ಮೇಲೆ ಬಹು ಸುಂದರವಾಗಿ ಕಂಗೊಳಿಸುತ್ತಿತ್ತೆಂದು ಹೇಳಲಾಗಿದೆ [ಮೋ.ತ., ಸಂ.42, ಪಂ.14-18].

ಪದ್ಮಣಾಂಕ ಕವಿಯು ವಿವರಿಸಿರುವ ಪ್ರಕಾರ, ಆ ರಾಜೋದ್ಯಾನದಲ್ಲಿ ಒಂದಕ್ಕಿಂತಲೂ ಹೆಚ್ಚಾಗಿ ಜಲಕ್ರೀಡಾ ಕೊಳಗಳಿದ್ದುವು. ರಾಜ, ರಾಣಿಯರು, ಅವರ ಪರಿವಾರದವರು ಬೇರೆ ಬೇರೆಯಾಗಿ ಆ ಕೊಳಗಳಲ್ಲಿ ಕ್ರೀಡಾಮನರಂಜನೆಗಳಲ್ಲಿ ನಿರತರಾಗುವಂತೆ ಅವುಗಳು ನಿರ್ಮಿತವಾಗಿದ್ದವು. ವಿನೋದದ ಸಮಯದಲ್ಲಿ, ಆ ಕೊಳಗಳ ನೀರಿಗೆ ಸುವಾಸನಾಯುಕ್ತ ದ್ರವ್ಯಗಳಾದ ಚಂದನದ ಹುಡಿ, ಕಸ್ತೂರಿ, ಕುಂಕುಮ ಹಾಗೂ ವಿವಿಧ ಬಣ್ಣ, ಸುವಾಸನೆಗಳಿಂದ ಕೂಡಿದ್ದ ಹೂವಿನ ದಳಗಳು, ಎಲೆಗಳು, ಬೇರುಗಳು ಮುಂತಾದವುಗಳನ್ನು ಸೇರಿಸುತ್ತಿದ್ದರು [ಪ.ಪು., ಸಂ.8, ಪ.38-46] ಮತ್ತು ಸನಿಹದಲ್ಲಿಯೇ ಕ್ರೀಡಾ ನಂತರ ವಿಶ್ರಮಿಸುವುದಕ್ಕಾಗಿ ಸುಸಜ್ಜಿತವಾದ ಲತಾಮಂಟಪವು ಹಾಗೂ ಪೂಜಾಕಾರ್ಯಗಳನ್ನು ನೆರವೇರಿಸಲು ಅನುಕೂಲವಾಗುವಂತೆ ದೇವಮಂದಿರವೂ ಇದ್ದುವು [ಪ.ಪು., ಸಂ.8, ಪ.51-53].

ಸಮಾರೋಪ: ಮೇಲೆ ವಿಶದೀಕರಿಸಿದ ಪ್ರಕಾರ, ಅರಮನೆಗಳು, ಅವುಗಳ ಸಂಕೀರ್ಣಕ್ಕೆ ಸೇರಿದ್ದ ಇತರ ಕಟ್ಟಡಗಳ ಹೆಸರುಗಳನ್ನು ಹೇಳುತ್ತಾ, ಆ ನಿವೇಶನಗಳಲ್ಲಿ ವ್ಯವಸ್ಥೆಗೊಳಿಸಲಾಗಿದ್ದ ಇತರ ಏರ್ಪಾಟುಗಳನ್ನು ಕುರಿತು ಕವಿಗಳು ವಿವರಿಸಿರುತ್ತಾರೆ. ಸಾಮಾನ್ಯವಾಗಿ, ಆ ಹೆಸರುಗಳಿಂದಲೇ ಅವುಗಳು ಯಾವ ಉದ್ದೇಶಗಳಿಗಾಗಿ ಮತ್ತು ಯಾವ ಕಾರ್ಯ ಚಟುವಟಿಕೆಗಳಿಗಾಗಿ ಉಪಯೋಗವಾಗುತ್ತಿದ್ದವೆಂದು ವೇದ್ಯವಾಗುತ್ತವೆ. ಕೆಲವೊಮ್ಮೆ, ಹೆಸರುಗಳಿಂದಲೇ ಅವುಗಳ ಉಪಯೋಗ, ಉದ್ದೇಶಗಳನ್ನು ತಿಳಿಯಲು ಸಾಧ್ಯವಾಗದು, ಉದಾಹರಣೆಗೆ ಶಾರದ ಮಂಟಪ, ಇಂದಿರಾ ಮಂಟಪ ಮುಂತಾಗಿ. ಅಂಥ ಸಂದರ್ಭಗಳಲ್ಲಿ ಅವು ವಿಶೇಷ ಅಲಂಕಾರಗಳಿಂದ ಕೂಡಿದ್ದ ಬಹು ಉಪಯೋಗಿ ಕಟ್ಟಡಗಳೆಂದು ಪರಿಗಣಿಸಬಹುದು. ಮೇಲೆ ನಿರೂಪಿಸಲಾದ ವಿವಿಧ ಕಟ್ಟಡಗಳನ್ನು, ರಾಜರಾಣಿಯರು ಮತ್ತು ಅವರ ಪರಿವಾರದವರು ಹೇಗೆ ವೈಭವಾಡಂಬರಗಳಿಂದ ಉಪಯೋಗಿಸಿಕೊಳ್ಳುತ್ತಿದ್ದರೆಂಬ ವಿಸ್ತಾರವಾದ ವಿವರಣೆಗಳನ್ನು ಬಹು ರಂಜನೀಯವಾಗಿ, ಕುತೂಹಲಕಾರಿಯಾಗಿ ವರ್ಣಿಸಿರುವುದನ್ನು ಈ ಕವಿತಾ ಗ್ರಂಥಗಳಲ್ಲಿ ಕಾಣಬಹುದು. ಆ ವಿವರಣೆಗಳು ಪ್ರಸಕ್ತ ಲೇಖನದ ವ್ಯಾಪ್ತಿಯಲ್ಲಿ ಬರುವುದಿಲ್ಲವಾದುದರಿಂದ, ಅವುಗಳನ್ನು ಇಲ್ಲಿ ಪ್ರಸ್ತುತಪಡಿಸಲಾಗಿಲ್ಲ.

ಇಲ್ಲಿ ಗಮನಿಸಬೇಕಾದ ಮುಖ್ಯ ವಿಷಯವೆಂದರೆ, ಅರಮನೆಗಳ ಮತ್ತು ಅವುಗಳ ಸಂಕೀರ್ಣದ ಬಹು ವಿಧ ಕಟ್ಟಡಗಳ ರೂಪರೇಷೆ, ವಿನ್ಯಾಸ, ರಚನಾಕ್ರಮ ಮುಂತಾದ ವಾಸ್ತು ಪದ್ಧತಿಗಳನ್ನು ಕುರಿತು ಯಾವುದೇ ಕವಿಯು ವಿವರಣೆಗಳನ್ನು ನೀಡಲು ಮುಂದಾಗಿರುವುದಿಲ್ಲ. ಹಾಗೆ ನೀಡುವುದು ಅವರ ಉದ್ದೇಶವಾಗಿರಲಿಲ್ಲ. ಅಥವಾ ಅವುಗಳ ಅವಶ್ಯಕತೆಯೂ ಇರಲಿಲ್ಲ. ಏಕೆಂದರೆ ಅವರ ಗ್ರಂಥರಚನಾ ಮೂಲೋದ್ದೇಶವು, ತಮ್ಮ ಕವಿತಾ ಪಾಂಡಿತ್ಯ ಮತ್ತು ಕಥಾನಿರೂಪಣಾ ಸಾಮರ್ಥ್ಯಗಳನ್ನು ಮಾಧ್ಯಮಗಳನ್ನಾಗಿ ಉಪಯೋಗಿಸಿಕೊಂಡು ಜನ ಸಾಮಾನ್ಯರಲ್ಲಿ ಕಥೆಗಳನ್ನು ನಿರೂಪಿಸಿ ತಮ್ಮ ತಮ್ಮ ಧರ್ಮಗಳ ಪ್ರಚಾರ ಮಾಡುವುದಾಗಿತ್ತು. ಅದುವೇ ಮೂಲ ಧ್ಯೆಯವಾಗಿತ್ತು. ಹಾಗಾಗಿ ಆ ವಿವರಣೆಗಳಿಗೆ ಅಲ್ಲಿ ಅವಕಾಶವಿರಲಿಲ್ಲ. ಈಗ ಪ್ರಸ್ತುತಪಡಿಸಿರುವ ವಿವರಣೆಗಳಾದರೋ ಆ ಕಥೆಗಳಲ್ಲಿ ಸಂದರ್ಭೋಚಿತವಾಗಿ, ಪ್ರಾಸಂಗಿಕವಾಗಿ ವಿಷಯ ನಿರೂಪಿತ ವರ್ಣನೆಗಳಲ್ಲಿ ಸಂಯೋಗವಾಗಿ ಒಳಸೇರಿಕೊಂಡಿರುವ ಅಂಶಗಳಾಗಿವೆ. ಹಾಗಿದ್ದಾಗಲೂ, ಆ ವಿಜಯನಗರ ಕಾಲದ ಅರಮನೆಯನ್ನು ಮತ್ತು ಅಲ್ಲಿಯ ಜೀವನ ಚಟುವಟಿಕೆಗಳನ್ನು ಕುರಿತು ನಮಗೆ ಒಂದು ಸ್ಥೂಲ ಚಿತ್ರವನ್ನು ಅವು ಒದಗಿಸುವಲ್ಲಿ ಸಫಲವಾಗಿವೆ.

ಸಂಕೇತಗಳ ಪರಿಚಯ

ಸಂ.	: ಸಂಧಿ ಅಥವಾ ಆಶ್ವಾಸ				
ಪ.	: ಪದ್ಯ				
ವಚನ	: ಪದ್ಯಗಳ ಮಧ್ಯದ ವಚನ ಭಾಗ				
ಜೈ.ಭಾ.	: ಜೈಮಿನಿ ಭಾರತ	ಕವಿ	:	ಲಕ್ಷ್ಮೀಶ	ಸು. ಕ್ರಿ.ಶ. 1347*

ಧ.ಪು.	: ಧರ್ಮನಾಥ ಪುರಾಣ	ಕವಿ	:	ಬಾಹುಬಲಿ ಪಂಡಿತ	ಸು. ಕ್ರಿ.ಶ.	1352
ಪ.ಪು.	: ಪದ್ಮರಾಜ ಪುರಾಣ	ಕವಿ	:	ಪದ್ಮಣಾಂಕ	ಸು. ಕ್ರಿ.ಶ.	1385
ಸೊ.ಸೋ.	: ಸೊಬಗಿನ ಸೋನೆ	ಕವಿ	:	ದೇಪರಾಜ	ಸು. ಕ್ರಿ.ಶ.	1410
ಜೀ.ಚ.	: ಜೀವಂಧರ ಚರಿತೆ	ಕವಿ	:	ಭಾಸ್ಕರ	ಸು. ಕ್ರಿ.ಶ.	1424
ಪ್ರೌ.ಕಾ.	: ಪ್ರೌಢರಾಯನ ಕಾವ್ಯ	ಕವಿ	:	ಅದೃಶ್ಯ	ಸು. ಕ್ರಿ.ಶ.	1433
ಜ್ಞಾ.ಚ.	: ಜ್ಞಾನಚಂದ್ರಾಭ್ಯುದಯ	ಕವಿ	:	ಕಲ್ಯಾಣಕೀರ್ತಿ	ಸು. ಕ್ರಿ.ಶ.	1439
ಭ.ವೈ.	: ಭರತೇಶ ವೈಭವ ಸಂಗ್ರಹ	ಕವಿ	:	ರತ್ನಾಕರವರ್ಣಿ	ಸು. ಕ್ರಿ.ಶ.	1457
ಸ.ಕೌ.	: ಸಮ್ಯುಕ್ತ ಕೌಮುದಿ	ಕವಿ	:	ಬೊಮ್ಮರಸ	ಸು. ಕ್ರಿ.ಶ.	1509
ರಾ.ಚ.	: ರಾಮನಾಥ ಚರಿತೆ	ಕವಿ	:	ನಂಜುಂಡ	ಸು. ಕ್ರಿ.ಶ.	1525
ಮೊ.ತ.	: ಮೋಹನ ತರಂಗಿಣಿ	ಕವಿ	:	ಕನಕದಾಸ	ಸು. ಕ್ರಿ.ಶ.	1550
ವಿ.ಚ.	: ವಿಜಯಕುಮಾರಿ ಚರಿತೆ	ಕವಿ	:	ಶೃತಕೀರ್ತಿ	ಸು. ಕ್ರಿ.ಶ.	1567
ಚ.ಪು.	: ಚನ್ನಬಸವ ಪುರಾಣ	ಕವಿ	:	ವಿರೂಪಾಕ್ಷ ಪಂಡಿತ	ಸು. ಕ್ರಿ.ಶ.	1585
ಕಂ.ವಿ.	: ಕಂಠೀರವ ನರಸರಾಜ ವಿಜಯ	ಕವಿ	:	ಗೋವಿಂದ ವೈದ್ಯ	ಸು. ಕ್ರಿ.ಶ.	1648

* ಗ್ರಂಥ ನಿರ್ಮಾಣ ಕಾಲವನ್ನು ತಿಳಿಸುವಾಗ, ಆರ್. ನರಸಿಂಹಾಚಾರ್ ಅವರು ತಮ್ಮ 'ಕರ್ನಾಟಕ ಕವಿ ಚರಿತ್ರೆ'ಯಲ್ಲಿ ಹೇಳಿರುವುದನ್ನೇ ಅನುಸರಿಸಲಾಗಿದೆ.

ಟಿಪ್ಪಣಿಗಳು

1. a) George Michell, 1992, *The Vijayanagara Courtly Style,* American Institute of Indian Studies, New Delhi.

   b) George Michell & Antonio Martinelli, 1994, *The Royal Palaces of India,* Thames and Hudson, London.

   c) Patil C.S., 1995, "Palace Architecture" in *Vijayanagara: Progress of Research,* 1983-84, Directorate of Archaeology and Museums, Mysore, pp. 119-135.

   d) John M. Fritz, George Michell and M.S.Nagaraja Rao, 1984, *The Royal Centre at Vijayanagara, Preliminary Report,* University of Melborne, Parkville.

   e) George Michell, 1990, *Vijayanagara: Architectural Inventory of the Urban Core;* Vols. I & II, Directorate of Archaeology and Museums, Mysore.
2. George Michell, 1992, *Op.cit.*
3. Patil C.S., 1995: *Op.cit.*
4. *Ibid.*, pp. 83-84 for map on p. 120; John Fritz *etal.*, 1984, *Op.cit.*
5. Patil C.S., *Op.cit.*, for plans and locations of palaces in the urban core of Vijayanagara. Fig. 47 to 52.
6. *Ibid.*, p. 132 and D.J. Davison-Jenkins, 1997, *The Irrigation and Water Supply Systems of Vijayanagara,* American Institute of Indian Studies, New Delhi.
7. ನಾಗೇಗೌಡ ಹೆಚ್.ಎಲ್., 1966, *ಪ್ರವಾಸಿ ಕಂಡ ಇಂಡಿಯಾ,* ನಂ. 2, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ಮತ್ತು ಕೆಳಗಿನವುಗಳನ್ನು ನೋಡಬಹುದು.

a) R. Sewell, 1992 (reprint), *A Forgotten Empire*, Asian Educational Services, New Delhi.

b) ಸದಾನಂದ ಕನವಳ್ಳಿ, 1992, *ಮರೆತು ಹೋಗಿರುವ ಸಾಮ್ರಾಜ್ಯ, ವಿಜಯನಗರ* (ಕನ್ನಡಕ್ಕೆ ಭಾಷಾಂತರಿಸಿದ್ದು), ಕನ್ನಡ ವಿಶ್ವವಿದ್ಯಾಲಯ, ಹಂಪೆ.

8. ನಾಗೇಗೌಡ, ಹೆಚ್.ಎಲ್. *ಅದೇ,* ಪುಟ 155-166.

9. *ಅದೇ,* ಪುಟ 290-293.

10. *ಅದೇ,* ಪುಟ 362-383.

11. *ಅದೇ,* ಪುಟ 410-416.

12. *ಕನ್ನಡ ನಿಘಂಟು,* ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಸಂಪುಟ 8, ಪುಟ 8662 ಮತ್ತು ಸಂಪುಟ 2, ಪುಟ 2718.

8. ಮಾಲ್ಯವಂತ ಪರ್ವತ - ಒಂದು ಅಧ್ಯಯನ


ಟಿ.ಎಂ. ಮಂಜುನಾಥಯ್ಯ

ಮಾಲ್ಯವಂತ ಪರ್ವತವು ಪಂಪಾಕ್ಷೇತ್ರದ (ಪಂಪಾಪುರದ) ಪೂರ್ವ ದಿಗ್ಭಾಗದಲ್ಲಿರುವ ಪ್ರಾಕೃತಿಕ ಕಲ್ಲು ಬಂಡೆಗಳಿಂದಾವೃತವಾಗಿರುವ ದೊಡ್ಡ ಪರ್ವತ. ಪಂಪಾಪುರದ ಪರಿಸರದಲ್ಲಿಯೇ ಇರುವುದೆಂದು ಮಹಾಮಾತ್ಯ ಲಕ್ಷ್ಮೀಧರನ ಶಾಸನದಲ್ಲಿ[1] ಉಲ್ಲೇಖಗೊಂಡಿರುವ ಈ ಪರ್ವತ ಪವಿತ್ರ ಸ್ಥಾನವನ್ನು ಪಡೆದುಕೊಂಡಿದೆ. ಪಂಪಾಪುರದ ಪರಿಸರದಲ್ಲಿರುವ ಮತಂಗ, ಮಾಲ್ಯವಂತ, ಹೇಮಕೂಟ, ಋಷ್ಯಮುಖ, ಗಂಧಮಾದನ ಪರ್ವತಗಳು ಅತ್ಯಂತ ಪ್ರಮುಖವಾದವುಗಳೆಂದು ರಾಮಾಯಣದ ಕಿಷ್ಕಿಂಧ ಖಾಂಡದಲ್ಲಿ ಉಲ್ಲೇಖಗೊಂಡಿವೆ. ಶ್ರೀರಾಮಚಂದ್ರನ ಸಹೋದರ ಲಕ್ಷ್ಮಣ ಮಾಲ್ಯವಂತ ಪರ್ವತದಲ್ಲಿ ಹನುಮಂತನನ್ನು ಭೇಟಿಯಾಗಿದ್ದು, ನಂತರ ಚಾತುರ್ಮಾಸವನ್ನು ಈ ಪರ್ವತದಲ್ಲಿ ಕಳೆದು ವಾಲಿಯನ್ನು ವಧಿಸಿ ಸುಗ್ರೀವನಿಗೆ ಪಟ್ಟಾಭಿಷೇಕ ಮಾಡಿಸಿದ್ದು, ಇದಕ್ಕಿಂತ ಮೊದಲು ಕೇರಳ ರಾಜ್ಯದಿಂದ ಮಾಲ್ಯವಂತನೆಂಬ ಋಷಿ ಈ ಸ್ಥಳದಲ್ಲಿ ವಾಸ ಮಾಡಿದ್ದು, ಅವನು ಶ್ರೀ ವಿರೂಪಾಕ್ಷ ದೇವರ ಪರಮ ಭಕ್ತನಾಗಿದ್ದನೆಂದೂ ಅವನ ಹೆಸರಿನಲ್ಲಿ ಮಾಲ್ಯವಂತ ಪರ್ವತವೆಂದು ಕರೆಯಲಾಗಿದೆ ಎಂದೂ ಪಂಪಾ ಮಹಾತ್ಮೆಯಲ್ಲಿ ಉಲ್ಲೇಖಗೊಂಡಿದೆ.[2] ಹರಿಹರನ ಪಂಪಾಪುರದ ರಗಳೆ,[3] ರಾಘವಾಂಕನ ಹರಿಶ್ಚಂದ್ರ ಕಾವ್ಯ, ಕರಸ್ಥಲ ನಾಗಲಿಂಗ ಚರಿತ್ರೆ ಮುಂತಾದ ಅನೇಕ ಸಾಹಿತ್ಯ ಗ್ರಂಥಗಳು ಈ ಪರ್ವತವನ್ನು ಕುರಿತು ವರ್ಣಿಸುತ್ತವೆ. ಅಲ್ಲದೆ ಇದೊಂದು ಪ್ರಖ್ಯಾತ ಶೈವ ಕ್ಷೇತ್ರವೆಂತಲೂ ಮತ್ತು ಅನೇಕ ತೀರ್ಥಗಳಿಂದ ಕಂಗೊಳಿಸುತ್ತದೆಂದೂ ತಿಳಿಸುತ್ತವೆ.

ಮಾಲ್ಯವಂತ ಪರ್ವತದ ಮೇಲಿರುವ ರಘುನಾಥ ದೇವಾಲಯ ವಿಜಯನಗರ ಕಾಲದಲ್ಲಿ (16ನೇ ಶತಮಾನ) ನಿರ್ಮಾಣವಾಗಿದೆ. ಅದಕ್ಕಿಂತ ಹಿಂದೆ ಇದೊಂದು ಪ್ರಖ್ಯಾತ ಶೈವ ಕ್ಷೇತ್ರವಾಗಿತ್ತೆಂಬುದಕ್ಕೆ ಅಲ್ಲಿರುವ ಶೈವ ಧರ್ಮದ ಅವಶೇಷಗಳಿಂದ ತಿಳಿಯಬಹುದಾಗಿದೆ. ರಘುನಾಥ ದೇವಾಲಯದ ಪೂರ್ವ ದಿಕ್ಕಿನ ಬಂಡೆಯ ಮೇಲೆ ಪಂಚ ಲಿಂಗಗಳನ್ನು ಕೊರೆಯಲಾಗಿದೆ. ಇದರ (ಕೆಳ ಭಾಗದಲ್ಲಿ) ಸನಿಹದಲ್ಲಿರುವ ಗುಹೆಯಲ್ಲಿ ಬಂಡೆಯ ಮೇಲೆ ಏಕ ಲಿಂಗವನ್ನು ಮತ್ತು ಇದರ ಸಮೀಪದಲ್ಲಿರುವ ಒಂಟಿ ಗುಂಡಿನ ಮೇಲೆ ಏಕ ಲಿಂಗ ಮತ್ತು ತೀರ್ಥಗಳನ್ನು ಕಾಣಬಹುದು. ಪಶ್ಚಿಮ ಭಾಗದಲ್ಲಿರುವ ಬಂಡೆಯ ಮೇಲೆ ಚಿಕ್ಕದಾದ ಗುಹಾಂತರ ದೇವಾಲಯವಿದ್ದು ಅದರೊಳಗೆ ಶಿವಲಿಂಗ ಮತ್ತು ನಂದಿಯ ವಿಗ್ರಹಗಳಿವೆ. ಈ ದೇವಾಲಯವನ್ನು ಪ್ರಸನ್ನ ಮಾಲ್ಯವಂತ ಅಥವಾ ಪ್ರಸನ್ನ ವಿರೂಪಾಕ್ಷ ದೇವಾಲಯವೆಂದು ಕರೆಯಲಾಗುತ್ತಿದೆ. ಇದರ ಪಕ್ಕದಲ್ಲಿ ಒಂದು ತೀರ್ಥ, 33 ಶಿವಲಿಂಗಗಳು ಮತ್ತು ನಂದಿಯ ವಿಗ್ರಹಗಳಿವೆ. ಈ ತೀರ್ಥವನ್ನು ಪಂಪಾ ಮಹಾತ್ಮೆಯಲ್ಲಿ ಲಕ್ಷ್ಮಣ ತೀರ್ಥವೆಂದು ಹೆಸರಿಸಲಾಗಿದೆ. ಈ ತೀರ್ಥದ ಪಶ್ಚಿಮಕ್ಕೆ ಬಂಡೆಯ ಮೇಲೆ ಕೊರೆದಿರುವ ಶಿವಲಿಂಗ, ದಕ್ಷಿಣ ಭಾಗದಲ್ಲಿ ಶಿವಲಿಂಗಗಳು ಮತ್ತು ಉತ್ತರ ದಿಕ್ಕಿನಲ್ಲಿ ಶಿವಲಿಂಗ ಮತ್ತು ನಂದಿ ವಿಗ್ರಹಗಳಿವೆ. ರಘುನಾಥ ದೇವಾಲಯದ ಪಕ್ಕದಲ್ಲಿರುವ ತೀರ್ಥವನ್ನು ರಾಮತೀರ್ಥವೆಂದು ಕರೆಯಲಾಗಿದೆ. ಇದಲ್ಲದೆ ಅಗ್ನೇಯ ದಿಕ್ಕಿನಲ್ಲಿ ವೀರಭದ್ರ ದೇವಾಲಯವಿದೆ. ಅದರ ಪಕ್ಕದಲ್ಲಿ ಶಿವಲಿಂಗ ಮತ್ತು ನಂದಿಯ ವಿಗ್ರಹಗಳಿವೆ. ಈ ಶಿವಲಿಂಗವನ್ನು ಕಾಳಹಸ್ತಿ ಲಿಂಗವೆಂದು ಸೂಚಿಸುವ ಶಾಸನವು ಪಕ್ಕದಲ್ಲಿದೆ. ಇದರ ಪಕ್ಕದಲ್ಲಿ ತೀರ್ಥ, ಶಿವಲಿಂಗ ಮತ್ತು ನಂದಿ ವಿಗ್ರಹಗಳಿವೆ. ವೀರಭದ್ರ ದೇವಾಲಯದ ಕೆಳಭಾಗದಲ್ಲಿ ಗುಂಡಿನ ಮೇಲೆ ಮೈಲಾರ ದೇವರು, ಗಣೇಶ ಮತ್ತು ಭೈರವ ವಿಗ್ರಹಗಳಿವೆ. ಹಂಪೆಯ ರತ್ನಕೂಟದಲ್ಲಿಯ ಕೆಲವು ಶಾಸನಗಳು ಮಾಲ್ಯವಂತ ಮೈಲಾರ ದೇವರು ಮತ್ತು ಮಾಲ್ಯವಂತ ತೀರ್ಥಗಳನ್ನು ಉಲ್ಲೇಖಿಸುತ್ತವೆ.[4] ಶಾಸನದ ಉಲ್ಲೇಖಕ್ಕೆ ಸಂಬಂಧಿಸಿದಂತೆ ಮಾಲ್ಯವಂತ ಪರ್ವತದ ಈ ಭಾಗದಲ್ಲಿ ಮೈಲಾರ ದೇವರ ವಿಗ್ರಹ ಮತ್ತು ತೀರ್ಥವಿರುವುದರಿಂದಲೂ ಮತ್ತು ಈ ಎಲ್ಲಾ ಮೇಲಿನ ಅಂಶಗಳಿಂದಲೂ ಈ ಪರ್ವತವನ್ನು ಮಾಲ್ಯವಂತ ಪರ್ವತವೆಂದು ಕರೆಯಲಾಗಿದೆ. ಮಾಲ್ಯವಂತ ಪರ್ವತವು ಒಂದು ಪ್ರಖ್ಯಾತ ಶೈವ ಕ್ಷೇತ್ರವಾಗಿತ್ತು ಎಂಬುದಕ್ಕೆ ಅನುಮಾನವಿಲ್ಲ.

ಈಗಿರುವ ರಘುನಾಥ ದೇವಾಲಯ ಕ್ರಿ.ಶ. 16ನೇ ಶತಮಾನಕ್ಕಿಂತ ಮುಂಚಿತವಾಗಿ ಇರಲಿಲ್ಲವೆಂಬುದು ದೇವಾಲಯದ ವಾಸ್ತು ಶೈಲಿಯಿಂದ ತಿಳಿಯಬಹುದಾಗಿದೆಯೆಂದು ಅನಿಲಾ ವರ್ಗೀಸ್‌ರವರು ಪ್ರತಿಪಾದಿಸುತ್ತಾರೆ.[5] ವಿಜಯನಗರದ ಸಂಗಮ ವಂಶದ ಅರಸರ ನಂತರ ಆಳ್ವಿಕೆಗೆ ಬಂದ ಅರಸರು ಶ್ರೀವೈಷ್ಣವ ಧರ್ಮದ ಅನುಯಾಯಿಗಳಾಗಿದ್ದುದರಿಂದ ಮತ್ತು ಶ್ರೀವೈಷ್ಣವ ಧರ್ಮಕ್ಕೆ ಹೆಚ್ಚಿನ ಮನ್ನಣೆ ಪ್ರೋತ್ಸಾಹಗಳನ್ನು ಕೊಟ್ಟಿದ್ದುದರಿಂದ ಈ ದೇವಾಲಯವನ್ನು ನಿರ್ಮಿಸಿರಬಹುದೆಂದು ಅಭಿಪ್ರಾಯ ಪಟ್ಟಿರುವರು. ಈ ದೇವಾಲಯದ ಕುರಿತಾಗಿ ಸಾಕಷ್ಟು ಅಧ್ಯಯನ ಮಾಡಿರುವ ಜಾರ್ಜ್ ಮಿಷಲ್‌ರವರು 16ನೇ ಶತಮಾನಕ್ಕಿಂತ ಪೂರ್ವದಲ್ಲಿ ರಘುನಾಥ ದೇವಾಲಯದ ಸ್ಥಾಪನೆ ಆಗಿಲ್ಲವೆಂದು ಅಭಿಪ್ರಾಯ ಪಡುತ್ತಾರೆ.[6]

ಜಾನ್ ಮಾಕ್ಕಿಮ್ ಮಾಲ್‌ವಿಲ್ಲೆ ಮತ್ತು ಜಾನ್ ಫ್ರಿಟ್ಜ್‌ರವರು ಮಾಲ್ಯವಂತ ರಘುನಾಥ ಪರ್ವತದ ಮೇಲಿರುವ ಪ್ರಸನ್ನ ವಿರೂಪಾಕ್ಷ (ಪ್ರಸನ್ನ ಮಾಲ್ಯವಂತ) ದೇವಾಲಯ, ಮಾತಂಗ ಪರ್ವತದ ವೀರಭದ್ರ ದೇವಾಲಯ ಹಾಗೂ ಹಂಪೆಯ ವಿರೂಪಾಕ್ಷ ದೇವಾಲಯದ




1. ಮಾಲ್ಯವಂತ ದೇವಾಲಯ ಮತ್ತು ಹಿಂಭಾಗದಲ್ಲಿ ಗುಂಡಿನ ಕೆಳಗಿರುವ ಪ್ರಸನ್ನ ಮಾಲ್ಯವಂತ




2. ಮಾಲ್ಯವಂತ ಪರ್ವತದ ಪೂರ್ವ ದಿಕ್ಕಿನ ಒಂಟಿಗುಂಡಿನ ಮೇಲಿರುವ ಮಂಟಪ



3. ಮಂಟಪದ ಬದಿಯಲ್ಲಿರುವ ತೀರ್ಥ



4. ರಘುನಾಥ ದೇವಾಲಯದ ಮುಂದಿರುವ ಪಂಚಲಿಂಗಗಳು



5. ತೀರ್ಥದ ಪಕ್ಕದಲ್ಲಿರುವ ಶಿವಲಿಂಗ



6. ಮೈಲಾರದೇವರ ಹತ್ತಿರದಲ್ಲಿರುವ ಭೈರವ



7. ಮೈಲಾರದೇವರ ಪಕ್ಕದ ಗುಂಡಿನ ಮೇಲಿನ ಗಣೇಶ



8. ಮೈಲಾರದೇವರು



9. ಮಾಲ್ಯವಂತ ಪರ್ವತದ ಪೂರ್ವದಿಕ್ಕಿನಲ್ಲಿಯ ವೀರಭದ್ರ ಮತ್ತು ಕಾಳಹಸ್ತಿಲಿಂಗ




10. ವೀರಭದ್ರ ದೇವಾಲಯದ ಮುಂದಿರುವ ಶಿವಲಿಂಗ - ನಂದಿ




11. ಆಗ್ನೇಯ ದಿಕ್ಕಿನಲ್ಲಿರುವ ಶಿವಲಿಂಗ - ನಂದಿ ಮತ್ತು ತೀರ್ಥ



12. ಶಿವಲಿಂಗ - ನಂದಿ ಮತ್ತು ಲಕ್ಷ್ಮಣತೀರ್ಥ



13. ಪ್ರಸನ್ನ ಮಾಲ್ಯವಂತ ದೇವಾಲಯದ ಹಿಂದಿರುವ ಶಿವಲಿಂಗ



14. ಮಾಲ್ಯವಂತ ಪರ್ವತದ ಉತ್ತರ ದಿಕ್ಕಿನಲ್ಲಿರುವ ನಂದಿ ಮತ್ತು ಶಿವಲಿಂಗ

ಗರ್ಭಗೃಹಗಳು ಪೂರ್ವ ಪಶ್ಚಿಮವಾಗಿದ್ದು ಒಂದೇ ರೇಖೆಯಲ್ಲಿವೆ ಎಂದೂ ಮತ್ತು ಮಕರ ಸಂಕ್ರಾಂತಿ ದಿನದಂದು ಸೂರ್ಯನ ಕಿರಣಗಳಿಗೆ ನೇರವಾಗಿರುತ್ತವೆಂದು ವೈಜ್ಞಾನಿಕ ಉಪಕರಣಗಳಿಂದ ಸಾಬೀತು ಪಡಿಸಿದ್ದಾರೆ.[7]

ಮಾಲ್ಯವಂತವೆಂಬ ಹೆಸರು ಕೇರಳದಿಂದ ಬಂದು ಈ ಸ್ಥಳದಲ್ಲಿ ನೆಲೆಸಿದ್ದ ಮಾಲ್ಯವಂತನೆಂಬ ಶಿವಭಕ್ತನಿಂದಾಗಿ ಬಂದಿದೆ. ಮಾಲ್ಯವಂತನು ಹಿಂದೆ ಕೇರಳದಲ್ಲಿ ಜಯಸಿಂಹ ಮಹಾರಾಜನ ಪಟ್ಟಣದಲ್ಲಿ ವಾಸಿಸುತ್ತಿದ್ದನು. ನಿತ್ಯವೂ ಮಹಾರಾಜನಿಗೆ ಪೂಜೆಗಾಗಿ ಹೂ ಮಾಲೆಗಳನ್ನು ಮಾಡಿಕೊಡುತ್ತಿದ್ದನು. ಒಮ್ಮೆ ಹೂ ಮಾಲೆಯಲ್ಲಿ ಸ್ತ್ರೀಯರ ಕೂದಲು ಇದೆಯೆಂದು ಆಪಾದಿಸಿದ ರಾಜನು ಮಾಲ್ಯವಂತನನ್ನು ತನ್ನ ರಾಜ್ಯದಿಂದ ಹೊರಹಾಕಿದನು. ಮಾಲ್ಯವಂತನು ತನ್ನ ಆಸ್ತಿ ಸಂಪತ್ತನ್ನು ಶಿವಸ್ವರೂಪಿಗಳಿಗೆ ದಾನ ಮಾಡಿ ಪರಮ ವೈರಾಗ್ಯನಿಧಿಯಾಗಿ ಸಂಸಾರವನ್ನು ತೊರೆದು ಒಬ್ಬ ಋಷಿಯ ಅಪ್ಪಣೆಯಂತೆ ಪಂಪಾ ಕ್ಷೇತ್ರಕ್ಕೆ ಬಂದು ಈ ಪರ್ವತದಲ್ಲಿ ನೆಲೆಗೊಂಡು, ಶಿವಪೂಜೆಯಲ್ಲಿ ನಿರತನಾಗಿ, ಬಿಲ್ವ, ತುಳಸಿ, ಹೂ ಮಾಲೆಗಳನ್ನು ಋಷಿಗಳಿಗೆ ಅರ್ಪಿಸುತ್ತಿದ್ದು, ಸ್ವಧರ್ಮದಿಂದ ಆರಾಧಿಸಿದ ಮಹೇಶ್ವರನನ್ನು ಸಂತೋಷಪಡಿಸಿ ಶಿವಾನುಗ್ರಹಕ್ಕೆ ಕಾರಣವಾದ ಸದಾ ಶಿವಯೋಗಿಗಳ ಪ್ರೀತಿಯನ್ನು ಸಂಪಾದಿಸುತ್ತೇನೆಂದು ನಿಶ್ಚಯಿಸಿ ಶಿವಯೋಗಿಗಳ ಸೇವೆಯಲ್ಲಿ ನಿರತನಾದನು. ನಂತರ ಶಿವಯೋಗಿಗಳು ಮಾಲ್ಯವಂತನ ಸೇವೆಯಿಂದ ಸಂತುಷ್ಟರಾಗಿ ಶಿವಪಂಚಾಕ್ಷರಿ ಮಂತ್ರವನ್ನು ಉಪದೇಶಿಸಿ "ನೀನು ಸದಾ ಶಿವಯೋಗಿಗಳನ್ನು ಸೇವಿಸುತ್ತಾ ಸದ್ಭಕ್ತನಾಗಿರುವೆ" ಎಂದು ಹರಸಲಾಗಿ, ಮಾಲ್ಯವಂತನು ಜಿತೇಂದ್ರಿಯನಾಗಿ ಉಗ್ರ ತಪಸ್ಸನ್ನು ಆಚರಿಸಿದನು. ಇದರಿಂದ ಶ್ರೀ ವಿರೂಪಾಕ್ಷನು ಪ್ರತ್ಯಕ್ಷನಾದನು. ಆದುದರಿಂದ ಈ ಸ್ಥಳಕ್ಕೆ ಪ್ರಸನ್ನ ಮಾಲ್ಯವಂತ ಅಥವಾ ಪ್ರಸನ್ನ ವಿರೂಪಾಕ್ಷ ಎಂದು ಕರೆಯಲಾಗುತ್ತಿದೆ. ಅಲ್ಲದೆ ಮಾಲ್ಯವಂತ ಪರ್ವತದ ಸನಿಹದಲ್ಲಿ ದಕ್ಷಿಣ ದಿಕ್ಕಿನಲ್ಲಿ ಮಹಾ ಸದಾಶಿವಯೋಗಿಗಳ ಮಂಟಪ, ಶಿವಯೋಗಿ ದೇವರ ಗವಿ,[8] ಮುಂತಾದವುಗಳು ಇರುವುದರಿಂದಲೂ ಮಾಲ್ಯವಂತ ಪರ್ವತವೂ ಇದೇ ಆಗಿದೆ.

ರಾಮಚಂದ್ರ (ಹಜಾರರಾಮ) ದೇವಾಲಯದ ಅಧಿಷ್ಠಾನದ ಮೇಲಿರುವ ಪ್ರೌಢದೇವರಾಯನ ಕಾಲದ ಶಾಸನದಲ್ಲಿರುವ ಪಂಪಾಂಬೆಯ[9] ಉಲ್ಲೇಖದಿಂದ ಈ ಎಲ್ಲಾ ಪ್ರದೇಶಕ್ಕೆ ಪಂಪಾಕ್ಷೇತ್ರ ಅಥವಾ ಪಂಪಾಪುರವೆಂದು ಕರೆಯುತ್ತಿದ್ದುದು ಸ್ಪಷ್ಟವಾಗುತ್ತದೆ. ಕವಿ ಹರಿಹರನ ಪಂಪಾಪುರದ ರಗಳೆಯಲ್ಲೂ ಪಂಪಾಪುರದ ವರ್ಣನೆಯು ಸವಿಸ್ತಾರವಾಗಿದೆ. ಆದ್ದರಿಂದ ದೇವರಕೊಂಡಾರೆಡ್ಡಿಯವರು ಹಂಪೆಯ ಇನ್ನೊಂದು ಮಾಲ್ಯವಂತವೆಂದು ರತ್ನಕೂಟಕ್ಕೆ ಕರೆದಿರುವುದು ಅಷ್ಟೇನು ಸಮಂಜಸವಲ್ಲವೆಂದು ತೋರುತ್ತದೆ.[10]

ಮಾಲ್ಯವಂತ ಪರ್ವತದಲ್ಲಿರುವ ಶಿವಲಿಂಗ ಮತ್ತು ತೀರ್ಥಗಳಿರುವ ಸ್ಥಳಗಳಲ್ಲಿ ಶಾಸನವಿರುವ ಭಾಗಗಳನ್ನು ಒಡೆದು ಹಾಕಿದ್ದಾರೆ. ಅದೊಂದು ಶೈವ ಕ್ಷೇತ್ರವಲ್ಲವೆಂದು ಪ್ರತಿಪಾದಿಸುವುದಕ್ಕಾಗಿ ಹೀಗೆ ಮಾಡಲಾಗಿದೆ. ಆದರೂ ಸಹ ಶಿವಲಿಂಗಗಳನ್ನು ಒಡೆದು ಹಾಕಿರುವುದಿಲ್ಲ. ಆದರೆ ವೀರಭದ್ರ, ಭೈರವ, ಮೈಲಾರ ದೇವರು, ಪಂಚ ಲಿಂಗಗಳು, 33 ಶಿವಲಿಂಗ ಮತ್ತು ನಂದಿ ವಿಗ್ರಹಗಳು, ಪ್ರಸನ್ನ ವಿರೂಪಾಕ್ಷ (ಮಾಲ್ಯವಂತ) ದೇವಾಲಯ, ಕಾಳಹಸ್ತಿ ಲಿಂಗವೆಂಬ ಶಾಸನ, ಗಣೇಶ ದೇವಾಲಯ ಈ ಎಲ್ಲಾ ಆಧಾರಗಳಿರುವುದರಿಂದ ಇದನ್ನು ಮಾತ್ರ ಮಾಲ್ಯವಂತ ಪರ್ವತವೆಂದು ಕರೆದಿರುವುದು ಸಮರ್ಪಕವಾಗಿದೆ.

ಟಿಪ್ಪಣಿಗಳು

1. *ಸೌತ್ ಇಂಡಿಯನ್ ಇನ್ಸ್‌ಕ್ರಿಪ್‌ಶನ್ಸ್,* IV, ಸಂ. 267.
2. ಓಂ ಗುರು ಸಿದ್ಧಲಿಂಗೇಶ್ವರ ಸ್ವಾಮಿಗಳು, *ಪಂಪಾಮಹಾತ್ಮೆ,* ಪು. 276-283.
3. ಬಸವರಾಜ ಮಲಶೆಟ್ಟಿ, *ಹರಿಹರನ ಹನ್ನೊಂದು ರಗಳೆಗಳು,* ಜಗದ್ಗುರು ಕೊಟ್ಟೂರು ಸ್ವಾಮಿ ಮಠ, ಹೊಸಪೇಟೆ; ಬಿ.ಸಿ. ಜವಳಿ, ಮತ್ತು ಮಲಬಾದಿ ವೀರಭದ್ರಪ್ಪ, *ಹಂಪೆಯ ಹರಿಹರ ದೇವನ ರಗಳೆಗಳು;* ಫ.ಗು. ಹಳಕಟ್ಟಿ, *ಹರಿಹರನ ರಗಳೆಗಳು.*
4. ಟಿ.ಎಂ. ಮಂಜುನಾಥಯ್ಯ, 1998, "ಹಂಪಿಯ ರತ್ನಕೂಟ ಪರ್ವತದಲ್ಲಿನ ಶಾಸನಗಳ ಅಧ್ಯಯನ," *ವಿಜಯನಗರ ಅಧ್ಯಯನ,* ಸಂ. 3, ಎಂ.ಎಲ್. ಶಿವಶಂಕರ್ ಮತ್ತು ಚನ್ನಬಸಪ್ಪ ಎಸ್. ಪಾಟೀಲ (ಸಂ.), ಪು. 52-63.
5. ಅನಿಲಾ ವರ್ಗೀಸ್, 1995, *ರಿಲೀಜಿಯಸ್ ಟ್ರೆಡಿಷನ್ಸ್ ಎಟ್ ವಿಜಯನಗರ,* ಪು. 43-53, 69-84.
6. ಜಾರ್ಜ್ ಮಿಷಲ್, 1990, *ವಿಜಯನಗರ ಆರ್ಕಿಟೆಕ್ಚರಲ್ ಇನ್‌ವೆಂಟರಿ ಆಫ್ ಅರ್ಬನ್ ಕೋರ್,* ಪು. 266-282.
7. ಜಾನ್ ಎಂ. ಫ್ರಿಟ್ಜ್, ಜಾನ್ ಮಾಕ್ಕಿಂ ಮಾಲ್‌ವಿಲ್ಲೆ, "ಆಸ್ಟ್ರಾನಮಿಕಲ್ ಸ್ಟಡೀಸ್ ಆಫ್ ವಿಜಯನಗರ: ದಿ ಸೇಕ್ರೆಡ್ ಹಿಲ್ಸ್," *ವಿಜಯನಗರ ಪ್ರೋಗ್ರೆಸ್ ಆಫ್ ರಿಸರ್ಚ್ 1988-91,* ಡಿ.ವಿ. ದೇವರಾಜ್ ಮತ್ತು ಚನ್ನಬಸಪ್ಪ ಎಸ್. ಪಾಟೀಲ (ಸಂ.), ಪು. 221-235.

8. ಎಂ.ಎಸ್. ನಾಗರಾಜರಾವ್ (ಸಂ.), *ವಿಜಯನಗರ ಪ್ರೋಗ್ರೆಸ್ ಆಫ್ ರಿಸರ್ಚ್ 1983-84*, ಪುಟ ಸಂ. 46, ಶಾಸನ ಸಂ. 54-55; ಚನ್ನಬಸಪ್ಪ ಎಸ್. ಪಾಟೀಲ ಮತ್ತು ವಿನೋದಾ ಪಾಟೀಲ (ಸಂ.), *ಇನ್‌ಸ್ಕ್ರಿಪ್ಷನ್ಸ್ ಆಟ್ ವಿಜಯನಗರ* (ಹಂಪಿ), ಪುಟ ಸಂಖ್ಯೆ 110, ನಂ. 381, ಪುಟ ಸಂ. 104, ಸಂ. 360.

9. ಅನ್ನಾ ದಲ್ಲಾಪಿಕೋಲಾ, ಜಾನ್ ಎಂ ಫ್ರಿಟ್ಜ್, ಜಾರ್ಜ್ ಮಿಷಲ್ ಮತ್ತು ಎಸ್. ರಾಜಶೇಖರ್, 1992, *ದಿ ರಾಮಚಂದ್ರ ಟೆಂಪಲ್ ಆಟ್ ವಿಜಯನಗರ.*

10. ದೇವರಕೊಂಡಾರೆಡ್ಡಿ, 1997, "ಹಂಪೆಯ ಇನ್ನೊಂದು ಮಾಲ್ಯವಂತ," *ವಿಜಯನಗರ ಅಧ್ಯಯನ*, ಸಂ. 2, ಎಂ.ಎಲ್. ಶಿವಶಂಕರ್ ಮತ್ತು ಚನ್ನಬಸಪ್ಪ ಎಸ್. ಪಾಟೀಲ (ಸಂ.), ಪುಟ ಸಂ. 108.

9. ಮುದುಗಲ್ಲು ಕೋಟೆ

ಸುಜಾತಾ ಪಾಟೀಲ್

ಐತಿಹಾಸಿಕ ಹಿನ್ನೆಲೆ: ಐತಿಹಾಸಿಕವಾಗಿ ಮಹತ್ವವನ್ನು ಪಡೆದಿರುವ ಮುದುಗಲ್ಲು ಪಟ್ಟಣವು ಇಂದಿನ ರಾಯಚೂರು ಜಿಲ್ಲೆಯ ಲಿಂಗಸೂಗೂರು ತಾಲೂಕಿನಲ್ಲಿದೆ. ಲಿಂಗಸೂಗೂರಿನಿಂದ ದಕ್ಷಿಣಕ್ಕೆ ಗಂಗಾವತಿಗೆ ಹೋಗುವ ರಸ್ತೆಯಲ್ಲಿ 18 ಕಿ.ಮೀ. ದೂರದಲ್ಲಿದೆ. ಈ ಪಟ್ಟಣವು ಕ್ರಿ.ಶ. 150ರಲ್ಲಿ ಅಸ್ತಿತ್ವದಲ್ಲಿ ಇತ್ತೆಂಬುದು ಗ್ರೀಕ್ ಪ್ರವಾಸಿ ಟಾಲೆಮಿಯಿಂದ ತಿಳಿಯುತ್ತದೆ. ಈತನು ಮುದುಗಲ್ಲನ್ನು 'ಮೊದಗಲ್ಲು' ಎಂದು ಉಲ್ಲೇಖಿಸಿದ್ದಾನೆ. ಕ್ರಿ.ಶ. 1048ರ ಶಾಸನ ಮತ್ತು ಕ್ರಿ.ಶ. 1065ರ ಕಲ್ಯಾಣ ಚಾಲುಕ್ಯರ ಶಾಸನಗಳಲ್ಲಿ ಈ ಪಟ್ಟಣವನ್ನು ಅಗ್ರಹಾರ ಮುದುಗಲ್ಲು ಎಂತಲೂ, ನಂತರ ಕ್ರಿ.ಶ. 1191ರ ಕರಡಿಕಲ್ಲು ಶಾಸನದಲ್ಲಿ ಮುದುಗಲ್ಲು ಪಟ್ಟಣವೆಂದೂ ಕರೆಯಲಾಗಿದೆ. ಎರಡು ಸಾವಿರ ವರ್ಷಗಳ ಇತಿಹಾಸವನ್ನು ಹೊಂದಿರುವ ಮುದುಗಲ್ಲು ಪಟ್ಟಣವು ವಿಜಯನಗರ ಅರಸರ ಕಾಲದಲ್ಲಿ ಅತ್ಯಂತ ಮಹತ್ವದ ಪಾತ್ರವಹಿಸಿತ್ತು.

ಕೃಷ್ಣ-ತುಂಗೆಯರ ನಡುವಿನ ಫಲವತ್ತಾದ ಪ್ರದೇಶದಲ್ಲಿರುವ ಈ ಮುದುಗಲ್ಲು ಪಟ್ಟಣದ ಸಲುವಾಗಿ ಹಲವಾರು ಯುದ್ಧಗಳು ನಡೆದಿವೆ. ಈ ಫಲವತ್ತಾದ ಪ್ರದೇಶವನ್ನು ವಶಪಡಿಸಿಕೊಳ್ಳುವುದು ಪ್ರತಿಯೊಬ್ಬ ಅರಸನ ಗುರಿ ಮತ್ತು ಪ್ರತಿಷ್ಠೆಯಾಗಿತ್ತು. ಈ ಪಟ್ಟಣವನ್ನು ವಶಪಡಿಸಿಕೊಳ್ಳಲು ಮೊದಲು ವಿಜಯನಗರ ಮತ್ತು ಬಹಮನಿ, ನಂತರ ವಿಜಯನಗರ ಮತ್ತು ಅದಿಲ್‌ಶಾಹಿ ಅರಸರ ನಡುವೆ ಬಹಳಷ್ಟು ಯುದ್ಧಗಳು ನಡೆದವು. ಕೆಲವು ಕಾಲ ವಿಜಯನಗರ ಅರಸರ ಆಳ್ವಿಕೆಯಲ್ಲಿ ಮತ್ತು ಕೆಲವು ಕಾಲ ಬಹಮನಿ, ಆದಿಲ್‌ಶಾಹಿ ಅರಸರ ಅಧಿಪತ್ಯದಲ್ಲಿ ಮೆರೆದ ಮುದುಗಲ್ಲು ಪಟ್ಟಣದ ಕೋಟೆಯು ಸ್ವಾರಸ್ಯಕರ ಇತಿಹಾಸವನ್ನು ಹೊಂದಿದೆ.

ವಿಜಯನಗರ ಅರಸ ಎರಡನೆಯ ದೇವರಾಯನ ಆಳ್ವಿಕೆಯಲ್ಲಿ ಮುದುಗಲ್ಲನಾಡು ವರದಣ್ಣನಾಯಕನ ನಾಯಕತನದಲ್ಲಿತ್ತೆಂಬುದು ಕೋಟೆಯ ಮುಳ್ಳಗಸಿಯಲ್ಲಿರುವ ಕ್ರಿ.ಶ. 1436ರ ಶಾಸನದಿಂದ ತಿಳಿಯುತ್ತದೆ. ಆಗ ಮುದುಗಲ್ಲ ಸಿಂಪಿಗ ಭೂತನಾಥನ ಮಗ ರಾಹುತ ವೀರಣ್ಣನು ಪಣತೊಟ್ಟು ಸುಲ್ತಾನನ ಬೆಟ್ಟದ ಕೋಟೆಯ ಹೊನ್ನ ಕಳಸವನ್ನು ತಂದನು. ಆ ಕಳಸವನ್ನು ಅರಸನ ಬಳಿಗೆ ಕಳಿಸಿದಾಗ ಅರಸನಿಗೆ ಸಂತೋಷವಾಯಿತು. ಅದಕ್ಕೆ ವರದಣ್ಣನಾಯಕ ಮತ್ತು ಇತರ ಅಧಿಕಾರಿಗಳು ಕೂಡಿಕೊಂಡು ರಾಹುತ ವೀರಣ್ಣನಿಗೆ ಮೇಟಿಗೊಳಗವನ್ನು ಬಿಟ್ಟರು. ಕ್ರಿ.ಶ. 1502ರಲ್ಲಿ ವಿಜಯನಗರ ಅರಸ ಸಾಳುವ ನರಸಿಂಹನ ಆಳ್ವಿಕೆಯಲ್ಲಿ ಸಾಳುವ ತಿಮ್ಮಯ್ಯನು ಕೋಟೆಯೊಳಗಿನ ಬಾವಿಯನ್ನು ಕಟ್ಟಿಸಿದನು. ಈ ಬಾವಿಯನ್ನು ಈಗ ಚಾರ್‌ಮಹಲ್ ಬಾವಿಯೆಂದು ಕರೆಯುತ್ತಾರೆ. ಇದೇ ಸಾಳುವ ತಿಮ್ಮಯ್ಯ ಕೋಟೆಯಲ್ಲಿನ ಎರಡು ಕೊತ್ತಳಗಳನ್ನು ಕಟ್ಟಿಸಿರುವುದು ಅವುಗಳ ಮೇಲಿನ ಶಾಸನಗಳಿಂದ ತಿಳಿಯುತ್ತದೆ. ಇವನೇ ಮುಂದೆ ಕೃಷ್ಣದೇವರಾಯನ ಮಂತ್ರಿಯಾದನು. ಕ್ರಿ.ಶ. 1503ರಲ್ಲಿ ಕುರುಗೋಡ ಸೋಮಣ್ಣನಾಯಕನ ಪ್ರಧಾನ ಗಂಗರಸನ ಮಗ ನರಸಪ್ಪನು ಕೋಟೆಯೊಳಗೆ ಬೆಟ್ಟದ ಮೇಲಿರುವ ಬಾವಿಯನ್ನು ಕಟ್ಟಿಸಿದನು. ಇದನ್ನು ಈಗ ಹಲಾಲಖೋರ ಬಾವಿಯೆಂದು ಕರೆಯುತ್ತಾರೆ. ಕ್ರಿ.ಶ. 1561ರಲ್ಲಿ ರಾಮರಾಯನು ವಿಜಯನಗರವನ್ನು ಆಳುತ್ತಿದ್ದಾಗ ವೆಂಗಳಪ್ಪ ನಾಯಕನು ಮುದುಗಲ್ಲ ಕೋಟೆಯ ಅಧಿಕಾರಿಯಾಗಿದ್ದನು. ಈತನು ಕ್ರಿ.ಶ. 1565ರಲ್ಲಿ ಮುಳ್ಳಗಿಸಿಯ ಮೊಗಶಾಲೆ ಮತ್ತು ಕದಗಳನ್ನು ಮಾಡಿಸಿದನು.

ಕ್ರಿ.ಶ. 1565ರಲ್ಲಿ ವಿಜಯನಗರದ ಪತನವಾದ ನಂತರ ಮುದುಗಲ್ಲ ಕೋಟೆಯು ಬಿಜಾಪುರದ ಆದಿಲ್‌ಶಾಹಿ ಅರಸರ ವಶದಲ್ಲಿ ಉಳಿಯಿತು. ಮೊದಲನೆಯ ಅಲಿ ಆದಿಲ್‌ಶಾಹನ ಕಾಲದಲ್ಲಿ ಫತೆಜಂಗ್ ಬುರುಜಿನ ನಿರ್ಮಾಣ ಕಾರ್ಯದ ಉಸ್ತುವಾರಿಯನ್ನು ಮುದುಗಲ್ಲ ಕೋಟೆಯ ನೈಬ್‌ಗೈಬತ್ (ಉಪಪಾಲಕ) ದ್ಯಾನತ್‌ಖಾನನು ವಹಿಸಿದ್ದನು. ಅದೇ ಅರಸನ ಕಾಲದಲ್ಲಿ ದೀನ್‌ದಾರ್‌ಖಾನನು ಒಂದು ಮಸೀದಿಯನ್ನು ಕಟ್ಟಿಸಿದನು. ಕ್ರಿ.ಶ. 1574-75ರಲ್ಲಿ ಅಲಿಬುರುಜಿನ ನಿರ್ಮಾಣವಾಯಿತು. ಎರಡನೆಯ ಇಬ್ರಾಹಿಮ್ ಆದಿಲ್‌ಶಾಹನ ಕಾಲದಲ್ಲಿ ಕ್ರಿ.ಶ. 1583ರಲ್ಲಿ ಒಂದು ಮಸೀದಿಯ ನಿರ್ಮಾಣವಾಯಿತು. ಈ ಅರಸನ ಅಧಿಕಾರಿಯಾದ ಮಲಿಕ್‌ಮುರಾದ್‌ಖಾನನು ಚಾರಮಹಲ್ ಬುರುಜನ್ನು ಕ್ರಿ.ಶ. 1591ರಲ್ಲಿ ಕಟ್ಟಿಸಿದನು. ಮಲಿಕ್‌ಮುರಾದನು ಇನ್ನೂ ಅನೇಕ ಬುರುಜುಗಳನ್ನು ಕಟ್ಟಿಸಿದನು. ಅದೇ ಅರಸನ ಮಂತ್ರಿಯಾದ ದಿಲಾವರ್‌ಖಾನನ ಕಾಲದಲ್ಲಿ ಕ್ರಿ.ಶ. 1603-04ರಲ್ಲಿ ಒಂದು ಬುರುಜನ್ನು ಕಟ್ಟಲಾಯಿತು.

ಕೋಟೆ: ಎರಡು ಸುತ್ತಿನ ಕೋಟೆಯು ಆಯತಾಕಾರದಲ್ಲಿದೆ. ಒಳಕೋಟೆ ಬಲಿಷ್ಠವಾಗಿದ್ದು ಎತ್ತರವಾಗಿದೆ ಮತ್ತು ಹೊರಕೋಟೆ ದಪ್ಪ ಮತ್ತು ಎತ್ತರದಲ್ಲಿ ಚಿಕ್ಕದಾಗಿದೆ. ಕೋಟೆಗಳ ಹೊರಮೈಯನ್ನು ದಪ್ಪಕಲ್ಲುಗಳಿಂದ ಮತ್ತು ಒಳಮೈಯನ್ನು ಚಿಕ್ಕಕಲ್ಲುಗಳಿಂದ ಕಟ್ಟಲಾಗಿದೆ. ಎರಡೂ ಕೋಟೆಗಳು ಒಂದರ ಪಕ್ಕದಲ್ಲಿ ಮತ್ತೊಂದು, ಒಂದನ್ನೊಂದು ಅನುಸರಿಸಿ ಒಟ್ಟಿಗೆ ಸಾಗುತ್ತವೆ (ಚಿತ್ರ 1). ಒಳಕೋಟೆ ವಿಜಯನಗರ

ಅರಸರಿಂದ ಕಟ್ಟಲ್ಪಟ್ಟು ಮುಸ್ಲಿಮರಿಂದ ದುರಸ್ತಿಗೊಂಡಿದೆ. ಹೊರಕೋಟೆಯು ಬಿಜಾಪುರದ ಇಬ್ರಾಹಿಮ್ ಆದಿಲ್‌ಶಾಹನ ಕಾಲದಲ್ಲಿ ಮಲ್ಲಿಕ್‌ಮುರಾದ್‌ನಿಂದ ಕಟ್ಟಲ್ಪಟ್ಟಿದೆ. ಹೊರಕೋಟೆಯ ಹೊರಭಾಗದಲ್ಲಿ ಅಗಲವಾದ ಕಂದಕವಿದೆ. ಈಗಲೂ ಇದರಲ್ಲಿ ಮಳೆಗಾಲದಲ್ಲಿ ನೀರು ತುಂಬಿರುತ್ತದೆ.

ಒಳಕೋಟೆಯಲ್ಲಿ ಚೌಕಾಕಾರದ ಮತ್ತು ವೃತ್ತಾಕಾರದ ಅನೇಕ ಕೊತ್ತಳಗಳಿವೆ. ಚೌಕಾಕಾರದ ಕೊತ್ತಳಗಳು ಮೊದಲಿನವಾಗಿದ್ದು ಹಿಂದೂ ಶೈಲಿಯಲ್ಲಿವೆ. ಇವುಗಳಲ್ಲಿ ಎರಡನ್ನು ಸಾಳುವ ತಿಮ್ಮಯ್ಯನು ಕಟ್ಟಿಸಿದನೆಂದು ಅವುಗಳ ಮೇಲಿನ ಶಾಸನಗಳಿಂದ ತಿಳಿಯುತ್ತದೆ. ಈತನೇ ಮುಂದೆ ಕೃಷ್ಣದೇವರಾಯನ ಮಂತ್ರಿಯಾದ ತಿಮ್ಮರಸನು. ಬಂದೂಕುಗಳ ಉಪಯೋಗ ಪ್ರಾರಂಭವಾದಾಗ ಈ ಕೋಟೆಯ ಮೇಲ್ಭಾಗದಲ್ಲಿ ಬಂದೂಕು ಕಿಂಡಿಗಳನ್ನು ಕಟ್ಟಲಾಗಿದೆ. ಬಲಿಷ್ಠವಾದ ಕೆಲವು ಕೊತ್ತಳಗಳ ಮೇಲೆ ತೋಪುಗಳನ್ನಿಡಲಾಗದೆ. ಕೋಟೆಯುದ್ದಕ್ಕೂ ಮೇಲ್ಭಾಗದಲ್ಲಿ ತೋಪು ಮತ್ತು ಬಂದೂಕುಗಳನ್ನು ತೂರಿಸಲು ಮಾಡಿದ ರಂಧ್ರಗಳುಳ್ಳ ತೆನೆಗಳ ಸಾಲಿದೆ. ಈ ಕೋಟೆಯಲ್ಲಿ ಪೂರ್ವದಿಕ್ಕಿಗೆ ಕಾಟೀದರ್ವಾಜ ಅಥವಾ ಮುಳ್ಳಗಸಿ ಮತ್ತು ಉತ್ತರ ದಿಕ್ಕಿಗೆ ಫತೇದರ್ವಾಜ ಎಂಬ ಎರಡು ಬಾಗಿಲುಗಳಿವೆ.

ಹೊರಕೋಟೆಯಲ್ಲಿ ಎರಡು ಬಾಗಿಲುಗಳಲ್ಲದೆ ದಿಡ್ಡಿಗಳೆಂದು ಶಾಸನಗಳಲ್ಲಿ ಉಲ್ಲೇಖಗೊಂಡ ಅನೇಕ ಚಿಕ್ಕ ಬಾಗಿಲುಗಳಿವೆ. ಈ ಚಿಕ್ಕ ಬಾಗಿಲುಗಳು ಹೊರಗಿನಿಂದ ಹೊರಕೋಟೆ ಮತ್ತು ಒಳಕೋಟೆಗಳ ಮಧ್ಯದಲ್ಲಿರುವ ದಾರಿಗೆ ಪ್ರವೇಶವನ್ನು ಒದಗಿಸುತ್ತವೆ. ಹೊರಕೋಟೆಯ ಮೇಲ್ಭಾಗದಲ್ಲಿಯೂ ತೆನೆಗಳ ಸಾಲಿದ್ದು, ಅವುಗಳಲ್ಲಿ ಬಂದೂಕು ಮತ್ತು ತೋಪುಗಳಿಗಾಗಿ ಮಾಡಿದ ಕಿಂಡಿಗಳಿವೆ.

ಕಾಟೀದರ್ವಾಜ ಅಥವಾ ಮುಳ್ಳಗಸಿ ಸಂಕೀರ್ಣದಲ್ಲಿ ಮೂರು ಬಾಗಿಲುಗಳಿದ್ದು, ಪ್ರವೇಶಮಾರ್ಗವು ಡೊಂಕಾಗಿದೆ. ಹೊರಬಾಗಿಲ ಇಕ್ಕೆಲಗಳಲ್ಲಿ ವೃತ್ತಾಕಾರದ ದೊಡ್ಡ ಕೊತ್ತಳಗಳಿವೆ (ಚಿತ್ರ 2). ಹೊರಬಾಗಿಲಿನ ಕದಗಳಿಗೆ ಕಬ್ಬಿಣದ ಚೂಪಾದ ಮೊಳೆಗಳನ್ನು ಹೊಡೆಯಲಾಗಿದೆ. ಇದರಿಂದ ಮನುಷ್ಯ ಅಥವಾ ಆನೆ ಕದಗಳ ಮೇಲೆ ಬಲಪ್ರಯೋಗ ಮಾಡಲು ಕಷ್ಟವಾಗುವದು. ಮಧ್ಯದ ಬಾಗಲಿನ ಇಕ್ಕೆಲಗಳಲ್ಲಿ ಕಂಬಗಳಿಂದ ಕೂಡಿದ ಮೊಗಸಾಲೆಯಿದೆ. ಇದನ್ನು ಕ್ರಿ.ಶ. 1560ರಲ್ಲಿ ವಿಜಯನಗರದ ಅರಸ ರಾಮರಾಯನ ಮಗನಾದ ಕೃಷ್ಣಪ್ಪರಾಜನ ಅಧಿಕಾರಿಯಾದ ವೆಂಗಳಪ್ಪನು ಕಟ್ಟಿಸಿದನು. ಇದೇ ಸಮಯದಲ್ಲಿ ಮಾಡಿಸಿದ ಮರದ ಕದಗಳ ಮೇಲೆಯೂ ಶಾಸನವಿದೆ. ಒಳಬಾಗಿಲು ಬಿದ್ದುಹೋಗಿದ್ದರೂ ಪ್ರವೇಶದ ಇಕ್ಕೆಲಗಳಲ್ಲಿರುವ ಕಟ್ಟೆಗಳ ಮೇಲೆ ಕಂಬಗಳಿದ್ದ ಗುರುತುಗಳಿವೆ. ವಿಶಾಲವಾದ ಫತೇದರ್ವಾಜದ ಸಂಕೀರ್ಣವು ನಾಲ್ಕು ಬಾಗಿಲುಗಳಿಂದ ಕೂಡಿದೆ (ಚಿತ್ರ 3). ಇಲ್ಲಿ ಪೂರ್ವ ಮತ್ತು ಪಶ್ಚಿಮಾಭಿಮುಖವಾಗಿರುವ ಎರಡು ಹೊರಬಾಗಿಲುಗಳು, ಪೂರ್ವಾಭಿಮುಖವಾಗಿರುವ ಮಧ್ಯದ ಬಾಗಿಲು ಮತ್ತು ಉತ್ತರಾಭಿಮುಖವಾಗಿರುವ ಒಳಬಾಗಿಲು ಇವೆ. ಪೂರ್ವ ದಿಕ್ಕಿಗಿರುವ ಹೊರಬಾಗಿಲು ಮತ್ತು ಮಧ್ಯದಲ್ಲಿರುವ ಒಂದು ಬಾಗಿಲನ್ನು ಮಲ್ಲಿಕ್‌ಮುರಾದ್ ಕಟ್ಟಿಸಿದನೆಂದು ಶಾಸನಗಳು ತಿಳಿಸುತ್ತವೆ.

ಈ ಎರಡೂ ಬಾಗಿಲುಗಳ ಪ್ರವೇಶಮಾರ್ಗವು ಅಂಕುಡೊಂಕಾಗಿರುವದರಿಂದ ಇವು ಸುಲಭವಾಗಿ ವೈರಿಗಳ ಕಣ್ಣಿಗೆ ಬೀಳುವದಿಲ್ಲ. ಚಿಕ್ಕ ಬಾಗಿಲುಗಳಾದ ದಿಡ್ಡಿಗಳ ಮುಂದೆ ಅರ್ಧವೃತ್ತಾಕಾರದ ಗೋಡೆಯನ್ನು ಕಟ್ಟಿ ಅದರ ಎರಡು ಪಾರ್ಶ್ವಗಳಲ್ಲಿ ಪ್ರವೇಶವನ್ನು ಒದಗಿಸಿರುವುದರಿಂದ ಇವೂ ಸಹ ವೈರಿಯ ಕಣ್ಣಿಗೆ ಬೀಳುವುದಿಲ್ಲ (ಚಿತ್ರ 4). ಕೋಟೆಯ ಮೇಲೆ ಅರ್ಧವೃತ್ತಾಕಾರದಲ್ಲಿ ಎದ್ದು ನಿಂತಿರುವ ತೆನೆಗಳನ್ನು ಅವುಗಳ ಮೇಲಿರುವ ಶಾಸನಗಳಲ್ಲಿ 'ನಿಟು'ಗಳೆಂದು ಕರೆಯಲಾಗಿದೆ. ವೈರಿಯ ಕಣ್ಣಿಗೆ ಕಾಣದಂತೆ ಅಡಗಿಕೊಂಡು ಯುದ್ಧ ಮಾಡುವ ತಂತ್ರದಲ್ಲಿ ನಿಟುಗಳ ಪಾತ್ರ ಬಹಳ ಮಹತ್ವದ್ದು. ಒಂದು ನಿಟುವಿನ ಹಿಂದೆ ನಿಂತು ಎರಡು ನಿಟುಗಳ ಮಧ್ಯದಲ್ಲಿರುವ ಸಂದಿಯಿಂದ ಬಾಣಗಳನ್ನು ಬಿಟ್ಟಾಗ ಬಾಣ ಬಿಡುವವನು ವೈರಿಯ ಕಣ್ಣಿಗೆ ಕಾಣುವುದಿಲ್ಲ ಮತ್ತು ವೈರಿಯು ಎಸೆದ ಯಾವುದೇ ಆಯುಧ ಅವನಿಗೆ ತಾಗುವುದಿಲ್ಲ. ಬಂದೂಕುಗಳನ್ನು ಉಪಯೋಗಿಸಲು ಪ್ರಾರಂಭಿಸಿದ ಮೇಲೆ ನಿಟುಗಳ ರಚನೆಯಲ್ಲಿಯೂ ಬದಲಾವಣೆಯಾಗಿದೆ. ಘನ ಗೋಡೆಗಳಾಗಿದ್ದ ಇವುಗಳ ಮೂಲಕ ಬಂದೂಕನ್ನು ತೂರಿಸಲು ಅನುಕೂಲವಾಗುವಂತೆ ರಂಧ್ರಗಳನ್ನು ಮಾಡಲಾಯಿತು. ಬೇರೆ ಬೇರೆ ದಿಕ್ಕುಗಳಲ್ಲಿ ವೈರಿಗಳನ್ನು ಕಂಡಾಗ ನಿಂತ ಸ್ಥಳದಿಂದಲೇ ಆಯಾ ದಿಕ್ಕುಗಳಲ್ಲಿ ಬಂದೂಕನ್ನು ಹಾರಿಸಲು ಅನುಕೂಲವಾಗುವಂತೆ ನಿಟುವಿನ ಒಳಬದಿಯಲ್ಲಿ ಒಂದು ರಂಧ್ರ ಮತ್ತು ಹೊರ ಬದಿಯಲ್ಲಿ ಬೇರೆ ಬೇರೆ ದಿಕ್ಕುಗಳಲ್ಲಿ ಅನೇಕ ರಂಧ್ರಗಳನ್ನು ಮಾಡಲಾಯಿತು. ಬಂದೂಕನ್ನು ಮೊದಲು ಒಳರಂಧ್ರದಲ್ಲಿ ತೂರಿಸಿ ನಂತರ ಬೇಕಾದ ದಿಕ್ಕಿನಲ್ಲಿರುವ ಹೊರ ರಂಧ್ರದಲ್ಲಿ ತೂರಿಸುವದರಿಂದ ಬೇಕಾದ ದಿಕ್ಕಿಗೆ ಬಂದೂಕನ್ನು ಹಾರಿಸಬಹುದು.

ತುರ್ತು ಪರಿಸ್ಥಿತಿಯಲ್ಲಿ ಸುಲಭವಾಗಿ ಮತ್ತು ತಕ್ಷಣದಲ್ಲಿ ಗುರುತಿಸಲು ಅನುಕೂಲವಾಗುವಂತೆ ಕೋಟೆಯ ವಿವಿಧ ಭಾಗಗಳಿಗೆ ಹೆಸರುಗಳನ್ನು ಇಡಲಾಗಿದೆ. ಬಸವನ ದಿಡ್ಡಿ, ಬಸವನ ಕೊತ್ತಳ, ಬಸವನ ನಿಟು, ಹನುಮನ ಕೊತ್ತಳ, ವಿನಾಯಕನ ನಿಟು, ಫತೇಬರುಜು ಮುಂತಾದವು ಅವುಗಳ ಮೇಲೆ ಬರೆದ ಶಾಸನಗಳಿಂದ ತಿಳಿದುಬರುತ್ತವೆ.

ಈ ಕೋಟೆಯ ಮೇಲೆ ಸುಮಾರು 80ಕ್ಕೂ ಹೆಚ್ಚು ಶಾಸನಗಳಿವೆ. ಈ ಶಾಸನಗಳಲ್ಲಿ ಅರಸರ ಅಥವಾ ಅಧಿಕಾರಿಗಳ ಬಿರುದುಗಳಿವೆ. ಇವುಗಳಲ್ಲಿ ಕೆಲವು "ಸ್ವಾಮಿಕಾರ್ಯಹೇತು, ಪ್ರಜಾಪಾಲಕ, ಸತ್ಯಸಂಧ, ರಣರಂಗಧೀರ, ಸ್ವಾಮಿದ್ರೋಹರಗಂಡ, ಸಾಹಸಭೀಮ, ಲೋಭಿವಜೀರರ




1. ಮುದುಗಲ್ಲು ಕೋಟೆ



2. ಮುದುಗಲ್ಲು ಕೋಟೆಯ ಕಾಟೀದರ್ವಾಜ (ಮುಳ್ಳಗಸೆ)



3. ಮುದುಗಲ್ಲು ಕೋಟೆಯ ಫತೇದರ್ವಾಜ



4. ಮುದುಗಲ್ಲು ಕೋಟೆಯ ದಿಡ್ಡಿಯ ಮುಂದಿರುವ ಅರ್ಧ ವೃತ್ತಾಕಾರದ ಗೋಡೆ

ಗಂಡ, ರಣದೊಳು ಹೆಮ್ಮೆಟ್ಟುವ ಹೇಡಿಗಳರಸ, ಆದಿಲ್‌ಶಾಹನ ಹಲಾಲಖೋರ ಮತ್ತು ಆದಿಲ್‌ಶಾಹನ ನೆಚ್ಚಿನ ಬಂಟ" ಮುಂತಾದ ಬಿರುದುಗಳು ಬಾಗಿಲು, ಕೊತ್ತಳ ಮತ್ತು ನಿಟುಗಳ ಸಂರಕ್ಷಣೆಗೆ ನೇಮಕಗೊಂಡ ಸೈನಿಕರಲ್ಲಿ ತಮ್ಮ ಒಡೆಯನ ಬಗ್ಗೆ ಅಭಿಮಾನ ಹುಟ್ಟಿಸಿ ತಮ್ಮ ಜೀವನದ ಹಂಗು ತೊರೆದು ತಮ್ಮ ಕರ್ತವ್ಯವನ್ನು ಪಾಲಿಸಲು ಪ್ರೇರೇಪಿಸುತ್ತಿದ್ದವು. ಇವುಗಳನ್ನು ಕೋಟೆಯ ಮೇಲೆ ಬರೆದಿರುವುದರಿಂದ ಅಲ್ಲಿ ಕಾರ್ಯನಿರ್ವಹಿಸುವ ಸೈನಿಕರು ಪದೇ ಪದೇ ಇವುಗಳನ್ನು ಓದಿದಾಗ ಅವರಿಗೆ ಅವರ ಕರ್ತವ್ಯಗಳು ನೆನಪಾಗುತ್ತಿದ್ದವು. ಇವು ಸೈನಿಕರಲ್ಲಿ ದೇಶಭಕ್ತಿಯ ಪ್ರಜ್ಞೆ ಮೂಡಿಸುವುದರ ಜೊತೆಗೆ ಚಾಡಿ ಹೇಳದಂತೆ, ಜಿಪುಣರಾಗದಂತೆ, ರಣರಂಗದಿಂದ ಪಲಾಯನ ಮಾಡದಂತೆ ಅನೇಕ ನೀತಿಗಳನ್ನು ಬೋಧಿಸುತ್ತಿದ್ದವು.

ಆಧಾರ ಗ್ರಂಥಗಳು

1. P.B. Desai, Shrinivas H. Ritti and B.R. Gopal, 1981, *A History of Karnataka.*
2. *Annual Report of His Exalted Highness the Nizam's Dominion for the year 1935-36*, Hyderabad, pp. 25-27.
3. *Epigraphia Indo-Moslemica*, 1935-36.
4. P.B. Desai, 1958, *A Corpus of Inscriptions in the Kannada Districts of Hyderabad State*, Hyderabad.
5. *Annual Report on Indian Epigraphy*, 1957-58.
6. ಚನ್ನಬಸಪ್ಪ ಎಸ್. ಪಾಟೀಲ, "ಮುದುಗಲ್ಲು ಕೋಟೆ," *ದಿಕ್ಸೂಚಿ* ಮಾಸಪತ್ರಿಕೆ, ಸೆಪ್ಟೆಂಬರ್ 1993, ಪು. 26-27.
7. Channabasappa S. Patil, 1996, "Mudugal Fort and Its Bearing on the Defence System at Vijayanagara," D.V. Devaraj and Channabasappa S. Patil (Eds.), *Vijayanagara: Progress of Research 1988-91*, pp. 197-209.
8. Channabasappa S. Patil and Vinoda Patil (Eds.), 1998, *Inscriptions of Raichur District,* Mysore.

10. ಇಮ್ಮಡಿ ಹರಿಹರನ ಕಾಲದ ಹೊಸ ಶಿಲಾಶಾಸನ

ಶ್ರೀನಿವಾಸ ವಿ. ಪಾಡಿಗಾರ

ಉತ್ತರ ಕನ್ನಡ ಜಿಲ್ಲೆಯ ಕಾರವಾರದಿಂದ ಸುಮಾರು 10 ಕಿ.ಮೀ. ಈಶಾನ್ಯಕ್ಕೆ ಕಾಳೀ ನದಿಯ ದಕ್ಷಿಣ ತಟದಲ್ಲಿ ಕಿನ್ನರ ಗ್ರಾಮವಿದೆ. ಈಚೆಗೆ ಶಿಲಾಶಾಸನವೊಂದು ಇಲ್ಲಿ ಬೆಳಕಿಗೆ ಬಂತು. ನನ್ನ ವಿದ್ಯಾರ್ಥಿ ಶ್ರೀ ಹೇಮಂತ ಭಟ್ ಅವರು ಅದನ್ನು ಪ್ರತಿ ಮಾಡಿ ನನಗೆ ಕಳುಹಿಸಿದರು.[1] ಶಾಸನವನ್ನು ಶಿಲಾ ಫಲಕದ ಎರಡು ಪಾರ್ಶ್ವಗಳಲ್ಲಿ ಬರೆದಿದೆ.

ಶಾಸನ ಒಟ್ಟು 30 ಸಾಲುಗಳನ್ನು ಒಳಗೊಂಡಿದ್ದು 21 ಸಾಲುಗಳು ಮುಂಭಾಗದಲ್ಲಿಯೂ ಉಳಿದ 9 ಸಾಲುಗಳು ಹಿಂಭಾಗದಲ್ಲಿಯೂ ಇವೆ. ಅಕ್ಷರಗಳನ್ನು, ಸ್ಪಷ್ಟ, ಸುಂದರ ದುಂಡಾದ 14ನೇ ಶತಮಾನದ ಕನ್ನಡ ಲಿಪಿಯಲ್ಲಿ ಬರೆದಿದೆ. ಭಾಷೆ ಕನ್ನಡ. ಹಿಮ್ಮಗ್ಗಲಿನ ಮೇಲ್ಭಾಗದಲ್ಲಿ ಕೆಲವು ಅಸ್ಪಷ್ಟ ನಾಗರೀ ಅಕ್ಷರಗಳಿವೆ. ಬರವಣಿಗೆ ಗದ್ಯದಲ್ಲಿದ್ದು ಹಲವು ತಪ್ಪುಗಳಿವೆ.

ಇದು ವಿಜಯನಗರದ ಸಂಗಮ ವಂಶದ ಇಮ್ಮಡಿ ಹರಿಹರನ 5ನೇ ಆಡಳಿತ ವರ್ಷದ ಶಾಸನ. ಶಾಲಿವಾಹನ ಶಕ 1304, ರುಧಿರೋದ್ಗಾರಿ ಸಂವತ್ಸರ, ದ್ವಿತೀಯ ಭಾದ್ರಪದ ಬಹುಳ 10, ಮಂಗಳವಾರ ಎಂಬುದಾಗಿ ಕಾಲೋಲ್ಲೇಖವಿದೆ. ಆದರೆ ರುಧಿರೋದ್ಗಾರಿ ಸಂವತ್ಸರವು ಶಕ 1305ಕ್ಕೆ ಸಮನಾಗಿರುವದರಿಂದ ಶಕ 1304 ತೀರಿತ್ತೆಂದು ಭಾವಿಸಬೇಕಾಗುತ್ತದೆ. ಅಂತಾಗಿ ಈ ಕಾಲವಿವರಗಳು ಮಂಗಳವಾರ, 22 ಸೆಪ್ಟೆಂಬರ್ 1383ಕ್ಕೆ ಸರಿಹೊಂದುತ್ತವೆ. ಆ ವರ್ಷ ಅಧಿಕ ಭಾದ್ರಪದ ಮಾಸವಿದ್ದುದರಿಂದ 'ದ್ವಿತೀಯ', ಅಂದರೆ 'ನಿಜ' ಭಾದ್ರಪದವನ್ನು ಶಾಸನ ಹೇಳಿರುವುದು ಸಮಂಜಸವಾಗಿದೆ.

ಶಾಸನದ ಸಾರಾಂಶವನ್ನು ಕೆಳಗಿನಂತೆ ಸಂಗ್ರಹಿಸಬಹುದು. ಶಾಲಿವಾಹನ ಶಕ ವರ್ಷ, ತರುವಾಯ 'ಮಹಾಮಂಡಲೇಶ್ವರ', 'ಅರಿರಾಯ ವಿಭಾಡ', 'ಭಾಷೆಗೆ ತಪ್ಪುವ ರಾಯರ ಗಂಡ', 'ಹಿಂದೂರಾಯ ಸುರಿತಾಣ' ಬಿರುದಾಂಕಿತ ವೀರ ಹರಿಹರರಾಯ ಮತ್ತು ಅವನ ನಿರೂಪಿತ ಹೊನ್ನಾವರದ ಮಲಪ ಒಡೆಯನ ಉಲ್ಲೇಖ. ರಾಜ್ಯೋದಯವಾದ 5ನೇ ವರುಷ ಮತ್ತು ಇತರ ಕಾಲವಿವರ. ಮಲಪ ಅಧಿಕಾರಿಯ ಕಡಿವಾಡದ ಚಾವಡಿಯ ಬಯಸಿಕೆಯಂತೆ ಹಾಗೂ ಆ ನಾಡ ನಖರ ವಿದ್ಯಮಾನದಂತೆ ಸಿರಿವಾಡದ ಮಾವಲಹಬುವಿನ ಮಗ ಕೇಸವಹಬು, ಸೀಧರಹಬು, ವಿಠಲಹಬುವಿನ (ಮಗ ?) ಮಾವಲ ಹಾಗೂ ಗ್ರಾಮದವರೆಲ್ಲ ಸುಂತೇಸ್ವರದೇವರಿಗೆ ತಮ್ಮ ಭಕ್ತಿನಿಮಿತ್ತವಾಗಿ ನೀಡಿದ ಭೂದಾನದ ಉಲ್ಲೇಖ. ಈ ಭೂಮಿ ತಮ್ಮೂರ ಅಡಿಯಲ್ಲಿ (ಪ್ರಾಯಶಃ ಹೊರವಲಯದ ಇಳಿಜಾರು) ಇದ್ದು, ಇನ್ನೂ ಕೆಳಕ್ಕಿದ್ದ 'ಗಜನಿ' ಕೂಡ ಅದರಲ್ಲಿ ಸೇರಿತ್ತು. ಇದನ್ನು ಧಾರಾಪೂರ್ವಕವಾಗಿ, ಜನ್ಮಶಾಸನವಾಗಿ ಸೇಱುಗಲ್ಲನ್ನು ಇಕ್ಕಿ ಕೊಟ್ಟರು. ಇದಕ್ಕೆ ಸಾಕ್ಷಿಗಳು ಬಾಡದ ದಾಸಿಹಬುವಿನ ಮಗ ವಿಠಲಹಬು, ವಿಠಲಹೆಗಡೆ, ಕಡಿವಾಡದ ಪಾದಕಾರ ವಿಠಲಹಬು, ಅದೇ ಊರ ಚೌಹಳಿ (?) ಹರಿಹಬು. ಇವರ ಉಭಯಾನುಮತದಿಂದ ಶಾಸನದ ಪತ್ರ ಬರೆದಾತ ಸಿರಿವಾಡದ ಕುಳಕರಣಿ ನರಸಿಂಹ ಸೇನಭೋವ. ಈ ಭೂದಾನಕ್ಕೆ ತಪ್ಪಿದವರಿಗೆ ವಾರಣಾಸಿಯಲ್ಲಿ ಗೋಹತ್ಯೆ, ಬ್ರಹ್ಮಹತ್ಯೆ ಮಾಡಿದ, ಸುರಾಪಾನ ಮಾಡಿದ ಪಾಪ. ಕಲ್ಲಿನ ಮೇಲೆ ಇದನ್ನು ಬರೆದಾತ ವೀರ ನಾಗಣ ಮಂಗಚಾರಿ.

ಶಾಸನದಲ್ಲಿ ಕೆಲವು ಅಂಶಗಳು ಗಮನೀಯವಾಗಿವೆ. ಇಲ್ಲಿ ಹೆಸರಿಸಲ್ಪಟ್ಟಿರುವ ಹೊನ್ನಾವರದ ಮಲಪ ಒಡೆಯನು ಕರಾವಳಿ ಕರ್ನಾಟಕದಲ್ಲಿ ದೊರೆತಿರುವ ಇಮ್ಮಡಿ ಹರಿಹರನ ಕಾಲದ ಅನೇಕ ಶಾಸನಗಳಲ್ಲಿ ಉಲ್ಲೇಖಿತ ಮಲ್ಲಪ್ಪ ಒಡೆಯನೇ ಆಗಿದ್ದಾನೆ. ಬಾರಕೂರಿನ ಸುತ್ತಮುತ್ತಲಿನ 2ನೇ ಜನವರಿ 1386,[2] 3ನೇ ಮೇ 1387,[3] 17ನೇ ಜೂನ್ 1387,[4] ಇತ್ಯಾದಿ ಕಾಲನಿರ್ದೇಶನವಿರುವ ಶಾಸನಗಳಲ್ಲಿ 'ಮಹಾಪ್ರಧಾನ' ಎಂಬುದಾಗಿ ಈತ ಕಂಡುಬರುತ್ತಾನೆ. ತುಳು, ಹೈವೆ, ಕೊಂಕಣ ರಾಜ್ಯಗಳನ್ನು ಬಾರಕೂರು ರಾಜಧಾನಿಯಿಂದ ಆಳುತ್ತಿದ್ದನೆಂದು ಈ ಶಾಸನಗಳಲ್ಲಿ ಹೇಳಿದೆ. ಹೊನ್ನಾವರ ತಾಲೂಕಿನ ಹೊಡಕೆಶಿರೂರು ಗ್ರಾಮದ 2 ಡಿಸೆಂಬರ್ 1389ರ ಶಾಸನದಲ್ಲಿ[5] ಹೊನ್ನಾವರದಿಂದ ಈ ರಾಜ್ಯಗಳನ್ನು ಆಳುತ್ತಿದ್ದನೆಂದು ಉಲ್ಲೇಖವಿದೆ. ಉಡುಪಿ ಜಿಲ್ಲೆಯ 16 ಫೆಬ್ರವರಿ 1390,[6] 8 ಮಾರ್ಚ್ 1395[7] ಮತ್ತು 7 ಜುಲೈ 1396ರ[8] ಶಾಸನಗಳಲ್ಲಿ ಸಹ ಅವನು ಉಲ್ಲೇಖಿತನಾಗಿದ್ದಾನೆ. ಸದ್ಯ ಪ್ರಸ್ತುತ ಶಾಸನ ಬಹುಶಃ ಅವನನ್ನು ಉಲ್ಲೇಖಿಸುವ ಅತಿ ಪ್ರಾಚೀನ ಶಾಸನವೆಂದು ತೋರುತ್ತದೆ. ಕರಾವಳಿ ಪ್ರದೇಶದಲ್ಲಿ ವಿಜಯನಗರ ಅರಸರು ತಾವೇ ನೇಮಿಸಿದ ಅಧಿಕಾರಿಗಳ ಮೂಲಕ ಆಡಳಿತ ನಡೆಸಿತ್ತಿದ್ದುದಕ್ಕೆ ಇದು ಇನ್ನಷ್ಟು ಪುರಾವೆ ನೀಡುತ್ತದೆ. ಕರಾವಳಿಯ ಬಂದರುಗಳ ಮೂಲಕ ನಡೆಯುತ್ತಿದ್ದ ವ್ಯಾಪಾರದ ಮೇಲೆ ಹಿಡಿತ ಉಳಿಸಿಕೊಳ್ಳುವುದು ಇದಕ್ಕೆ ಪ್ರಮುಖ ಕಾರಣವೆಂದು ತೋರುತ್ತದೆ.

ಶಾಸನದಲ್ಲಿ ಹೆಸರಿಸಿರುವ 'ಸುಂತೇಶ್ವರ' ಎಂಬ ದೇವತೆಯ ಹೆಸರೂ ಕುತೂಹಲಕಾರಿಯಾಗಿದೆ. ವ್ಯಾಪಾರಿ ವರ್ಗದವರು/ಉತ್ಪಾದಕ ವರ್ಗದವರು ನಕರೇಶ್ವರ,[9] ತೆಲ್ಲಿಗೇಶ್ವರ,[10] ಕುಂಭೇಶ್ವರ,[11] ಗವರೇಶ್ವರ[12] ಮುಂತಾದ ವಿಶಿಷ್ಟ ಶ್ರೇಣಿ/ಉತ್ಪಾದನೆಯ ಹಿನ್ನೆಲೆಯಲ್ಲಿ ಶಿವಲಿಂಗಗಳನ್ನು

ಪ್ರತಿಷ್ಠಾಪಿಸುತ್ತಿದ್ದರೆಂಬುದು ಇತರ ಉಲ್ಲೇಖಗಳಿಂದ ತಿಳಿಯುತ್ತದೆ. ಬಹುಶಃ ಸುಂಠೇಶ್ವರ = ಶುಂಠೇಶ್ವರ ಎಂಬುದು ಶುಂಠಿಯ ವ್ಯಾಪಾರಸ್ಥರ ವಿಶೇಷ ದೈವವಾಗಿ ಇಲ್ಲಿ ಪ್ರತಿಷ್ಠಾಪಿತವಾಗಿತ್ತೇನೊ ! ಈ ಸಂದರ್ಭದಲ್ಲಿ ನಖರದ ಉಲ್ಲೇಖವೂ ಬಂದಿರುವದನ್ನು ಗಮನಿಸಬೇಕು.

'ಗಜನಿ' ಎಂಬ ಪದ ಕರಾವಳಿ ಕರ್ನಾಟಕದ ಶಾಸನಗಳಲ್ಲಿ ಸಾಕಷ್ಟು ಸಲ ಮರುಕಣಿಸುತ್ತದೆ. ಇದು ನೀರಿನಾಂಶ ಹೆಚ್ಚಾಗಿರುವ ನದಿ/ಸಮುದ್ರಕ್ಕೆ ತೀರ ಹತ್ತಿರವಿರುವ, ನೀರು ಹಿಂದೆ ಸರಿದಿರುವುದರಿಂದ ಪ್ರಕಟಗೊಂಡಿರುವ ಭೂಮಿಗೆ ಅನ್ವಯಿಸುತ್ತದೆ.[13]

'ಸೇಱುಗಲ್ಲು' ಎಂಬ ಪದ 'ಸೀಮೆಗಲ್ಲು' ಅಥವಾ 'ಮೂಲೆಗಲ್ಲು' ಎಂಬರ್ಥದಲ್ಲಿ ಇಲ್ಲಿ ಬಳಕೆಯಾಗಿದೆ. ದಾನ ನೀಡಿದ ಭೂಮಿಯ ಎರಡು ಪಾರ್ಶ್ವಗಳು ಸೇರಿಕೊಳ್ಳುವ ಸ್ಥಳದಲ್ಲಿ ಈ ಕಲ್ಲು ನೆಡಲ್ಪಡುತ್ತಿರಬೇಕು. ಬೇರೆ ಶಾಸನಗಳಲ್ಲಿ ಈ ಪದದ ಬಳಕೆಯಾಗಿರುವುದು ನನ್ನ ಗಮನಕ್ಕೆ ಬಂದಿಲ್ಲ.

ಶಾಸನದಲ್ಲಿ ಹೆಸರಿಸಲ್ಪಟ್ಟಿರುವ ಅನೇಕರ ಹೆಸರುಗಳೊಂದಿಗೆ 'ಹಬು' ಎಂಬ ಪದ ಸೇರ್ಪಡೆಯಾಗಿದೆ. ಇದು 'ಪ್ರಭು' ಪದದ ತದ್ಭವ. ಹಳ್ಳಿಯ ಗೌಡ ಎಂಬರ್ಥದಲ್ಲಿ ಇಲ್ಲಿ ಬಳಕೆಯಾದಂತಿದೆ. ಕಾರವಾರ ಪ್ರದೇಶದಲ್ಲಿ 'ಹಬ್ಬು' ಎಂಬ ಶೈವ ಬ್ರಾಹ್ಮಣ ವರ್ಗದವರಿದ್ದಾರೆ. ಆದರೆ ಇಲ್ಲಿ 'ಹಬು' ಎಂಬುದನ್ನು 'ಹಬ್ಬು' ಎಂಬುದಾಗಿ ಪರಿಗಣಿಸುವುದು ಅಷ್ಟು ಸಮಂಜಸವಾಗಿ ಕಾಣುತ್ತಿಲ್ಲ. ಕಡಿವಾಡದ 'ಪಾದಕಾರ' ವಿಠಲಹಬುವಿನ ಉಲ್ಲೇಖದಲ್ಲಿ 'ಪಾದಕಾರ' ಎಂಬುದರ ಅರ್ಥ ಸ್ಪಷ್ಟವಾಗುತ್ತಿಲ್ಲ. ತುಳುನಾಡಿನ ಶಾಸನಗಳಲ್ಲಿ 'ಪಾದೆಕಾರ' ಎಂಬ ಪದವನ್ನು 'ಊರ ಹಿರಿಯ', 'ಪ್ರಭು' ಎಂಬರ್ಥದಲ್ಲಿ ಬಳಸಲಾಗಿದೆ ಎಂದು ಡಾ. ವಸಂತ ಮಾಧವ ತಿಳಿಸಿದ್ದಾರೆ.[14] ಬಹುಶಃ ಅದೇ ಅರ್ಥವನ್ನು ಇಲ್ಲಿ ಅನ್ವಯಿಸಬಹುದೇನೊ.

ಈ ಶಾಸನದಲ್ಲಿ ಉಲ್ಲೇಖಿತ ಭೌಗೋಳಿಕ ಹೆಸರುಗಳನ್ನು ಗುರುತಿಸುವುದು ಕಷ್ಟವಲ್ಲ: ಹುನಾಉರ = ಹೊನ್ನಾವರ, ಹೊನ್ನಾವರ ತಾಲೂಕು; ಕಡಿವಾಡ = ಕಡವಾಡ, ಕಾರವಾರದಿಂದ ಈಶಾನ್ಯಕ್ಕೆ 7 ಕಿ.ಮೀ. ದೂರದಲ್ಲಿದೆ; ಬಾಡ = ಬಾಡ, ಕಾರವಾರದಿಂದ ಈಶಾನ್ಯಕ್ಕೆ 6 ಕಿ.ಮೀ. ದೂರದಲ್ಲಿದೆ; ಸಿರಿವಾಡ = ಶಿರವಾಡ, ಕಾರವಾರದಿಂದ ಈಶಾನ್ಯಕ್ಕೆ 5 ಕಿ.ಮೀ. ದೂರದಲ್ಲಿದೆ. ಇವೆಲ್ಲವೂ ಇಂದಿನ ಉತ್ತರ ಕನ್ನಡ ಜಿಲ್ಲೆಯಲ್ಲಿವೆ.

ಪಠ್ಯ[15]

ಮೊದಲ ಮುಖ

1 ಸಾಳಿವಾನ ಸಖು 1304 ಸ್ರೀಮನು ಮಹಾ-
2 ಮಂಡಳೇಸ್ಪುರ ಅರಿರಾಯವಿಭಾಡ ಭಾ-
3 ಸೆಗೆ ತಪುವ ರಾಯರಗಂಡ ಹೆಂ[ದೂ]-
4 ರಾಯ ಸುರಿತಾಣ ಸ್ರೀ ವೀರಹರಿಹರ[ರಾ]-
5 ಯ ತಂನಿರೋಪಿತ ಹುನಾಉರ ಮಲಪ-
6 ಒಡೆರ ರಾಜೆಉಧಯವಾದ ವರುಸ 5ನೆ-
7 ಯ ರುದ್ರೊಧಕಾರಿ ಸವವತ್ಸಸರದ ದುತೀಯ ಭಾ-
8 ದ್ರಪದ ಬಹುಳ 10 ಮಂಗಳವಾರದಲೂ ಕ-
9 ಡಿವಾಡದ ಮಲಪ ಅಧಿಕಾರಿಯ ।
10 ಚಾಉಡಿಯ ಬಯಿಸಿಕೆಯಲು ಆ ನಾ-
11 ಡ ನಖರ ವಿದೆಮಾನದಲು ಸಿರಿವಾಡದ
12 ಮಾವಲಹಬುವಿನ ಮಗ ಕೇಸವಹಬು
13 ಆ ಸೀಧರಹಬು ಆ ವಿಠಲಹಬುವಿನ
14 ಮಾವಲ ಮುಂತಾಗಿ ಸಮಸ್ತಗ್ರಾಮದವರು
15 ಸುಂಠೇಸ್ಪುರದೇವರಿಂಗೆ ತಮ ಭಕ್ತಿ ನಿಮಿತೆ-
16 ವಾಗಿ ತಂಮ ಉರ ಭುಮಿ ಅಡಿಯದರ ಅ-

17 ಡಿಯದರ[16] ಕೆಳಗಣ ಗಜನಿಸಹಿತಾಗಿ ಧಾ-

18 ರಾಪೂರ್ವ ಜಲ್ಮಸಾಸನವಾಗಿ ಸೇಋುಗಲ-

19 ನಿಕಿ ಕೊಟ್ಟಲುಂ [।*] ಯಿಂತಪುದಕೆ ಸಾಕ್ಷಿ-

20 ಗಳು ಬಾಡದ ದಾಸಿಹಬುವಿನ ಮಗ

21 ವಿಠಲಹಬು [।*]ಅ[ಳ]ರ ವಿಕ್ರಹ್ಯ ಗದ್ಯ ಮಾ[ನ್ಯ*][17][।*]

ಎರಡನೇ ಮುಖ

22 ವಿಠಲಹೆಗಡೆ ಕಡಿವಾಡದ

23 ಪಾದಕಾರ ವಿಠಲಹಬು ಆ ಉರ [ಚೌ]

24 [ಹ]ಳಿ ಹರಿಹಬು ಯಿಂತಿಂಯಿವರ

25 ಉಭಯಾನಮತದಿಂ ಬರದಾತ ಸಿರಿವಾ-

26 ಡದ ಕುಳಕರಣಿ ನರಸಿಂವ ಸೇನಭೋವನು [।*]

27 ಯಿ ಕೊಟ ಭೂಮಿಗೆ ಆರೊಬರು ತಪಿದವರಿಂ-

28 ಗೆ ಗೋಹತ್ಯಾ ಬ್ರಂಮಹತ್ಯಾ ಮಾಡಿದ ಸು-

29 ರಾಪಾನ ವಾಣಾರಸಿ[ಲಿ*] ಮಾಡಿದ ಪಾಪ [।*] ಯಿ

30 ಕಲು ಬರದ ವೀರನಾಗ[ಣ] ಮಂಗಾಚಾರಿ [॥*]

ಟಿಪ್ಪಣಿಗಳು

1. ಸದಾಶಿವಗಡದ ಪದವಿ ಕಾಲೇಜಿನ ಇತಿಹಾಸ ಅಧ್ಯಾಪಕರಾಗಿರುವ ಶ್ರೀ ಎಚ್.ಎಚ್. ಭಟ್ ಅವರಿಗೆ ಈ ಕೃಪೆಗಾಗಿ ನನ್ನ ಧನ್ಯವಾದಗಳು ಸಲ್ಲುತ್ತವೆ. ಸಂಯುಕ್ತ ಕರ್ನಾಟಕ (9 ಜುಲೈ 1998) ಹಾಗೂ ಪ್ರಜಾವಾಣಿ (12 ಜುಲೈ 1998) ಪತ್ರಿಕೆಗಳಲ್ಲಿ ಈ ಶಾಸನದ ಕುರಿತು ನನ್ನ ಮತ್ತು ಎಚ್.ಎಚ್. ಭಟ್ಟರ ಜಂಟಿ ಪತ್ರಿಕಾ ವರದಿ ಪ್ರಕಟವಾಗಿದೆ.
2. *SII*, VII, ನಂ. 351.
3. K.V. Ramesh, 1970, *A History of South Kanara* (Dharwad, Karnatak University), ಪು. 155.
4. *SII*, VII, ನಂ. 347.
5. *Descriptive List of Stone and Copper-plate Inscriptions* (Dharwad, Kannada Research Institute), 1941-42, ನಂ. 58.
6. *SII*, VII, ನಂ. 353.
7. *ಅದೇ*, ನಂ. 363.
8. *ಅದೇ*, ನಂ. 342.
9. *EC*, VI, Shikharipur, 119.
10. *EI*, XX, ಪು. 107-112; ಬೆನಚಮಟ್ಟಿ, ಬಾಗಲಕೋಟೆ ಜಿಲ್ಲೆ, ಕ್ರಿ.ಶ. 1267.
11. *EC*, XI, ಹೊಳಲಕೆರೆ 68, ಕ್ರಿ.ಶ. 1126.
12. *Karnatak Inscriptions*, I, ಪು. 45, ಶಿರಸಂಗಿ, ಸವದತ್ತಿ ತಾಲೂಕು, ಬೆಳಗಾವಿ ಜಿಲ್ಲೆ, ಕ್ರಿ.ಶ.1186.

13. Raghupati Kemtur, 1989; *A Glossary of Placename Elements in Tulu and Kannada*, (Gundmi, Janavadi Prakashana), ಪು. 22, ಕಜೆ ನೋಡಿ.

14. ಈ ಸೂಚನೆಗೆ ಡಾ. ವಸಂತ ಮಾಧವ ಅವರಿಗೆ ಧನ್ಯವಾದಗಳು ಸಲ್ಲುತ್ತವೆ.

15. ಷಾಯಿಯಿಂದ ಕಾಗದದ ಮೇಲೆ ತೆಗೆದ ಪ್ರತಿಯಿಂದ ಓದಿದ್ದು.

16. 'ಅಡಿಯದರ' ಎಂಬುದು ಎರಡನೆಯ ಬಾರಿ ಅನವಶ್ಯಕವಾಗಿ ಬರೆಯಲ್ಪಟ್ಟಿದೆ.

17. ಇಲ್ಲಿ 'ವಿಕ್ರಹ್ಯ ಗದ್ಯ ಮಾ[ನ್ಯ*]' = 'ವಿಕ್ರಯ ಗದ್ದೆ ಮಾನ್ಯ' ಎಂಬುದರ ಉಲ್ಲೇಖ ಯಾಕೆಂಬುದು ಸ್ಪಷ್ಟವಿಲ್ಲ.

11. ವಿಜಯನಗರ ಕಾಲದ ಶಿಲಾಶಾಸನದ ಶೋಧ

ಮಾದಲಗೇರಿ ಕೊಟ್ರೇಶ್

ಇತ್ತೀಚಿಗೆ ಹೊಸಪೇಟೆಯ ಪಶ್ಚಿಮ ಭಾಗಕ್ಕಿರುವ ಅಮರಾವತಿಯ ಪೂಜಾರಿ ಹೊನ್ನತ್ತಿಯಪ್ಪನವರ ಮನೆಯ ಆವರಣದಲ್ಲಿ ಒಂದು ಶಾಸನವು ಪತ್ತೆಯಾಯಿತು. ಗ್ರಾನೈಟ್ ಶಿಲೆಯ ಶಾಸನವು ಮೂರು ಅಡಿ ಉದ್ದ ಹಾಗೂ ಒಂದೂವರೆ ಅಡಿ ಅಗಲವಾಗಿದ್ದು, ಅದರಲ್ಲಿ ಶಾಸನ ಪಾಠದ ಹನ್ನೆರಡು ಸಾಲುಗಳಿವೆ. ಇದು ತೆಲುಗು ಭಾಷೆ ಮತ್ತು ಕನ್ನಡ ಲಿಪಿಯಿಂದ ಕೂಡಿದೆ.

ಶಾಸನದ ಪಾಠ

ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲಿವಾ
ಹನ ಶಕವರ್ಷಂಬುಲು ೧೪೫೭ ಐ
.. ದಿ ಪಾರ್ಥಿವ ಸಂವತ್ಸರದ ಚೈತ್ರಸುದ್ದ
೧ .. ಆ ಜನಾ ಬೊಯನಿಯ
.. ನಿ . ಮಹ .. ಕ್ಷ ಲಾಗಾರು ಶ್ರೀ
ವಿರೂಪಾಕ್ಷಾನಿ ಸೇಯಿಂಚಿನ ಪ
ದ್ಮ ವಿನಾಯಕುನಿಕಿ ತಿರುಮಲ
ದೇವಿ ಪಟ್ಟಣ ತಾಮು ಸೇಯಿಚಿ
ನದಿ ಅಮ್ಮಲ ತೋಟ ೧
... ಮು ಶ್ರೀ ಲಕ್ಷ್ಮದೇವಕು
.... ಲಕು ಪುಣ್ಯಗಾನು
ಸಮರ್ಪಿಂಚಿನ ಧರ್ಮಶಾಸನಮು.

ಶಕ ವರ್ಷ 1457ನೆಯ ಪಾರ್ಥಿವ ಚೈತ್ರ ಶು 1 ಅಂದರೆ ಕ್ರಿ.ಶ. 1535ರಲ್ಲಿ ವಿರೂಪಾಕ್ಷ ಸನ್ನಿಧಿಯ ಪದ್ಮವಿನಾಯಕನಿಗೆ ತಿರುಮಲದೇವಿ ಪಟ್ಟಣದ ಬಳಿ ತೋಟವನ್ನು ಸಮರ್ಪಿಸಿದ ವಿಷಯ ಈ ಶಾಸನದಲ್ಲಿದೆ. ದಾನ ನೀಡಿದವನ ಹೆಸರು ಶಾಸನದಲ್ಲಿ ಗೋಚರಿಸುವುದಿಲ್ಲ.

ಈ ಶಾಸನ ದೊರೆತ ಸ್ಥಳದಿಂದ ಪೂರ್ವಕ್ಕೆ ಅಂದರೆ ಹೊಸಪೇಟೆ ಇಂದಿರಾನಗರದಲ್ಲಿ ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ ವಿಭಾಗದ ಮುಖ್ಯಸ್ಥರಾದ ಪ್ರೊ. ಲಕ್ಷ್ಮಣ ತೆಲಗಾವಿಯವರು ಶಾಸನವೊಂದನ್ನು ಪತ್ತೆ ಹಚ್ಚಿದ್ದರು. ಅದರಲ್ಲಿ ಕ್ರಿ.ಶ. 1521ರ ಕಾಲಾವಧಿಯಲ್ಲಿ ತಿರುಮಲದೇವಿಯರ ಪಟ್ಟಣದ ನಾಲ್ಕು ಬಾಗಿಲ ಬಳಿ ಪ್ರತಿಷ್ಠೆಯಾದ ಕಾಶಿ ವಿಶ್ವನಾಥದೇವರ ಪೂಜಾ ಕಾರ್ಯಗಳಿಗಾಗಿ ಯಲ್ಲಂಪಣನ ಕೆರೆಯ ಕೆಳಗೆ ಸಲುವ ಭೂಮಿಯನ್ನು ಅಭಿಷೇಕ ಪೂಜೆಗಾಗಿ ಕೃಷ್ಣದೇವರಾಯನು ದಾನ ನೀಡುತ್ತಾನೆಂಬ ಉಲ್ಲೇಖವಿದೆ.

ಹೊಸಪೇಟೆಯ ನೆಹರೂ ಕಾಲೋನಿಯಲ್ಲಿರುವ ಸಣ್ಣಕ್ಕಿ ವೀರಭದ್ರ ದೇವಾಲಯದಲ್ಲಿರುವ ಶಾಸನದಲ್ಲಿ ಕ್ರಿ.ಶ. 1531ರಲ್ಲಿ ಅಚ್ಯುತದೇವ ಮಹಾರಾಯರ ಆಳ್ವಿಕೆಯಲ್ಲಿ ತಿರುಮಲದೇವಿ ಅಮ್ಮನವರ ಪಟ್ಟಣದ ಗವುರೇಶ್ವರ ದೇವರಿಗೆ ಕಂಪದೇವರಸ ಅಂಣನವರು ಮತ್ತು ಉಭಯ ನಾನಾದೇಶಿಗಳು ಭತ್ತದ ಹೇರಿನ ಮೇಲೆ ಇತ್ಯಾದಿ ಅಂಶಗಳಿವೆ. ಹೊಸಪೇಟೆಯಿಂದ ಸಂಡೂರಿಗೆ ಹೋಗುವ ರಸ್ತೆಯಲ್ಲಿ ವಾಲ್ಮೀಕಿನಗರ ಕಾಲೋನಿಯಲ್ಲಿರುವ ಶಿಲಾಶಾಸನದಲ್ಲಿ ಅಚ್ಯುತದೇವಮಹಾರಾಯನ ಆಳ್ವಿಕೆಯ ಕಾಲ ಹಾಗೂ ತಿರುಮಲದೇವಿ ಅಮ್ಮನವರ ಪಟ್ಟಣದ ಉಲ್ಲೇಖಗಳಿವೆ.

ಹೊಸಪೇಟೆಯಲ್ಲಿರುವ ವಿಜಯನಗರ ಕಾಲದ ಶಾಸನಗಳನ್ನು ಹಾಗೂ ಇತ್ತೀಚಿಗೆ ಅಮರಾವತಿಯಲ್ಲಿ ಪತ್ತೆಹಚ್ಚಿದ ಶಿಲಾಶಾಸನಗಳ ಅಧ್ಯಯನದಿಂದ ಕೆಳಗಿನ ಕೆಲವು ಅಂಶಗಳು ಬೆಳಕಿಗೆ ಬರುತ್ತವೆ.

ಒಂದನೆಯದಾಗಿ ಈವರೆಗೆ ಇತಿಹಾಸಕಾರರು ವಿಜಯನಗರದವರು ಕನ್ನಡ ಮೂಲದವರೆ ಅಥವಾ ತೆಲುಗು ಮೂಲದವರೆ ಎಂಬ ವಿವಾದಿತ ಅಂಶಗಳಲ್ಲಿ ತೊಡಗಿದ್ದಾರೆ. ಈ ವರೆಗೆ ದೊರೆತ ತೆಲುಗು ಶಿಲಾಶಾಸನಗಳ ಸಾಲಿಗೆ ಹೊಸಪೇಟೆಯ ಅಮರಾವತಿಯ ತೆಲುಗು ಶಿಲಾಶಾಸನವು ಸೇರುತ್ತದೆ.

ಎರಡನೆಯದಾಗಿ ಹೊಸಪೇಟೆಯಲ್ಲಿ ದೊರೆತ ಎಲ್ಲಾ ಶಿಲಾಶಾಸನಗಳಲ್ಲಿ ತಿರುಮಲದೇವಿ ಅಮ್ಮನವರ ಪಟ್ಟಣದ ಉಲ್ಲೇಖಗಳಿರುವಂತೆ ಈ ಶಿಲಾಶಾಸನದಲ್ಲಿಯೂ ಬರುವುದರಿಂದ ವಿಜಯನಗರ ಕಾಲಾವಧಿಯಲ್ಲಿ ತಿರುಮಲದೇವಿ ಅಮ್ಮನವರ ಪಟ್ಟಣ ಮಹತ್ವದ ವ್ಯಾಪಾರ ಹಾಗೂ ಸಾಂಸ್ಕೃತಿಕ ಕೇಂದ್ರವಾಗಿದ್ದಿರಬಹುದಾಗಿದೆ.

ವಿಶಾಲವಾದ ಭೌಗೋಳಿಕ ವ್ಯಾಪ್ತಿಯನ್ನು ಹೊಂದಿದ ತಿರುಮಲದೇವಿ ಅಮ್ಮನವರ ಪಟ್ಟಣ ಇಂದಿನ ಮೃತ್ಯುಂಜಯನಗರ ಕಾಲೋನಿ, ನೆಹರೂ ಕಾಲೋನಿ, ಕೋಟೆ ಕಾಲೋನಿ, ಮೇದಾರಕೇರಿ, ವಾಲ್ಮೀಕಿ ನಗರ, ಕಂಚಗಾರ ಓಣಿ, ಪಟೇಲ ನಗರ, ಬಸವೇಶ್ವರ ಬಡಾವಣೆ, ಚಪ್ಪರದಳ್ಳಿ, ಇಂದಿರಾನಗರ, ರಾಣಿಪೇಟೆಗಳನ್ನು ಒಳಗೊಳ್ಳುತ್ತದೆ. ಅಮರಾವತಿಯ ಶಿಲಾಶಾಸನದಲ್ಲಿ ತೋಟದ ಉಲ್ಲೇಖ ಬರುವುದರಿಂದ ಸಾಮಾನ್ಯವಾಗಿ ಪಟ್ಟಣದ ಹೊರಭಾಗದಲ್ಲಿ ತೋಟಗಳಿರುವಂತೆ ತಿರುಮಲದೇವಿ ಅಮ್ಮನವರ ಪಟ್ಟಣದ ವರುಣ ದಿಕ್ಕಿಗೆ ಈ ತೋಟವಿದ್ದು ಇದಕ್ಕೆ ಇಂದಿನ ಇಂದಿರಾನಗರದ ಪಕ್ಕದಲ್ಲಿರುವ ಕೆರೆಯಿಂದ ನೀರು ಸರಬರಾಜು ಆಗುತ್ತಿದ್ದಿರಬಹುದು.

ವಿವಿಧ ರೀತಿಯಲ್ಲಿ ಪ್ರಬಂಧ ರಚನೆಯಲ್ಲಿ ಸಹಕರಿಸಿದ ಡಾ. ದೇವರಕೊಂಡಾರೆಡ್ಡಿ ಹಾಗೂ ಜೆ.ಆರ್. ರಾಮಮೂರ್ತಿಯವರನ್ನು ಈ ಸಂದರ್ಭದಲ್ಲಿ ಮನಸಾರೆ ನೆನೆಯುತ್ತೇನೆ.

12. ಬಾರಕೂರು ಶಾಸನ – ಒಂದು ಅಧ್ಯಯನ

ಜಯದೇವಪ್ಪ ಜೈನಕೇರಿ

ಬಾರಕೂರು ಮತ್ತು ಮಂಗಳೂರು ರಾಜ್ಯಗಳನ್ನು ಆಳೂಪರು, ಚಾಲುಕ್ಯರು, ಪಲ್ಲವರು, ರಾಷ್ಟ್ರಕೂಟರು ಮತ್ತು ಚೋಳರು ಆಳಿದ್ದಾರೆ. ಈ ಪ್ರದೇಶ ಕ್ರಿ.ಶ. ೧೩೪೫ರಲ್ಲಿ ವಿಜಯನಗರದ ಹರಿಹರ - ಬುಕ್ಕರ ಅಧಿಪತ್ಯಕ್ಕೆ ಒಳಗಾಯಿತು. ತುಳುನಾಡಿನ ಪ್ರಾಚೀನ ಬಂದರುಗಳಾದ ಮಂಗಳೂರು, ಬಾರಕೂರು, ಭಟ್ಕಳ ಮತ್ತು ಹೊನ್ನಾವರಗಳ ಮೂಲಕ, ಪರ್ಶಿಯಾ ಮತ್ತು ಅರಬ್ ದೇಶದ ವರ್ತಕರು, ಶ್ರೇಷ್ಠ ಜಾತಿಯ, ಕುದುರೆಗಳನ್ನು ಆಮದು ಮಾಡಿಕೊಂಡು ವ್ಯಾಪಾರ ಮಾಡುತ್ತಿದ್ದರು. ವಿಜಯನಗರ ಅರಸರು ತಮ್ಮ ಅಶ್ವದಳಕ್ಕೆ ಬೇಕಾದ ಕುದುರೆಗಳನ್ನು ಪಡೆಯುವ ಸಲುವಾಗಿ ಈ ಪ್ರಾಂತ್ಯವನ್ನು ಗೆದ್ದು ರಾಜ್ಯವನ್ನು ವಿಸ್ತರಿಸಿದರು. ಶಾಸನಗಳಲ್ಲಿ ಕಂಡುಬರುವಂತೆ ಕ್ರಿ.ಶ. ೧೩೪೫ ರಿಂದ ೧೫೬೨ರವರೆಗೆ ವಿಜಯನಗರ ಅರಸರ ಪರವಾಗಿ, ಅವರ ಪ್ರತಿನಿಧಿಗಳು, ಮಾಂಡಲಿಕರು, ಈ ಭಾಗವನ್ನು ಆಳಿದ್ದಾರೆ. ಕ್ರಿ.ಶ. ೧೫೦೬ರಲ್ಲಿ ವಿಜಯನಗರದ ನರಸಿಂಹನು ಕೆಳದಿಯ ಬಸವ ಅರಸು ಒಡೆಯನನ್ನು ಬಾರಕೂರಿನ ರಾಜನನ್ನಾಗಿ ನೇಮಿಸಿದನು. ಅಂದಿನಿಂದ ಅದು ಕೆಳದಿ ರಾಜನ ಅಧಿಪತ್ಯಕ್ಕೆ ಬಂದಿತು. ಬಾರಕೂರು ರಾಜಧಾನಿಯಾಗಿದ್ದು, ೧೩-೧೬ನೇ ಶತಮಾನಗಳಲ್ಲಿ ಪರದೇಶಗಳೊಂದಿಗೆ ಇದ್ದ ಸಮುದ್ರ ವ್ಯಾಪಾರಕ್ಕೆ ಬಹಳ ಪ್ರಸಿದ್ಧವಾಗಿ ಶ್ರೀಮಂತ ಪ್ರದೇಶವಾಗಿತ್ತು.

ಇಕ್ಕೇರಿ ಅರಮನೆಯಲ್ಲಿ ಶಾ.ಶ. ೧೪೩೬ (ಕ್ರಿ.ಶ. ೮-೫-೧೫೧೪)ರಲ್ಲಿ ಕೆಳದಿ ಚೌಡಪ್ಪ ನಾಯಕನ ಮಗ ಸದಾಶಿವ ನಾಯಕನಿಗೆ ಪಟ್ಟವಾಯಿತು. ಈತನು ತನ್ನ ರಾಜ್ಯವನ್ನು ಧೈರ್ಯ ಸಾಹಸದಿಂದ ಪರಿಪಾಲಿಸುತ್ತಿದ್ದನು. ವಿಜಯನಗರ ಅರಸು ಕೃಷ್ಣದೇವರಾಯ ತನ್ನ ರಾಜ್ಯದ ಶತ್ರುಗಳ ಅಬ್ಬರವನ್ನು ಅಡಗಿಸಲು ಈ ದಿಕ್ಕಿಗೆ ಬಂದಾಗ ಚೌಡಪ್ಪನಾಯಕನನ್ನು ಸಂಧಿಸಿದನು. ವಿಜಯನಗರ ಅರಸರ ಅಣತಿಯಂತೆ ಕಲ್ಯಾಣ-ಕಲ್ಬುರ್ಗಿ ಕೋಟೆಗಳನ್ನು ಸಾಧಿಸಲು ಸೈನ್ಯ ಸಮೇತ ಸದಾಶಿವ ನಾಯಕನು ತೆರಳಿ, ಮುಸ್ಲಿಂ ದಂಡನಾಯಕರನ್ನು ಧೈರ್ಯ ಸಾಹಸದಿಂದ ಎದುರಿಸಿ ಸೋಲಿಸಿದನು. ಬೊಕ್ಕಸಿಂಗನನ್ನು ಸೆರೆ ಹಿಡಿದು ವಿಜಯನಗರ ನಾಯಕರಿಗೆ ಒಪ್ಪಿಸಿದನು. ವಿಜಯನಗರ ಅರಸ ರಾಮರಾಯನು ಸದಾಶಿವನಾಯಕನಿಗೆ "ಕೋಟೆ ಕೋಲಾಹಲ," "ಎಡವ ಮುರಾರಿ" ಬಿರುದನ್ನು ನೀಡಿ ಸನ್ಮಾನ ಮನ್ನಣೆ ಮಾಡಿದನು. ನಂತರ ವಿಜಯನಗರ ಅರಸರ ಅಪ್ಪಣೆಯಂತೆ ಘಟ್ಟ ಪ್ರದೇಶವನ್ನು ಇಳಿದು, ಕೊಬ್ಬಿದ್ದ ತುಳುವ ರಾಜರೆಲ್ಲರನ್ನು ನಿಗ್ರಹಿಸಿದನು. ಕಾಸರಗೋಡಿನಲ್ಲಿ ವಿಜಯ ಸ್ಥಂಭ ನಿಲ್ಲಿಸಿದನು, ಎಂಬುದಾಗಿ ಕೆಳದಿ ನೃಪವಿಜಯದಲ್ಲಿ ಉಲ್ಲೇಖವಾಗಿದೆ.

ಕ್ರಿ.ಶ. ೧೫೬೪ರಲ್ಲಿ ಬೀದರ್ ಸುಲ್ತಾನನು ಆಕ್ರಮಿಸಿಕೊಂಡಿದ್ದ ಕಲ್ಯಾಣವನ್ನು ವಶಪಡಿಸಿಕೊಳ್ಳಲು, ರಾಮರಾಯನು ಸದಾಶಿವನಾಯಕನ ಕೈಕೆಳಗೆ ಒಂದು ಸೈನ್ಯವನ್ನು ಕಳಿಸಿಕೊಟ್ಟನು. ಕೆಳದಿ ಅರಸು ಬಿಜಾಪುರದ ಸೈನ್ಯವನ್ನು ಬೆನ್ನಟ್ಟಿ ಕಲ್ಯಾಣವನ್ನು ಗೆದ್ದನು. ಹೆಚ್ಚಿನ ದಾಖಲೆಗಳಲ್ಲಿ ಕೆಳದಿ ಸದಾಶಿವನಾಯಕನ ಕಾಲಮಾನ ಕ್ರಿ.ಶ. ೧೫೧೩-೧೫೬೪ ಎಂದೇ ಕಂಡುಬರುತ್ತಿದೆ. ಪ್ರಸ್ತುತ ಶಾಸನವು ಬಾರಕೂರಿನ ಸೋಮನಾಥೇಶ್ವರ ದೇವಾಲಯದ ಆವರಣದಲ್ಲಿದೆ. ವಿಜಯನಗರದ ಅರಸ ಸದಾಶಿವನಾಯಕನಿಗೆ ಬಾರಕೂರನ್ನು ಕೊಟ್ಟದ್ದನ್ನು ತಿಳಿಸುವ ಈ ಶಿಲಾಶಾಸನ ಕಾಲಮಾನ (ಶಾ.ಶ. ೧೪೮೬) ಕ್ರಿ.ಶ. ೧೫೬೪. "ಶ್ರೀಮನ್ಮಹಾರಾಜಾಧಿರಾಜ ರಾಜಪರಮೇಶ್ವರ ಶ್ರೀವೀರ ಪ್ರತಾಪ ಶ್ರೀ ಸದಾಶಿವರಾಯ ಮಹಾರಾಯರು ವಿಜಯನಗರಿಯ ಸಿಂಹಾಸನವನಾಳುವ ಕಾಲದಲ್ಲಿ ಶ್ರೀಮನ್ಮಹಾಮಂಡಲೇಶ್ವರ ವೆಂಕಟಾದ್ರಿರಾಜ ಮಹಾ ಅರಸುಗಳು ಸಕಲರಾಜ್ಯವನು ಪ್ರತಿಪಾಲಿಸುತ್ತಿಹಲ್ಲಿ ಕೆಳದಿ ಸದಾಶಿವರಾಯ ನಾಯಕರಿಗೆ ಬಾರಕೂರು ರಾಜ್ಯವನು ಪಾಲಿಸಿ ಆ ಸದಾಶಿವ ನಾಯಕರು ಕಲೆಯಲಪ್ಪೊಡೆಯರಿಗೆ ಪಾಲಿಸಿ ಕಲೆಯಲಪ್ಪೊಡೆಯರು ಬಾರಕೂರು ಸಿಂಹಾಸನದಲು ಕುಳಿತು ರಾಜ್ಯವನ್ನಾಳುವ ಕಾಲದಲು ಮಣಿಗಾರ ಕೇರಿಯ ಕುಂಚದ ಸರಸುವ ಮಗಳು ಸಂಕುಬಾಲೆ ಆಕೆಯ ಮಗಳು ಸಂಕಮ್ಮನು ಶ್ರೀವೊಳಗಣ ಸೋಮನಾಥ ದೇವರ ಕೈಯಲು ಅರ್ಥ ಪರಿಛೇದ್ಯವಾಗಿ ಕೊಟ್ಟು ಮೂಲ ಪರಿಛೇದ್ಯವಾಗಿ ಕೊಂಡು ಶ್ರೀ ಸೋಮನಾಥ ದೇವರ ಸನ್ನಿಧಿಯಲ್ಲಿ ಬ್ರಾಹ್ಮಣ ಭೋಜನ ದಿನ ೧ಕೆ ೬ ಜನ ಲೆಕ್ಕದಲುಯೆದರ ಧಾರೆಗೆ ಬಿಟ್ಟ ಬಾಳ ವಿವರ ಬ್ರಹ್ಮಾವರದವೊಳಗೆ ಹಲರಿಗೆ [ಮದೆಪ್ಪ ಮಾನ್ಯ] ಬಳಿಯಿಂದ ಮೂಲ ಬಂದ ಬಾಳೆ ಚತುಸೀಮೆ ವಿವರ" ಎಂದು ಮುಂದುವರಿದಿರುತ್ತದೆ.[1]

ಸದಾಶಿವ ನಾಯಕನು ಇಕ್ಕೇರಿ ಸಿಂಹಾಸನವನ್ನು ಕ್ರಿ.ಶ. ೧೫೧೩ ರಿಂದ ೧೫೪೫ರವರೆಗೆ ಆಳಿದನೆಂದು ಕೆಳದಿ ನೃಪವಿಜಯದಲ್ಲಿ ಸ್ಪಷ್ಟವಾಗಿ ತಿಳಿಯುತ್ತದೆ. ಕೆಳದಿ ಸಮಗ್ರ ಅಧ್ಯಯನ ಗ್ರಂಥದಲ್ಲಿ ಸದಾಶಿವನಾಯಕನ ಆಡಳಿತ ಅವಧಿ ೧೫೩೭-೧೫೪೬ ಎಂದೂ ಪ್ರಕಟವಾಗಿದೆ.[2] ಇಮ್ಮಡಿ ಸದಾಶಿವ ನಾಯಕನ ಪ್ರಸ್ತಾಪ ಕೆಳದಿ ನೃಪವಿಜಯದಲ್ಲಿ ಕಂಡುಬರುವುದಿಲ್ಲ. ಆದರೆ, ಕೆಳದಿ ನೃಪವಿಜಯದಲ್ಲಿ ಕೆಳದಿ ಅರಸು ವೆಂಕಟಪ್ಪನಾಯಕನು (೧೫೮೩-೧೬೩೦) ಭೂತಳ ಪಾಂಡ್ಯನ ವಂಶೀಕರು ಹಿಂದೆ ಆಳಿದ್ದ ಬಾರಕೂರು ಸಂಸ್ಥಾನವನ್ನು ವಶಪಡಿಸಿಕೊಂಡನು ಎಂದಿದೆ.[3] ಹೆಚ್.ವಿ. ಶ್ರೀನಿವಾಸಮೂರ್ತಿಯವರು, ವಿಜಯನಗರದ ಸದಾಶಿವರಾಯ (ಕ್ರಿ.ಶ. ೧೫೪೨-೧೫೭೬)ನ ಮೆಚ್ಚುಗೆ ಗಳಿಸಿ, ಕೆಳದಿ ಸದಾಶಿವ ನಾಯಕ (ಕ್ರಿ.ಶ. ೧೫೧೩-೧೫೬೫) ಬಾರಕೂರು ಮತ್ತು ಮಂಗಳೂರನ್ನು ಪಡೆದನು ಎಂದು ಉಲ್ಲೇಖಿಸಿದ್ದಾರೆ.[4] ಕೆ.ಎನ್.

ಚಿಟ್ನಿಸ್‌ರವರು ಸದಶಿವನಾಯಕನ ಕಾಲಮಾನ ಕ್ರಿ.ಶ. ೧೫೧೩ ರಿಂದ ೧೫೬೩ ಎಂದು ಸ್ಪಷ್ಟವಾಗಿ ಉಲ್ಲೇಖಿಸಿದ್ದಾರೆ.[5] ಎ.ಕೆ. ಶಾಸ್ತ್ರಿಯವರು ಶೃಂಗೇರಿ ಧರ್ಮ ಸಂಸ್ಥಾನ ಗ್ರಂಥದಲ್ಲಿ ಚೌಡಪ್ಪನ ಪುತ್ರ ಸದಾಶಿವನಾಯಕನಿಂದ (ಕ್ರಿ.ಶ. ೧೫೧೩-೧೫೬೩) ಶೃಂಗೇರಿಯೊಂದಿಗೆ ಕೆಳದಿ ಸಂಪರ್ಕ ಪ್ರಾರಂಭವಾಯಿತು ಎಂದು ಉಲ್ಲೇಖಿಸಿದ್ದಾರೆ.

ಕ್ರಿ.ಶ. ೧೫೦೯ ರಿಂದ ೧೫೨೯ರ ವರೆಗೆ ವಿಜಯನಗರ ಚಕ್ರವರ್ತಿ ಕೃಷ್ಣದೇವರಾಯನು ಆಳಿದನು. ನಂತರ ೧೫೨೯ ರಿಂದ ೪೨ರ ವರೆಗೆ ಅಚ್ಯುತದೇವರಾಯನ ಕಾಲ. ಈತನ ನಂತರ ವಿಜಯನಗರ ಅನಾಯಕತ್ವಕ್ಕೆ ಈಡಾದರೂ ಕೃಷ್ಣದೇವರಾಯನ ಅಳಿಯ ರಾಮರಾಯನ ಸಹಕಾರದಿಂದ ಸದಾಶಿವರಾಯ (೧೫೪೨-೭೬) ಆಳಿದನು. ಕೆಳದಿ ನೃಪವಿಜಯದ ಪ್ರಕಾರ ಕೆಳದಿ ಸದಾಶಿವ ನಾಯಕನಿಗೆ ಶಾ.ಶ. ೧೪೩೬ (ಕ್ರಿ.ಶ. ೧೫೧೪)ರಲ್ಲಿ ಇಕ್ಕೇರಿ ಅರಮನೆಯಲ್ಲಿ ಪಟ್ಟವಾಯಿತು. ಈ ಸದಾಶಿವ ನಾಯಕನು ತನಗೆ ಪಟ್ಟವಾದ ಶ್ರೀಮುಖ ಸಂವತ್ಸರದ ಶ್ರಾವಣ ಶುದ್ಧ ೩ ರಿಂದ, ವಿಶ್ವಾವಸು ಸಂವತ್ಸರದ ವೈಶಾಖ ಶುದ್ಧ ೪ ರವರೆಗೆ ೩೧ ವರ್ಷ ೯ ತಿಂಗಳು ರಾಜ್ಯಭಾರ ಮಾಡಿದನು ಎಂದು ಉಲ್ಲೇಖವಾಗಿದೆ. ಅಂದರೆ ಕ್ರಿ.ಶ. ೧೫೪೬ರವರೆಗೆ ಮಾತ್ರ ಸದಾಶಿವನಾಯಕ ರಾಜ್ಯವಾಳಿದನೆಂದು ಆಗುತ್ತದೆ. ನಂತರ ಈತನ ಮಗ ವೆಂಕಣ್ಣನಾಯಕ ೧೩ ವರ್ಷ ೫ ತಿಂಗಳು ಅಂದರೆ ಕ್ರಿ.ಶ. ೧೫೫೯ (ಶಾ.ಶ. ೧೪೮೧)ವರೆಗೆ ರಾಜ್ಯಭಾರ ಮಾಡಿದ್ದಾನೆ. ಈತನ ನಂತರ ಈತನ ತಮ್ಮ ಚಿಕ್ಕ ಸಂಕಣ್ಣನಾಯಕನು ೧೨ ವರ್ಷ ೧ ತಿಂಗಳು ರಾಜ್ಯಭಾರ ಮಾಡಿದ್ದಾನೆ. ನಂತರ ರಾಮರಾಜ ನಾಯಕನು ೧೨ ವರ್ಷ ೧ ತಿಂಗಳು ರಾಜ್ಯಭಾರ ಮಾಡಿದನು. ಈತನ ನಂತರ ವೆಂಕಟಪ್ಪ ನಾಯಕನಿಗೆ ಇಕ್ಕೇರಿ ಅರಮನೆಯಲ್ಲಿ ಶಾ.ಶ. ೧೫೦೫ (ಕ್ರಿ.ಶ. ೧೫೮೩)ರಲ್ಲಿ ಪಟ್ಟವಾಯಿತು ಎಂದಿದೆ. ರಾಧ ಕೃಷ್ಣಮೂರ್ತಿಯವರು ಉಲ್ಲೇಖಿಸಿರುವಂತೆ, ಕೆಳದಿ ಅರಸು ಸದಾಶಿವನಾಯಕನ ಕಾಲಮಾನ ಕ್ರಿ.ಶ. ೧೫೪೪-೧೫೬೫ ಎಂದಿದೆ.[6] ವಿಜಯನಗರ ಅರಸು ಸದಾಶಿವರಾಯನ ಕಾಲದಲ್ಲಿ ಅಳಿಯ ರಾಮರಾಯನ ಸೂಚನೆಯಂತೆ ಕೆಳದಿ ಅರಸು ಸದಾಶಿವನಾಯಕನು ಕಲ್ಯಾಣ ಕೋಟೆಯನ್ನು ಧೈರ್ಯ, ಸಾಹಸದಿಂದ ವಶಪಡಿಸಿಕೊಂಡು ಗೆದ್ದದ್ದಕ್ಕಾಗಿ, ಚಂದ್ರಗುತ್ತಿ, ಬಾರಕೂರು, ಪುಂಗಲೂರುಗಳ ರಾಜ್ಯಾಧಿಕಾರಿಯನ್ನಾಗಿ ನೇಮಿಸಿ, "ರಾಯ ನಾಯಕ," "ಕೋಟೆ ಕೋಲಾಹಲ" ಬಿರುದು ನೀಡಿ ಸನ್ಮಾನಿಸಿದನು ಎಂದು ಉಲ್ಲೇಖವಾಗಿದೆ. ಕೆಳದಿ ಅರಸೊತ್ತಿಗೆಯ ಮುಂದಿನ ದೊರೆ ಬಸವಪ್ಪ ನಾಯಕನು ಬರೆದಿರುವ ಶಿವತತ್ವರತ್ನಾಕರ ಗ್ರಂಥವೇ ಇತಿಹಾಸಕ್ಕೆ ಹತ್ತಿರದ ಗ್ರಂಥವಾಗಿರುವುದರಿಂದಲೂ, ಇದಕ್ಕೆ ಶಾಸನಾಧಾರವಿರುವುದರಿಂದಲೂ ಕೆಳದಿ ಅರಸ ಸದಾಶಿವ ನಾಯಕನ ಕಾಲ ಕ್ರಿ.ಶ. ೧೫೪೪ ರಿಂದ ೧೫೬೫ ಎಂಬ ನಿರ್ಧಾರ ಸತ್ಯಕ್ಕೆ ಹತ್ತಿರವಾಗಿರಬಹುದೆಂಬುದು ನನ್ನ ಈ ಪ್ರಬಂಧದ ಉದ್ದೇಶ. ಬಾ.ರಾ. ಗೋಪಾಲರು ಕೆಳದಿ ಅರಸರ ವಂಶಾವಳಿ ಕುರಿತು ದೀರ್ಘವಾಗಿ ಚರ್ಚಿಸಿದ್ದಾರೆ ಮತ್ತು ಸಂಕಣ್ಣ ನಾಯಕನೇ ಸದಾಶಿವನಾಯಕನೆಂದೂ ಇವನ ಕಾಲಮಾನ ಕ್ರಿ.ಶ. ೧೫೩೦ ರಿಂದ ೧೫೬೭ ಎಂದೂ ಗುರುತಿಸಿದ್ದಾರೆ.[7]

ಈ ನನ್ನ ಕ್ಷೇತ್ರ ಕಾರ್ಯದಲ್ಲಿ ನನ್ನೊಂದಿಗೆ ಬಾರಕೂರಿಗೆ ಬಂದು ಸಹಕಾರ ನೀಡಿದ ಶಿವಮೊಗ್ಗದ ಖ್ಯಾತ ಪ್ರಾಚೀನ ನಾಣ್ಯ ಸಂಗ್ರಹಕಾರ ಶ್ರೀ ಎಸ್. ರಾಮಚಂದ್ರ ಕಾರಂತರಿಗೂ, ಬಾರಕೂರು, ಚೌಳಿಕೆರೆ, ಶ್ರೀ ಮಹಾಲಿಂಗೇಶ್ವರ ಭೈರವ ಗಣಪತಿ ದೇವಾಲಯದ ಅರ್ಚಕರಾದ ಶ್ರೀ ಬಿ. ವಿಶ್ವೇಶ್ವರ ಭಟ್ಟರಿಗೂ ಕೃತಜ್ಞನಾಗಿದ್ದೇನೆ.

ಟಿಪ್ಪಣಿಗಳು

1. ಕೆಳದಿ ವೆಂಕಟೇಶ್ ಜೋಯಿಸ್, 1991, *ಕೆಳದಿ ಅರಸರ ಶಾಸನ ಸಂಪುಟ,* ಪು. 19-21, ಶಾಸನ ಸಂ. 14.
2. ಎಂ.ಎಂ. ಕಲಬುರ್ಗಿ ಮತ್ತು ಬಿ.ಎಸ್. ರಾಮಭಟ್ಟ, 1994, *ಕೆಳದಿ ಸಂಸ್ಥಾನ ಸಮಗ್ರ ಅಧ್ಯಯನ,* ಪು. 511.
3. ಗುಂಡಾ ಜೋಯಿಸ್, *ಕೆಳದಿ ನೃಪವಿಜಯ,* ಪು. 123.
4. ಕಲಬುರ್ಗಿ ಮತ್ತು ರಾಮಭಟ್ಟ, *ಪೂರ್ವೋಕ್ತ,* ಪು. 142.
5. ಕೆ.ಎನ್. ಚಿಟ್ನಿಸ್, *ಕೆಳದಿ ಪಾಲಿಟಿ,* ಪು. 12.
6. ರಾಧ ಕೃಷ್ಣಮೂರ್ತಿ, *ಶಿವತತ್ವರತ್ನಾಕರ ಸಂಪ್ರಬಂಧ,* ಪು. 104-115.
7. ಬಾ.ರಾ. ಗೋಪಾಲ್, *ಕೆಳದಿ ಐತಿಹಾಸಿಕ ನಿಬಂಧಗಳು,* ಪು. 24-40.

13. ವಿಜಯನಗರ ಬೊಕ್ಕಸದ ಚಿನ್ನಭಂಡಾರ ನಾರಣಪ್ಪಯ್ಯನ ವಂಶೀಕರ ಅಪ್ರಕಟಿತ ಶಾಸನ ಪ್ರತಿ

ಕೆ. ವೆಂಕಟೇಶ್

1991ರ ಮಾರ್ಚ್‌ನಲ್ಲಿ ಐತಿಹಾಸಿಕ ದಾಖಲೆಗಳ ಸರ್ವೇಕ್ಷಣೆ ಕೈಗೊಂಡ ಸಂದರ್ಭದಲ್ಲಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ದೂರ್ವಾಸಪುರಂನಲ್ಲಿರುವ ಶ್ರೀ ಶಾಮಾಚಾರ್‌ರವರಲ್ಲಿ ದೊರೆತ ಹಸ್ತಲಿಖಿತ ಪುಸ್ತಕ ಗಮನ ಸೆಳೆಯಿತು. ಇದರಲ್ಲಿ ಹಲವಾರು ಅಪ್ರಕಟಿತ ಐತಿಹಾಸಿಕ ದಾಖಲೆಗಳು ಮೋಡಿ ಲಿಪಿಯಲ್ಲಿ ದಾಖಲಿಸಲ್ಪಟ್ಟಿವೆ. ಇವು ಸಂಶೋಧನೆಗೆ ಪ್ರಮುಖ ಆಕರಗಳಾಗಿವೆ. ಈ ಪುಸ್ತಕದಿಂದಲೇ ಸಂಗ್ರಹಿಸಿ ವಿಜಯನಗರಕ್ಕೆ ಸಂಬಂಧಿಸಿದಂತೆ ಶಾಸನವೊಂದನ್ನು ಕ್ಯೂಜೆಎಂಎಸ್ ವಾಲ್ಯುಂ LXXXIII ಇಶ್ಯು 4ರಲ್ಲಿ ಪ್ರಕಟಿಸಲಾಗಿದೆ.

ಈಗ ದೊರೆತಿರುವ ದಾಖಲೆಯು ವಿಜಯನಗರ ಅರಮನೆಯಲ್ಲಿ ಚಿನ್ನಭಂಡಾರದ ಅಧಿಕಾರಿಯಾಗಿದ್ದ ನಾರಣಪ್ಪಯ್ಯನ ವಂಶೀಕರಾದ ಮೃತ್ಯುಂಜಯದೇವರದ್ದಾಗಿದೆ.

ಕೆಳದಿ ಇತಿಹಾಸದಲ್ಲಿ ಪ್ರಮುಖನಾಗಿದ್ದ ಚಿಕ್ಕಸಂಕಣ್ಣನಾಯಕನ (ಕ್ರಿ.ಶ. 1572-1586) ಕಾಲದಲ್ಲಿ ನಾರಣಪ್ಪಯ್ಯನು ವಿಜಯನಗರದಿಂದ ಓಡಿಬಂದು ಕೆಳದಿ ರಾಜ್ಯದಲ್ಲಿ ರಾಜಾಶ್ರಯ ಪಡೆದುಕೊಂಡನು. ಇಲ್ಲಿಯೂ ಸಹ ನಾರಣಪ್ಪಯ್ಯನಿಗೆ ವಿಶೇಷ ಅಧಿಕಾರ ದೊರಕಿದ್ದಿತು. ಕೆಳದಿ ನೃಪವಿಜಯದಲ್ಲಿ ಲಿಂಗಣ್ಣಕವಿಯು

"........... ಯೆಡೆಯೆಡೆಗೆಳ್ತಂದು ದಾಳಿವತರಿಯುತಿರ್ದ ವಿದ್ದ ಕರ್ಣಾರ್ಕಳದಟಂ ಮುರಿದು ಭುಜಬಲ ಪ್ರತಾಪದಿಂ ರಾಜ್ಯಂಗೆಯ್ಯುತ್ತು ಮಿರಲಾಕಾಲದೊಳ್ ರಾಮರಾಯರ್ವಿದ್ಯಾನಗರಿಯಿಂ ತೆರಳ್ದು ತುರುಷ್ಕರ ಮೇಲೆ ದಂಡೆತ್ತಿ ಪೋಗಿರಲ್ ತದ್ರಕ್ತಾಕ್ಷಿ ಸಂವತ್ಸರದ ಮಾಘ ಮಾಸದೊಳ ತುರುಷ್ಕ ಸೈನ್ಯಕ್ಕಂ ರಾಯ ಸೈನ್ಯಕ್ಕಂ ಮಹಾದ್ಭುತಮಾದ ಯುದ್ಧಂ ಪಣ್ಣೆ ರಾಯಸೈನ್ಯಕ್ಕಿದಿಬೆಳ ನಿಲಲಶಕ್ಯಮಾಗಿ ಯವನ ಸೈನ್ಯಂ ಮುರಿದು ಹರಿ ಹಂಚಾಗಲ್ ಬಳಿಕ್ಕಂ ಗೋಲಕೊಂಡೆಯದ ಕುತುಬಶಾಹನುಂ ಆಮದಾನಗರದ ಭೈರಿಪಾತು ಶಾಹನೆನಿಪ ನಿಜಾಮಶಾಹನುಂ ಇವರಿರ್ವರುಂ ಯುದ್ಧರಂಗದೊಳ್ಕೈಗೆಯ್ದು ನಿಂದು ನಿತ್ತರಿಸಲಮ್ಮದೆ ಪಲಾಯನಂ ಬಡೆದಿಂತು ರಾಯಸೈನ್ಯಮಂ ಮುಯದ ಸಾಧ್ಯಮೆಂದಿರ್ವ ರ್ಪಾತುಶಾಹರೊಂದಾಗಿ ಮಂತ್ರಾಲೋಚನೆಯಂ ರಚಿಸಿ ಮಾಯಾತಂತ್ರದಿಂ ಪೊರತು ಗೆಲ್ಪುದ ಸಾಧ್ಯಮೆಂದು ನಿಶ್ಚಯಂಗೆಯ್ದು ರಾಯರ ಸಮೀಪದೊಳ ಮುಖ್ಯ ಸೇವಕನಾಗಿ ವರ್ತಿಸುತಿರ್ದ ವಿಜಾಪುರದ ಅಲ್ಲಿ ಅಧುಲ ಪಾತುಶಾಹಂಗೆ ಸಂಧಾನವ ನೊಡರ್ಚಿಸಿ ಜಾತ್ಯಾಭಿಮಾನ ಹೇತು ಪಂಥಮಂ ಪುಟ್ಟಿಸಿ ಮಂತ್ರಂ ಭಿನ್ನಿಸದಂತು ಸ್ವಜಾತ್ಯಾಭಿಮಾನ ದೇವತಾ ಸಾಕ್ಷಿಪೂರ್ವಕಮಾಗಿ ಖಡ್ಗಮಂ ಮುಟ್ಟಿಸಿ ಕ್ರಿಯಾಪೂರ್ವಕವಾಗಿ ತಪ್ಪದಂತು ಭಾಷೆಯಂ ತೆಗೆದುಕೊಂಡೀ ಪ್ರಕಾರದಿಂ ಅಲ್ಲಿ ಅದುಲಶಾಹನ ನೊಳಗುಮಾಡಿಕೊಂಡು ಗೋಲುಕೊಂಡೆಯದ ಕುತುಬಶಾಹನುಂ ಅಮದಾನಗರದ ಭೈರಿ ನಿಜಾಮಶಾಹನುಂ ನಂಬುಗೆಯಾದೊಡೆ ಸಂಧಾನಮುಖದಿಂದೈತಂದು ಕಾಣ್ಬೆನೆಂದು ಪುಸಿಯ ವರ್ತಮಾನಮಂ ಪುಟ್ಟಿಸಿ ನಚ್ಚು ಹಾಕಿ ರಾಯರಂ ಮೈಮರೆಸಿ ಸಮಯ ಸಾಧನೆಯಂ ರಚಿಸಿ, ಬಳಿಕ್ಕಂ ವಿಜಾಪುರದ ಅಲ್ಲಿ ಅದುಲಶಾಹನ ಸಂಚಿನ ಮೇಲಾ ಪಾತುಶಾಹರೊಂದಾಗಿ ಮೋಸದ ಮೇಲೆ ಶಾಲಿವಾಹನ ಶಕ ವರ್ಷ ೧೪೮೭ನೆಯ ರಕ್ತಾಕ್ಷಿ ಸಂವತ್ಸರದ ಮಾಘ ಬಹುಳದಲ್ಲಿ ರಕ್ಕಸದಂಗಡಿಯೆಂಬ ಸ್ಥಳದಲ್ಲಿ ರಾಮರಾಯರಂ ಪಿಡಿದು ಶಿರಶ್ಛೇದನಂಗೈದು ಆ ಶಿರಮಂ ಕಾಶಿಗೆ ಕಳುಹಿತತ್ತತಾಸ್ಥಾನಂಗಳಿಗೆಲ್ಲಂ ತಾವೇ ಸ್ವತಂತ್ರ ಕರ್ತುಗಳಾಗಿರಲಿತ್ತಂ ರಾಯಸಂಸ್ಥಾನಂ ವಿಸ್ಖಲಿತಮಾಗಿ ವಿದ್ಯಾನಗರಂ ಪಾಳಾಗಲಾರಾಯರ ಮನೆವಾರ್ತೆ ಬೊಕ್ಕಸದ ಸೇನಬೋವ ಚಿನ್ನಭಂಡಾರದ ನಾರಣಪ್ಪಯ್ಯನೆಂಬಾತನಲ್ಲಿ ನಿತ್ತರಿಸಲಮ್ಮದೆ ಕುಟುಂಬ ಸಹಿತಂ ತೆರಳ್ದೈತಂದು ಚಿಕ್ಕಸಂಕಣನಾಯಕರ ಪಾದಾರವಿಂದವನಾಶ್ರಯಿಸಲವರ್ಗೆ ಪರಮಾಧಿಕಾರಭಾಗ್ಯಂಗಳನಿತ್ತು ಪೋಷಿಸಿದನಂತುಮಲ್ಲದೆಯುಂ ... " (ಕೆಳದಿ ನೃಪವಿಜಯ ಚತುರ್ಥಾಶ್ವಾಸಂ).

ಕ್ರಿ.ಶ 1565ರ ರಕ್ಕಸತಂಗಡಿ ಯುದ್ಧದ ನಂತರ ಈ ಮೊದಲು ವಿಜಯನಗರ ಸಂಸ್ಥಾನದಲ್ಲಿ ಬೊಕ್ಕಸದ ಅಧಿಕಾರಿಯಾಗಿದ್ದ ನಾರಣಪ್ಪಯ್ಯನು ಕೆಳದಿ ದೊರೆಗಳ ಆಶ್ರಯವನ್ನು ಬೇಡಿದಾಗ ಅವನಿಗೆ ಇಲ್ಲಿ ಹೆಚ್ಚಿನ ಅಧಿಕಾರದೊಂದಿಗೆ ಪೋಷಣೆ ದೊರೆತಿರುವುದು ಕಂಡುಬರುತ್ತದೆ.

ಕೆಳದಿ ರಾಜ್ಯದಲ್ಲಿ ಅಧಿಕಾರಿಗಳಾಗಿದ್ದ ಚಿನ್ನಭಂಡಾರದ ನಾರಣಪ್ಪಯ್ಯನ ವಂಶೀಕರು ಅವರ ವಂಶವೃಕ್ಷದಲ್ಲಿ ಕಂಡುಬಂದಂತೆ

ನಾರಣಪ್ಪನವರು
(1565-1575)
|
ರಾಮಕೃಷ್ಣಪ್ಪನವರು
(1575-1620)
|
ರಾಮಕೃಷ್ಣಪ್ಪಯ್ಯ
(1620-1695)
|
ಪುರುಶೋತ್ತಮಯ್ಯ
(1630-1695)
|
ರಂಗಪ್ಪಯ್ಯ
(1695-1720)
|
ಆವಯ್ಯ
(1720-1763)

ಈಗ ದೊರೆತಿರುವ ಶಾಸನಗಳಂತೆ:

ಒಂದು:

ಪ್ಲವ ಸಂವತ್ಸರದಲ್ಲಿ ಭದ್ರಪ್ಪನಾಯಕರು (ಕಾಲ ಕ್ರಿ.ಶ. 1661-1663) ಆವಿನಹಳ್ಳಿ ಕೃಷ್ಣಪ್ಪಯ್ಯಗೆ ಬರಶಿ ಕಳುಹಿಸಿದ ಕೆಲಸ. ನಾರಣಪ್ಪನು ವಿಶ್ವನಾಥಪುರ ಅಗ್ರಹಾರದಲ್ಲಿ ತನ್ನ ಹಿರಿಯರಾದ ಚಿನ್ನಭಂಡಾರದ ರಾಮಕೃಷ್ಣಪ್ಪೆಯಗಳಿರ್ಗೆ ಯಜಮಾನಿಕೆ ಹಾಗೂ ನಾಲ್ಕು ವೃತ್ತಿಯು ಶಾಸನತ್ವವಾಗಿ ನಡೆದು ಬರುತ್ತಿದ್ದು ಈಗ ಅವುಗಳನ್ನು ಅರಮನೆ ವಶಮಾಡಿಕೊಂಡು ಬ್ರಾಹ್ಮಣರಿಗೆ ಕೊಟ್ಟಿದೆ. ಆ ಬ್ರಾಹ್ಮಣರಿಗೆ ಬದಲಿ ವೃತ್ತಿಯನ್ನು ಕೊಟ್ಟು ತನಗೆ ಈ ಮೊದಲಿನ ವೃತ್ತಿಯನ್ನು ಪಾಲಿಸಬೇಕೆಂದು ಕೇಳಿಕೊಂಡ ಮೇರೆಗೆ ಬ್ರಾಹ್ಮಣರಿಗೆ ಬದಲಿ ವೃತ್ತಿಕೊಟ್ಟುದರ ವಿವರವಿದೆ.

ಎರಡು:

ವಿಜಯ ಸಂವತ್ಸರದಲ್ಲಿ ಕೆಳದಿ ಭದ್ರಪ್ಪನಾಯಕರು (ಕಾಲ ಕ್ರಿ.ಶ. 1661-1663) ಆವಿನಹಳ್ಳಿ ಕೃಷ್ಣಯಗೆ ಬರಶಿ ಕಳಿಸಿದ ಕೆಲಸ. ಮೃತ್ಯುಂಜಯದೇವಗಳು ವಿಶ್ವನಾತ್ತಪುರದ ಅಗ್ರಹಾರದಲ್ಲಿ ತಮ್ಮ ಹಿರಿಯರಾದ ಚಿನ್ನಭಂಡಾರದ ರಾಮಕೃಷ್ಣಯ್ಯಗಳಿಗೆ ಯಜಮಾನಿಕೆ ನಾಲ್ಕು ವೃತ್ತಿಯು ಶಾಸನೋಕ್ತ ನಡೆದು ಬಂದಿದ್ದು ಈಗ ಅದು ಅರಮನೆ ವಶಮಾಡಿ ಬ್ರಾಹ್ಮಣರಿಗೆ ಕೊಟ್ಟಿರುವುದರಿಂದ ಆ ಬ್ರಾಹ್ಮಣರಿಗೆ ಬದಲು ವೃತ್ತಿಕೊಟ್ಟು ತನಗೆ ಪೂರ್ವದ ವೃತ್ತಿ ಪಾಲಿಸಿಕೊಡಬೇಕೆಂದು ಕೇಳಿಕೊಂಡ ಸಂಬಂಧ ಆ ಬ್ರಾಹ್ಮಣರಿಗೆ ಬದಲು ವೃತ್ತಿ ಬಿಟ್ಟ ಬಗ್ಗೆ ವಿವರ.

ಮೂರು:

ಶಾ.ಶ. 1585 (ಕ್ರಿ.ಶ. 1663)ರಲ್ಲಿ ಭದ್ರಪ್ಪನಾಯಕರು ಮೃತ್ಯುಂಜಯದೇವಗಳಿಗೆ ಬರಶಿ ಕೊಟ್ಟ ಶಾಸನ. ಈ ಮೊದಲು ಹಿರಿಯರುಗಳಿಗೆ ಬರಶಿಕೊಟ್ಟ ಯಜಮಾನಿಕೆ ಶಾಸನ ಉೃತ್ತಿಯನ್ನು ಅರಮನೆ ವಶಮಾಡಿಕೊಂಡು ಬ್ರಾಹ್ಮಣರಿಗೆ ಕೊಟ್ಟಿದ್ದಲ್ಲಿ ಆ ಬ್ರಾಹ್ಮಣರಿಗೆ ಬದಲು ಉೃತ್ತಿಕೊಟ್ಟು ಪೂರ್ವದ ಉೃತ್ತಿಯನ್ನು ಪಾಲಿಸುವಂತೆ ಮೃತ್ಯುಂಜಯದೇವ, ಹೂವೈಯ ಕೇಳಿಕೊಂಡ ಸಂಬಂಧ ಬ್ರಾಹ್ಮಣರಿಗೆ ಬದಲು ಉೃತ್ತಿ ನೀಡಿ ಇವರಿಗೆ ಈ ಮೊದಲಿನ ಉೃತ್ತಿ ಉತ್ತಾರವನ್ನು ಬಿಟ್ಟುಕೊಟ್ಟ ಬಗ್ಗೆ ವಿವರ.

ನಾಲ್ಕು:

ಶಾ.ಶ. 1684 ಕ್ರಿ.ಶ. 1762ರಲ್ಲಿ ಚಿನ್ನಭಂಡಾರದ ನಾಬರಸೈಯನವರ ಪೌತ್ರ ರಾಮಪೈಯನು ಚಿನ್ನಭಂಡಾರದ ಯೋಗಪೈಯಗೆ ಬರಶಿ ಕೊಟ್ಟ ಕ್ರಯಪಟ್ಟಿ.

ಎರಡು ಮತ್ತು ಮೂರನೆಯ ದಾಖಲೆಯಲ್ಲಿ ಕಂಡುಬರುವ ಮೃತ್ಯುಂಜಯದೇವರು ಕೆಳದಿ ನೃಪವಿಜಯದ VIನೇ ಆಶ್ವಾಸದಲ್ಲಿ ಕಂಡುಬಂದಂತೆ ರಾಯಸದ ಮೃತ್ಯುಂಜಯದೇವರು ಇರಬಹುದೇ? (ಕಾಲ ಕ್ರಿ.ಶ. 1646-1661).

ದಾಖಲೆ 3ರಲ್ಲಿ ಕಂಡಂತೆ ವಂಶವೃಕ್ಷ

ನಾರಣಪ್ಪಯ್ಯ
|
ರಾಮಕೃಷ್ಣಪೈಯ
|
ನಾಬರಸೈಯ
|
ಮೃತ್ಯುಂಜಯಶಿವ

ದಾಖಲೆ 4ರಲ್ಲಿ ಕಂಡುಬಂದಂತೆ

ನಾಬರಸೈಯ
|
ಮೃತ್ಯುಂಜಯದೇವ
|
ರಾಮಪೈಯ
|
ಸುಬ್ರಹ್ಮಣ್ಯದೇವ
|
ಪುವರಸೈಯ
|
ಯೋಗಪೈಯ

ಉಪಸಂಹಾರ

ಈಗ ದೊರೆತಿರುವಂತಹ ದಾಖಲೆಗಳು ವಿಜಯನಗರ ಕೆಳದಿ ಇತಿಹಾಸದಲ್ಲಿ ಹಾಸುಹೊಕ್ಕಾಗಿ ಕಂಡುಬರುವ ಕೊಡುಕೊಳುವ ಸಂಸ್ಕೃತಿಗೆ ಸಾಕ್ಷಿಯಾಗಿವೆ. ವಿಜಯನಗರದ ಪಥನಾನಂತರ ಕೆಳದಿ ಸಂಸ್ಥಾನದಲ್ಲಿ ದಳವಾಯಿಗಳು, ಬೊಕ್ಕಸದವರು, ಅಪ್ಪಣೆಯವರು, ಸುಂಕದವರು, ರಾಯಸದವರು, ಮಣೆಗಾರರು, ಹವಾಲದಾರ, ಕಿಲ್ಲೇದ್ದಾರ, ಜೋಯಿಸರು ಮೊದಲಾದವರು ಆಶ್ರಯ ಪಡೆದಿರುವುದು ಕಂಡುಬರುತ್ತದೆ. ಈ ಸಂಬಂಧದ ಹಲವಾರು ದಾಖಲೆಗಳು ಈ ಆಸುಪಾಸಿನಲ್ಲಿ ಸಾಕಷ್ಟು ಪ್ರಮಾಣದಲ್ಲಿ ದೊರೆಯುತ್ತವೆ. ಅವುಗಳ ಶೋಧ, ಸಂಶೋಧನೆ ಆಗಬೇಕಾಗಿದೆ. ಅದರಿಂದ ವಿಜಯನಗರ ಹಾಗೂ ಸಮಕಾಲೀನ ಇತಿಹಾಸಕ್ಕೆ ಪ್ರಮುಖ ಆಕರಗಳು ದೊರೆತಲ್ಲಿ ಆಶ್ಚರ್ಯವಿಲ್ಲ.

ಮೃತ್ಯುಂಜಯ ದೇವಗಳಿಗೆ ಅರಸುಗಳು ಬರಶಿ ಕೊಟ್ಟ ಪಟ್ಟೆ ಪ್ರತಿ

|| ನಮಸ್ತುಂಗ ಶಿರಶಚುಂಬಿಚಂದ್ರಚಾಮರ ಚಾರವೇ ತ್ರೈಲೊಕ್ಯ ನಗಾರಾರಂಭ ಮೂಲಸ್ತಂಭಾಯ ಶಂಭವೇ ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲಿವಾಹನ ಶಕವರುಷ ೧೫೮೫ ಯ ಶುಭಕೃತ್ತು ಸಂವತ್ಸರದ ವೈಶಾಖ ಶು ೧೫ ಬುಧವಾರದಲ್ಲು ಶ್ರೀ ಯಡವ ಮುರಾರ್‍ಿ ಕೊಟ್ಟೆಕೊಲಾಹಲ ವಿಶುದ್ದ | ವೈದಿಕಾದ್ವೈತ್ತಾಸಿದಾಂತ್ತಾ ಪ್ರತಿಷ್ಟಾಪಕ ಶಿವಗುರ್‍ು ಭಕ್ತಿ ಪ | ರಾಯಣರಾದ ಕೆಳದಿ ಸಂಕಂಣನಾಯಕರ ಪ್ರಪಉತ್ರರಾದ ಸಿದ್ದಪನಾಯಕರ ಪಉತ್ರರಾದ ಶಿವಪ್ಪನಾಯಕರ ಪುತ್ರರಾದ ಭದ್ರಪ್ಪನಾಯಕರು ವಶಿಷ್ಟ ಗೋತ್ರದ ಆಶ್ವಲಾ | ಯನದ ಸೂತ್ರದ ರುಕ್‌ಶಾಖೆಯ ಚಿನಭಂಡಾರದ ನಾರಣಪೈಯಗಳ ಪ್ರಪಉತ್ರರಾದ ರಾಮಕೃಷ್ಣಪೈಯಗಳ ಪುತ್ರರಾದ XXX ರಸೈಗಳ ಪುತ್ರರಾದ ಮ್ರುತ್ಯುಂಜಯ ಶಿವಗಳಿಗೆ ಕೊಟ್ಟ ಭೂದಾನಯಜಮಾನ ಉತ್ತಿಪಟ್ಟೆ ಕ್ರಮವೆಂತೆಂದರ್‍ೆ ವಿಶ್ವನಾತ್ತಾಪುರದ ಅಗ್ರಹಾರದಲ್ಲು ನಿಂಮ್ಮಹಿರ್‍ಿಯರಾದ ರಾಮಪಾದ ರಾಮಕೃಷ್ಣಪೈಯಗಳಿರ್ಗೆ ಕೊಟ್ಟ ಯಜಮಾನಿಕೆ ಶಾಸನ ಉ್ರತ್ತಿಯನ್ನು ಅರಮನೆ ವಶಾಮಾಡ್ಡಿಕೊಂಡು ಬ್ರಾಹ್ಮರ್‍ಿಗೆ ಕೊಟ್ಟಿದ್ದಲ್ಲಿ ಆ ಬ್ರಾಹ್ಮರ್‍ಿಗೆ ಬದಲು ಉ್ರತ್ತಿಯ ಕೊಟ್ಟ ಪೂರ್ವದಲ್ಲಿ | ಉ್ರತ್ತಿ ನಮಗೆ ಪಾಲ್ಲಿಸೆಕೊಳಬೆಕ್ಕೆಂದು ನಿಉ ಹೂವ್ವೆಯ ಸಹೂ ಹೆಳಿಕೊಂಡಲ್ಲಿ ಆ ಬ್ರಾಹ್ಮರ್‍ಿಗೆ ಬದಲು ಉ್ರತ್ತಿಕೊಟ್ಟು ನಿಮಗೆ

ಉತ್ತಾರವ ಕೊಟ್ಟರು ಯಜಮಾನಿಕ್ಕೆ ಉೃತ್ತಿ ೪ಕ್ಕೆ xxx ಹೂವ್ಯಯ ಪುರುಷೋತ್ತುಮ್ಮೆಯ ಲೋಕ್ಯಯನವರ್ರಿಗೆ ವೃತ್ತಿ ೧||೦ ಶ್ರೀ ಶಕ್ತಿದೇವಗಳಿಗೆ ಪ್ರಾಕು ಉತ್ತಾರ ಉೃತ್ತಿ ೧ ವಂದು ಉಭಯಂ ಉೃತ್ತಿ ೨||೦ ಯರಡುವರೇನ್ನುಳಿದು ಶುಧಉೃತ್ತಿವಂದುವರೆ ೧||೦ ವಿವರಾತ್ತೆರಂದೂರ್ರಿಂದ ಯಜುರ್ವೆದಾಧ್ಯಾಯನ್ನೊಪಾಡಿಗೆ ಕೃಷ್ಣಭಟರ್ರಿಗೆ ಕೊಟ್ಟ ಬಗೆಯಲ್ಲು ಉೃತ್ತಿ ೧||೦ ಅಪ್ಪಗ್ರಾಮದಲ್ಲಿಂಗಾಬಟ್ಟಗೆ ಕೊಟ್ಟ ಬಗೆಯಲು ಉೃ | ತ್ತಿ |೦ ಉಭಯಂ ಉೃತ್ತಿ ೧ ಬಿಡೆಗ್ರಾಮದಿಂದ ಪುರುಷೋತ್ತಮದಿಕ್ಷತ್ತರ್ರಿಗೆ ಕೊಟ್ಟ ಬಗೆಯಲ್ಲು ಉೃತ್ತಿ ||೦ ಉಭಯಂ ಉೃತ್ತಿ ಗ ||೦ ವಂಹವತ್ತಿ ಉೃತ್ತಿಗೆ ಉೃತ್ತಿ ೧ ಕ್ಕೆ ಗ. ೨೪ ನ್ನಾವೆಬದಲ್ಲಿ ವಂದುವರೆ ಉೃತ್ತಿಯಂನ್ನು ಪ್ರಾಕು ಪ್ಲವ ಸಂವತ್ಸರದ ಪುಷ್ಯ ಬ ೫ಲ್ಲು ಶ್ರೀ ಪುರುಷೊದ್ಯಾಯರಾದ | ಭದ್ರಪ್ಪನಾಯಕರು ಶ್ರೀಪುರು ಬರದು ಮೃತ್ಯುಂಜಯದೆವಗಳಿಗೆ ಶಿವಾರ್ಪಿತ್ತವಾಗಿ ಕೊಟ್ಟೆವಾಗಿ ಯೀ ಸಿವೆ ಚತುರ್ಗಡಿವಳಗುಳ ಸಿದ್ಯಾದ್ಯಪ್ಪಬೊಗತ್ತೆಜ ಸ್ವಾಮ್ಯವಂನ್ನು ಅನುಭವಿಶಿಕೊಂಡು ನಿಂಮ್ಮ ಸಂತಾನಪಾರಂಪರ್ಯ್ಯವಾಗಿ ಅಚಂದ್ರಾರ್ಕ ಸ್ತಾಯಿಗಳಾಗಿ ದಾನಾದಿ ಕ್ರಯಪರ್ರಿವರ್ತನೆಗೆ ಸಲಿಶಿಕೊಂಡು ಸರ್ವಮಾನ್ಯವಾಗಿ ಸುಖದಿಂ ಅನುಭವಿಶಿಕೊಂಡು ಬಾಹದೆಂದು ಭದ್ರಪ್ಪನಾಯಕರು ಮ್ರುತ್ಯುಂಜಯದೆವಗಳಿಗೆ ಬರಶಿಕೊಟ್ಟ ಭೂದಾನ ಶಾಸನ || ಯಿದಕ್ಕೆ ಸಾಕ್ಷಿಗಳು ಆದಿತ್ಯ ಚಂದ್ರಾ ಶ್ಲೋಕ ೧ ಹುಜರ ಅಪ್ಪಣೆಯಲ್ಲು ಬರದಾತ್ತ ಸೆನಬಾವ ಲಕ್ಷಪ್ಪತ್ತಿಸದಾರಾಯಂತ್ತಾವಪ್ಪ |

ನಾಬರಸ್ಯಯಗೆ ಮ್ರುತ್ಯುಂಜಯ ದೆವಗಳ ಪುತ್ರರಾದ ರಾಮಪ್ಪೆಯನು ತ್ತೆರಂದೂರಲ್ಲು ಉೃತ್ತಿ ೧ ಬಿಡೆಯಲ್ಲಿ ಉೃತ್ತಿ ||೦ ಉಭಯಂ ಉೃತ್ತಿ ೧||೦ ಗೆ ಬರಕೊಟ ಕ್ರಯ ಪಟ್ಟಿ ನಕಲು

|| ನಮಸ್ತುಂಗ ಶಿರಶಚುಂಬಿ ಚಂದ್ರ ಚಾಮರ ಚಾರವೆ ತ್ರೈಲೋಕ್ಯ ನಗರಾರಂಭ, ಮೂಲಸ್ತಂಭಾಯ ಶಂಭವೆ ಸ್ವಸ್ತಿ ಶ್ರೀ ಜಯಭ್ಯುದಯ ಶಾಲಿವಾಹನ ಶಕ ವರುಷ ೧೬೪೪ನೆಯ ವರ್ತಮಾನಕ್ಕೆ ಸಲುವ ಪ್ರಜೊತ್ಪತ್ಯ ಸಂವತ್ಸರದ ಶ್ರಾವಣ ಶು ೧೫ಲ್ಲು ಶ್ರೀಮತ್ತು ವಶಿಷ್ಟ ಗೊತ್ರದ ಆಶ್ವಲಾಯನ ಸೂತ್ರದ ರುಕ್‌ಶಾಖೆಯ ಚಿಂನಬಂಡಾರದ | ವಾಬರಸ್ಯಯನವರ ಪಉತ್ರರಾದ ಮ್ರುತ್ಯಂಜಯದೆವಳ ಪುತ್ರರಾದ ರಾಮಪ್ಪಯನ್ನು ವಶಿಷ್ಟ ಗೊತ್ರದ ಆಶ್ವಲಾಯನ ಸೂತ್ರದ ರುಕ್‌ಶಾಖೆಯ ಚಿಂನಭಂಡಾರದ ಸುಬ್ರಂಹ್ಮಣ್ಯ ದೆವಗಳ ಪಉತ್ರರಾದ ಪುಟರಸ್ಯಯನ ಪುತ್ರರಾದ ಯೊಗಪ್ಪಯಗೆ ಕೊಟ್ಟ ಕ್ರಮವೆಂತ್ತೆಂದರ್ರೆ ವಿಶ್ವನಾತ್ತಪುರದ ಯಜಮಾನಿಕ್ಕೆ ಕರ ಸ್ವಾಸ್ತೆ | ಯ ನಂಮ ಪಾಲುವಂತ್ತಿಕೆಗೆ ಪಿತ್ತಾರಾರ್ಜಿತ್ತವಾಗಿ ಅನ್ನುಭವಿಶಿಬರುತ್ತಿದಲ್ಲಿ ತ್ಯರಂದೂರಲಿ ಉೃತ್ತಿ ೧ ಬಿಡೆಯಲ್ಲಿ ಉೃತ್ತಿ ||೦ ಉಭಯಂ ವಂದುವರೆ ಉೃತ್ತಿಯಂನ್ನು xxxx ಚಿತ್ತಾಮದ್ಯಸ್ತ ಉಭಯವಾದಿ ಸಂಪ್ರಾತ್ತಿ ಪಂನ್ನಾ

ಪುಟ ೨೫ ಹಿಂಭಾಗ

|| ತ್ತಾಂಬ್ರಶಾಸನ | ಯಿದಕ್ಕೆ ದೆವಸಾಕ್ಷಿಗಳು ಅದಿತ್ಯ ಚಂದ್ರಾವನಿಲೊನಲಶ್ಚ ದೌರ್ಭುಮಿರಾಪೊ ಹ್ರುದಯಂ ಯಮಶ್ಚ ಅಹಶ್ಚರಾತ್ರಿಶ್ಚ ಉಬೆಚಸಂಧ್ಯೆದರ್ಮಸ್ಯ ಜಾನಾತ್ತಿನರಸ್ಯ ಉೃತ್ತಾಂ || ಶ್ರೀ ಸೊಮನಾಥ ಯಂತ್ತಾವಪ್ಪ ಹಾಕಿಯಿಧೆ ಯಥಾ ಪ್ರತ್ತಿ ಯೀ ಶಾಸನ ದೆವಪ್ಪನವರ್ರಿಗೆ ಕೊಟ್ಟಿತ್ತು. ಜಯತ್ಯನಾಧಿ ನಿಧನಂ | ಶ್ರೀಮಾನ್ನುಸ್ಪಚಂದ್ರಾಸೂಕರಃ ಯಸ್ಯ ದಂಷ್ಟ್ರಮ್ರುಣಾಳೆನ ದದ್ರೆ ಭೂತ್ತಾಳ ಪಂಕಜ |

ವಿಶ್ವನಾತ್ತಪುರದ ಅಗ್ರಹಾರದ ಯಜಮಾನಿಕೆ ಉೃತ್ತಿಜಿಕ್ಕೆ ನಿರೂಪ ಪ್ರತಿ


|| ಪ್ಲವ ಸಂವತ್ಸರದ ಪುಷ್ಯ ಬ ೫ಲ್ಲು ಶ್ರೀಮತ್ಕೆಳದಿ ಭದ್ರ x ಪ್ಪನಾಯರು ಆವಿನಹಳಿ ಕೃಷ್ಣಪ್ಪಯಗೆ ಬರಶಿ ಕಳುಹಿದ ಕಾರ್ಯ. ನಾರಣಪ್ಪನು ವಿಶ್ವನಾತ್ತಪುರದ ಅಗ್ರಹಾರದಲ್ಲಿ ತಂನ್ನ ಹಿರೆರಾದ ಚಿಂನಭಂಡಾರದ ರಾಮಕೃಷ್ಣಪ್ಪಯಗಳಿಗೆ ಯಜಮಾನಿಕ್ಕೆ ನಾಲ್ಕು ಉೃತ್ತಿಯು ಶಾಸನತ್ತವಾಗಿ ನಡದು ಬರುತ್ತಾಯಿದಲ್ಲಿ | ಯಿತ್ತಲಾಗಿ ಅರಮನೆ ವಶಾಮಾಡಿಕೊಂಡು ಬ್ರಹ್ಮರಿಗೆ ಕೊಟ್ಟುಯಿಧೆ. ಆ ಬ್ರಂಹ್ಮರ್ರಿಗೆ ಬದಲು ಉೃತ್ತಿ ಕೊಟ್ಟು ತನಗೆ ಪೂರ್ವದ ಉೃತ್ತಿಯ ಪಾಲಿಶಿಕೊಳಬೆಕೆಂದು ಹೆಳಿಕೊಂಡ | ಸಮಂಧ ಆ ಬ್ರಾಂಹ್ಮರ್ರಿಗೆ ಬದಲು ಉೃತ್ತಿ ಕೊಟ್ಟುಯಿವರ್ರಿಗೆ ಬಿಟ್ಟದ್ದು ಪ್ರಾಕು ೪ ನಾಲ್ಕು ಉೃತ್ಯಕೆ ಶ್ರೀಪತ್ತಿಯಗೆ ಪ್ರಾಕು ಉತ್ತ ತ್ತೆರಂದೂರಲ್ಲಿ ಉೃತ್ತಿ ೧ ಮರುತ್ತಾ ಫತ್ತಿಯಲ್ಲು ಮ್ರುತ್ಯುಂಜಯ ದೆವಗಳಿಗೆ ಉೃತ್ತಿ ೧||೦ ವಂದುವರ್ರೆ ಉಭಯಂ ಉೃ

ಪುಟ ೨೧

|| ತ್ತಿ ೨||೦ ಯರಡವರೆನುಳಿದು ಶುದ ಉೃತ್ತಿ ೧||೦ ವಂದುವರೆಗೆ ವಿವರ ಕೊದೂxಂರಹಿರಣ್ಯಭಟರತ್ತಿರುಮಲ ಭಟ್ಟರ ಬಗೆಯಲ್ಲು ಉೃತ್ತಿ ೧ ವಂದು ಬಿಡೆಯಿಂದ ನರಹರ್ರಿ ಭಟ್ರಿಗೆ ಬಗೆಯಲ್ಲು ಉೃತ್ತಿ ||೦ ಅರೆ ಉಬಯರ ಉೃತ್ತಿ ೧||೦ ವಂದುವರೆಗೆ ವಿವರ್ರಾ ನಾರಣಪ್ಪಯಗೆ ಉೃತ್ತಿ ||೦ ಪುರುಷೊತ್ತುಮ್ಮಯಗೆ ಉೃತ್ತಿ ೦||೦ ಅರೆ ಲೊಕ್ಯಯಗೆ ಉೃತ್ತಿ ||೦ ಅರೆ ಅಂತು ಉೃತ್ತಿ ೧||೦ ವಂದುವರೆ ಉೃತ್ತಿಯಂನ್ನು ಶಿವಾರ್ಪಿತವಾಗಿ ಬಿಟ್ಟಿಧೆವೆ ಯಿಉೃತ್ತಿಗೆ ಸಲುವ ಸ್ವಾಸ್ತೆ ಫಲ ವಕಲುಗಳ ಸಹಾಯಿವರ ಹವಾಲೆ ಮಾಡಿಕೊಡುವದು ಯಿ ಕಾಗದ ಸೆನಬೊಗರ ಕಡಿತಕೆ ಬರಶಿ ತ್ತಿರುಗಾ ಯಿವರ ವಶಕ್ಕೆ ಕೊಡುವದಾಗಿ ಯಂತಾ ಬರದ ನಿರೂಪ ಯಥಾ ಪ್ರತ್ತಿ |

ಮೃತ್ಯುಂಜಯ ದೆವಗಳಿಗೆ ನಿರೂಪ ೧

|| ವಿಜಯ ಸಂವತ್ಸರದ ಮಾಘ ಬ ೫ ಲ್ಲು ಶ್ರೀಮತ್ಕೆಳದೀ ಭದ್ರಪ್ಪನಾಯಕರು ಆವಿನಹಳಿ ಕೃಷ್ಣಯಗೆ ಬರಶಿ ಕಳುಹಿದ ಕಾರ್ಯ. ಮೃತ್ಯುಂಜಯ ದೆವಗಳು ವಿಶ್ವನಾತ್ತಪುರದ ಅಗ್ರಹಾರದಲ್ಲಿ ತ್ತಂಮ ಹಿರಿಯರಾದ ಚಿಂನಭಂಡಾರದ ರಾಮಕೃಷ್ಣಪ್ಪಯಗಳಿರ್ಗೆ ಯಜಮಾನಿಕೆ ನಾಲ್ಕು ಉತ್ತಿಯು ಶಾಸನಸ್ತವಾಗಿ ನಡದು ಬರುತ್ತಯಿದ್ದಲ್ಲಿ ಯಿತ್ತಲಾಗಿ ಅರಮನೆ ವಶವ ಮಾಡಿಕೊಂಡು ಬ್ರಂಹ್ಮರ್‍ರಿಗೆ ಕೊಟ್ಟಧೆ. ಆ ಬ್ರಂಹ್ಮರ್‍ರಿಗೆ ಬದಲು ಉತ್ತಿ ಕೊಟ್ಟು ತನಗೆ ಪೂರ್ವದ ಉತ್ತಿ ಪಾಲಿಸಿಕೊಳಬೆಕೆಂದು ಹೆಳಿಕೊಂಡ ಸಮಂಧಾ ಆ | ಯ್ರಿಂಮ್ಮರ್‍ರಿಗೆ ಬದಲು ಉತ್ತಿ ಕೊಟ್ಟು ಯಿವರ್‍ರಿಗೆ ಬಿಟ್ಟದು ಪ್ರಾಕು ಉತ್ತಿ ೪ ಕ್ಕೆ ತ್ತಿಪತ್ತಿಯಗೆ ಉತ್ತಾರತೆರಂದೂರಲು ಉತ್ತಿ ೧ ವಂದು x ಥಾತ್ತಿಥಿಯಲ್ಲು ನಾರಣಪ್ಪಯಗೆ ಉತ್ತಿ ||೦ ಪುರುಷೊತ್ತುಮ್ಮಯಗೆ ಉತ್ತಿ ||೦ ಲೊಕ್ಕಯಗೆ ಉತ್ತಿ ||೦ ಅಂತು ಉತ್ತಿ ೧||೦ ಉಭಯಂ ಉತ್ತಿ ೨||೦ ಯರಡುವರೆ ಉತ್ತೀ ನುಳಿದು ಶುಧ ೧||೦ ಗೆ ವಿವರಾ ಯಜುರ್ವೆದಾಧ್ಯಯನದ ರಾಮಕೃಷ್ಣಭಟಗೆ ಉತ್ತಿ |||೦ ಅಪ್ಪಗ್ರಾಮದ ಲಿಂಗಾಭಟರಿಗೆ ಉತ್ತಿ |೦ ಉಭಯಂ ಉತ್ತಿ ೧ ಬಿಡೆಯಿಂದ ಪುರುಷೊತ್ತುಮ ದಿಕ್ಷತ್ತರ ಉತ್ತಿ ||೦ ಉಭಯಂ ಉತ್ತಿ ೧||೦ ವಂದುವರೆ ಉತ್ತಿಯಂನ್ನು ಶಿವಾರ್ಪಿತವಾಗಿ ಬಿಟ್ಟಿಧೆವೆ ಯಿದರ ಸ್ವಾಸ್ತೆ ಫಲ ವಕಲುಗಳ ಯಿವರ ಹವಾಲೆ ಮಾಡುಕೊಡುವರು | ಯಿ ಕಾಗದ ಸೆನಬಾಗರ ಕಡಿಕ್ಕೆ ಬರಶಿತ್ತಿರುಗಾಯಿವರ ವಶಕ್ಕೆ ಕೊಡುವದಾಗಿ ಯಂತ್ತಾ ಬರದ ನಿರೂಪು ಯಥಾ ಪ್ರತ್ತಿ |



* ಈ ಗುರುತು ಹಾಕಿರುವಲ್ಲಿ ತುಂಗಮ್ಮನವರ ರುಜು ಎಂದಿದೆ.
ಈ ಬಳಿ ಬಾಳಬಂದಿನಲ್ಲಿ ಕಟ್ಟಿ ರಾಮಾಚಾರ್ಯನ ಸಾಕ್ಷಿ ಎಂದಿದೆ.
ಇದು 10-5-34ರಲ್ಲಿ ಮೈಸೂರು ಸೀಮೆಯ ಇನಾಂ ಸೂಪರಿಂಟೆಂಡೆಂಟರವರಿಗೆ ಸಲ್ಲಿಸಿರುವುದಾಗಿದೆ.

14. ವಿಜಯನಗರ ಕಾಲದ ಬೆಳ್ಳಿಯ ನಾಣ್ಯಗಳು

ಆರ್. ಗೋಪಾಲ್

ಕರ್ನಾಟಕ ನಾಣ್ಯ ಶಾಸ್ತ್ರ ಇತಿಹಾಸದಲ್ಲಿ ವಿಜಯನಗರ ಕಾಲವು ಮಹತ್ತರವಾದ ಪಾತ್ರವನ್ನು ವಹಿಸಿದೆ. ಈ ಕಾಲದಲ್ಲಿ ಚಲಾವಣೆಗೆ ಬಂದಷ್ಟು ನಾಣ್ಯಗಳು ಬೇರೆ ಯಾವ ರಾಜರ ಕಾಲದಲ್ಲೂ ಚಲಾವಣೆಗೆ ಬರಲಿಲ್ಲ. ತೆರಿಗೆಯನ್ನು ಹಣದ ರೂಪದಲ್ಲಿ ನೀಡಬೇಕಾಗಿದ್ದುದರಿಂದ ನಾಣ್ಯಗಳ ಮುದ್ರಣ ಅಪಾರವಾಗಿತ್ತು. ವಿಜಯನಗರ ಕಾಲವು ಸುವರ್ಣಯುಗವಾಗಿದ್ದುದರಿಂದ ಬಂಗಾರದ ನಾಣ್ಯಗಳ ಚಲಾವಣೆ ಹೇರಳವಾಗಿತ್ತು.

ಕರ್ನಾಟಕದಲ್ಲಿ ನಾಣ್ಯ ಶಾಸ್ತ್ರದ ಅಧ್ಯಯನವು ಬೆಳ್ಳಿಯ ನಾಣ್ಯಗಳಿಂದ ಪ್ರಾರಂಭವಾದರೂ, ವಿಜಯನಗರ ಕಾಲದಲ್ಲಿ ಬೆಳ್ಳಿಯ ನಾಣ್ಯಗಳ ಚಲಾವಣೆ ವಿರಳವಾಗಿತ್ತು. ಬೆಳ್ಳಿಯ ಲೋಹವನ್ನು ಹೊರ ದೇಶಗಳಿಂದ ಆಮದು ಮಾಡಿಕೊಳ್ಳಲಾಗುತ್ತಿತ್ತು. ಲೋಹದ ಕೊರತೆಯಿಂದ ಬೆಳ್ಳಿಯ ನಾಣ್ಯಗಳನ್ನು ತೆಳುವಾಗಿ ಮತ್ತು ಕಿರುದಾಗಿ ಟಂಕಿಸಲಾಗಿವೆ. ಬಂಗಾರ ಮತ್ತು ತಾಮ್ರದ ನಾಣ್ಯಗಳಲ್ಲಿರುವಂತೆ ರಾಜರ ಹೆಸರುಗಳು, ದೇವರ ಚಿತ್ರಗಳು, ಆನೆ, ಕುದುರೆ, ನಂದಿ, ಸಿಂಹ-ಶಾರ್ದೂಲ, ಪಕ್ಷಿಗಳು ಮುಂತಾದ ಚಿತ್ರಗಳನ್ನುಳ್ಳ ಬೆಳ್ಳಿಯ ನಾಣ್ಯಗಳನ್ನು ಈ ಕಾಲದಲ್ಲಿ ಟಂಕಿಸಲಾಯಿತು. ಚಿತ್ರಗಳ ಜೊತೆಗೆ ಕನ್ನಡ ಮತ್ತು ನಾಗರಿ ಅಲೇಖಗಳನ್ನು ಕಾಣಬಹುದಾಗಿದೆ.

ವಿಜಯನಗರ ಸಾಮ್ರಾಜ್ಯಕ್ಕೆ ಹಲವು ವಿದೇಶಿ ವಿದ್ವಾಂಸರು ಭೇಟಿ ನೀಡಿದ್ದು ಅವರಲ್ಲಿ ನಿಕೊಲೊ ಕೊಂಟಿ, ಅಬ್ದುರ್ ರಜಾಕ್, ಬಾರ್ಬೋಸ, ನ್ಯೂನಿಜ್, ಪೇಸ್ ಮುಂತಾದವರು ಪ್ರಮುಖರು. ಇವರಲ್ಲಿ ಪರ್ಶಿಯಾದ ರಾಯಭಾರಿಯಾದ ಅಬ್ದುರ್ ರಜಾಕ್‌ನು ಈ ಕಾಲದ ಬೆಳ್ಳಿಯ ನಾಣ್ಯಗಳ ಮೇಲೆ ಹಲವು ಪ್ರಮುಖ ಮಾಹಿತಿಗಳನ್ನು ನೀಡಿದ್ದಾನೆ. ತಾರ ಎಂಬುದು ಬೆಳ್ಳಿಯ ನಾಣ್ಯ ಎಂದು ಈತನ ಬರವಣಿಗೆಯಿಂದ ತಿಳಿದುಬರುತ್ತದೆ. ಈತನು ತಾರದ ಮೌಲ್ಯವನ್ನು ಈ ಕೆಳಗಿನಂತೆ ವಿವರಿಸಿದ್ದಾನೆ.

1 ಪ್ರತಾಬ್	= 10 ಫಣಮ್	(ಬಂಗಾರದ ನಾಣ್ಯ)
1 ಫಣಮ್	= 6 ತಾರ	(ಬೆಳ್ಳಿಯ ನಾಣ್ಯ)
1 ತಾರ	= 3 ಜಿತಲ್	(ತಾಮ್ರದ ನಾಣ್ಯ)

ತಾರ, ತಾರ್, ತೌರ್ ಮತ್ತು ತಾರೆ ಎಂದು ಬೆಳ್ಳಿಯ ನಾಣ್ಯವನ್ನು ವಿದೇಶಿ ಬರವಣಿಗೆಗಾರರು ಕರೆದಿದ್ದಾರೆ.[1]

ತಾರ ನಾಣ್ಯವನ್ನು ವಿಜಯನಗರದ ಹಲವು ಶಾಸನಗಳು ಉಲ್ಲೇಖಿಸುತ್ತವೆ. ಕ್ರಿ.ಶ. 1367ರ ಒಂದನೇ ಬುಕ್ಕನ ಅರಸೀಕೆರೆಯ ಶಾಸನವೊಂದು[2] ತಾರ ನಾಣ್ಯವನ್ನು ದತ್ತಿಯಾಗಿ ನೀಡುವ ಕುರಿತು ಹೇಳುತ್ತದೆ. ಇಮ್ಮಡಿ ದೇವರಾಯನ ಕ್ರಿ.ಶ. 1424ರ ಶಾಸನವೊಂದು[3] ಒಂದು ತಾರ ನಾಣ್ಯಕ್ಕೆ ಭೂಮಿಯನ್ನು ಮಾರಿದ ಬಗ್ಗೆ ಮಾಹಿತಿಯನ್ನು ನೀಡುತ್ತದೆ.


ಕ್ರಿ.ಶ. 1542ರ ಕೃಷ್ಣದೇವರಾಯನ ಶಾಸನವೊಂದು[4] ಬೆಳ್ಳಿಯ ನಾಣ್ಯವನ್ನು 'ಬೆಳ್ಳಿಯ ಹೊನ್ನು' ಎಂದು ಹೆಸರಿಸಿದೆ. ಹಣ ಎಂಬುದು ಕೇವಲ ಬಂಗಾರದ ನಾಣ್ಯಮಾತ್ರವಾಗಿರದೆ ಬೆಳ್ಳಿಯ ನಾಣ್ಯಗಳನ್ನು ಹಣ ಎಂದು ಹೆಸರಿಸಿದ ಕೀರ್ತಿ ಎ.ವಿ.ಎನ್. ಮೂರ್ತಿ ಮತ್ತು ಆರ್. ಗೋಪಾಲ್‌ರವರಿಗೆ ಸಲ್ಲುತ್ತದೆ.[5] ಇವರು ಹಣ 2½ ಮತ್ತು 1¼ ಎಂದು ಮೌಲ್ಯಗಳನ್ನು ಸೂಚಿಸುವ ನಾಣ್ಯಗಳನ್ನು ಬೆಳಕಿಗೆ ತಂದರು. ಕೆಲವು ಬೆಳ್ಳಿಯ ನಾಣ್ಯಗಳಲ್ಲಿ ಮುಂಭಾಗದಲ್ಲಿ ಹ 2½ ಮತ್ತು 1¼ ಹಿಂಭಾಗದಲ್ಲಿ ಆನೆ, ಕುದುರೆ, ಮುಂತಾದ ಪ್ರಾಣಿಗಳ ಚಿತ್ರ ಮತ್ತು ಮೇಲ್ಭಾಗದಲ್ಲಿ ಸ್ವಸ್ತಿಕ ಚಿಹ್ನೆ ಜೊತೆಗೆ ಹರಿಹರ, ದೇವರಾಯ, ಬು, ಕೃ ಮುಂತಾದ ಅಲೇಖಗಳನ್ನು ಕಾಣಬಹುದಾಗಿದೆ. ಬೆಳ್ಳಿಯ ನಾಣ್ಯಗಳಲ್ಲಿ ಕರ್ನಾಟಕದಲ್ಲಿ ಮೊಟ್ಟ ಮೊದಲ ಬಾರಿಗೆ ಮೌಲ್ಯಗಳನ್ನು ತಿಳಿಸಿದ ಕೀರ್ತಿ ವಿಜಯನಗರದ ಅರಸರಿಗೆ ಸಲ್ಲುತ್ತದೆ.

ವಿಜಯನಗರ ಕಾಲದ ಬೆಳ್ಳಿಯ ನಾಣ್ಯಗಳ ಅಧ್ಯಯನ ಕ್ಲಿಷ್ಟವಾದುದರಿಂದ, ನಾಣ್ಯಶಾಸ್ತ್ರಜ್ಞರು ಬಂಗಾರದ ಮತ್ತು ತಾಮ್ರದ ನಾಣ್ಯಗಳ ಬಗ್ಗೆ ಹೆಚ್ಚು ಅಧ್ಯಯನ ನಡೆಸಿದರೇ ವಿನಃ ಬೆಳ್ಳಿಯ ನಾಣ್ಯಗಳ ಬಗ್ಗೆ ಗಾಢವಾದ ಅಧ್ಯಯನವನ್ನು ಯಾರೂ ಮಾಡಲಿಲ್ಲ. ಆದ್ದರಿಂದ, ಬಹಳ ಕಾಲದವರೆಗೆ ವಿಜಯನಗರ ಕಾಲದಲ್ಲಿ ಬೆಳ್ಳಿಯ ನಾಣ್ಯಗಳು ಚಲಾವಣೆಯಲ್ಲಿದ್ದ ಬಗ್ಗೆ ಸಂಶಯವಿತ್ತು. ಈ ಸಂಶಯವನ್ನು ಹೋಗಲಾಡಿಸಿದ ಕೀರ್ತಿ ವುಲ್ಸ್‌ರವರಿಗೆ ಸಲ್ಲುತ್ತದೆ. ಇವರು ದೇವರಾಯನ ಬೆಳ್ಳಿಯ ನಾಣ್ಯವನ್ನು ಬೆಳಕಿಗೆ ತಂದರು. ನಾಣ್ಯದ ಮುಂಭಾಗದಲ್ಲಿ ಆನೆಯು ಎಡ ಭಾಗಕ್ಕೆ ಮುಖಮಾಡಿ ನಿಂತಿದ್ದು, ಹಿಂಭಾಗದಲ್ಲಿ ದೇವರಾಯ ಎಂದು ಎರಡು ಸಾಲಿನಲ್ಲಿ ನಾಗರಿ ಲಿಪಿಗಳಿವೆ.[6] ಎನ್. ರಮೇಶನ್‌ರವರು ಎರಡನೆಯ ನಾಣ್ಯವನ್ನು ಬೆಳಕಿಗೆ ತಂದವರಾಗಿದ್ದಾರೆ.[7] ಈ ನಾಣ್ಯದ ಮುಂಭಾಗದಲ್ಲಿ ಹನುಮಾನನ ಚಿತ್ರವಿದ್ದು ಅದರ ಹಿಂಭಾಗದಲ್ಲಿ ಶ್ರೀ

ವೀರ ಹರಿಹರ ಎಂದು ಮೂರು ಸಾಲಿನಲ್ಲಿ ಕನ್ನಡ ಲಿಪಿಗಳಿವೆ. ಬೆಳ್ಳಿಯ ನಾಣ್ಯಗಳ ಅಧ್ಯಯನದಲ್ಲಿ ಎ.ವಿ.ಎನ್. ಮೂರ್ತಿಯವರು ಸಹ ಹಲವು ಉಪಯುಕ್ತ ಮಾಹಿತಿ ನೀಡಿದ್ದಾರೆ.[8]


ಇತ್ತೀಚಿಗೆ ಕೊಳ್ಳೆಗಾಲದ ಭೇಟಿಯ ಸಂದರ್ಭದಲ್ಲಿ ಆತ್ಮೀಯ ಸ್ನೇಹಿತರಾದ ಪಿ. ಕೇಶವ ಮೂರ್ತಿ[9] ಮತ್ತು ಎಂ. ಮಾದೇಶ್[10] ಇವರ ನಾಣ್ಯ ಸಂಗ್ರಹಗಳನ್ನು ಅಧ್ಯಯನ ಮಾಡುತ್ತಿದ್ದಾಗ ಹಲವಾರು ವಿಜಯನಗರ ಕಾಲದ ಬೆಳ್ಳಿಯ ನಾಣ್ಯಗಳು ಕಂಡು ಬಂದವು. ಇವುಗಳನ್ನು ಅಧ್ಯಯನ ಮಾಡಲು ಪ್ರಯತ್ನಿಸಿದಾಗ, ಸಂತೋಷದಿಂದ ಈ ಇಬ್ಬರು ಸ್ನೇಹಿತರು ನಾಣ್ಯಗಳನ್ನು ನೀಡಿ ಈ ಲೇಖನಕ್ಕೆ ಸಹಕರಿಸಿರುತ್ತಾರೆ. ಇದಕ್ಕಾಗಿ ಅವರಿಗೆ ಚಿರಋಣಿಯಾಗಿರುತ್ತೇನೆ. ನಾಣ್ಯಗಳ ವಿವರಗಳು ಕೆಳಗಿನಂತಿವೆ.

I. ಒಂದನೇ ಹರಿಹರ (1336-1354):



ಈ ನಾಣ್ಯವು ದುಂಡಾಗಿದ್ದು, 0.06 ಗ್ರಾಂ ತೂಕವಿದ್ದು, 6 ಮಿ.ಮೀ. ಅಗಲವಿದೆ. ಮುಂಭಾಗದಲ್ಲಿ ವೀರ ಹನುಮಾನನ ಚಿತ್ರವಿದ್ದು, ಹಿಂಭಾಗದಲ್ಲಿ ನಾಗರಿ 'ಹ' ಅಕ್ಷರವಿದೆ.


II. ಒಂದನೇ ಬುಕ್ಕ (1354-1377):



ಈ ನಾಣ್ಯದ ಮುಂಭಾಗದಲ್ಲಿ ವೀರ ಹನುಮಾನನ ಚಿತ್ರವಿದ್ದು, ಹಿಂಭಾಗದಲ್ಲಿ 'ಬು' ಎಂಬ ಕನ್ನಡ ಅಕ್ಷರವಿದೆ.

III. ಎರಡನೇ ಹರಿಹರ (1377-1404):

1)



ಈ ನಾಣ್ಯದ ಮುಂಭಾಗದಲ್ಲಿ ನಾಗರಿ 'ಹ' ಅಕ್ಷರ ಮತ್ತು ಹಳೆ ಕನ್ನಡ ಅಂಕಿ 2½ ಎಂದಿದೆ. ಹಿಂಭಾಗದಲ್ಲಿ ಹರಿ ಹರ ಎಂದು ನಾಗರಿಯಲ್ಲಿ ಎರಡು ಸಾಲಿನ ಅಲೇಖವಿದೆ.


2)



ಈ ನಾಣ್ಯದ ಮುಂಭಾಗದಲ್ಲಿ ನಾಗರಿ 'ಹ' ಮತ್ತು ಹಳೆಗನ್ನಡದ 2½ ಅಂಕಿ ಇದೆ. ಹಿಂಭಾಗದಲ್ಲಿ ಬಲಭಾಗಕ್ಕೆ ಮುಖ ಮಾಡಿ ನಿಂತಿರುವ ಆನೆಯ ಚಿತ್ರವಿದ್ದು ಮೇಲ್ಭಾಗದಲ್ಲಿ ಅರ್ಧವೃತ್ತಾಕಾರದ ಮಧ್ಯಭಾಗದಲ್ಲಿ (ಸ್ವಸ್ತಿಕ) ಚಿಹ್ನೆ ಇದೆ.


IV. ಒಂದನೇ ದೇವರಾಯ (1406-1422):

1)




ಈ ನಾಣ್ಯದ ಮುಂಭಾಗದಲ್ಲಿ ನಾಗರಿ ಅಕ್ಷರ 'ಹ' ಮತ್ತು ಕನ್ನಡ ಅಂಕಿ 2½ ಎಂದಿದೆ. ಹಿಂಭಾಗದಲ್ಲಿ ದೇವರಾಯ ಎಂದು ಎರಡು ಸಾಲಿನಲ್ಲಿ ನಾಗರಿ ಅಲೇಖವಿದೆ.

2)




ಈ ನಾಣ್ಯದ ಮುಂಭಾಗದಲ್ಲಿ ಕನ್ನಡ ಅಂಕಿ 2½ ಇದ್ದು ಹಿಂಭಾಗದಲ್ಲಿ ಕುದುರೆಯ ಚಿತ್ರವಿದೆ, ಮೇಲ್ಭಾಗದಲ್ಲಿ ಸ್ವಸ್ತಿಕ ಚಿಹ್ನೆ ಇದೆ.

V. ಎರಡನೇ ದೇವರಾಯ (1423-1446):


1) 

ಈ ನಾಣ್ಯದ ಮುಂಭಾಗದಲ್ಲಿ ವೃತ್ತಾಕಾರದ ಮಧ್ಯ ಬಲಭಾಗಕ್ಕೆ ಮುಖಮಾಡಿ ನಿಂತಿರುವ ಆನೆಯ ಚಿತ್ರವಿದೆ. ಹಿಂಭಾಗದಲ್ಲಿ ಶ್ರೀ ದೇವರಾಯ ಎಂಬ ಎರಡು ಸಾಲಿನ ನಾಗರಿ ಅಲೇಖವಿದೆ. ಮುಂಭಾಗದಲ್ಲಿ ಆನೆಯ ಚಿತ್ರ ಹಾಗೂ ಹಿಂಭಾಗದಲ್ಲಿ ಶ್ರೀ ದೇವರಾಯ ಎಂಬ ಅಲೇಖವನ್ನು ನೋಡಿದಾಗ ಈತನ "ಗಜಬೇಂಟೆಕಾರ" ಹಾಗೂ "ರಾಯಗಜ ಗಂಡಭೇರುಂಡ" ಎಂಬ ಬಿರುದುಗಳು ನೆನಪಿಗೆ ಬರುತ್ತವೆ.


2) 

ಈ ನಾಣ್ಯದ ಮುಂಭಾಗದಲ್ಲಿ, ಮೇಲ್ಭಾಗದಲ್ಲಿ ಆನೆಯ ಚಿತ್ರವಿದ್ದು ಕೆಳಭಾಗದಲ್ಲಿ ಕನ್ನಡ ಅಂಕಿಯಲ್ಲಿ 2½ ಎಂದಿದೆ. ಹಿಂಭಾಗದಲ್ಲಿ ಕುದುರೆಯ ಚಿತ್ರವಿದ್ದು ಮೇಲ್ಭಾಗದಲ್ಲಿ ಅರ್ಧವೃತ್ತಾಕಾರದ ಮಧ್ಯದಲ್ಲಿ ಸ್ವಸ್ತಿಕ ಚಿತ್ರವಿದೆ.

ಮೊದಲಬಾರಿಗೆ 1¼ ಹಣ ಎಂಬ ಎರಡು ರೀತಿಯ ಮೌಲ್ಯಗಳುಳ್ಳ ನಾಣ್ಯಗಳು ಇಮ್ಮಡಿ ದೇವರಾಯನ ಕಾಲದಲ್ಲಿ ಚಲಾವಣೆಗೆ ಬಂದವು. ಈ ನಾಣ್ಯಗಳಲ್ಲಿ ಕಂಡು ಬರುವ 2½ ಮತ್ತು 1¼ ಎಂಬ ಅಂಕಿ ಹಾಗೂ ತೂಕದ ಆಧಾರದ ಮೇಲೆ ಇವುಗಳನ್ನು ಎರಡು ಭಾಗಗಳಾಗಿ ವಿಭಾಗಿಸಲಾಗಿದೆ. ಈತನ 1¼ ಹಣದ ವಿವರಗಳು ಕೆಳಗಿನಂತಿವೆ.

1) 


ಈ ನಾಣ್ಯದ ಮುಂಭಾಗದಲ್ಲಿ ಆನೆಯ ಚಿತ್ರವಿದ್ದು ಹಿಂಭಾಗದಲ್ಲಿ ಶ್ರೀ ದೇವರಾಯ ಎಂಬ ಎರಡು ಸಾಲಿನ ನಾಗರಿ ಅಕ್ಷರಗಳಿವೆ.

2) 

ಈ ನಾಣ್ಯದ ಮುಂಭಾಗದಲ್ಲಿ 'ದೇ' ಎಂಬ ಕನ್ನಡ ಅಕ್ಷರವಿದೆ. ಹಿಂಭಾಗದಲ್ಲಿ ಕುದುರೆಯ ಚಿತ್ರವಿದ್ದು ಮೇಲ್ಭಾಗದಲ್ಲಿ ಅರ್ಧ ವೃತ್ತಾಕಾರದ ಮಧ್ಯ ಸ್ವಸ್ತಿಕ ಚಿತ್ರವಿದೆ.


3) 

ಈ ನಾಣ್ಯದ ಮುಂಭಾಗದಲ್ಲಿ 'ದ' ಎಂಬ ಕನ್ನಡ ಅಕ್ಷರವಿದ್ದು ಹಿಂಭಾಗದಲ್ಲಿ ಹನುಮಾನನ ಚಿತ್ರವಿದೆ.


4) 

ಮುಂಭಾಗದಲ್ಲಿ 1¼ ಎಂಬ ಕನ್ನಡ ಅಂಕಿ ಇದ್ದರೆ ಹಿಂಭಾಗದಲ್ಲಿ ಕುದುರೆಯ ಚಿತ್ರ ಹಾಗೂ ಮೇಲ್ಭಾಗದಲ್ಲಿ ಅರ್ಧ ವೃತ್ತಾಕಾರದ ಮಧ್ಯ ಸ್ವಸ್ತಿಕ ಚಿಹ್ನೆಯಿದೆ.


VI. ಮಲ್ಲಿಕಾರ್ಜುನ (1447-1465):

1) 

ಈ ನಾಣ್ಯದ ಮುಂಭಾಗದಲ್ಲಿ ಎಡ ಭಾಗಕ್ಕೆ ಮುಖಮಾಡಿರುವ ನಂದಿಯ ಚಿತ್ರವಿದೆ. ಮೇಲ್ಭಾಗದಲ್ಲಿ ಸೂರ್ಯ ಮತ್ತು ಚಂದ್ರನ ಚಿತ್ರವಿದೆ. ನಂದಿಯನ್ನು ಅತಿ ಸುಂದರವಾಗಿ ಚಿತ್ರಿಸಲಾಗಿದೆ. ಹಿಂಭಾಗದ ಬಲಭಾಗದಲ್ಲಿ ಖಡ್ಗವಿದ್ದು ಪಕ್ಕದಲ್ಲಿ "ಮಲ್ಲಿಕಾರ್ಜುನರಾಯ" ಎಂಬ ಮೂರು ಸಾಲಿನ ನಾಗರಿ ಅಲೇಖವಿದೆ.

2) 


ಈ ನಾಣ್ಯದ ಮುಂಭಾಗದಲ್ಲಿ ಮೇಲ್ಭಾಗದಲ್ಲಿ ನಂದಿ, ಮಧ್ಯದಲ್ಲಿ 'ಇ' ನಂತೆ ಕಾಣುವ ಅಕ್ಷರ ಹಾಗೂ ಕನ್ನಡ ಅಂಕಿ 2½ ಇದೆ. ಹಿಂಭಾಗದಲ್ಲಿ ಕುದುರೆ ಮತ್ತು ಅರ್ಧ ವೃತ್ತಾಕಾರದ ಮಧ್ಯದಲ್ಲಿ ಸ್ವಸ್ತಿಕ ಚಿತ್ರವಿದೆ.

3) 

ಈ ನಾಣ್ಯದ ಮೇಲ್ಭಾಗದಲ್ಲಿ ನಂದಿಯು ಬಲಭಾಗಕ್ಕೆ ನಿಂತಿದ್ದು ಪಕ್ಕದಲ್ಲಿ ಪಕ್ಷಿಯ ಚಿತ್ರವಿದೆ. ಮಧ್ಯದಲ್ಲಿ 'ಇ' ನಂತೆ ಕಾಣುವ ಅಕ್ಷರ ಹಾಗೂ ಕೆಳಭಾಗದಲ್ಲಿ ¼ ಎಂಬ ಕನ್ನಡ ಅಂಕಿ ಇದೆ.

4)  ಈ ನಾಣ್ಯದ ಮುಂಭಾಗದಲ್ಲಿ 'ಇ' ಅಕ್ಷರ, ಹಿಂಭಾಗದಲ್ಲಿ ಕುದುರೆ ಮೇಲ್ಭಾಗದಲ್ಲಿ ಅರ್ಧ ವೃತ್ತಾಕಾರದ ಮಧ್ಯದಲ್ಲಿ ಸ್ವಸ್ತಿಕ ಚಿತ್ರವಿದೆ.

VII. ಕೃಷ್ಣದೇವರಾಯ (1509-1530):



ಈ ನಾಣ್ಯದ ಮುಂಭಾಗದಲ್ಲಿ ನಾಗರಿ ಅಕ್ಷರ 'ಕೃ' ಇದ್ದು ಅದರ ಕೆಳಗೆ ಕನ್ನಡ ಅಂಕಿ 2½ ಎಂದಿದೆ. ಹಿಂಭಾಗದಲ್ಲಿ ಕುದುರೆಯು ಬಲಗಡೆಗೆ ಮುಖಮಾಡಿ ನಿಂತಿದ್ದು ಮೇಲ್ಭಾಗದಲ್ಲಿ ಅರ್ಧ ವೃತ್ತಾಕಾರದ ಮಧ್ಯದಲ್ಲಿ ಸ್ವಸ್ತಿಕ ಚಿಹ್ನೆ ಇದೆ.

ಬೆಳ್ಳಿಯ ನಾಣ್ಯಗಳು ಕೃಷ್ಣದೇವರಾಯನ ನಂತರದಲ್ಲಿ ಕಂಡುಬರುವುದು ಅಸಾಮಾನ್ಯವೆಂದು ಅಭಿಪ್ರಾಯಪಡಬಹುದಾಗಿದೆ. ನಾಣ್ಯಗಳ ತಯಾರಿಕೆಯ ಅಭಾವದ ಜೊತೆಗೆ ನಾಣ್ಯಗಳಲ್ಲಿ ಬೆಳ್ಳಿಯ ಲೋಹದ ಪ್ರಮಾಣ ತುಂಬಾ ಕಡಿಮೆ. ಒಟ್ಟಿನಲ್ಲಿ ಈ ಬೆಳ್ಳಿಯ ನಾಣ್ಯಗಳು ಸಹ ವಿಜಯನಗರ ಅರಸರ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಇತಿಹಾಸದ ಸಂಶೋಧನೆಗೆ ಮಹತ್ತರವಾದ ಕೊಡುಗೆಯನ್ನು ನೀಡುತ್ತವೆ.

ಟಿಪ್ಪಣಿಗಳು

1. ಎ.ವಿ.ಎನ್. ಮೂರ್ತಿ, *ವಿಜಯನಗರದ ನಾಣ್ಯ ಸಂಪತ್ತು,* ಪು. 24.
2. ಬಿ.ಆರ್. ಗೋಪಾಲ, *ವಿಜಯನಗರ ಶಾಸನಗಳು,* ಸಂಪುಟ 2, (ಕೆ.ಎನ್. 749), ಪು. 146.
3. *ಅದೇ,* ಸಂಪುಟ 2 (ಕೆ.ಎನ್. 1035), ಪು. 276.
4. *ಅದೇ,* ಸಂಪುಟ 2 (ಕೆ.ಎನ್. 900), ಪು. 212-213.
5. ಎ.ವಿ.ಎನ್. ಮೂರ್ತಿ, *ವಿಜಯನಗರದ ನಾಣ್ಯ ಸಂಪತ್ತು,* ಪು. 114 ಮತ್ತು 115.
6. *ಇಂಡಿಯನ್ ಆಂಟಿಕ್ವೆರಿ,* XXV, 1896, ಪು. 318.
7. ಎನ್. ರಮೇಶನ್, *ಎ ಕೆಟಲಾಗ್ ಆಫ್ ವಿಜಯನಗರ ಕಾಯಿನ್ಸ್ ಆಫ್ ಆಂಧ್ರ ಪ್ರದೇಶ್ ಗವರ್ನಮೆಂಟ್ ಮ್ಯೂಸಿಯಂ,* ಪು. 49.
8. ಎ.ವಿ.ಎನ್. ಮೂರ್ತಿ, *ಕಾಯಿನ್ಸ್ ಅಂಡ್ ಕರೆನ್ಸಿ ಸಿಸ್ಟಂ ಇನ್ ಕರ್ನಾಟಕ,* ಪು. 221-305.
9. ಜೂನಿಯರ್ ಟೆಲಿಕಾಂ ಆಫೀಸರ್, ಹನೂರು, ಕೊಳ್ಳೇಗಾಲ ತಾಲ್ಲೂಕು.
10. ಮಾಲೀಕರು, ನಿಮಿಷಾಂಬ ಜ್ಯೂಯಲ್ಲರ್ಸ್, ಕೊಳ್ಳೆಗಾಲ.

15. ಓಲೆಗರಿ ಹಸ್ತಪ್ರತಿಯಲ್ಲಿ ವಿಜಯನಗರ – ಗೋಲ್ಕೊಂಡೆಯ ಚರಿತ್ರಾರ್ಹ ಸಂಗತಿಗಳು

ಕೆಳದಿ ಗುಂಡಾಜೋಯಿಸ್

ಶ್ರೀರಂಗಪಟ್ಟಣದಲ್ಲಿ ವಿಜಯನಗರ ವೈಸ್‌ರಾಯಿಗೆ ಸೇರಿದ್ದ ಅರಮನೆಯು ಕಾಲಕ್ರಮೇಣ ಮೈಸೂರು ಅರಸರ ವಶಕ್ಕೆ ಬಂದ ನಂತರ ವಿಲ್ಕ್ಸನ ಪ್ರಕಾರ ಟಿಪ್ಪುವಿನ ಅಧೀನವಾಯಿತು. ಈ ಅರಮನೆಯ ಬೃಹತ್ ಸೌಧದಲ್ಲಿದ್ದ ವಿಪುಲ ಚರಿತ್ರಾರ್ಹ ಸಂಗತಿಗಳನ್ನೊಳಗೊಂಡ ಪುರಾತನ ಓಲೆಗರಿಗಳು ಹಾಗೂ ಕಡತಗಳು ದುರದೃಷ್ಟವಶಾತ್ ನಾಶವಾಗಿರುವುದನ್ನು ಕುರಿತು ಗೆಜೆಟೀರ್‌ನ ಇತಿಹಾಸಕಾರರು —

---------- It was reported to him that several large apartments in it were full of books, chiefly of *palm leaf* and *kadatams* and he was asked how they were to be disposed of. "Transfer them", said he, "to the royal stables as fuel to boil the *cooltee* (grain on which horses are fed)" and this was accordingly done. A miscellaneous collection was however preserved from this destruction by the pious artifice of a Brahman, which, in the confusion, fell into the hands of a British Officer. Among the historical tracts which this collection contained was the record of a curious inquiry into the state of the Royal Family and its relations conducted in 1715.[1]

ಈ ರೀತಿ ವರದಿ ಮಾಡಿದ್ದಾರೆ. ಬೆಲೆ ಕಟ್ಟಲು ಅಸಾಧ್ಯವಾದ ಇಂತಹ ಚರಿತ್ರಾರ್ಹ ಹಸ್ತಪ್ರತಿಗಳು ಕಣ್ಮರೆಯಾಗಿರುವುದನ್ನು ಅವುಗಳ ವಿವರಣೆಗಳೊಂದಿಗೆ ದಿ॥ ಸಿ. ಹಯವದನರಾವ್‌ರವರು "Historical Records Commission for Mysore" ಲೇಖನದಲ್ಲಿ ಸ್ಥೂಲವಾಗಿ ಚರ್ಚಿಸಿ ವಿಶದೀಕರಿಸಿದ್ದಾರೆ.[2]

ಹಸ್ತಪ್ರತಿ ವಿವರ

ಸುಮಾರು 22 ಸೆ.ಮೀ. ಉದ್ದ, 4-5 ಸೆ.ಮೀ. ಅಗಲವಿರುವ ಹಾಗೂ 10 ಸಾಲು, 35 ಅಕ್ಷರಗಳನ್ನೊಳಗೊಂಡ ಈ ಓಲೆಗರಿ ಹಸ್ತಪ್ರತಿಯು ಈ ಕೆಳಕಂಡ ಕೃತಿಗಳನ್ನೊಳಗೊಂಡ ಕಟ್ಟಿನೊಂದರಲ್ಲಿ 15 ಪತ್ರಗಳಲ್ಲಿ ಸೇರಿ ಅಸಮಗ್ರವಾಗಿದೆ. ಪುಟ ಸಂ. 48 ರಿಂದ 62ರವರೆಗೆ ಗೋಲಕೊಂಡೆ ಕುರಿತು ಐತಿಹಾಸಿಕ ಮಾಹಿತಿಗಳಿವೆ.

ಕೃತಿಗಳು

1. ತಂಜಾವೂರು-ಚೋಳದೇಶದ ವಿಸ್ತಾರ.

   ಸುಮಾರು 23 ಪತ್ರಗಳಿದ್ದ ಈ ಕೃತಿಯು ಪರಿಷ್ಕರಣೆಗಳೊಂದಿಗೆ ನನ್ನ ಹಾಗೂ ಡಾ. ಗೋಪಾಲಕೃಷ್ಣರವರ ಸಂಪಾದನೆಯೊಂದಿಗೆ ಇಂಗ್ಲೀಷಿನಲ್ಲಿ Institute of Asian Studies, Chennai ರವರು 1997ರಂದು ಪ್ರಕಟಿಸಿದ್ದಾರೆ. (Tanjavoor to Vijayarajagiridurga).
2. ಕೆಳದಿ ಸಂಸ್ಥಾನದ ಇಕ್ಕೇರಿ ಸೀಮೆಯ ಕೈಫಿಯತ್ತು.

   ಕರ್ನಾಟಕ ಇತಿಹಾಸ ಅಕಾದೆಮಿಯಿಂದ ಇತಿಹಾಸ ದರ್ಶನದಲ್ಲಿ ಪ್ರಕಟವಾಗಿದೆ.[3]
3. ಮಧುರೆ ಸೀಮೆ ವಿಸ್ತಾರಾ.
4. ತಿರುವಾಡಿ ರಾಜ್ಯ.
5. ತಿರುಮಲೆ ದೇವರು. 25-38 ಪತ್ರಗಳು (ಕಾಣಸಿಗುವುದಿಲ್ಲ).
6. ಚೆನ್ನಪಟ್ಟಣ ಕುರಿತು ಮಾಹಿತಿ.

ಡಾ. ವಿ.ಎಸ್.ಎಸ್ ಆಚಾರ್ಯರವರ ಮುಖಾಂತರ ಶ್ರೀರಂಗಪಟ್ಟಣದಲ್ಲಿ ಲಭಿಸಿದ ಈ ಓಲೆಗರಿ ಹಸ್ತಪ್ರತಿಯು ತೆಲುಗು ಲಿಪಿ ಕನ್ನಡ ಭಾಷೆಯಿಂದ ಕೂಡಿದೆ. ಹಸ್ತಪ್ರತಿಯ ಕಾಲ "ನಳ ಸಂವತ್ಸರದ ಭಾದ್ರಪದ ಬ 10 ಲೂ ಗೊಲಕೊಂಡೆಯಿಂದ ಮುಖಾಮಿ ರಘೂಪತಿ ಕಳುಹಿದ

ಕಾಗದ ಪ್ರತಿ" ಎಂದಿದೆ. ಡಾ. ಕಣ್ಣು ಪಿಳ್ಳೆರವರ ಎಫೆಮೆರೀಸ್ ಪ್ರಕಾರ ದಿನಾಂಕ 3-9-1667 ಹಾಗೂ 10-9-1726 ರಂದು ನಳ ಸಂವತ್ಸರಗಳು ಕಾಣಸಿಗುತ್ತವೆ. "ರಘೂಪತಿ ಕಳುಹಿದ ಕಾಗದ ಪ್ರತಿ" ಎಂಬ ಉಲ್ಲೇಖವಿದ್ದು ಮೂಲ ಕಾಗದ ಪ್ರತಿಯಿಂದ ಓಲೆ ಪ್ರತಿಗೆ ಲಿಪಿಕಾರನಿಂದ ಬರೆಯಲ್ಪಟ್ಟಿರಬಹುದಾಗಿದೆ. "ರಘೂ" ಎಂಬ ಹೆಸರಿನ ಬ್ರಾಹ್ಮಣನೊಬ್ಬನು ಬಿಜಾಪುರದ ಅದಿಲ್‌ಷಹನ ಆಸ್ಥಾನದಲ್ಲಿರುವುದೂ ಕಂಡುಬರುತ್ತದೆ.[4] ವಿಜಯನಗರ ಅಚ್ಯುತರಾಯನ ಸಂಬಂಧಿ ತಂಜಾವೂರಿನ ನಾಯಕನಾದ ಸೇವಪ್ಪನ ಕಾಲ ಕ್ರಿ.ಶ. 1532. ಈತನ ಮಗ ರಘುನಾಥನು 1614-1634 ರಲ್ಲಿದ್ದು ಸಂಸ್ಕೃತ ಮತ್ತು ತೆಲುಗು ಭಾಷೆಗಳಲ್ಲಿ ಪ್ರಸಿದ್ಧ ಬರಹಗಾರನಾಗಿದ್ದನು.[5] ಇವನ ಮಗ ವಿಜಯರಾಘವನೂ (1634-1673) ತಂದೆಯಂತೆಯೇ ಪ್ರಸಿದ್ಧ ಕವಿಯಾಗಿದ್ದನು. ಈ ಹಸ್ತಪ್ರತಿಯು ತೆಲುಗು ಲಿಪಿ ಹಾಗೂ ಕನ್ನಡ ಭಾಷೆಯಿಂದ ಕೂಡಿದ್ದು ತಂಜಾವೂರಿನ ರಘುನಾಥನ ಬರಹವಿರಬಹುದೆಂದು ಊಹಿಸಲು ಸಾಧ್ಯವಿದೆ. ಅಲ್ಲದೆ ಪಾಠಾಂತರ ಭೇದಕ್ಕೆ ಅನ್ಯ ಹಸ್ತಪ್ರತಿಗಳ ಅಲಭ್ಯವೂ ಇದಕ್ಕೆ ಪೂರಕ ಅಂಶವಾಗಿದೆ. 1672 ರಿಂದ ಹತ್ತು ವರ್ಷ ರಾಜ್ಯವಾಳಿದ ಕುತುಬ್‌ಶಾಹಿ ಸುಲ್ತಾನರಲ್ಲಿ ಅಬ್ದುಲ್ ಹಸನ್ ಕುತುಬ್‌ಷಹನು ಹಿಂದೂಗಳಿಗೆ ನೀಡಿದ ಪ್ರೋತ್ಸಾಹದಿಂದ ಈತನನ್ನು ಭಕ್ತ ರಾಮದಾಸರ ಕಥೆಯಲ್ಲಿ "ತಾನೇ ಷಾ" ಎಂದು ಕರೆಯಲಾಗಿದೆ. ಈತ ಹಿಂದೂ-ಮುಸ್ಲಿಂ ಭೇದವೆಣಿಸಲಿಲ್ಲ. ಸಾಹಿತ್ಯ, ವೇದಗಳು ಮತ್ತು ಪುರಾಣಗಳಲ್ಲಿ ವಿದ್ವಾಂಸರಾಗಿದ್ದ ಪಂಡಿತರಿಗೆ ಅಗ್ರಹಾರ ಹಾಗೂ ದೇವಾಲಯಗಳನ್ನು ನಿರ್ಮಿಸಿಕೊಟ್ಟು ಭೂಮಿಗಳನ್ನು ದಾನವಾಗಿ ನೀಡಿದುದಲ್ಲದೆ ಕವಿಗಳಿಗೂ ಉತ್ತೇಜನವಿತ್ತು ತೆಲುಗು ಸಾಹಿತ್ಯದಲ್ಲಿ "ಇಬಾ ರಾಮ" ಎಂಬ ಹೆಸರು ಗಳಿಸಿದ್ದನು.[6] ಗೋಲ್ಕೊಂಡ ಇತಿಹಾಸವನ್ನೊಳಗೊಂಡ ಮೆಕಂಜೀ ಸಂಗ್ರಹವಿರುವುದೂ ತಿಳಿದುಬರುತ್ತದೆ.[7] ತಂಜಾವೂರಿನ ಇತಿಹಾಸವನ್ನೊಳಗೊಂಡ ಓಲೆ ಹಸ್ತಪ್ರತಿ ಇದರಲ್ಲಿ ಸಮೀಕೃತವಾಗಿದ್ದು, ಐತಿಹಾಸಿಕ ತಾಣ ಶ್ರೀರಂಗಪಟ್ಟಣದ ಸಮೀಕ್ಷೆಯಲ್ಲಿ ಲಭಿಸಿರುವುದರಿಂದಲೂ, ವಿಜಯನಗರ-ತಂಜಾವೂರಿನ ಬಾಂಧವ್ಯ ದೃಷ್ಟಿಯಿಂದಲೂ, ಲಿಪಿ-ಭಾಷಾ ವೈವಿಧ್ಯತೆಯಿಂದಲೂ ಹದಿನೇಳನೆ ಶತಮಾನದ ಈ ಕೃತಿಯು ಸೇವಪ್ಪನ ಮಗ ರಘುನಾಥನ (1614-1634) ಕಾಲದ್ದಿರಬಹುದೆಂದು ತರ್ಕಿಸಬಹುದಾಗಿದೆ. ದೆಹಲಿಯ ಬಾದಷಹ ಔರಂಗಜೇಬನ ಕಾಲದವರೆಗೂ ಐತಿಹಾಸಿಕ ಸಂಗತಿಗಳು ಹಸ್ತಪ್ರತಿಯಲ್ಲಿ ಉಲ್ಲೇಖನಗೊಂಡಿರುವುದರಿಂದ ನಳ ಸಂವತ್ಸರ ಕಾಲಮಾನದಲ್ಲಿ ದಿನಾಂಕ 3-9-1667 ಇರಬಹುದೆಂದು ಸಧ್ಯಕ್ಕೆ ನಿರ್ಧರಿಸಬಹುದಾಗಿದೆ.

ಹಸ್ತಪ್ರತಿಯಲ್ಲಿರುವ ಐತಿಹಾಸಿಕ ಸಂಗತಿಗಳು

1. ನರಪತಿ (ವಿಜಯನಗರ).
2. ಗಜಪತಿ (ಒರಿಸ್ಸಾ) - (ಕಳಿಂಗ ?).
3. ಅಶ್ವಪತಿ (ಅದಿಲ್‌ಶಾಹಿ ವಂಶದ ಆಶ್ರಯದಲ್ಲಿ ಬಿಜಾಪುರ ಕ್ರಿ.ಶ. 1489-1686).
4. ದೆಹಲಿಯ ಮೊಗಲ್ ಬಾದಷಹರು.
5. ಇಮಾದ್‌ಶಾಹಿ ವಂಶದ ಆಶ್ರಯದಲ್ಲಿರುವ ಬಿರಾರ್.
6. ನೈಜಾಮ್‌ಶಾಹಿ ವಂಶದ ಆಶ್ರಯದಲ್ಲಿ ಅಹಮ್ಮದ್‌ನಗರ (1595-1600).
7. ಕುತುಬ್‌ಶಾಹಿ ವಂಶದ ಆಶ್ರಯದಲ್ಲಿ ಗೋಲ್ಕೊಂಡ (1489-1686).
8. ಬರೀದ್‌ಶಾಹಿ ವಂಶದ ಆಶ್ರಯದಲ್ಲಿ ಬಿದರೆ.

ಪತ್ರ ಸಂಖ್ಯೆ 48 (ಮುಂ) ಅಶ್ವಪತಿಯ (ಬಿಜಾಪುರ) ಮೇರೆಗಳು ಸಾಲು 1 ರಿಂದ 9 ರವರೆಗೆ - ರಜಪೂತರ ಒಡಕು, ಮೊಗಲರು ಆಕ್ರಮಣ ಮಾಡಿ ಡಿಳ್ಳೀಶ್ವರೋವಾ-ಜಗದೀಶ್ವರೋವಾ ಎನಿಸಿಕೊಂಡು ಆಳ್ವಿಕೆ ನಡೆಸಿದ್ದು; ರಜಪೂತರು ಮೊಗಲರನ್ನು ಓಲೈಸಿದ್ದು, ಮೊಗಲರ ಸೈನ್ಯಬಲ 4 ಲಕ್ಷ ಕುದುರೆ - ಈತನೇ ಅಶ್ವಪತಿಯೆನಿಸಿಕೊಂಡನು ಎಂದಿದೆ.

ಪತ್ರ ಸಂ. 48 (ಹಿಂ) ಸಾಲು 5-6 ರಲ್ಲಿ ಉಲ್ಲೇಖಿಸಿದ ಸುಲತಾನ ಮಹಂಮದ ಯಿಭುರಾಮ - ಈತನು ಕ್ರಿ.ಶ. 1535-57 ರಲ್ಲಿ ಆಳಿದ ಇಸ್ಮಾಯಿಲ್‌ನ ಪುತ್ರ ಇಬ್ರಾಹಿಮ್.[8] ಇದೇ ಸಾಲು 8 ರಿಂದ ಪತ್ರ ಸಂ. 49 (ಮುಂ) ಸಾಲು 4 ರವರೆಗೆ ನರಪತಿ (ವಿಜಯನಗರ) ಮೇರೆಯ ವಿವರವಿದೆ. ಮುಂದುವರಿದು ಡಿಳ್ಳೀಶ್ವರ ಸುಲ್ತಾನನು ಓರಂಗಲ್ಲಿನ ಪ್ರತಾಪರುದ್ರನನ್ನು ಗೌರವಿಸಿ ಕಳಿಸುವಾಗ ಆತನು ಮಾರ್ಗಮಧ್ಯದಲ್ಲಿ ಆನೆಯೊಂದಿಗೆ ಅದೃಶ್ಯನಾದ ಸಂಗತಿಯಿದೆ. ಪ.ಸಂ. 49 (ಹಿಂ) ಸಾಲು 7-8 ರಲ್ಲಿ ಬಲ್ಲಾಳರಾಯನು ಆಳಿದ ಸಂಗತಿಯಿದೆ.

ಪತ್ರ ಸಂ. 50 (ಮುಂ) ಸಾಲು 2-3 ಅಶ್ವಪತಿ (ಬಿಜಾಪುರ) ಮಗ ಕರ್ನಾಟಕ ಕಳೆದುಕೊಂಡು ಶ್ಯಾಹರ ಬದಿ (ತಿಲಸಿರಿ ?) ರಾಜ್ಯವಾಳಿದ ಸಂಗತಿಯಿದೆ. ಈತನೇ ಹಿರಿಯ ಮಗ; ಕಿರಿಯವನು ಮುಗ್ಧನೆಂದು ಹೇಳಿದೆ. ಸಾಲು 10 ರಿಂದ ಅಹಮ್ಮದಾಬಾದಿನಿಂದ ಆಳಿದ್ದು ಹಾಗೂ

ಹುಮಾಯೂನ ಹಲಾಹಲಾನ ಕುರಿತು ಉಲ್ಲೇಖಗಳಿವೆ. ಸಾಲು 4 ರಿಂದ 10 ರವರೆಗೆ ವಿಜಾಪುರ, ಕರ್ನಾಟಕ, ಸುಬೇದಾರರು, ಅದಿಲ್‌ಖಾನ್, ಆಮದಾನಗರ, ದೌಲತಾಬಾದು, ಭೈರಿ ನಿಜಾಮ್ ಮಲ್ಲಿಕ್, ಯಿಮಾದನ ಮಲ್ಲಿಕ್ ಮತ್ತು ಪ್ರಧಾನರ ಸಂಗತಿಗಳಿವೆ.

ಪ.ಸಂ. 51 (ಮುಂ) ಸಾಲು 1 ರಿಂದ 10 ರವರೆಗೆ ರಾಜ್ಯದ ಅಂತಃಕಲಹಗಳ ಸಂಗತಿಗಳು (ಹಿಂ) ಸಾಲು 1 ರಿಂದ ಯೆದುಲಶ್ಯಾಹ, ನಿಜಾಮಶ್ಯಾಹಾ, ಜ್ಯೋತಿಷ್ಕ ಫಕೀರನ ಸಂಗತಿಗಳು ಪ.ಸಂ. 52 (ಮುಂ) 6 ರವರೆಗೆ ಪ್ರಸ್ತಾಪವಿದೆ.

ಪ.ಸಂ. 52 (ಹಿಂ) ಸಾಲು 1 ರಿಂದ ಪ.ಸಂ. 53 (ಮುಂ) 9ನೇ ಸಾಲಿನವರೆಗೆ ಡಿಳ್ಳಿ ಸುಲ್ತಾನನ ಪರಂಪರೆಯ ವಿವರವಿದೆ. ಅದೇ (ಹಿಂ) ಸಾ 1 ರಿಂದ 54 (ಮುಂ) ಹಾಗೂ (ಹಿಂ) ಪೂರ್ತಿ ಅಸಫ್‌ಖಾನ್, ಔರಂಗಜೇಬ ಮತ್ತು ಗೋಲ್ಕೊಂಡೆ ಕುರಿತು ಮಾಹಿತಿಗಳಿವೆ.

ಪ.ಸಂ. 54 (ಹಿಂ) ಸಾಲು 8 ರಿಂದ ಪ.ಸಂ. 57 (ಮುಂ) ಸಾಲು 8 ರವರೆಗೆ ವಿಜಯನಗರ ವಿದ್ಯಾರಣ್ಯರ ಚರಿತ್ರೆಯಿಂದ ಆರಂಭಿಸಿ, ಗಜಪತಿಯ ಮಗಳ ವಿವಾಹವನ್ನೂ ಒಳಗೊಂಡು ಗೋಲ್ಕೊಂಡೆಯ ಸಂಗತಿಗಳಿವೆ. ಗೋಲಕೊಂಡೆಗೆ ಕೊಯಿಲಕೊಂಡೆ,[9] ಕಾಯಲ್ಲಕೊಂಡ ಎಂಬ ನಾಮಾಂಕಿತ ಪ.ಸಂ. 57 (ಹಿಂ) ಸಾಲು 9 ಹಾಗೂ ಪ.ಸಂ. 58 (ಮುಂ) ಸಾಲು 1 ರಲ್ಲಿವೆ. ಈ ಸಾಲುಗಳಲ್ಲಿ ಬರೀದ ಬಾದಷಹ ಹಾಗೂ ವಜೀರನ ಸಂಗತಿಗಳೂ ಇವೆ.

ಪ.ಸಂ. 59 ರಲ್ಲಿ ವಿಜಯನಗರ ಕೃಷ್ಣದೇವರಾಯನು ಬರೀದನನ್ನು ಎದುರಿಸಿ ರಾಜ್ಯವನ್ನು ವಶಪಡಿಸಿಕೊಂಡುದು, ಇಬ್ರಾಹಿಂ ಕುತುಬ್ ಮಲ್ಲುಕನು ಕೇವಲ ಎಂಟು ವರ್ಷದ ಬಾಲಕನಾಗಿದ್ದು ವಿಜಯನಗರ ರಾಮರಾಯ ಹಾಗೂ ತಿರುಮಲರಾಜಯ್ಯನ ಆಶ್ರಯ ಪಡೆದ ವಿವರವಿದೆ.

ಪ.ಸಂ. 59 (ಹಿಂ) ಸಾಲು 1 ರಿಂದ 5 ರವರೆಗೆ ವಿಜಯನಗರ ಅರಸರಿಂದ ಗೋಲ್ಕೊಂಡೆ ಪ್ರತಿಷ್ಠಾಪನೆಯಾದ ವಿವರವಿದೆ.[10] ಅದೇ ಸಾಲು 6 ರಿಂದ 9 ರವರೆಗೆ ಕೋಟೆ-ಪಟ್ಟಣಗಳ ನಿರ್ಮಾಣ ಕುರಿತು ಮಾಹಿತಿಯಿದೆ. ಇದೇ 60 (ಮುಂ) ಸಾಲು 4 ರಿಂದ 10 ರವರೆಗೆ ವಿಜಯನಗರ ಶ್ರೀರಂಗರಾಯ, ಯೆದುಲಶ್ಯಾಹ ಬಂಕಾಪುರದಲ್ಲಿ ಇಳಿದುದು ಮುಂತಾದ ಸಂಗತಿಗಳಿವೆ.[11] ಅದೇ 60 (ಹಿಂ) ಸಾಲು 3 ರಿಂದ ಇಬ್ರಾಹಿಂನ ಅವಸಾನ ಕಾಲ, ಪ್ರಧಾನಿ ಬೊಂಮರ ಪಂಡಿತನಿಗೆ ಮರಣ ಕಾಲದಲ್ಲಿ ಹೇಳಿದ ಸಂಗತಿ ಪ.ಸಂ. 61 (ಮುಂ) ಶ್ರೀರಂಗರಾಯನ ವೃತ್ತಾಂತಗಳು ಸಾಲು 6 ರಿಂದ 8 ರವರೆಗೆ ಕರ್ನಾಟಕ ಹಾಗೂ ಗಜಪತಿಯ ಇತಿಹಾಸಗಳಿವೆ.

ಪ.ಸಂ. 62 ಸಾಲು 3 ರಿಂದ ಪತ್ರ ಪೂರ್ತಿಯಾಗಿ ಔರಂಗಜೇಬನ ದಂಡಯಾತ್ರೆ ಹಾಗೂ ಇತರೆ ವಿವರಗಳು ಉಲ್ಲೇಖನಗೊಂಡು ಅಂತ್ಯದಲ್ಲಿ ಗೊಲಕೊಂಡೆಯವರ ಪೂರ್ವೋತ್ತಾರಂ ಎಂದು ಮುಕ್ತಾಯವಾಗುತ್ತದೆ.

ಉಪಸಂಹಾರ

ಸಾಮಾನ್ಯವಾಗಿ ಓಲೆಗರಿ ಹಸ್ತಪ್ರತಿಗಳಲ್ಲಿ ಕಾವ್ಯ, ಶಾಸ್ತ್ರ, ಸಾಹಿತ್ಯೇತ್ಯಾದಿ ಕೃತಿಗಳು ಲಿಪಿಕಾರದಿಂದ ಪರಂಪರಾವೃತವಾಗಿ ವೃದ್ಧಿಗೊಂಡು ಹೆಚ್ಚಾಗಿ ಹಸ್ತಪ್ರತಿಗಳು ಲಭಿಸುತ್ತವೆ. ಚಾರಿತ್ರ್ಯಮೌಲ್ಯದಿಂದ ಕೂಡಿದ ಹಸ್ತಪ್ರತಿಗಳು ಪಾಠಾಂತರ ಭೇದದ ಅಧ್ಯಯನಾದಿಗಳಿಗೆ ಅಲಭ್ಯವೇ ಸರಿ. ಲಿಂಗಣ್ಣ ಕವಿಯ ಕೆಳದಿ ನೃಪವಿಜಯ, ಆನಂದರಂಗ ಪಿಳ್ಳೆಯ ತಮಿಳು ದಿನಚರಿಗಳು ಮುಂತಾದವು ಕೇವಲ ಕೈಬೆರಳಿನಷ್ಟು ಹಸ್ತಪ್ರತಿಗಳಲ್ಲಿ ಲಭಿಸಿವೆ. ಪ್ರಕೃತ ಗೋಲ್ಕೊಂಡೆಯ ಚರಿತ್ರೆಯನ್ನು ಉಲ್ಲೇಖಿಸಿದ ಈ ಹಸ್ತಪ್ರತಿಯು ಚಾರಿತ್ರಿಕ ಮೌಲ್ಯದಿಂದ ಕೂಡಿದ್ದು ಅಧ್ಯಯನ ಯೋಗ್ಯವೆನಿಸಿದೆ. ಇಂತಹ ಹಸ್ತಪ್ರತಿಗಳು ಶ್ರೀರಂಗಪಟ್ಟಣದಲ್ಲಿ ಎಷ್ಟು ನಾಶವಾದುವೋ ಬಲ್ಲವರಾರು? ಇದು ಚರಿತ್ರೆಗೆ ಆದ ಅಪಾರ ಹಾನಿಯೇ ಸರಿ. ಅಳಿದುಳಿದ ಹಸ್ತಪ್ರತಿಗಳು ಶ್ರೀರಂಗಪಟ್ಟಣದ ಸುತ್ತಮುತ್ತಲ ಪ್ರದೇಶಗಳಲ್ಲಿ ಉಪಲಬ್ಧವಿರುವ ಸಾಧ್ಯತೆಯಿದೆ.[12] ಆಸಕ್ತಿಯಿಂದ ಕೂಡಿದ ತರುಣ ವಿದ್ವಾಂಸರು ಸಮೀಕ್ಷೆ ಕೈಗೊಂಡಲ್ಲಿ ಮಾಹಿತಿ ಲಭಿಸುವ ಸಾಧ್ಯತೆಯಿದೆ.

ಟಿಪ್ಪಣಿಗಳು

1. *History of Mysore,* Vol. III, p. 1152-53.

2. *QJMS,* Vol. XXXVI, No. 1, July 1945, ಪುಟ 27 ನೋಡಿರಿ.

3. *ಇತಿಹಾಸ ದರ್ಶನ,* ಸಂಪುಟ 3; ಸಂಚಿಕೆ 1/1998.

4. D.C. Verma, *History of Bijapur Relations with Vijayanagar,* Indian Institute of Islamic Studies.

5. *ಭಾರತದ ಗೆಜೆಟೀಯರ್* ಸಂ. 2, ಪು. 337.

6. *ಕನ್ನಡ ವಿಶ್ವಕೋಶ* "ಕ" ಪುಟ 850.

7. Vasudeva C. Bendre, गोवळकांड्या ची कुत्बशाही, Bharath, Ithihas Samshodhak Mandala - ಗ್ರಂಥ 39, ಪುಣೆ.

8. *ಕರ್ನಾಟಕ ಪರಂಪರೆ,* ಸಂ. 2, ಪುಟ. 69. ಈ ಕುರಿತು ಹಲವು ಮಾಹಿತಿ ನೀಡಿದ ಡಾ. ಕೊಲ್ಹಾರ್ ಕುಲಕರ್ಣಿ (ಬಿಜಾಪುರ)ರವರಿಗೆ ಕೃತಜ್ಞತೆಗಳು.

9. Koilkonda - About 60 miles S.W. of Hydarabad, Mahabub Nagar Dist. (Nizam State). Some account of Akana and Madna, Chief Ministers of Tomashau, Badshah of Golkonda. - The extract is produced from Col Mackenzie's collection vide MS No. 25 in Vol. unbound Translations etc., class II Telugu (Mavaser Valenly; Madras Records, Cul), India Office Library, (गोवळकांड्या ची कुत्बशाही-वा.सी. बेंद्रे, 1934, Pune, Bharatiya Ithihas Samshodhaka Mandala (39). ಮೆಹಬೂಬ್‌ನಗರದಲ್ಲಿಯೂ ಕನ್ನಡ ಓಲೆಗರಿ ಹಸ್ತಪ್ರತಿಗಳಿರುವುದೂ ಕಂಡುಬರುತ್ತದೆ.

10. Vidyadhar Mahajan, 1977, *History of India*, ಪು. 294 ನೋಡಿರಿ.

11. ಬಂಕಾಪುರ ಕುರಿತ ಚಾರಿತ್ರಿಕ ದಾಖಲೆಯೊಂದು ಗಮನಾರ್ಹವಾಗಿದೆ.

12. ಶ್ರೀರಂಗಪಟ್ಟಣದಲ್ಲಿ ಕೆನರಾ ಬ್ಯಾಂಕ್ ಮ್ಯಾನೇಜರ್‌ರವರು ತಾವು ಸಂಗ್ರಹಿಸಿದ ಹಸ್ತಪ್ರತಿಯೊಂದನ್ನು (ಓಲೆಗರಿ) ನನಗೆ ನೀಡಿದ್ದಾರೆ.

16. ಗಂಗಾದೇವಿಯ ಮಧುರಾ ವಿಜಯಂ

ಬಸವರಾಜ ಮಲಶೆಟ್ಟಿ

ನಮ್ಮಲ್ಲಿ ಚರಿತ್ರ ಕಾವ್ಯಗಳು ವಿರಳ. ಸಂಸ್ಕೃತದಲ್ಲಿ ಬಾಣನ 'ಹರ್ಷಚರಿತ', ಪದ್ಮಗುಪ್ತ ಪರಿಮಳನ 'ನವಸಾಹಸಾಂಕ ಚರಿತೆ', ಬಿಲ್ಹಣನ 'ವಿಕ್ರಮಾಂಕದೇವ ಚರಿತೆ', ಕಲ್ಹಣನ 'ರಾಜತರಂಗಿಣಿ', ಹೇಮಚಂದ್ರನ 'ಕುಮಾರಪಾಲ ಚರಿತ', ಮುಂತಾದವು ಗಮನಾರ್ಹ ಚರಿತ್ರ ಕಾವ್ಯಗಳು. ಆಶ್ರಯದಾತ ದೊರೆಯನ್ನು ಅವನ ವಂಶವನ್ನು ಚರಿತ್ರೆಯ ಚೌಕಟ್ಟಿನಲ್ಲಿ ಕವಿಗಳು ವರ್ಣಿಸಿದ್ದಾರೆ. ಇವುಗಳಲ್ಲಿ ಚಾರಿತ್ರಿಕ ಅಂಶಗಳು ತೆಳುವಾಗಿ ವರ್ಣನೆ ಪ್ರಶಂಸೆಗಳು ದಟ್ಟವಾಗಿರುವುದರಿಂದ ಎಷ್ಟೋ ಸಲ ಈ ಕಾವ್ಯಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ಐತಿಹಾಸಿಕ ಸಂಗತಿಗಳು ಪ್ರಶ್ನಾರ್ಹವಾಗುತ್ತವೆ. ಇಂಥ ಹಿನ್ನೆಲೆಯಲ್ಲಿ ಗಂಗಾದೇವಿಯ 'ಮಧುರಾವಿಜಯಂ' ಕಾವ್ಯವನ್ನು ಪರಿಶೀಲಿಸಿದರೆ ಅದು ಹಲವಾರು ದೃಷ್ಟಿಗಳಿಂದ ಗಮನಾರ್ಹ ಕೃತಿಯೆನಿಸುತ್ತದೆ. ಗಂಗಾದೇವಿ ವಿಜಯನಗರದ ಎರಡನೆಯ ದೊರೆ ಬುಕ್ಕನ ಸೊಸೆ. ಬುಕ್ಕನ ಮಗ ಕಂಪಣನ ಹೆಂಡತಿ. ತನ್ನ ಗಂಡನ ವೀರಜೀವನವನ್ನು ಅವಳು ಕಾವ್ಯವಾಗಿಸಿದ್ದಾಳೆ. ಆದ್ದರಿಂದ ಈ ಕೃತಿಗೆ 'ವೀರಕಂಪರಾಯ ಚರಿತಂ' ಎಂಬ ಇನ್ನೊಂದು ಹೆಸರೂ ಇದೆ. ಮಹಿಳೆಯೊಬ್ಬಳು ತನ್ನ ಗಂಡನನ್ನು ಕುರಿತು ಇಂಥ ಕಾವ್ಯ ರಚಿಸಿರುವುದು ವಿಶೇಷವಾಗಿದೆ. ಇದು ಕರ್ನಾಟಕದ ಮಟ್ಟಿಗೆ ಪ್ರಥಮ ಪ್ರಯತ್ನ.

ಬುಕ್ಕನು ತನ್ನ ಮಗ ಕಂಪಣನನ್ನು ದಕ್ಷಿಣದ ತುಂಡೀರ ಮಂಡಲ, ಕಂಚಿ, ಮಧುರೆಗಳಲ್ಲಿ ಉಂಟಾಗಿದ್ದ ರಾಜಕೀಯ ಅಸ್ಥಿರತೆ-ದೌರ್ಜನ್ಯಗಳನ್ನು ನಿವಾರಿಸಿ ಪ್ರಜಾನುರಾಗಿ ಆಡಳಿತ ನಡೆಸಲು ಕಳಿಸುತ್ತಾನೆ. ತಂದೆಯ ಅಪ್ಪಣೆಯಂತೆ ಕಂಪಣನು ದಂಡಯಾತ್ರೆ ಕೈಗೊಂಡು ಬುಕ್ಕನ ಅಪೇಕ್ಷೆಗಳನ್ನು ಈಡೇರಿಸುತ್ತಾನೆ. ಸು. 13 ವರ್ಷಕಾಲ ತಮಿಳುನಾಡಿನಲ್ಲಿದ್ದು ಒಳ್ಳೆಯ ರೀತಿಯಲ್ಲಿ ರಾಜ್ಯಾಡಳಿತ ನಡೆಸುತ್ತಾನೆ. ಇದಿಷ್ಟು ಇತಿಹಾಸ. ಈ ಐತಿಹಾಸಿಕ ಸಂಗತಿಗಳ ಹಂದರದ ಮೇಲೆ ಗಂಗಾದೇವಿ ಸುಂದರವಾದ ಕಾವ್ಯಬಳ್ಳಿ ಹಬ್ಬಿಸಿದ್ದಾಳೆ. ತಾನೊಬ್ಬ ಶ್ರೇಷ್ಠದರ್ಜೆಯ ಕವಯಿತ್ರಿ ಎಂಬುದನ್ನು ಸಾಧಿಸಿ ತೋರಿಸಿದ್ದಾಳೆ. ಪ್ರಸ್ತುತ ಉಪಲಬ್ಧವಿರುವ ಒಂಬತ್ತು ಸರ್ಗಗಳ 'ಮಧುರಾ ವಿಜಯಂ' ಅಪೂರ್ಣ ಕೃತಿಯೆಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ. ಮಧುರೆಯ ವಿಜಯ ನಡೆದುದು 1371ರಲ್ಲಿ. ಕಂಪಣನ ಮರಣ 1374ರಲ್ಲಿ. ಈ ಮಧ್ಯಕ್ಕೆ ಮಧುರಾ ವಿಜಯ ರಚನೆಗೊಂಡಿರಬೇಕು.

ಕಾವ್ಯವು ಗಣಪತಿ ಸ್ತುತಿಯೊಂದಿಗೆ ಪ್ರಾರಂಭವಾಗಿದೆ. ಗಂಗಾದೇವಿಯು ನಂತರ ಶಿವಪಾರ್ವತಿಯರನ್ನು ಸರಸ್ವತಿಯನ್ನು ಪ್ರಾರ್ಥಿಸಿದ ಮೇಲೆ ಗುರುಗಳಾದ ಕ್ರಿಯಾಶಕ್ತಿಯನ್ನು ಸ್ತುತಿಸಿರುವಳು. ಪೂರ್ವಕವಿಸ್ತುತಿಯಲ್ಲಿ ವಾಲ್ಮೀಕಿ, ವ್ಯಾಸ, ಕಾಳಿದಾಸ, ಬಾಣ, ಭಾರವಿ, ದಂಡಿ, ಭವಭೂತಿ, ಲೆಕ್ಕಯ್ಯ, ಕರ್ಣಾಮೃತದ ಕವಿ (ಹೆಸರಿಲ್ಲ), ಅಗಸ್ತ್ಯ, ಗಂಗಾಧರ, ವಿಶ್ವನಾಥರನ್ನು ಸ್ಮರಿಸಿರುವಳು. ಇವರಲ್ಲಿ ಅಗಸ್ತ್ಯ, ಗಂಗಾಧರ, ವಿಶ್ವನಾಥರು ಕಾಕತೀಯರ ಆಸ್ಥಾನ ಕವಿಗಳು. ವಿಶ್ವನಾಥನು ಗಂಗಾದೇವಿಯ ನೇರವಾದ ಗುರು. ವಿಜಯನಗರ ರಾಜಧಾನಿ ವರ್ಣನೆಯಿಂದ ಕಾವ್ಯಕಥೆ ಪ್ರಾರಂಭವಾಗುವುದು. ಬುಕ್ಕನು ತನಗೆ ಕ್ರಮಾಗತವಾಗಿ ಬಂದಿರುವ ರಾಜ್ಯವನ್ನು ವೈಭವದಿಂದ ಆಳುತ್ತಿದ್ದುದನ್ನು ಮನದುಂಬಿ ಬಣ್ಣಿಸಿದ್ದಾಳೆ. ಅವನ ರಾಣಿವಾಸದಲ್ಲಿ ಚಂದ್ರನಿಗೆ ರೋಹಿಣಿ ಇದ್ದಂತೆ 'ದೇವಾಯಿ' ಪಟ್ಟದ ರಾಣಿಯಾಗಿ ಶೋಭಿಸುತ್ತಿದ್ದಳು. ಇವಳೇ ಕಂಪಣನ ತಾಯಿ. ಇವಳ ಹೆಸರು ಅನ್ಯತ್ರ ಎಲ್ಲಿಯೂ ದೊರೆಯದೆ ಈ ಕಾವ್ಯದಲ್ಲಿ ಮಾತ್ರ ದೊರೆಯುತ್ತಿರುವುದು ಗಮನಾರ್ಹ ಅಂಶವಾಗಿದೆ.

ದೇವಾಯಿ ಗರ್ಭಧರಿಸುತ್ತಾಳೆ. ಗರ್ಭಿಣಿಯ ವರ್ಣನೆ ವಿಶೇಷವಾಗಿದೆ. ಮುಂದೆ ಜನಿಸಲಿರುವ ಮಗುವಿನ ಗುಣ ಲಕ್ಷಣ ಪರಾಕ್ರಮಗಳನ್ನು ಸೂಚಿಸುವಂತ ಕೆಲವು ಅಸಹಜ ಬಯಕೆಗಳುಂಟಾದವು. ಸುಖಸ್ವರೂಪಿಯಾದ ತುಂಗಭದ್ರೆ ಪಕ್ಕದಲ್ಲಿದ್ದರೂ ದೇವಾಯಿಗೆ ತಾಮ್ರಪರ್ಣಿ ನದಿಯಲ್ಲಿ ಜಲಕೇಳಿಯಾಡಬೇಕೆಂಬ ಆಸೆಯಾಯಿತಂತೆ (2-5) (ಮುಂದೆ ಕಂಪಣ ತಾಮ್ರಪರ್ಣಿಯ ದಂಡೆಯ ಮೇಲೆ ಯುದ್ಧಮಾಡಿ ಗೆಲ್ಲುವನು). ಇಡೀ ಪ್ರಕೃತಿ-ಪ್ರಾಣಿಗಳು ಸಂತಸದಿಂದ ಕಂಪಣನ ಬರವನ್ನು ನಿರೀಕ್ಷಿಸುತ್ತಿದ್ದುವೆಂಬುದನ್ನು ಹೇಳುತ್ತ ಕುದುರೆಗಳು "ದೇವಾಯಿಯ ಗರ್ಭದಲ್ಲಿರುವ ಶಿಶು ಮುಂದೆ ಬೆಳೆದು ತಮ್ಮ ಬೆನ್ನೇರುವನೆಂದು ಹೆಮ್ಮೆಯಿಂದ ಗೊರಸಿನಿಂದ ನೆಲಕೆರೆದು ಹಿರಿಯ ಶಾಸನ ಬರೆದವು" (2-20) ಎಂದು ವರ್ಣಿಸಲಾಗಿದೆ. ಪುತ್ರ ಜನನದ ಸುದ್ದಿ ತಿಳಿದು ಬುಕ್ಕ ಹರ್ಷಗೊಂಡುದು, ಪುತ್ರೋತ್ಸವದ ಸಂಭ್ರಮ ಇವೆಲ್ಲ ವಿವರವಾಗಿ ಚಿತ್ರಿಸಲ್ಪಟ್ಟಿವೆ.

ಬುಕ್ಕನು ಕಂಪಣನಿಗೆ ತಾನೇ ಗುರುವಾಗಿ ವಿದ್ಯಾಭ್ಯಾಸ ಮಾಡಿಸುತ್ತಾನೆ. ಕಥಾನಾಯಕ ಕಂಪಣನಿಗೆ ಯೌವನೋದಯವಾಯಿತು. ತರುಣಸುಂದರ ಕಂಪಣನ ಅಂಗಾಗಗಳನ್ನೆಲ್ಲ ಗಂಗಾದೇವಿ ರಸವತ್ತಾಗಿ ವರ್ಣಿಸಿದ್ದಾಳೆ. ಬುಕ್ಕನು ಹಲವಾರು ಕನ್ಯೆಯರನ್ನು ತಂದು ಕಂಪಣನ ಲಗ್ನ ಮಾಡುತ್ತಾನೆ. ಅವರಲ್ಲಿ ತಾನು (ಗಂಗಾದೇವಿ) ಮುಖ್ಯಳಾದ ಸತಿಮಣಿ ಎಂಬುದನ್ನು ಶಕ್ರನಿಗೆ ಶಚಿ, ಹರಿಗೆ ರಮೆ, ಶಂಭುವಿಗೆ ಸತಿ ಇದ್ದಂತೆ ತಾನಿರುವೆನೆಂದು ಸೂಚ್ಯವಾಗಿ ಹೇಳಿದ್ದಾಳೆ. ತರುಣ ಯುವರಾಜನಿಗೆ ತಂದೆ ಬುಕ್ಕನು ನೀಡುವ ಉಪದೇಶ ರಾಜನೀತಿಯ ಸಾರಸರ್ವಸ್ವವನ್ನು ಒಳಗೊಂಡಿದೆ. ಅವನು ಮಗನಿಗೆ "ತಾರುಣ್ಯ ಮತ್ತು ಸಂಪತ್ತು ಒಂದಕ್ಕೊಂದು ಬೆರೆತರೆ ಹೆಜ್ಜೆಹೆಜ್ಜೆಗೆ ಎಡವಿ ಬೀಳುವವರೇ ಹೆಚ್ಚು. ನೀನು

ಎಚ್ಚರದಿಂದಿರು. ರಾಷ್ಟ್ರದ ಸಂಪದವೆಂದರೆ ಜನಪದರು. ಅವರನ್ನು ಅತಿ ಕ್ರೂರ ರೀತಿಯಿಂದ ಆಳಲಾಗದು. ನೀನು ಧೈರ್ಯ ಧೀಮಂತಿಕೆ ಹೊಂದಿದವನಾಗಿ ಒಳಿತು ಕೆಡುಕನ್ನಳೆಯುವ ಸೂಕ್ಷ್ಮಮತಿಯಾಗಿ" (3-30 ರಿಂದ 36) ಎಂದು ಬುದ್ಧಿವಾದ ಹೇಳುತ್ತಾನೆ. ಮುಂದೆ ಕಂಪಣನಿಗೆ ದಿಗ್ವಿಜಯಕ್ಕೆ ಹೊರಡಲು ಅಪ್ಪಣೆಮಾಡಿ ತುಂಡೀರ ಮಂಡಲದ ಚಂಪನನ್ನು ಮಧುರೆಯ ಸುಲ್ತಾನನನ್ನು ನಿರ್ಮೂಲನೆ ಮಾಡಲು ಸೂಚಿಸುತ್ತಾನೆ.

ಕಂಪಣ ದಂಡಯಾತ್ರೆಯ ಸಿದ್ಧತೆಗೆ ತೊಡಗುತ್ತಾನೆ. ಆನೆ, ಕುದುರೆ, ಕಾಲ್ದಳ ಪಡೆ ಸಿದ್ಧವಾಗುವ ವಿವರಗಳಿವೆ. ಸಾಗರದಂತೆ ವ್ಯಾಪಿಸಿನಿಂತ ಸೈನ್ಯದ ಚಲನವಲನಗಳನ್ನು ಯಥಾವತ್ತಾಗಿ ವರ್ಣಿಸಿದ್ದಾಳೆ. ಕಂಪಣ ಮಂಗಳಾಲಂಕೃತನಾಗಿ ಶುಭ ಮುಹೂರ್ತ ಎದುರು ನೋಡುತ್ತ ನಿಂತಿದ್ದಾಗ ಅವನ ಬಲಭುಜ ಸ್ಫುರಿಸಿತು. ಬ್ರಾಹ್ಮಣರು ಅಥರ್ವವೇದ ಪಠಿಸುತ್ತಿದ್ದರು. ಗಂಭೀರ ರೀವಿಯಲ್ಲಿ ದ್ವಾರಬಾಗಿಲ ದಾಟಿ ಹೊರಟ ಕಂಪಣನನ್ನು ಎಷ್ಟು ವರ್ಣಿಸಿದರೂ ಗಂಗಾದೇವಿಗೆ ತೃಪ್ತಿಯಿಲ್ಲ. ಅವನು ಏರಿದ ದಿವ್ಯತುರಗವು "ಬಾಯಲ್ಲಿ ಕಚ್ಚಿದ್ದ ಕಡಿವಾಣ ಹಾವಿನಂತಿರಲು ಚಿತ್ತಾರದ ಪಕ್ಕರೆಕ್ಕೆಗಳಂಥ ಅಲಂಕಾರವಿರಲು ಗರುಡನಂತೆ ಶೋಭಿಸುತ್ತಿತ್ತು" (4-25). ಬೀದಿಯ ಬದಿಯಲ್ಲಿ ನಿಂತ ಮಾನಿನಿಯರು "ಪರ್ವತದ ಮೇಲೆ ಮೋಡವು ಜಲಬಿಂದುಗಳನ್ನು ಸುರಿಸಿದಂತೆ ಕಂಪನನ ಮೇಲೆ ಲಾಜಾಕ್ಷತೆ ಸುರಿಸಿದರು" (4-33). "ಸೈನ್ಯದ ಪದಧೂಳಿ ಎಂಥದು? ಧೂಳೆದ್ದು ಆಗಸ ತುಂಬಿಕೊಂಡಿತು. ಇದರಿಂದ ಭೂಭಾರ ತಗ್ಗಿ ಶೇಷನಿಗೆ ಹಗುರೆನಿಸಿತು" (4-37). ಕಂಪನನ ಸೈನ್ಯ ಮುಳಬಾಗಿಲಿಗೆ ಬಂದು ಬೀಡುಬಿಟ್ಟಿತು. ಸೂಕ್ತ ಸಮಯಕ್ಕೆ ಚಂಪನನ್ನು ಮುತ್ತಿದನು. ಕರ್ನಾಟ ಸೇನೆಯ ಹೊಡೆತ ತಾಳಲಾರದೆ ದ್ರಾವಿಡ ಸೇನೆ ಸೋತು ಓಡಿತು. ಚಂಪನೊಡನೆ ಹೋರಾಡಲು ಮುಂದಾದ ತನ್ನ ದಂಡನಾಯಕರನ್ನು ಬದಿಗೆ ಸರಿಸಿ ಕಂಪಣ ಸ್ವತಃ ತಾನೇ ಎದುರಿಸಿ ನಿಂತು ಯುದ್ಧಮಾಡಿದನು. "ರಣರಂಗದಲ್ಲಿ ಕೆನ್ನೆತ್ತರ ಹೊಳೆ ಹರಿಯಿತು. ಭಲ್ಲೆಯಿಂದ ತುಂಡರಿಸಿದ ವೈರಿ ಭಟರ ಶಿರಗಳು ಆ ರಕ್ತದ ಪ್ರವಾಹದಲ್ಲಿ ಅಂಭೋಜದಂತೆ ಕಾಣುತ್ತಿದ್ದವು" (4-58). ಕಂಪಣನು ವೀರಾವೇಶದಿಂದ ಹೋರಾಡಿ ಚಂಪನನ್ನು ಇರಿದು ಇಂದ್ರನ ಅತಿಥಿಯಾಗುವಂತೆ ಮಾಡಿದನು. ಇಂಥ ಯುದ್ಧವರ್ಣನೆಯಿಂದಾಗಿ ಈ ಕಾವ್ಯಭಾಗವು ಮಹತ್ವದ ದಾಖಲೆಯೆನಿಸಿದೆ.

ಕಂಪಣನು ಮರಕತ ನಗರವನ್ನು (ಕಾಂಚೀಪುರ) ರಾಜಧಾನಿ ಮಾಡಿಕೊಂಡು ಪ್ರಜಾನುರಾಗಿಯಾಗಿ ರಾಜ್ಯಭಾರಮಾಡುತ್ತಿದ್ದನು. ಹಳೆಯ ವೈರವನ್ನು ಮರೆತು ರಾಜರೆಲ್ಲ ಅವನಿಗೆ ಸಹಕಾರ ನೀಡಿದರು. ಅವನ ಓಲಗದಲ್ಲಿ ಸಂಗೀತ ನೃತ್ಯ ಕಾವ್ಯವಾಚನಗಳು ನಿರಂತರವಾಗಿ ನಡೆಯುತ್ತಿದ್ದವು. ಋತುಮಾನಗಳಿಗೆ ಅನುಸಾರವಾಗಿ ಕಂಪಣನು ತನ್ನ ಅಂತಃಪುರದ ನಾರಿಯರೊಂದಿಗೆ ಸುಖವಾಗಿ ಕಾಲಕಳೆಯುತ್ತಿದ್ದನು. ಅವನ ರಸಿಕತೆ ಮತ್ತು ಸದಭಿರುಚಿಗಳು ವಿವರವಾಗಿ ಇಲ್ಲಿ ವರ್ಣಿಸಲ್ಪಟ್ಟಿವೆ. ಕಂಪಣನ ದಾಂಪತ್ಯ ಸುಖ ನಿತ್ಯ ನೂತನವಾದುದು. ಅವನು ಹೂಕೊಯ್ಯಲು ಉದ್ಯಾನಕ್ಕೆ ತನ್ನರಸಿಯರೊಂದಿಗೆ ಹೋದಾಗ ನಡೆಯುವ ಸರಸ ಸಲ್ಲಾಪಗಳನ್ನು ಗಂಗಾದೇವಿ ಉತ್ಸಾಹದಿಂದ ಬಣ್ಣಿಸಿದ್ದಾಳೆ. ಕಂಪಣನ ವನವಿಹಾರ, ಮೃಗಯಾವಿನೋದ, ಜಲಕ್ರೀಡೆಗಳನ್ನು ಕೂಡ ಸವಿವರವಾಗಿ ವಿವರಿಸಿದ್ದಾಳೆ. ಒಂದು ಸುಂದರ ಸಂಜೆಯಲ್ಲಿ ನಡೆಯುವ ವರ್ಣನೆಗಾಗಿಯೇ ಏಳನೆಯ ಸರ್ಗ ಮೀಸಲಾಗಿದೆ. ಗಂಗಾದೇವಿಯ ಪ್ರತಿಭಾಶಕ್ತಿ, ವರ್ಣನಾಶಕ್ತಿ, ಕಲ್ಪನಾಶಕ್ತಿಗಳು ಇಲ್ಲಿ ಮುಪ್ಪುರಿಗೊಂಡಿವೆಯೆಂದು ಹೇಳಬಹುದು. "ತಾವರೆಗಳನ್ನರಳಿಸುವ ಕಾರ್ಯದಲ್ಲಿ ನಷ್ಟವಾದ ತನ್ನ ತೇಜಸ್ಸನ್ನು ಮರಳಿ ಪಡೆಯಲು ಸೂರ್ಯನು ಪಡುವಲ ಕಡಲಿನೊಳಗೆ ಇಳಿಯ ತೊಡಗಿದನು" (7-2). "ಸಾಗರದ ತರಂಗಗಳ ಮೇಲೆ ಮೋಡಗಳು ಪ್ರತಿಬಿಂಬಿಸಿವೆ. ಹೀಗೇಕೆ? ಸೂರ್ಯನು ಕೆಳಗಿಳಿಯಲಿಕ್ಕೆ ನಿರ್ಮಿಸಿರುವ ರತ್ನ ಸೋಪಾನಗಳವು" (7-8). ಹೀಗೆ ಸೂರ್ಯಾಸ್ತವನ್ನು ವರ್ಣಿಸಿದ್ದಾಳೆ. "ಶಶಿಗರ್ಭೆಯಾದ ದಿಗ್ವನಿತೆ ಪ್ರಸವ ಕಾಲದಲ್ಲಿ ತಿಮಿರ ಎಂಬ ಕಪ್ಪು ಬಟ್ಟೆಯನ್ನು ಬಿಚ್ಚಿ ಎಸೆದಾಗ ಧವಳಕಾಂತಿ ಮೂಡಿತು" (7-35). ಇದು ಚಂದ್ರೋದಯದ ವರ್ಣನೆ. ಇಂಥ ರಮ್ಯ ವಾತಾವರಣದಲ್ಲಿ ಕಂಪಣನು ಗಂಗಾದೇವಿಯನ್ನು ಕಂಡು "ಕಮಲ ಮುಖಿ, ಈ ಸುಂದರ ಸಂಜೆಯನ್ನು ನೋಡಿದೆಯಾ? ನೀನು ಇದನ್ನು ಬಣ್ಣಿಸಿ ನನ್ನ ಕಿವಿಗೆ ಅಮೃತವನ್ನು ಉಣಬಡಿಸು" (7-40) ಎಂದನು. ಆಗ ಗಂಗಾದೇವಿ "ಅವನತಾಂಭೋಜ ಮುಖಿಯಾಗಿ ತುಸು ನಾಚಿ ಶುಚಿಸ್ಮಿತೆಯಾದಳು" (7-41). ಇಲ್ಲಿ ಕಂಪಣನ ಸುಸಂಸ್ಕೃತ ಅಭಿರುಚಿಯೂ ಗಾಂಗಾದೇವಿಯ ಲಲಿತ ಗಂಭೀರ ವ್ಯಕ್ತಿತ್ವವೂ ಒಡಮೂಡಿವೆ.

ಎಂಟನೆಯ ಸರ್ಗದಲ್ಲಿ ಪೌರಾಣಿಕ ಎನಿಸುವ ಘಟನೆಗಳ ವರ್ಣನೆಯಿದೆ. ಕಂಪಣನಿಗೆ ದೇವತಾ ಸ್ತ್ರೀಯೊಬ್ಬಳು ಕಂಡು ದ್ರಾವಿಡ ದೇಶದಲ್ಲಿ ತುರುಕರು ಮಾಡುತ್ತಿರುವ ಹಾವಳಿ, ಚಿದಂಬರಂ ಮತ್ತು ಶ್ರೀರಂಗಂ ದೇವಾಲಯಗಳ ದುರವಸ್ಥೆ, ಜನತೆಯು ಅನುಭವಿಸುತ್ತಿರುವ ಸಂಕಟ ಇವನ್ನೆಲ್ಲ ಮನಕರಗುವಂತೆ ವರ್ಣಿಸುತ್ತಾಳೆ. ತರುಣಿಯರ ಕುಚಮಂಡಲದಿಂದ ತೊಳೆದ ಚಂದನ ಲೇಪದಿಂದ ಬೆಳ್ಳಗೆ ಶೋಭಿಸುತ್ತಿದ್ದ ತಾಮ್ರಪರ್ಣಿ ನದಿಯು ಇಂದು ತುರುಕರ ಹತ್ಯೆ ಮಾಡಿದ ಗೋವುಗಳ ರಕ್ತದಿಂದ ಕೆಂಪಗಾಗಿದೆ. ದ್ರಾವಿಡ ಜನರು ಕಂಗೆಟ್ಟಿದ್ದಾರೆ. ಎಂದೆಲ್ಲ ವಿವರಿಸುತ್ತ ಒಂದು ದಿವ್ಯವಾದ ಖಡ್ಗವನ್ನು ಆಶೀರ್ವಾದಪೂರ್ವಕವಾಗಿ ಕಂಪಣನಿಗೆ ನೀಡಿ "ನೀನು ಇದನ್ನು ಬೀಸುತ್ತ ಯುದ್ಧರಂಗದಲ್ಲಿ ಮುನ್ನುಗ್ಗಿದರೆ ನಿನ್ನನ್ನು ಸಾಕ್ಷಾತ್ ಯಮನೂ ಎದುರಿಸಲಾರ. ಈ ಉಗ್ರ ರೂಪದ ಖಡ್ಗದಿಂದ ತುರುಕರ ರುಂಡಗಳನ್ನು ಚೆಂಡಾಡು. ಈ ರಾಜ್ಯದಲ್ಲಿ ಶಾಂತಿ ನೆಲೆಸುವಂತೆ ಮಾಡು" ಎಂದು ಆದೇಶವಿತ್ತಳು.

ಕೊನೆಯ ಒಂಬತ್ತನೆಯ ಸರ್ಗದಲ್ಲಿ ಮಧುರೆಯ ಮುತ್ತಿಗೆ ಮತ್ತು ವಿಜಯಗಳು ವರ್ಣಿಸಲ್ಪಟ್ಟಿವೆ. ಧನುರ್ಧರರು ಬಿಡುತ್ತಿದ್ದ ಚಂದ್ರಾಯುಧದಿಂದ ತುಂಡಾದ ಯೋಧರ ಕೈಗಳು ಸರ್ಪಯಜ್ಞದಲ್ಲಿ ಸರ್ಪಗಳು ಬಂದು ಬೀಳುವಂತೆ ಬೀಳುತ್ತಿದ್ದವು. ಆನೆಗಳ ತಲೆ ಬಿರಿದು

ಮುತ್ತುಗಳು ಸುರಿಯುತ್ತಿದ್ದವು, ರಕ್ತ ಹರಿಯುತ್ತಿತ್ತು. ಸೊಂಡಿಲಿನ ನಾಳಗಳಿಂದ ರಕ್ಕಸಿಯರು ಆ ರಕ್ತ ಕುಡಿಯುತ್ತಿದ್ದರು. ಬಾಯಲ್ಲಿ ಮುತ್ತುಗಳು ಬಂದಾಗ ಥೂ ಎಂದು ಉಗುಳಿ ಮತ್ತೆ ಕುಡಿಯುತ್ತಿದ್ದರು (9-6). ಮದ್ದಾನೆಯೊಂದು ವೀರನೊಬ್ಬನನ್ನು ಮೇಲಕ್ಕೆ ತೂರಿತು. ಅವನು ಕೆಳಗೆ ಬೀಳುವಷ್ಟರಲ್ಲಿ ಈಟಿಯಂತೆ ಚೂಪಾಗಿರುವ ತನ್ನ ಕೋರೆಗಳಿಂದ ಅವನನ್ನು ಇರಿಯಿತು (9-9). ತನ್ನ ಮೇಲೆ ಬಾಣಗಳ ಮಳೆಗರೆದು ತನಗೆ ವೀರ ಸ್ವರ್ಗ ಪ್ರಾಪ್ತವಾಗುವಂತೆ ಮಾಡಿದ ವೈರಿಯನ್ನು ಒಬ್ಬ ಯೋಧ ಕೊಂಡಾಡುತ್ತಿದ್ದನು. ಕಂಪಣನು ವೀರಲಕ್ಷ್ಮಿಯ ಕಡೆಗಣ್ಣೋಟವೋ ಎಂಬಂತೆ ಬಾಣಗಳ ಮಳೆಸುರಿಸಿದನು (9-31). ಯವನನ ಬಾಣಗಳಿಂದ ಕಂಪಣನ ಮೈಮೇಲೆ ಗೀರುಗಳುಂಟಾದವು. ಅವು ವಿಜಯಶ್ರೀಯೊಂದಿಗೆ ಅವನು ಕಾಮಕೇಳಿ ನಡೆಸಿದಾಗ ಉಂಟಾದ ಅವಳ ಉಗುರಿನ ಗೀರುಗಳಂತೆ ಕಾಣುತ್ತಿದ್ದವು (9-31). ಕಂಪಣನು ವೀರಾವೇಶದಿಂದ ಕಾದುತ್ತ ಯವನನ ಬಿಲ್ಲಿನ ಸೂತ್ರವನ್ನು ಕತ್ತರಿಸಿದನು. ಅದು ವೈರಿಯ ರಾಜವಧುವಿನ ಮಾಂಗಲ್ಯ ಸೂತ್ರಕಡಿದಂತೆ ಗೋಚರಿಸಿತು (9-33). ಹೀಗೆ ಯುದ್ಧದ ವರ್ಣನೆ ಗಂಗಾದೇವಿಯ ಕಲ್ಪನಾಶಕ್ತಿಗೆ ದ್ಯೋತಕವಾಗಿದೆ. ಕೊನೆಯ ಸರ್ಗದ ಅಂತ್ಯಭಾಗ ಗಮನಿಸಿದರೆ ಕಾವ್ಯವು ಅಪೂರ್ಣವಾಗಿದೆಯೆಂದು ತಿಳಿದು ಬರುತ್ತದೆ.

'ಮಧುರಾ ವಿಜಯಂ' ಚಾರಿತ್ರಿಕ ಕಾವ್ಯವಾಗಿರುವುದರಿಂದ ಇದರಲ್ಲಿ ಚರಿತ್ರೆಯ ಸಂಗತಿಗಳು ಕಾವ್ಯಾತ್ಮಕವಾಗಿ ವರ್ಣಿಸಲ್ಪಟ್ಟಿವೆ. ಇಂಥ ವರ್ಣನೆಗಳಲ್ಲಿ ಕಲ್ಪನೆ ಬೆರೆತಿರುವುದು ಸಹಜ. ಹಾಗಂತ ಇಲ್ಲಿಯ ಸಂಗತಿಗಳನ್ನೆಲ್ಲ ಅಲ್ಲಗಳೆಯಲಾಗದು. ಗಂಗಾದೇವಿ ಒಬ್ಬ ಸುಸಂಸ್ಕೃತ ಜೀವಿ. ತನ್ನ ಗಂಡನ ಬಗ್ಗೆ ಪ್ರೀತಿ ಅಭಿಮಾನಗಳನ್ನು ಹೊಂದಿರುವ ಗಂಭೀರ ಸ್ವಭಾವದ ಹೆಣ್ಣು. ಅವಳು ಈ ಕಾವ್ಯದ ವಿವರಗಳಲ್ಲಿ ಹಲವನ್ನು ಕಣ್ಣಾರೆ ಕಂಡಿರಬೇಕು. ಹಲವನ್ನು ಕೇಳಿ ತಿಳಿದುಕೊಂಡಿರಬೇಕು. ಸಂಸ್ಕೃತಿಯ ಅಧ್ಯಯನ ದೃಷ್ಟಿಯಿಂದ ಪರಿಶೀಲಿಸಿದರೆ ಅವಳ ಕಾವ್ಯ ಮಹತ್ವದ ಅಂಶಗಳನ್ನು ಒದಗಿಸುತ್ತಿದೆ. ಅರಮನೆಗಳ ಅಂತರಂಗದ ಚಟುವಟಿಕೆಗಳು, ಸೈನ್ಯದ ಪ್ರಯಾಣ, ಯುದ್ಧದ ಚಿತ್ರಣಗಳು ಗಮನಾರ್ಹವಾಗಿವೆ.

ಚರಿತ್ರೆಗೆ ಪೂರಕವಾಗುವ ಹಲವು ಅಂಶಗಳು 'ಮಧುರಾ ವಿಜಯಂ'ದಲ್ಲಿರುವುದನ್ನು ಗಮನಿಸಬೇಕು.

(1) ವಿಜಯನಗರ ಸ್ಥಾಪನೆಗೆ ಪ್ರೇರಣೆ ನೀಡಿದವರು ಕ್ರಿಯಾಶಕ್ತಿ ಪಂಡಿತ, ವಿದ್ಯಾರಣ್ಯರಲ್ಲ ಎಂಬ ಸಂಗತಿ ಇಲ್ಲಿ ಸ್ಫುಟವಾಗಿದೆ. ಗಂಗಾದೇವಿ "ಸರ್ವಜ್ಞಗುರು ಅಭಿನವ ಶಿವ ಕ್ರಿಯಾಶಕ್ತಿಗುರು" (1-4) ಎಂದು ಗೌರವಸಲ್ಲಿಸಿದ್ದಾಳೆ. ಅವಳ ಕಾವ್ಯದಲ್ಲಿ ವಿದ್ಯಾರಣ್ಯರ ಪ್ರಸ್ತಾಪವೇ ಇಲ್ಲ.

(2) ವಿಜಯನಗರ ಸಂಸ್ಥಾಪಕರು ಆಂಧ್ರ ಮೂಲದವರಲ್ಲ ಕರ್ನಾಟಕ ಮೂಲದವರು ಎಂಬ ಸಿದ್ಧಾಂತಕ್ಕೆ ಪೂರಕವಾದ ಉಲ್ಲೇಖಗಳು ಈ ಕಾವ್ಯದಲ್ಲಿವೆ. ಬುಕ್ಕನನ್ನು 'ಕರ್ಣಾಟ ಲೋಕ ನಯನೋತ್ಸವ ಪೂರ್ಣಚಂದ್ರ' (1-75) ಎಂದು ಬಣ್ಣಿಸಲಾಗಿದೆ. ಕಂಪಣನು 'ಕರ್ಣಾಟ ಕುಲ ಪ್ರದೀಪ' (9-37) ನಾಗಿದ್ದನು. ಕಂಪಣನು 'ಆಂಧ್ರರೆಂಬ ಅಂಧಕಾರವನ್ನು ನಾಶಮಾಡುವ ಸೂರ್ಯನು' (9-30). ವಿಜಯನಗರದ ಸಂಸ್ಥಾಪಕರು ಆಂಧ್ರಮೂಲದವರಾಗಿದ್ದರೆ ಈ ವಿಶೇಷವಾದ ಬಳಕೆ ಸಾಧ್ಯವಿತ್ತೇ? ಕಂಪಣನ ಸೈನ್ಯದ ಬಗ್ಗೆ ಹೇಳುವಾಗಲೆಲ್ಲ 'ಕರ್ಣಾಟ ಸೇನೆ' ಎಂದು ಹೇಳಿದ್ದಾಳೆ.

(3) ಗಂಗಾದೇವಿ ಶೈವರಾಗಿದ್ದ ಸಂಗಮ ಮನೆತನದ ಸೊಸೆಯಾಗಿದ್ದರೂ ಅವಳು ಶೈವ ವೈಷ್ಣವ ಧರ್ಮಗಳನ್ನು ಸಮಾನ ಪ್ರೀತಿಯಿಂದ ಗೌರವಿಸಿದವಳು. ರಾಮಾಯಣ, ಮಹಾಭಾರತಗಳ ಬಗ್ಗೆ ವ್ಯಾಸ ವಾಲ್ಮೀಕಿಯರ ಬಗ್ಗೆ ಅವಳು ಗೌರವ ಭಾವನೆ ಹೊಂದಿದವಳಾಗಿದ್ದಳು. 'ರಾವಣನಂಥ ತುರುಕನನ್ನು ಸಂಹರಿಸಲು ಕಂಪಣನು ರಾಮನಂತೆ ಹೊರಟನು' (3-43) ಎಂದು ಹೇಳುವಲ್ಲಿ ಈ ಅಂಶವನ್ನು ಗಮನಿಸಬಹುದು. ಅಂದು ಧರ್ಮ ಸಮನ್ವಯತೆ ಸಹಜವಾಗಿ ರೂಢಿಯಲ್ಲಿತ್ತೆಂಬುದು ಇದರಿಂದ ತಿಳಿದುಬರುತ್ತದೆ.

(4) ಗಂಗಾದೇವಿ ಆಂಧ್ರದವಳಾಗಿರಬೇಕು. ಅವಳು ಸ್ಮರಿಸಿರುವ ಪೂರ್ವಕವಿಗಳ ಪಟ್ಟಿಯಲ್ಲಿ ಕಾಳಿದಾಸ, ಭಾಸ, ಭಾರವಿ ಇತ್ಯಾದಿ ರಾಷ್ಟ್ರಮಟ್ಟದ ಕವಿಗಳೊಂದಿಗೆ ಅಗಸ್ತ್ಯ, ಗಂಗಾಧರ, ವಿಶ್ವನಾಥರ ಹೆಸರುಗಳಿವೆ. ಇವರು ಕಾಕತೀಯರ ಆಶ್ರಯದಲ್ಲಿ ಅಥವಾ ಕಾಲದಲ್ಲಿ ಇದ್ದವರು. ವಿಶ್ವನಾಥನು ಗಂಗಾದೇವಿಯ ಗುರು. ಅಂದ ಮೇಲೆ ಅವಳ ತವರುನಾಡು ಆಂಧ್ರವಾಗಿರಬೇಕು.

17. ಕರಸ್ಥಲ ನಾಗಲಿಂಗನ ಚರಿತ್ರೆಯಲ್ಲಿ ವಿಜಯನಗರ ಪಟ್ಟಣದ ಉಲ್ಲೇಖ

ದೇವರಕೊಂಡಾರೆಡ್ಡಿ

'ಕರಸ್ಥಲ ನಾಗಲಿಂಗನ ಚರಿತ್ರೆ'ಯನ್ನು ಬರೆದವನು ರುದ್ರಕವಿ. ಈ ರುದ್ರಕವಿಯು ಶ್ರೀರಂಗಪಟ್ಟಣದ ಸಮೀಪದ ಬಮ್ಮೂರಿನವನು. ಕ್ರಿ.ಶ. ಸು.1650ರಲ್ಲಿ ಈ ಕವಿ ಜೀವಿಸಿದ್ದ. ಕರಸ್ಥಲ ನಾಗಲಿಂಗನ ಚರಿತ್ರೆಯನ್ನು ಸಾಂಗತ್ಯದಲ್ಲಿ ರಚಿಸಿದ್ದಾನೆ.

ಕರಸ್ಥಲ ನಾಗಲಿಂಗನು ಐತಿಹಾಸಿಕ ವ್ಯಕ್ತಿಯಾಗಿದ್ದು ವಿಜಯನಗರದ ರಾಜ ಪ್ರೌಢದೇವನ ಕಾಲದಲ್ಲಿದ್ದ 101 ವಿರಕ್ತರಲ್ಲಿ ಒಬ್ಬನಾಗಿದ್ದ. ಇವನು ಕವಿಯೂ ಆಗಿದ್ದೂ ಕರಸ್ಥಲ ನಾಗಲಿಂಗದೇವನ ತ್ರಿವಿಧಿ, ಮಡಿವಾಳಯ್ಯಗಳ ತಾರಾವಳಿ, ಕಾಲಜ್ಞಾನ ಮುಂತಾದ ಕೃತಿಗಳನ್ನು ರಚಿಸಿದ್ದಾನೆ. ಈ ವಿರಕ್ತನನ್ನು ತನ್ನ ಕಥಾನಾಯಕನಾಗಿ ರುದ್ರಕವಿ ತೆಗೆದುಕೊಂಡಿದ್ದಾನೆ.

ರುದ್ರಕವಿಯು ತನ್ನ ಕಾವ್ಯದ ನಾಯಕನಾದ ನಾಗಲಿಂಗನು ಸತ್ತ 200 ವರ್ಷಗಳ ನಂತರ, ವಿಜಯನಗರ ಪಟ್ಟಣ ಹಾಳಾದ ಸುಮಾರು 85 ವರ್ಷಗಳ ತರುವಾಯ ಕಾಲದಲ್ಲಿ ಈ ಕೃತಿಯನ್ನು ರಚಿಸಿದ್ದಾನೆ. ಹೀಗಾಗಿ ಈ ಕೃತಿಯಲ್ಲಿ ವರ್ಣಿಸಿರುವ 'ವಿಜಯನಗರ ಪಟ್ಟಣ'ದ ನಿಜವೈಭವವನ್ನು ರುದ್ರಕವಿ ಕಂಡಿರಲಾರ. ಆದರೂ ಅದರ ಅವಶೇಷಗಳನ್ನು ಕವಿಯು ನೋಡಿರಬಹುದು. ವಿಜಯನಗರದ ಗತವೈಭವವನ್ನು ಕೇಳಿರಬಹುದು. ಈ ಕಾರಣದಿಂದ ಈ ಕೃತಿಯಲ್ಲಿ ನೀಡಿರುವ ವಿವರಗಳು ಎಷ್ಟರಮಟ್ಟಿಗೆ ಈ ಪಟ್ಟಣಕ್ಕೆ ಅನ್ವಯಿಸುತ್ತವೆಯೆಂದು ಹೇಳಲು ಸಾಧ್ಯವಿಲ್ಲ. ಆದರೂ ಕವಿ ಕಣ್ಣಿಗೆ ಕಟ್ಟುವಂತೆ ವಿಜಯನಗರದ ವರ್ಣನೆಯನ್ನು ಮಾಡಿದ್ದಾನೆ.

ಅಕ್ಕಸಾಲಿಗರ ಜಾತಿಗೆ ಸೇರಿದ ನಾಗಯ್ಯನು ವಿರಕ್ತಿಯನ್ನು ಸ್ವೀಕರಿಸಿ ತನ್ನ ಗುರುವಾದ ಶಾಂತವೀರಯ್ಯನೊಡನೆ ದೇಶಸಂಚಾರ ಹೊರಡುತ್ತಾನೆ. ಅನೇಕ ಊರುಗಳನ್ನು ದಾಟಿ ಗುಮ್ಮಳಾಪುರಕ್ಕೆ ಬಂದು ಅಲ್ಲಿ ಲೀಲೆಗಳನ್ನು ಮೆರೆದು ಅಲ್ಲಿಂದ ವಿಜಯನಗರದ ಕಡೆಗೆ ಬರುತ್ತಾನೆ. ಈ ಭಾಗದಿಂದ ವಿಜಯನಗರದ ದಾರಿಯ ವರ್ಣನೆಯನ್ನು ಕವಿ ನೀಡುತ್ತಾನೆ. ವಿಜಯನಗರಕ್ಕೆ ಬರುವ ದಾರಿಯಲ್ಲಿಯ ಕೆರೆಗಳು ಸರೋವರಗಳಂತಿದ್ದವು. ಕಾಲುವೆಗಳು ನಂದಿಯಂತಿದ್ದವು. ನಾನಾಬಗೆಯ ಹಣ್ಣಿನ ಮರಗಳು ದಾರಿಯಲ್ಲಿದ್ದವು. ಇಕ್ಕೆಲಗಳಲ್ಲಿ ಬೆಳೆದಿದ್ದ ಹೆಮ್ಮರಗಳಿಂದ ಸೂರ್ಯನ ಬೆಳಕು ನೆಲದ ಮೇಲೆ ಬೀಳುತ್ತಿರಲಿಲ್ಲ. ದಾರಿಯಲ್ಲಿ ಅಡಿಗಡಿಗೆ ಅನ್ನಛತ್ರಗಳು, ಅರವಟಿಗೆಗಳು ಇದ್ದವು. ಈ ಅರವಟಿಗೆಗಳ ಮುಂದೆ ಕೆರೆ, ಬಾವಿ, ಹೂದೋಟಗಳಿದ್ದವು. ಕಬ್ಬಿನ ಆಲೆಮನೆಗಳು ಅಲ್ಲಲ್ಲಿ ಕಾಣುತ್ತಿದ್ದವು. ಇವನ್ನೆಲ್ಲಾ ನೋಡುತ್ತಾ ಕಥಾನಾಯಕ ನಿಜಯನಗರ ಪಟ್ಟಣದ ಸಮೀಪದ ಉಪವನದಲ್ಲಿ ನಿಲ್ಲುತ್ತಾನೆ. ಇವನು ಹಂಪೆಗೆ (ವಿಜಯನಗರ ಪಟ್ಟಣ) ಬರುವ ವೇಳೆಗೆ ಅಲ್ಲಿ 100 ವಿರಕ್ತರು ಇರುತ್ತಾರೆ.

ಕುಂತಳ ದೇಶದಲ್ಲಿ ಹಂಪೆಯಿತ್ತು. ಹಂಪೆಯ ಹತ್ತಿರದಲ್ಲಿ ವಿಜಯನಗರವಿತ್ತು. ಇದು ಇಂದ್ರನ ಅಮರಾವತಿಗಿಂತಲೂ ಶ್ರೀಮಂತವಾಗಿತ್ತು. ಕವಿಯ ಮಾತಿನಲ್ಲಿ ಹೇಳುವುದಾದಲ್ಲಿ ಕಲಿಯುಗದ ಸ್ವರ್ಗವೇ ಇಲ್ಲಿ ಇಳಿದಿತ್ತು. ಸಿರಿಯಲ್ಲಿ ಕುಬೇರನ ಅಳಕಾಪುರ, ವಿಸ್ತಾರದಲ್ಲಿ ಕಂಚಿ, ಹರಭಕ್ತಿಯಲ್ಲಿ ಕಲ್ಯಾಣವನ್ನು ಹೋಲುತ್ತಿತ್ತು. ಈ ಪಟ್ಟಣದ ಸುತ್ತಳತೆ ಮೂರು ಯೋಜನಗಳು. ಇದಕ್ಕೆ 9 ದೊಡ್ಡ ಬಾಗಿಲುಗಳಿದ್ದವು, 18 ದಿಡ್ಡಿಗಳಿದ್ದವು. 32 ಕೇರಿಗಳಿಂದ ಪಟ್ಟಣ ಕೂಡಿತ್ತು. ಸೊನ್ನಾರಗೆಲಸ, ರತ್ನಗೆಲಸ ಮಾಡುತ್ತಿದ್ದ ಮನೆಗಳು, ಮೋಹಕವಾದ ಹೆದ್ವಾರಗಳು ರಂಜಿಸುತ್ತಿದ್ದವು. ಭರತಖಂಡದ ಅನೇಕ ದೇಶಗಳು ಹಾಳಾದ ಮೇಲೆ ಅಲ್ಲಿನ ಲಕ್ಷ್ಮಿ (ಸಂಪತ್ತು) ಈ ವಿಜಯನಗರ ಪಟ್ಟಣದಲ್ಲಿ ಬಂದು ನೆಲೆಸಿದಳಂತೆ. ಕೋಟೆಯು ಅಗಳು, ಕೊತ್ತಳಗಳಿಂದ ಕೂಡಿ ಸೊಗಸಾಗಿತ್ತು.

ಕೋಟೆಯ ಹುಲಿಮುಖದ ಮುಂದೆ ಆಯುಧ ಹಿಡಿದ ಪುರಗಾಹಿನವರು ಬಾಗಿಲು ಕಾಯುತ್ತಿದ್ದರು. ಊರ ಒಳಗೆ ಸೋಮವೀದಿ, ನಾನಾ ಬಗೆಯ ಅಂಗಡಿಗಳು, ಚಿತ್ರದ ಮಳಿಗೆ ಮಂಟಪ, ಕಸ್ತೂರಿ, ಜವಾದಿ ಮುಂತಾದ ಸುಗಂಧದ್ರವ್ಯಗಳ ಮಾರಾಟದ ಅಂಗಡಿಗಳಿದ್ದವು. 32 ಕೇರಿಗಳಿದ್ದ ಈ ಊರಿನಲ್ಲಿ 64 ಬೀದಿಗಳಿದ್ದವು. ಬೀದಿಗಳಲ್ಲಿನ ಮಂಟಪಗಳಲ್ಲಿ ಸಾಧುಸಜ್ಜನರ ಸಭೆ, ಧರ್ಮಶಾಸ್ತ್ರಗಳನ್ನು ಓದುತ್ತಿದ್ದ ಸಭೆಗಳು ಕಾಣುತ್ತಿದ್ದವಂತೆ.

ಅರಮನೆಯ ದ್ವಾರವು ಉಪ್ಪರಿಗೆಯಿಂದ ಕೂಡಿತ್ತು. ಆನೆ ಕುದುರೆಗಳ ಲಾಯ, ಅರಮನೆಯ ಮುಂದಿನ ಚಂದ್ರಶಾಲೆ, ನಾಟಕಶಾಲೆ, ಅಡುಗೆ ಮನೆ, ಯೋಗಶಾಲೆ, ದೇವಾಲಯದ ಮುಂದಿನ ಓಲಗದ ಚಾವಡಿಗಳು ಕಂಗೊಳಿಸುತ್ತಿದ್ದವು. ಚಕ್ರವರ್ತಿಯ ರಾಜಮಂಟಪವನ್ನು ರತ್ನಗಳಿಂದ ಅಲಂಕರಿಸಿದ್ದರಂತೆ. ಹಾಗೆಯೇ ಅರಮನೆಯ ನೆಲಗಟ್ಟನ್ನು ನೀಲಮಣಿ ಕಲ್ಲುಗಳಿಂದ ಜೋಡಿಸಿ ಚಿನ್ನದ ರೇಖೆಗಳಿಂದ ಬಿಗಿದಿದ್ದರಂತೆ. ಈ ಪಟ್ಟಣದಲ್ಲಿ ಕುಹಕರಿಲ್ಲ. ರುದ್ರಭಕ್ತರು, ಮಂತ್ರರು, ಸಿದ್ಧರು, ಸಜ್ಜನಶೀಲರಿದ್ದರು. ಈ ಪಟ್ಟಣದ ಜನರು ಮೃಷ್ಟಾನ್ನವನ್ನು ಉಂಡು ಸುಂದರವಾದ ಬಟ್ಟೆಬರೆಗಳನ್ನು ಧರಿಸುತ್ತಿದ್ದರಂತೆ.

ನಗರದ ಬ್ರಾಹ್ಮಣರು ಶಾಸ್ತ್ರ ಪುರಾಣ, ಸ್ನಾನ, ಗಾಯತ್ರಿ ಮಂತ್ರವನ್ನು ತ್ರಿಕಾಲದಲ್ಲಿ ಆಚರಿಸುತ್ತಾ ಆಚಮನ, ಅನುಷ್ಠಾನ, ತರ್ಪಣಗಳನ್ನು ಕೊಡುವ ಕ್ರಿಯೆಯಲ್ಲಿದ್ದರು. ಘಟ್ಟಿ ಜೋಯಿಸರು, ಕೈಯಲ್ಲಿ ಪಂಚಾಂಗ ಹಿಡಿದ ಬ್ರಾಹ್ಮಣರು, ಯಜ್ಞಕರ್ಮ ಮಾಡಿಸುವವರು, ಪುರುಷ ಸೂಕ್ತ ಓದುವವರು, ವೇದಘೋಷಣೆ ಮಾಡುವವರು ಸಂಧ್ಯಾ ಜಪಗಳನ್ನು ಮಾಡುತ್ತಿದ್ದ ಬ್ರಾಹ್ಮಣರನ್ನೂ ಇಲ್ಲಿನ ಕೇರಿಗಳಲ್ಲಿ ಕಾಣಬಹುದಿತ್ತು.

ಪಟ್ಟಣದ ಬೀದಿಗಳಲ್ಲಿ ಲಡ್ಡುಗೆ, ಬೆಲ್ಲ, ಮೂರುಂಡೆ, ರೇವಡಿ, ಚಕ್ಕುಲಿ ಮುಂತಾದವನ್ನು ಇಟ್ಟುಕೊಂಡು ಮಾರುತ್ತಿದ್ದ ವೈಶ್ಯ ಬಾಲಕರಿದ್ದರು. ದಪ್ಪನಡುವಿನ, ದೊಡ್ಡಹೊಟ್ಟೆಯ, ಶುದ್ಧ ಕುರೂಪಿಗಳಾದ ಆದರೆ ಬುದ್ಧಿವಂತರಾದ ವೈಶ್ಯರು ಅಂಗಡಿಗಳಲ್ಲಿದ್ದರು. ಪುಣುಗು, ಶ್ರೀಗಂಧ, ಜಿನುಗು ಪುಷ್ಪ ಮುಂತಾದವನ್ನು ಮಾರುವ ಬಣಜಿಗರಿದ್ದರು.

ಈ ಕೃತಿಯಲ್ಲಿ ಹೇಳಿರುವ ಮತ್ತೊಂದು ವಿವರವೆಂದರೆ ವಿಜಯನಗರ ಪಟ್ಟಣದಲ್ಲಿ ನಡೆಯುತ್ತಿದ್ದ ಗಣಪತಿ ಉತ್ಸವ. ವರ್ಷ ಋತುವಿನ ಭಾದ್ರಪದ ಮಾಸದ ಶುದ್ಧ ಚವುತಿದಿನ ಪ್ರೌಢದೇವರಾಯನು ಗಣಪತಿಯನ್ನು ಪ್ರತಿಷ್ಠಾಪಿಸಿದ. ಊರಿನ ಜನರು, ರಾಜಪರಿವಾರ, ಮಂತ್ರಿ ಮುಂತಾದವರು ತಮ್ಮ ಶಕ್ತ್ಯಾನುಸಾರ ಗಣಪತಿಯನ್ನು ಪೂಜಿಸಿದರು. ರಾಜನು ಬೆಲೆಬಾಳುವ ವಸ್ತುಗಳನ್ನು ಅಲ್ಲಿದ್ದವರಿಗೆ ದಾನಮಾಡಿದ. ವಿರಕ್ತನಾಗಯ್ಯನಿಗೆ ಪಚ್ಚೆಯ ಕಡಗವನ್ನು ತೊಡಿಸಿದ. ಈ ವಿದ್ಯಾನಗರದ ಗಣಪತಿಯನ್ನು ವಿಸರ್ಜಿಸುವ ದಿನ ಊರಿನಲ್ಲಿ ಮೆರವಣಿಗೆಯನ್ನು ಕೊಂಡೊಯ್ಯುತ್ತಾರೆ. ಈ ಮೆರವಣಿಗೆಯಲ್ಲಿ ರಾಜ, ಮಂತ್ರಿ ಮತ್ತು ಪರಿವಾರವೂ ಭಾಗವಹಿಸಿರುತ್ತದೆ. ಬೆನಕನನ್ನು ಮೆರವಣಿಗೆ ಮುಗಿದ ಮೇಲೆ ತುಂಗಭದ್ರೆಯಲ್ಲಿ ಬಿಡುತ್ತಾರೆ.

ಇಲ್ಲಿಂದ ಮುಂದೆ ನಾಗಲಿಂಗನು ಶ್ರೀಶೈಲಕ್ಕೆ ಹೋದ ಕಾರಣದಿಂದ ವಿಜಯನಗರದ ವರ್ಣನೆ ಈ ಕಾವ್ಯದಲ್ಲಿ ಇಲ್ಲಿಗೆ ನಿಲ್ಲುತ್ತದೆ. ಈ ಮೇಲಿನ ವಿವರಗಳಲ್ಲಿ ವಿಜಯನಗರದ ಸಂಪತ್ತು ಮತ್ತು ಸಮೃದ್ಧಿಯನ್ನು ಕವಿ ವಿವರವಾಗಿ ತಿಳಿಸಿದ್ದಾನೆ. ಪ್ರೌಢದೇವರಾಯನ ಕಾಲದಲ್ಲಿನ ಶಿವಭಕ್ತರ ಹಾಗೂ ಶೈವಪರವಾದ ವಿವರಗಳಿಗೆ ಮಾತ್ರ ಒತ್ತು ನೀಡಿರುತ್ತಾನೆ. ಕವಿಗೆ ಕಥಾನಾಯಕನ ಶಿವಪರ ಪವಾಡಗಳನ್ನು ಮೆರೆಸುವುದೇ ಉದ್ದೇಶ. ಪ್ರೌಢದೇವರಾಯನೂ ಸಹ ಇವನನ್ನು ಹುಡುಕಿಕೊಂಡು ಬಂದು ಇವನಿಗೆ ಸಾಷ್ಟಾಂಗವೆರಗುತ್ತಾನೆ. ಇಂತಹ ವಿವರಗಳಿಗೆ ಕವಿ ಹೆಚ್ಚಿನ ಒತ್ತನ್ನು ನೀಡಿರುತ್ತಾನೆ. ವಿಜಯನಗರ ಸಾಮ್ರಾಜ್ಯದ ಸಂಪತ್ತಿನ ವರ್ಣನೆಯನ್ನು ಕವಿಯು ತಲೆಮಾರುಗಳಿಂದ ಕೇಳಿರಬೇಕು. ಇಂತಹದೇ ವರ್ಣನೆಯನ್ನು ವಿದೇಶಿ ಪ್ರವಾಸಿಗರೂ ನೀಡಿರುತ್ತಾರೆ.

ಕೃತಿಯಲ್ಲಿ ಬಂದಿರುವ ಗಣಪತಿಯ ಪ್ರತಿಷ್ಠಾಪನೆ ಹಾಗೂ ವಿಸರ್ಜನೆಯಂತಹ ಧಾರ್ಮಿಕ ಕಾರ್ಯಗಳು ಇಲ್ಲಿ ಹಿಂದಿನಿಂದಲೂ ಇದ್ದವುಗಳಾಗಿರಬೇಕು. ಇದನ್ನು ಪುಷ್ಟೀಕರಿಸುವಂತೆ ಹಂಪೆಯಲ್ಲಿನ ಬೃಹತ್ ಗಣಪತಿ ವಿಗ್ರಹಗಳಲ್ಲದೆ ಅಲ್ಲಲ್ಲಿ ಕಲ್ಲಲ್ಲಿ ಕಡೆದ ಗಣಪತಿಯ ಉಬ್ಬು ಶಿಲ್ಪಗಳು ಗೋಚರಿಸುತ್ತವೆ. ಮೊದಲನೆಯ ದೇವರಾಯನ ಮಂತ್ರಿಯಾದ ಲಕ್ಷ್ಮೀಧರನು ಮಹಾಗಣಪತಿಯನ್ನು ಪ್ರತಿಷ್ಠಾಪಿಸಿದ ಸಂಗತಿ ಶಾಸನದಿಂದ ತಿಳಿಯುತ್ತದೆ. ಹಂಪೆಯ ಪರಿಸರದಲ್ಲಿ ವೀರಭದ್ರ, ಹನುಮಂತನ ಪೂಜೆಯಷ್ಟೇ ಪ್ರಮುಖವಾಗಿ ಗಣಪತಿ ಪೂಜೆಯೂ ಇದ್ದಿರಬೇಕು. (ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬಾಲಗಂಗಾಧರ ತಿಲಕರು ಈ ಗಣಪತಿ ಪೂಜೆಯನ್ನು ಪುನರ್ ಅನುಷ್ಠಾನಕ್ಕೆ ತಂದರು.)

ಆಧಾರ ಗ್ರಂಥ

ರುದ್ರಕವಿಯ ಕರಸ್ಥಲ ನಾಗಲಿಂಗನ ಚರಿತ್ರೆ, ಸಂಪಾದಕ: ಕೆ.ಆರ್. ಶೇಷಗಿರಿ.

18. ಸಿಂಗಾಡಿಯ ಶಾಂತ: ಒಂದು ಕುರುಹು

ಮೃತ್ಯುಂಜಯ ರುಮಾಲೆ

ವಿಜಯನಗರ ಸಾಮ್ರಾಜ್ಯದ ಸಂಗಮವಂಶದ ಅರಸನಾದ ಪ್ರೌಢದೇವರಾಯನ ಕಾಲ (ಕ್ರಿ.ಶ. 1419-47) ವೀರಶೈವ ಧಾರ್ಮಿಕ ಚರಿತ್ರೆಯ ಹಿನ್ನೆಲೆಯಲ್ಲಿ ತುಂಬಾ ಮಹತ್ವಪೂರ್ಣವೆನಿಸಿದೆ. ಈ ಕಾಲಾವಧಿಯನ್ನು 'ವೀರಶೈವ ಸಮುದ್ಧರಣ ಯುಗ'ವೆಂದೂ,[1] ವೀರಶೈವ ಧಾರ್ಮಿಕ ಚರಿತ್ರೆಯ 'ನಾಲ್ಕನೆಯ ಘಟ್ಟ'ವೆಂದೂ,[2] 'ನೂರೊಂದು ವಿರಕ್ತರ ಯುಗ'ವೆಂದೂ[3] ಗುರುತಿಸಲಾಗಿದೆ. ಸ್ವತಃ ಮೋದಿಯ ರುದ್ರನೇ (ಕ್ರಿ.ಶ. 1732) ತನ್ನ 'ನೂರೊಂದು ವಿರಕ್ತರ ಕಾವ್ಯ'ವೆಂಬ ಕೃತಿಯಲ್ಲಿ ನೂರೊಂದು ವಿರಕ್ತರನ್ನು "..... ಕಲ್ಯಾಣ ಮಂಡಲದ ಶಿವಭಕ್ತರ ಸಂತಾನವೆನಿಸಿ"ದವರು (3-22) ಎನ್ನುತ್ತಾನೆ. ಇಂಥ ವಿಶೇಷ ಅಭಿಧಾನಗಳಿಂದ ಈ ಕಾಲ ವೀರಶೈವ ಧಾರ್ಮಿಕ ಚಟುವಟಿಕೆಗಳಿಗೆ ಪ್ರಶಸ್ತವಾದ ವೇದಿಕೆಯನ್ನೊದಗಿಸಿದೆ. ಈ ಕಾಲದ ಧಾರ್ಮಿಕ ಸಂದರ್ಭದಲ್ಲಿ ನೂರೊಂದು ವಿರಕ್ತರ ಪಾತ್ರ ಗಮನಾರ್ಹವಾದುದು. ಇವರು ಪ್ರೌಢದೇವರಾಯನಿಗೆ ವೀರಶೈವ ಧರ್ಮೋಪದೇಶ ಮಾಡಿದರು ಎಂಬ ಕೀರ್ತಿಗೆ ಪಾತ್ರರು.

ನೂರೊಂದು ವಿರಕ್ತರೆಲ್ಲರ ಹೆಸರನ್ನೂ ಉಲ್ಲೇಖಿಸುವ ಏಕೈಕ ಕೃತಿ ಮೋದಿಯ ರುದ್ರ(ಕ್ರಿ.ಶ. 1732)ನ 'ನೂರೊಂದು ವಿರಕ್ತರ ಕಾವ್ಯ'. 'ನೂರೊಂದು ವಿರತರು' ಎಂಬ ಪದ ಪ್ರಯೋಗ ಕಿಕ್ಕೇರಿಯ ನಂಜುಂಡನ ಕಾಲ(ಕ್ರಿ.ಶ. 1550)ದಿಂದ 'ನಿರಂಜನ ವಂಶರತ್ನಾಕರ'ದವರೆಗೂ (ಕ್ರಿ.ಶ. 18ನೇ ಶತಮಾನ) ಬಳಕೆಯಾಗುತ್ತದೆ. ನಡುವೆ ಬಂದ ಸುಮಾರು 8-9 ಕೃತಿಗಳು[4] ನೂರೊಂದು ವಿರಕ್ತರಲ್ಲಿ ಕೆಲವರ ಹೆಸರನ್ನು ಉಲ್ಲೇಖಿಸುತ್ತವೆ. ಕಾಲದಿಂದ ಕಾಲಕ್ಕೆ ಕೆಲವು ವಿರಕ್ತರ ಹೆಸರುಗಳು ಬಿಟ್ಟು ಹೋಗಿರುವುದಕ್ಕೆ ಅವರ ಧಾರ್ಮಿಕ ಪ್ರಭಾವವೇ ಹಿನ್ನೆಲೆಯಾಗಿರಬೇಕು.

ಇಂದು ಬಹುತೇಕ ವಿರಕ್ತರ ಕುರುಹುಗಳು ನಮಗೆ ಅಲಭ್ಯ. ಅವರ ಸಾಂಸ್ಥಿಕ ಪರಂಪರೆ ಯಾವುದೋ ಕಾರಣದಿಂದ ಸ್ಥಗಿತಗೊಂಡಿರುವುದೇ ಇದಕ್ಕೆ ಕಾರಣವಿರಬಹುದು. ಆದರೆ, ನೂರೊಂದು ವಿರಕ್ತರಲ್ಲಿ 18ನೇ ಕ್ರಮಸಂಖ್ಯೆಯಲ್ಲಿ ಬರುವ 'ಸಿಂಗಾಡಿಯ ಶಾಂತ'ನೆಂಬ ವಿರಕ್ತನ ಒಂದು ಕುರುಹು ಆತನನ್ನೂ ತಾತ್ತ್ವಿಕವಾಗಿ ಜೀವಂತವಾಗಿಟ್ಟಿದೆ.

ಬಳ್ಳಾರಿಗೆ ಸಮೀಪದ ಹಿರೇಹಾಳು ಗ್ರಾಮದಲ್ಲಿ 'ಸಿಂಗಾಡಿ' ಎಂಬ ಉಪನಾಮದ ಒಂದು ಮನೆತನವಿದೆ. ಜಾತಿಯಿಂದ ನೇಕಾರರಾದ ಇವರಲ್ಲಿ ಎರಡು ವರ್ಗಗಳಿವೆ. ಒಂದು: ಮಾಂಸಾಹಾರ ಸೇವನೆಯ ಲಿಂಗಾಯತೇತರ ವರ್ಗ. ಮತ್ತೊಂದು: ಸಸ್ಯಾಹಾರಿಗಳೂ ಲಿಂಗಾಯತ ವಿಧಿವಿಧಾನಗಳಾದ ಲಿಂಗಧಾರಣೆ, ವಿಭೂತಿಧಾರಣೆಗಳಂಥ ಆಚರಣೆಯ ಲಿಂಗಾಯತ ವರ್ಗ. (ಇಂಥ ವರ್ಗಗಳು ಕೆಳವರ್ಗದಲ್ಲಿ ಸಾಮಾನ್ಯವಾಗಿ ಸಿಗುತ್ತವೆ.) ಪ್ರಸ್ತುತ ಮನೆತನದಲ್ಲಿ ಶಾಂತಪ್ಪ, ಶಾಂತಣ್ಣ ಎಂಬ ಹೆಸರುಗಳನ್ನಿಡಲಾಗುತ್ತದೆ. ವಿಶೇಷವೆಂದರೆ ಹೆಣ್ಣುಮಕ್ಕಳಿಗೆ ಈ ಹೆಸರನ್ನು ಇಡಲಾಗದು. ಬಹುಶಃ ಸಿಂಗಾಡಿಯ ಶಾಂತ ವಿರಕ್ತನಾಗಿರುವುದರಿಂದ ಹೆಂಗಸರಿಗೆ ಈ ಹೆಸರು ಇಟ್ಟಿರಲಿಕ್ಕಿಲ್ಲ !

ಇಂದಿಗೂ ಆ ಮನೆಯ ಹಿರಿಯರು ತಮ್ಮ ಪೂರ್ವಜರಲ್ಲಿ ಒಬ್ಬರು 'ಶಾಂತ' ಎಂಬ ಹೆಸರಿನ ಶರಣರು ಆಗಿ ಹೋಗಿದ್ದಾರೆಂಬುದನ್ನು ನೆನೆಯುತ್ತಾರೆ. ಬಳ್ಳಾರಿ ಬಳಿಯ ಎತ್ತಿನ ಬೂದಿಹಾಳಿನ 'ಬಸವಣ್ಣ' ಇವರ ಮನೆದೇವರು. ಸಿಂಗಾಡಿಯ ಶಾಂತ ಶರಣತತ್ತ್ವ (ಬಸವತತ್ತ್ವ) ಪ್ರತಿಪಾದಕರಲ್ಲೊಬ್ಬ ಎಂಬ ಹಿನ್ನೆಲೆಯಲ್ಲಿ ಇದು ಪುಷ್ಟಿಗೊಳ್ಳುತ್ತದೆ.

ನೂರೊಂದು ವಿರಕ್ತರ ಕಾವ್ಯದಲ್ಲಿ ಸಿಂಗಾಡಿಯ ಶಾಂತನನ್ನು ಕುರಿತು ಒಂದು ಸ್ವಾರಸ್ಯಕರ ಕಥೆಯಿದೆ.

"ಸಿಂಗಾಡಿಯನ್ನು ಹಿಡಿದು ತಿರುಗುತ್ತಿದ್ದ ವಿರಕ್ತ ಶಾಂತನನ್ನು ಪ್ರೌಢದೇವೇಂದ್ರನು ಕರೆಸಿ 'ಈ ಕಿರಾತವೇಷ ನಿನಗೇಕೆ? ನಿಮಗೆ ಬೇಟೆಯ ಮೃಗವು ಅರ್ಪಿತಕೆ ಒಪ್ಪುತಿಹುದೆ?' ಎಂದು ಕೇಳಲು, ಆದಿಯಲ್ಲಿ ವೇದೋಪನಿಷತ್ತುಗಳು ಶುನಕವಾಗಿ 'ಅನಾದಿ ಪರಶಿವನೇ ಕಿರಾತ ರುದ್ರನಾಗಿ ಲೀಲೆಯನ್ನು ನಟಿಸಲಿಲ್ಲವೇ? ಹರಿಣಾಕಾರದ ಬ್ರಹ್ಮನನ್ನು ಹತಿಸಿ ಸಾರಥಿಯಾದ ಸರಸ್ವತಿಯನ್ನು ಬ್ರಹ್ಮನಿಷ್ಪದಂತೆ ಅವನಿಗೆ ಸತಿಯಾಗಿ ಮಾಡಲಿಲ್ಲವೇ? ಅವನ ಚಿದಂಶೀಭೂತರಾದ ನಾವೂ ಕಿರಾತರುದ್ರನ ಲೀಲೆಯನ್ನು ನಟಿಸುವ ಜಂಗಮ'ರೆಂದು ಹೇಳಲು, ಪ್ರೌಢದೇವನು ಅವನ ಮಾತಿಗೆ ನಗುತ್ತ 'ನೀನು ಬಾಣವನ್ನು ಹೇಗೆ ಪ್ರಯೋಗಿಸುವೆ ನೋಡೋಣ ತೋರಿಸು' ಎನ್ನಲು, ಸಿಂಗಾಡಿ ಶಾಂತನು ಬಿಲ್ಲನ್ನು ಹೆದೆಗೇರಿಸಿ ಬಾಣವನ್ನು ಬಿಟ್ಟು ಆ ಬಾಣ ತುದಿಯನ್ನು ಸೇರಿ ಬಯಲ ಸಂಧಾನದಲ್ಲಿ ಬೆರೆದನು.

ಆದಡೆಲೆ ನೋಡು ನೋಡೆನುತ
ನೇದುತ್ತ ಬಿಡಲು, ಗಗನಕೆ ತುಡುಕೆ ಸರಳಿನೊಳ್
ಗೈದಿ ಬಯಲಾಗಿ ಸಿಂಗಾಡಿ ಶಾಂತ ಪೋಗುತಿರೆ ನೋಡಿ ಜನವಂದಿಸಿದರು."[5]

ನೂರೊಂದು ವಿರಕ್ತರು ಇದ್ದ ಕಾಲವೆಂದರೆ ಪ್ರೌಢದೇವರಾಯನ ಆಳ್ವಿಕೆಯ ಕಾಲ (ಕ್ರಿ.ಶ. 1419-47). ಕ್ರಿ.ಶ. 1732ರಲ್ಲಿದ್ದ ಮೋದಿಯ ರುದ್ರ ತನ್ನ ಕಾವ್ಯದಲ್ಲಿ ಹೇಳುವ ಪ್ರಕಾರ ಸಿಂಗಾಡಿಯ ಶಾಂತ ಪ್ರೌಢದೇವರಾಯನ ಕಾಲದಲ್ಲೇ ಬಯಲಾಗುತ್ತಾನೆ.

ಸಧ್ಯದ ಮನೆತನವನ್ನು ಈ ಕಾರಣಗಳಿಂದ ಸಿಂಗಾಡಿಯ ಶಾಂತನೊಂದಿಗೆ ತಳುಕು ಹಾಕಬಹುದಾಗಿದೆ.

1. 'ಶಾಂತ'ನೆಂಬ ಶರಣ ತಮ್ಮ ಪೂರ್ವಜರಲ್ಲಿ ಆಗಿ ಹೋಗಿದ್ದ ಎಂದು ಇಂದಿಗೂ ಆ ಮನೆತನ ಸ್ಮರಿಸುತ್ತದೆ.
2. 'ಶಾಂತ' ಎಂಬ ಹೆಸರನ್ನು ತಮ್ಮ ಮನೆಯ ಗಂಡಸರಿಗಷ್ಟೇ ಇಡುತ್ತಿದ್ದು ಬಹುಶಃ ವಿರಕ್ತನೆಂಬ ಕಾರಣದಿಂದ ಹೆಂಗಸರಿಗೆ ಆ ಹೆಸರು ಇಡದೇ ಇರುವುದು.
3. 'ಸಿಂಗಾಡಿ' ಎಂಬ ಉಪನಾಮವನ್ನು ಇಂದಿಗೂ ಹೊಂದಿದ್ದು, ಆ ಹೆಸರಿನಿಂದಲೇ ಅವರು ಗುರುತಿಸಲ್ಪಡುತ್ತಿರುವುದು.
4. ಇವರು ವಿರಕ್ತ ಸಿಂಗಾಡಿ ಶಾಂತನ ಭಕ್ತ ಪರಂಪರೆಯವರಿರಬಹುದೇ? ಎಂದೆನಿಸುವುದು.
5. ಇವರ ಮನೆದೇವರು ಎತ್ತಿನ ಬೂದಿಹಾಳಿನ 'ಬಸವಣ್ಣ'ನೆಂಬುವುದು.
6. ಮೂಲತಃ ನೇಕಾರ ಜಾತಿಯವರಾಗಿದ್ದರೂ ಆಚರಣೆ ಇತ್ಯಾದಿಗಳಿಂದ 'ಲಿಂಗಾಯತರು' ಎಂದೇ ಹೇಳಿಕೊಳ್ಳುತ್ತಿರುವುದು.

ಟಿಪ್ಪಣಿಗಳು

1. ವಿ. ಶಿವಾನಂದ, *ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ,* ಪು. 25.
2. ಎಂ. ಚಿದಾನಂದಮೂರ್ತಿ, *ಲಿಂಗಾಯತ ಅಧ್ಯಯನಗಳು,* ಪು. 375.
3. ಆರ್.ಸಿ. ಹಿರೇಮಠ, *ಷಟ್‌ಸ್ಥಲಪ್ರಭೆ,* ಪು. 276.
4. *ಪ್ರೌಢದೇವರಾಯನ ಕಾವ್ಯ,* ಆದೃಶ್ಯ, 1580; *ಚೆನ್ನಬಸವ ಪುರಾಣ,* ವಿರೂಪಾಕ್ಷ ಪಂಡಿತ, 1584; *ರಾಘವಾಂಕ ಚರಿತೆ,* ಸಿದ್ಧನಂಜೇಶ, 1550; *ಏಕೋತ್ತರ ಶತಸ್ಥಲ,* ಸಟೀಕು, 1530; *ಶರಣರ ತ್ರಿವಿಧಿ,* ಬೊಕ್ಕಪ್ಪ, 17ನೇ ಶತ.; 17ನೇ ಶತ.ದ ಕೆಲವು ಜನಪದ ಗೀತೆಗಳು; *ಕರಸ್ಥಲದ ನಾಗಿದೇವನ ಚರಿತ್ರೆ,* ರುದ್ರಕವಿ, 1650; *ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರ,* ಶಾಂತಲಿಂಗ ದೇಶಿಕ, 1672.
5. ವಿ. ಶಿವಾನಂದ, *ಪ್ರೌಢದೇವರಾಯನ ಕಾಲದ ಕನ್ನಡ,* ಸಾಹಿತ್ಯ, ಪುಟಗಳು 113, 114.

19. ಶ್ರವಣಬೆಳಗೊಳ ಮತ್ತು ವಿಜಯನಗರದ ಅರಸು ಮನೆತನಗಳು

ಸೀತಾರಾಮ ಜಾಗೀರ್‌ದಾರ್

ಪ್ರಾಚೀನ ಕರ್ನಾಟಕದ ಗಡಿಗೆರೆಗಳು ಕಾವೇರೀ ತೀರದಿಂದ ಆ ಗೋದಾವರೀ ತೀರದವರೆಗೆ ಎಂಬುದು 'ಕವಿರಾಜಮಾರ್ಗ' ಕಾಲದಿಂದ ವಿಶ್ರುತ ಸಂಗತಿ. ವಿಜಯನಗರಕ್ಕೆ ಆ ವ್ಯಾಪ್ತಿ ಆಡಳಿತ ದೃಷ್ಟಿಯಿಂದ ತಪ್ಪಿತು. ಗೋದಾವರಿಯಿಂದ ಕೃಷ್ಣಾತೀರಕ್ಕೆ[1] ಆಡಳಿತದ ಸೀಮಾರೇಖೆ (ಕರ್ನಾಟಕಕ್ಕೆ) ಸರಿಯಿತು. ವೈದಿಕ (ಶೈವ, ವೈಷ್ಣವ ಹಾಗೂ ಶಾಕ್ತ), ಜೈನ ಹಾಗೂ ಬೌದ್ಧ ಧರ್ಮಗಳು - ಪಂಥಗಳು - ಉತ್ತರ ಭಾರತದಿಂದಲೇ ತಮ್ಮ ಶಾಖೆಯನ್ನು ದಕ್ಷಿಣಕ್ಕೆ ಚಾಚಿಕೊಂಡವು. ಚಾಚಿಕೊಳ್ಳುವಾಗ ಆಸರೆ ಸಿಕ್ಕಲ್ಲಿ ಸ್ಥಿರವಾಗಿ ನಿಂತವು. ರಾಜ್ಯ ಹಾಳಾದಾಗ, ರಾಜಧಾನಿಗಳು ದಾಳಿಕಾರರ ಹಾವಳಿಗೆ ಹಾಳಾದಾಗ ಈ ಎಲ್ಲ ಧರ್ಮಗಳೂ ಏಳು ಬೀಳುಗಳನ್ನು ಕಂಡಿವೆ; ಹಳ್ಳಿಗಳು ಹಂಪೆಯಾದವು, ಹಂಪೆಗಳು ಕೊಂಪೆಯಾದವು ! ಈಗಲೂ ಆಗುತ್ತಿವೆ ಮುಂದೆಯೂ ಆಗುತ್ತವೆ. ಬದಲಾವಣೆ ಜಗತ್ತಿನ ಧರ್ಮ.

ಉತ್ತರದಿಂದ ಪಸರಿಸಿದ ಈ ಧರ್ಮಗಳು ನಾಡಿನ ಎಲ್ಲ ಭಾಗಗಳಲ್ಲೂ ಉತ್ತರದಿಂದ ದಕ್ಷಿಣಕ್ಕೆ ಕಾಲುಚಾಚಿವೆ. ಮೊದಲು ವೈದಿಕ ಧರ್ಮ ಅನಂತರ ಜೈನ ಹಾಗೂ ಬೌದ್ಧ ಧರ್ಮಗಳು ಚಾಚಿರಬೇಕು. ಕೆಲ ಪ್ರಾಚೀನ ಸ್ಥಳಗಳ ಉತ್ಖನನ ಆಗುವವರೆಗೆ ಇದಮಿತ್ಥಂ ಎಂದು ಹೇಳಲು ಆಗುವುದಿಲ್ಲ. ಅಂತಹ ಸ್ಥಳಗಳಲ್ಲಿ ಪ್ರಾಚೀನ ಕಾಲದಲ್ಲಿ ಕನ್ನಡದ ನೆಲೆಯೆ ಆಗಿದ್ದ ಮುನಿ ಪಂಪನು 'ಕವಿತಾಗುಣಾರ್ಣವ' ಎಂಬ ಸನ್ಮಾನ ಪಡೆದ ಸ್ಥಳ ಬೋದನ/ಪೋದನ; ಹಾಗೂ ಅದರ ಸುತ್ತಮುತ್ತಣ ಪ್ರದೇಶ. ಈ ಒಂದು ಕೆಲಸ ಆಗಬೇಕು. ಬೋದನ, ಸನ್ನತಿ, ಹಂಪೆ ಹಾಗೂ ಶ್ರವಣಬೆಳಗೊಳಗಳು ಪ್ರಾಚೀನ ಕರ್ನಾಟಕದ ಕೆಲವು ಮಹತ್ವದ ಸ್ಥಳಗಳು. ಹಂಪಿ ಅಲ್ಲಲ್ಲ 'ವಿಜಯನಗರ' ಸಂಗಮ ಮನೆತನಕ್ಕೆ ರಾಜಧಾನಿ ಆದ ಕಾಲದಿಂದ ಅದಕ್ಕೆ ಇನ್ನಷ್ಟು ಮಹತ್ವ ಬಂದಿತು. ರಾಮಾಯಣ ಕಾಲದಿಂದಲೂ ಒಂದು ಪ್ರಸಿದ್ಧ ಸ್ಥಳವಾದ ಹಂಪಿ ಅದರ ಪರಿಸರದ-ಸುತ್ತಮುತ್ತಣ-ಊರುಗಳು ತಮ್ಮಷ್ಟಕ್ಕೆ ಪ್ರಸಿದ್ಧವಾಗಿದ್ದವು. ಅದಕ್ಕೆ ಕಾರಣ ಬಹಳ ಪ್ರಾಚೀನ ಕಾಲದಿಂದಲೂ ವೈದಿಕ ಧರ್ಮಾನುಯಾಯಿಗಳಿಗೆ ತೀರ್ಥಕ್ಷೇತ್ರವಾದ ಪಂಪಾ ಕ್ಷೇತ್ರದ ಮತ್ತು ಅವುಗಳ ಸಂಬಂಧ - ನಿಕಟತೆ. ಬರಿ ಧಾರ್ಮಿಕ ಕ್ಷೇತ್ರ ಇರುವುದಕ್ಕಿಂತಲೂ ಒಂದು ಸ್ಥಳ ರಾಜಧಾನಿಯಾಗಿ ಇದ್ದರೆ ಅದಕ್ಕೆ ಹೆಚ್ಚು ಮಹತ್ವ ಇರುತ್ತದೆ. ಇನ್ನು ಒಂದೊಮ್ಮೆ ಈ ಸ್ಥಳ ಕಲ್ಯಾಣದ ಚಾಳುಕ್ಯರಿಗೆ, ಪಲ್ಲವನೊಳಂಬ ರಾಜರಿಗೆ ಒಂದು ರಾಜಧಾನಿಯೊ ಇಲ್ಲವೇ ಉಪರಾಜಧಾನಿ ಆಗಿದ್ದುದು ಅದರ ಬೆಳವಣಿಗೆಯಲ್ಲಿ ಮಹತ್ವದ ಒಂದು ಸಂಗತಿಯಾಗಿದೆ.[2] ರಾಜಧಾನಿಯ ಪಟ್ಟ ತಪ್ಪಿದಾಗ ಅದು ದಾಳಿಯಲ್ಲಿ ಹಾಳಾದದ್ದು ಕೊಂಪೆಯಾಗಿ ಉಳಿಯಿತು. ಹೀಗೆಯೆ ಶ್ರವಣಬೆಳಗೊಳದ ಇತಿಹಾಸವನ್ನು ಪರಿಶೀಲಿಸಿದರೆ ನಮಗೆ ಕಂಡು ಬರುವ ಸಂಗತಿ - ಶ್ರವಣಬೆಳಗೊಳ ಮೂಲತಃ ಒಂದು ಬೆಟ್ಟಕಾಡು ಪ್ರದೇಶ, ಉತ್ತರ ಭಾರತದ ಭದ್ರಬಾಹು ಹಾಗೂ ಚಂದ್ರಗುಪ್ತ ಇವರ ನಾಲಗೆಯಲ್ಲಿ - ಅವರ ಭಾಷೆಯಲ್ಲಿ - ಮೊದಲ ಬಾರಿಗೆ ತಪಸ್ಸಿಗೆ ಸ್ಥಳವನ್ನು ಆರಿಸಿಕೊಂಡಾಗ ಅವರು ಹೇಳಿದ ಭಾಷೆಯ ಶಬ್ದ 'ಕಟವಪ್ರ'. ಅವರ ಅನಂತರವೇ ಆ ಪ್ರದೇಶಕ್ಕೆ ಪ್ರಾಧಾನ್ಯತೆ ಬಂದದ್ದು. ತತ್ಪೂರ್ವದಲ್ಲಿ ಅದು ಜನವಸತಿ ಆದುದಕ್ಕೆ ಆಧಾರಗಳಿಲ್ಲ. ಜನವಸತಿಯನ್ನು ಅದು ಪಡೆದಿದ್ದರೆ ಆ ಜೈನ ಯತಿಗಳು ಅದನ್ನು ತಪಸ್ಸಿಗೆ ಯೋಗ್ಯ ಸ್ಥಳವೆಂದು ಆರಿಸಿಕೊಳ್ಳುತ್ತಿದ್ದಿಲ್ಲ.[3] ಜೈನಯತಿಗಳಿಂದ ವಸತಿಯನ್ನು ಪಡೆದ ಈ ಸ್ಥಳ ಕಾಲಾನುಕಾಲದಲ್ಲಿ ಅವರ ಪ್ರಭಾವದಿಂದ ರಾಜರನ್ನೂ ಆಕರ್ಷಿಸಿತು. ಹೀಗೆ ಬಂದವರಲ್ಲಿ ಆ ಪ್ರದೇಶದ ಒಡೆಯರಲ್ಲಿ ಒಬ್ಬರಾದ ಬಾಣರಲ್ಲಿ 'ದಿಂಡಿಕರಾಜನೂ' ಒಬ್ಬ. ಶ್ರವಣಬೆಳಗೊಳ ಒಂದೊಮ್ಮೆ ಬಾಣರ ರಾಜ್ಯ ವಿಭಾಗವೂ ಆಗಿತ್ತು ಮತ್ತೆ ಅವರ ಒಂದು ದುರ್ಗವೂ ಆಗಿತ್ತು.

ಕನಾದೋ .... [ಬಾ]ಣ ವಂಶಾ[ದಾ]
ಕಳ್ಬಪ್ಪಿನ ದುರ್ಗ್ಗ ....[4]

ರಾಷ್ಟ್ರಕೂಟ ದೊರೆ ಕಂಬಯ್ಯನ ಕಾಲದಲ್ಲಿ ಅದು 'ಬಣರಸರ್ಕ್ಕಟ್ಟಪ್ಪು' ಎಂದೇ ಪ್ರಸಿದ್ಧವಾಗಿತ್ತು.[5] 'ಪೆರ್ತ್ವಾಣವಂಶ'ದ ರಾಜನೊಬ್ಬನ ಉಲ್ಲೇಖವೂ ಒಂದು ಶಾಸನದಲ್ಲಿ ಬಂದಿದೆ.[6] ಹೊಯ್ಸಳ ದೊರೆ ವಿನಯಾದಿತ್ಯನು 'ಕಳ್ಬಪ್ಪುಸಾಯಿರ' (ಕಳ್ಬಪ್ಪು-1000)[7] ಅರ್ಥಾತ್ ಶ್ರವಣಬೆಳಗೊಳ-1000 ಪ್ರದೇಶವನ್ನು ಗೆದ್ದುದಾಗಿ ತಿಳಿದು ಬರುತ್ತದೆ. ಗಂಗದೊರೆ ಶ್ರೀಪುರುಷ ಮಹಾರಾಜನ ಕಾಲಕ್ಕೇನೇ 'ಕಟ್ಬಪ್ಪು-1000' ಅಸ್ತಿತ್ವಕ್ಕೆ ಬಂದಿತ್ತೆಂದು ಡಾ. ದೇವರಕೊಂಡಾರೆಡ್ಡಿಯವರು ಕಂಡುಹಿಡಿದ ಶ್ರವಣೇರಿಯ ಕಲ್ಲೇಶ್ವರ ದೇವಾಲಯದ ಮುಂದಿನ ಶಾಸನದಿಂದ ಇದೀಗ ವಿದಿತವಾಗಿದೆ. ಕಟ್ಬಪ್ಪು ಸಾವಿರ ವಿಭಾಗ ಗಂಗರ ಕಾಲಕ್ಕೆ ಮತ್ತು ಹೊಯ್ಸಳರ ಆರಂಭದ ಕಾಲದಲ್ಲಿ ಇದ್ದ ಹಾಗೆ ಹೊಯ್ಸಳರು ಪ್ರವರ್ಧಮಾನರಾದಾಗ ಉಳಿಯಲಿಲ್ಲವೆಂದು ತೋರುತ್ತದೆ. ಗಂಗರ ಕಾಲಕ್ಕೆ ಒಂದು ಉಪ ವಿಭಾಗದ ಮುಖ್ಯಸ್ಥಳವಾದ ಅದು ಬಾಣರಿಂದ ಕಿತ್ತುಕೊಂಡನಂತರ ಗಂಗರ ಆಡಳಿತಕ್ಕೊಳಪಟ್ಟಿತು. ಗಂಗರಿಂದ ಹೊಯ್ಸಳರ ಮಂಡಲ[8](ಭೂಭಾಗ)ದಲ್ಲಿ ಸೇರಿದಾಗ ಅದು ಅವರ ಮುಖ್ಯ ವಿಭಾಗದಲ್ಲಿ ವಿಲೀನವಾಯಿತೆಂದು ತೋರುತ್ತದೆ. ಏಕೆಂದರೆ ತೋಣಚಿಯ ಅನಂತರ ನಮಗೆ ಕಟ್ಬಪ್ಪು-1000 ವಿಭಾಗದ ಪ್ರಸ್ತಕ್ತಿಯುಳ್ಳ ಶಾಸನಗಳು

ದೊರಕಿಲ್ಲ. ಕಟ್ಬಪ್ಪು, ವಿಭಾಗದ ಮುಖ್ಯತ್ವವನ್ನು ಕಳೆದುಕೊಂಡರೂ ರಾಜಮನೆತನದ ಜೊತೆ, ಆ ರಾಜರ ಪ್ರಧಾನರ ಜೊತೆ ಸಂಬಂಧಗಳನ್ನು ಕಳೆದುಕೊಂಡಿದ್ದಿಲ್ಲ. ಅಷ್ಟೇ ಅಲ್ಲ ಕಟ್ಬಪ್ಪು ಅಥವಾ ಶ್ರವಣಬೆಳಗೊಳ ಒಂದು ಧಾರ್ಮಿಕ ಕೇಂದ್ರವಾಗಿ ಬಹು ಮಹತ್ವ ಸ್ಥಾನವನ್ನು ಪಡೆದುಕೊಂಡಿತ್ತು. ಹೊಯ್ಸಳರ ಕಾಲದಲ್ಲಿ ಕಟ್ಟಿದ ಕಟ್ಟಡಗಳೇ - ಜೀರ್ಣೋದ್ಧಾರಗೊಂಡ ಜಿನಾಲಯಗಳೇ - ಇಂದಿಗೂ ಅಸ್ತಿತ್ವದಲ್ಲಿ ಇರುವ ದೇವಾಯತನಗಳು. ಅವರ ಅನಂತರ ಚಿಕ್ಕಬೆಟ್ಟದ ಮೇಲೆ ಯಾರೂ ಬಸದಿಯನ್ನು ನಿರ್ಮಿಸಿಲ್ಲ.

ಜೈನಧರ್ಮ ತನ್ನ ವೈಭವದ ಚರಮಸೀಮೆಯನ್ನು ಹೊಯ್ಸಳರ ಕಾಲದಲ್ಲಿ ಕಂಡಿತು. ರಾಜಕೀಯ ಚರಿತ್ರೆಯಲ್ಲೂ 'ಚಕ್ರವರ್ತಿ' ಪದವಿಯನ್ನು ಧರಿಸಿದ ಈ ಭಾಗದ ರಾಜಮನೆತನವೆಂದರೆ ಹೊಯ್ಸಳರದೇ. ತತ್ಪೂರ್ವದಲ್ಲಿ ಯಾರೂ ಚಕ್ರವರ್ತಿಗಳಾಗಿದ್ದಿಲ್ಲ. ಹೊಯ್ಸಳರೂ "ತೆಂಕಣ ಚಕ್ರವರ್ತಿ" ಎಂದು ಕರೆದುಕೊಂಡರೂ ಇಡಿಯ ದಕ್ಷಿಣಾಪಥದ, ಎಂದರೆ ಚಾಳುಕ್ಯರಂತೆ - ರಾಷ್ಟ್ರಕೂಟರಂತೆ - ಚಕ್ರವತಿಗಳು ಆಗಿದ್ದಿಲ್ಲ. ಅನುಭವಿಸಲಿಲ್ಲ ಆ ವಿಸ್ತಾರವಾದ ಭೂಭಾಗವನ್ನು. ಅವರದು ತುಂಗಭದ್ರೆಯಿಂದ ತೆಂಕಲಲ್ಲೇ ರಾಜ್ಯ. ಗಂಗರ ಮನೆಯ ಕನ್ಯೆಯನ್ನು ಮದುವೆ ಆಗಿ ಅವರ ಅನಂತರ ಸಂಪೂರ್ಣ ಗಂಗಮಂಡಲ-96000 ಪ್ರದೇಶಕ್ಕೆ ಅವರು ಅಧಿಪತಿಗಳಾಗಲಿಲ್ಲ. ಅಂತೆಯೆ ಕುಸುರಿಗೆಲಸದ ಕೌಶಲಭರಿತ ಬಸದಿಗಳನ್ನು - ದೇವಾಲಯಗಳನ್ನು - ಕಟ್ಟಿಸಿದರೂ ಗೊಮ್ಮಟೇಶ್ವರನಂತಹ ಕಲಾಕೃತಿ ಅವರಿಂದ ನಿರ್ಮಾಣವಾಗಲಿಲ್ಲ. ಹೇಗೋದಿದರೂ 'ಗಂಗ' ಗಂಗತುಂಗವೇ ! ಗೊಮ್ಮಟೇಶ್ವರನ ಎತ್ತರಕ್ಕೆ ಏರಿದ ಕಲೆ, ಅನಂತರ ಇಳಿಮುಖ ಕಂಡಿತು. ಅಂತೆಯೆ ಜೈನಧರ್ಮವೂ ಇಳಿಮುಖ ಕಾಣಲು ಆರಂಭಿಸಿತು. ಜೈನಧರ್ಮವು ಇಳಿಮುಖ ಕಾಣಲು ವೈದಿಕ ಧರ್ಮದ ಪುನುರುತ್ಥಾನವೂ ಒಂದು ಕಾರಣ. ಪರಚಕ್ರ - ಮಹಮ್ಮದೀಯ ರಾಜರ - ದಾಳಿ ಇನ್ನೊಂದು ಕಾರಣ. ವೈದಿಕಧರ್ಮದ ಶೈವ (ವೀರಶೈವ ಸಹಿತ) ಹಾಗೂ ಭಾಗವತ (ಶ್ರೀವೈಷ್ಣವ, ವೈಷ್ಣವ (ಮಾಧ್ವ), ಮಹಾನುಭಾವ, ಇತ್ಯಾದಿ ಇತ್ಯಾದಿ) ಪಂಥಗಳು ತುಂಬ ಶಕ್ತಿಯುತವಾಗಿ ಅದನ್ನು ಜನರು ತ್ಯಜಿಸಲು ಕಾರ್ಯ ಹಮ್ಮಿಕೊಂಡು ದುಡಿದವು. ಜೈನಧರ್ಮದ ಅನುಯಾಯಿಗಳೂ ತತ್ವವನ್ನು ಜಪಿಸುತ್ತ ಅದರ ಆಚರಣೆಯಿಂದ ದೂರಸರಿದು ಜನತಾಸೇವೆಯೆ ಜನಾರ್ದನನ ಸೇವೆಯೆಂಬುದನ್ನು ಮರೆತುದು ಕಾರಣವಾಗಿರಬೇಕು. ಶ್ರವಣಬೆಳಗೊಳ ಒಂದು ಅತ್ಯಂತ ದೊಡ್ಡ ಕ್ಷೇತ್ರ, ಹತ್ತಾರು ಹಳ್ಳಿಗಳನ್ನು - ಅಲ್ಲಿನ ಸರ್ವ ಆದಾಯವನ್ನು - ಹೊಂದಿದ್ದುದು ಎಲ್ಲವನ್ನೂ ಕಳೆದುಕೊಂಡಿತು ! ಈ ಅವಸ್ಥೆ ಎಲ್ಲಿಯವರೆಗೆ ಹೋಯಿತೆಂದರೆ ಕ್ರಿ.ಶ. 1634ರಷ್ಟೊತ್ತಿಗೆ ಏನೆಲ್ಲವೂ ಅಡವಿಟ್ಟಿತು ! ಆಗ ಮೈಸೂರು ಸರ್ಕಾರ ಮುಂದೆ ಯಾರು ಆ ಅಲ್ಪ ಸ್ವಲ್ಪ ಆಸ್ತಿಯನ್ನು ಅಡವು ಹಿಡಿಯದಂತೆ ಆಜ್ಞೆಮಾಡಿತು.[9]

ಇಷ್ಟು ಹಿನ್ನೆಲೆಯಲ್ಲಿ ಶ್ರವಣಬೆಳಗೊಳದ ವಿಜಯನಗರದ ಶಾಸನಗಳನ್ನು ಅಧ್ಯಯನಕ್ಕೆ ಎತ್ತಿಕೊಳ್ಳಬೇಕು. ಮಲಿಕ್ ಕಾಫರ್‌ನ ಸೇನಾ ಚಟುವಟಿಕೆ ಹೊಯ್ಸಳ ಸಾಮ್ರಾಜ್ಯವನ್ನು ಮುರಿಯಿತು. ಅನಂತರ ದಕ್ಷಿಣದ ಭೂಭಾಗದಲ್ಲಿ ತನ್ನ ನೆಲೆ ಕಾಣಲು ಪ್ರಯತ್ನಿಸಿತು. ದಾರಿಯಲ್ಲಿ ಅನೇಕ ಪರಮತದ ಕಟ್ಟಡಗಳು, ಬಿಂಬಗಳು, ನೆಲಕಚ್ಚಿದವು ಮತ್ತೆ ರೂಪಗೆಟ್ಟು ನಿಂತವು. ಮಲಿಕ್ ಕಾಫರನ ಒಡೆಯ ಅಲ್ಲಾಉದ್ದೀನ್ ಖಿಲ್ಜಿ ನೆಲೆಗೆಟ್ಟ; ತೊಘಲಖ್ ಮನೆತನ ಅಸ್ತಿತ್ವಕ್ಕೆ ಬಂದಿತು. ಅದೇ ವೇಳೆಯಲ್ಲಿ ತೊಘಲಖ್ಖನ ಪರಿವಾರದವರಿಗೆ - ಸಿಬ್ಬಂದಿಗೆ - ಆಡಳಿತದ ಯಂತ್ರಕ್ಕೆ ತೊಘಲಖ್ಖನ ನಡಾವಳಿಗೆ ಬೇಸತ್ತ ಗುಂಪಿಗೆ ಸ್ವಾತಂತ್ರ್ಯದ - ಸುಖದ ನೆಲೆಯ - ತಮ್ಮ ನೆಮ್ಮದಿಯ ಆಡಳಿತ ಬೇಕಾಗಿತ್ತು. ಇತ್ತ ಮಹಮ್ಮದೀಯ ದಾಳಿಗಳಲ್ಲಿ ಬೇಸತ್ತ ಹಿಂದೂ ಜನರಿಗೆ ಚೆಲ್ಲಾಪಿಲ್ಲಿಯಾಗಿ ಹೋದ ಸಣ್ಣ ಸಣ್ಣ ರಾಜಮನೆತನಗಳಿಗೆ - ತಂದೆಯನ್ನು ಕಳೆದುಕೊಂಡ ಕುಟುಂಬಕ್ಕೆ - ಆಗುವ ತೊಂದರೆಗಳ ಹಾಗೆ ಸಾಮ್ರಾಜ್ಯಾಡಳಿತದ ನೆರಳಿನಲ್ಲಿ ಬದುಕಿದವರಿಗೆ ಬಂದು ಕೈಹಿಡಿದು ನಡೆಸುವ - ಜವಾಬ್ದಾರಿ ಹೊರುವ - ಸಮಾಜ ಜೀವನದಲ್ಲಿ, ಮತ್ತೆ ಧಾರ್ಮಿಕ ಜೀವನದಲ್ಲಿ ನೆಮ್ಮದಿ ನೀಡಬಲ್ಲ ನೇತೃತ್ವ ಬೇಕಾಗಿತ್ತು. ಅದಕ್ಕಾಗಿ ಗುತ್ತಿಯ ಸುತ್ತ ಮುತ್ತಲ ಪ್ರದೇಶವನ್ನು ಆಳುತ್ತಿದ್ದ ರಾಷ್ಟ್ರಕೂಟರ ಕಾಲದಿಂದಲೂ ಹನುಮಕೊಂಡದಲ್ಲಿ - ಅದರ ಸುತ್ತಮುತ್ತಲ ಪ್ರದೇಶದಲ್ಲಿ ರಾಜ್ಯ ಆಳುತ್ತಿದ್ದ - ಈಗ ಇತಿಹಾಸದ ಪುಸ್ತಕಗಳಲ್ಲಿ ಕಲ್ಯಾಣದ ಚಾಳುಕ್ಯರೆಂದು ಹೆಸರು ತಳೆದ ಚಾಳುಕ್ಯರ ಮನೆತನ ಅಲ್ಲೂ ಇತರ ಕಡೆಗಳಲ್ಲೂ ತನ್ನ ಶಾಖೆಗಳನ್ನು (ಸಣ್ಣ ಪುಟ್ಟ ಮನೆಗಳನ್ನು) ಹೊಂದಿತ್ತು. ಆ ಶಾಖೆ ಈಗ ಬಲಿಷ್ಟವಾಗಿ ಮತ್ತೊಮ್ಮೆ ದೊಡ್ಡದಾದ ರಾಜ್ಯಸೌಧಕ್ಕೆ - ರಾಜ್ಯಮನೆತನಕ್ಕೆ - ಆಸ್ತಿಬಾರವನ್ನು ಹಾಕಿತು. ಹಲವರು ಅದಕ್ಕೆ ಸಹಾಯ ಸಹಕಾರವನ್ನು ಕೊಟ್ಟರು. ಭಾರವನ್ನು ಹೊರಬಲ್ಲ ಆನೆಗೆ ತಾನೇ ಭಾರವನ್ನು ಹೊರಿಸುತ್ತಾರೆ? ಭಾರವನ್ನು ಹೊರುವ ಈ ಆನೆ ತನ್ನ ಪೂರ್ವದ - ಪರಂಪರಾಗತವಾಗಿ ಬಂದ - ವರಹಾಲಾಂಛನವನ್ನು ಹೊತ್ತುಕೊಂಡು - ಭೂಭಾರವನ್ನು ಧರಿಸಿತು. ಅದೇ ವಿಜಯನಗರದ ಮೊದಲ ಮನೆತನ, ಸಂಗಮ ಮನೆತನ. ವರಾಹದಲ್ಲೇ ಅಡಗಿದೆ ವಿಷ್ಣುವಿನ ಪೂಜನೀಯ ಭಾವನೆ - ವರಾಹ ದಶಾವತಾರಗಳಲ್ಲಿ ಒಂದೆಂಬುದು ಲೋಕ ವಿಶ್ರುತ ಸಂಗತಿ. ವಿಜಯನಗರದ ಅರಸೊತ್ತಿಗೆಯ ನಾಲ್ಕೂ ಮನೆತನಗಳು ವೈದಿಕ (ಶೈವ, ವೀರಶೈವ, ವೈಷ್ಣವ, ವೀರವೈಷ್ಣವ ಹಾಗೂ ಶಾಕ್ತ ಇತ್ಯಾದಿ) ಧರ್ಮಾನುಯಾಯಿಗಳು ಎಂಬುದು ಗಮನಾರ್ಹ. ನಾಲ್ಕೂ ಮನೆತನಗಳು ಹೆಣ್ಣು ಗಂಡು ಕೊಟ್ಟು ತಂದುಕೊಂಡ, ಸಂಪ್ರದಾಯ (ಹೆಚ್ಚೂ ಕಡಿಮೆ) ಒಂದೇ ರೀತಿಯುಳ್ಳವು. ಜೈನಧರ್ಮವೂ ರಾಜಧಾನಿಯಿಂದ ದೂರ ಆದುದು ಅದರ ಇಳಿಮುಖಕ್ಕೆ ಕಾರಣ ಎಂದು ತೋರುತ್ತದೆ. ಪ್ರಾಯಃ ಇದು ಇನ್ನೊಂದು ಕಾರಣವಾಗಿರಬಹುದು. ಇದಕ್ಕಿಂತ ಹೆಚ್ಚಾಗಿ ತಪಸ್ಸಾಧನೆಯಲ್ಲಿ ತಮಗಿಂತಲೂ ಹಿಂದಿನ ಕಾಲದ ಯೋಗಿಗಳು ಸಾಧಿಸಿದ ಸಾಧನೆಗಳನ್ನು ಹೊಂದದೆ ಇರುವುದು ಮುಖ್ಯವೆಂದು ನನಗೆ ತೋರುತ್ತದೆ. ತಪಸ್ವಿಗಳು ತಮ್ಮ ಪ್ರಭಾವವನ್ನು ಜನತೆಯ ಮೇಲೆ ಬೀರುವುದು ಲೋಕವಿಶ್ರುತ ವಿಷಯ. ಅಂತಹ ವ್ಯಕ್ತಿಗಳು ಇಲ್ಲದಾದಾಗ ಆಯಾ ಪಂಥದ ಪ್ರಭಾವ ಕಡಿಮೆ ಆಗುತ್ತದೆ.

ಕ್ರಿ.ಶ. 12-13ನೇ ಶತಮಾನಗಳಲ್ಲಿ ಹಾಗಾಯಿತು ಮತ್ತು ಅದು ಆ ಮುಂದೆ ಆ ಪ್ರಾಚೀನ ವೈಭವಕ್ಕೆ ಉತ್ತಮ ಸ್ಥಿತಿಗೆ ತಲುಪಲು ಸಾಧ್ಯವಾಗಲಿಲ್ಲವೆಂದು ತೋರುತ್ತದೆ.

ಶ್ರವಣಬೆಳಗೊಳದಲ್ಲಿ ವಿಜಯನಗರದ ಅರಸರ ಕಾಲದ ಶಾಸನಗಳ ಸಂಖ್ಯೆ ಬಹಳ ಕಡಿಮೆ. ರಾಜಮನೆತನಗಳಿಗೆ ಸಂಬಂಧಪಟ್ಟವು ಕೇವಲ ಆರು ! ಅದರಲ್ಲೊಂದು ಸ್ಥಳ ಸಾಲದಾದಾಗ ಬೇರೆಡೆ ಎಡೆಪಡೆದಿದೆ.[10] ಚಿಕ್ಕ ಸ್ಥಳದಲ್ಲಿ ಶಾಸನದಲ್ಲಿ ಬರೆಯಬೇಕಾದ ಪದ್ಯವನ್ನೂ ಸರಿಯಾಗಿ ಬರೆದಿಲ್ಲ. ಪ್ರಾಯಃ ಇದೂ ಇನ್ನೊಂದೆಡೆ ಶಾಸನವನ್ನು ಬರೆಸಲು ಕಾರಣವಾಗಿರಬೇಕು. ವಿಜಯನಗರದ ಅರಸೊತ್ತಿಗೆಯ ಮೊದಲ ಶಾಸನವೆಂದರೆ ಬುಕ್ಕರಾಯನ (II) ಕಾಲದ ಶಾ.ಶ. 1290 ಕೀಲಕ ಭಾದ್ರಪದ ಶು.10, ಬೃಹಸ್ಪತಿವಾರದಂದು (ಕ್ರಿ.ಶ. 1368, ಆಗಸ್ಟ 24) ಬರೆಯಲಾದ ಭಂಡಾರ ಬಸದಿಯಲ್ಲಿರುವ ಶಾಸನ.

ಈ ಶಾಸನವನ್ನು ವೈಷ್ಣವರು ಹಾಗೂ ಜೈನರೂ ಜಗಳವಾದಾಗ ಎರಡು ಜಾತಿಯ ಜನರನ್ನು - ಧರ್ಮದ ಜನರನ್ನೂ - ಆಯಾ ಸಂಪ್ರದಾಯಗಳ ಮುಖಂಡರನ್ನು ಕರೆಸಿದುದಾಗಿ ಬರೆದಿದೆ. ಈ ಒಂದೇ ಶಾಸನದ ನಾಲ್ಕು ನಕಲುಗಳನ್ನು ಆನೆಯಗೊಂದಿ, ಹೊಸಪಟ್ಟಣ, ಪೆನುಗೊಂಡೆ ಹಾಗೂ ಕಲ್ಲೆಹದ ಪಟ್ಟಣದಲ್ಲಿ ಹಾಕಿದರು. ಈ ನಾಡುವೊಳಗಾದ ಸಮಸ್ತನಾಡ ಭವ್ಯ ಜನಂಗಳು ಬುಕ್ಕರಾಯನಿಗೆ ಮನವಿಮಾಡುತ್ತಾರೆ, ಭಕ್ತರು ಅನ್ಯಾಯ ಮಾಡಿದ್ದಾರೆಂದು ತಿಳಿಸುತ್ತಾರೆ, ಆದರೆ ಯಾವ ಊರಿನಲ್ಲಿ ಯಾವ ಯಾವ ಬಸದಿಗಳಿಗೆ ಹಾನಿಯಾಯಿತೆಂದು ತಿಳಿಸಿಲ್ಲ. ಬೆಳಗೊಳದಲ್ಲಿ ಭವ್ಯರು ಬೇಕಾದಷ್ಟು ಜನ ಇದ್ದರು ಅಂತೆಯೆ ಕೆಲವು ಮನೆಯವರಾದರೂ ವೈಷ್ಣವ ಜನರು ಇದ್ದಿರಬೇಕು. ಅವರ ಪ್ರಸಕ್ತಿ ಇಲ್ಲೆ ಇಲ್ಲ. ಒಮ್ಮೇಲೆ ಶ್ರವಣಬೆಳಗೊಳದ ಮೇಲೆ ದಾಳಿಮಾಡಲು ಭಕ್ತ ಜನರು ಏಕೆ ಹೊರಟರು? ಈ ಶಾಸನ ಒಂದು ಕೂಲಂಕಷವಾದ ಅಧ್ಯಯನವನ್ನು ಬಯಸುತ್ತದೆ. ಸಮಸ್ತನಾಡಿನ ಅಧ್ಯಯನ ಆಗುವವರೆಗೆ ಈ ಶಾಸನದ ಸಂಗತಿಗಳನ್ನು ಯಥಾಸ್ಥಿತಿಯಲ್ಲಿ ಸ್ವೀಕರಿಸುವಂತಿಲ್ಲ. ತಿರುಮಲೆಯ ತಾತಯ್ಯಗಳ ಹೆಸರಿದೆ ಆದರೆ ಅವರೇ ಹಾಕಿಸಿದ ಒಂದೂ ಶಾಸನ ಸದ್ಯಕ್ಕೆ ಎಲ್ಲಿಯೂ ಉಪಲಬ್ಧವಿಲ್ಲ. ಶ್ರವಣಬೆಳಗೊಳದ ಸುತ್ತಮುತ್ತಲಲ್ಲಿ ಒಂದರ್ಧ ವೈಷ್ಣವ ದೇವಾಲಯಗಳಿದ್ದವು ಅವುಗಳ ಅವಸ್ಥೆ ಏನಾಗಿದೆ? ಇವುಗಳ ಅರಿವೂ ನಮಗಿಲ್ಲ. ಈ ಶಾಸನವೇ ಒಂದು ಉತ್ತಮ ಕೇಸ್ ಇದೆ. ಜೈನ ಸಮುದಾಯಕ್ಕೆ ಬುಸವಿಸೆಟ್ಟಿ (ಬಸವಿಶೆಟ್ಟಿ) ಮುಖ್ಯಸ್ಥನಾದರೆ ಭಕ್ತ ಸಮಾಜಕ್ಕೆ ಭಕ್ತಜನರಿಂದ ಯಾರು ಮುಖ್ಯಸ್ತರು? ಆ ಕಾಲಕ್ಕೆ ಜೈನಗುರುಗಳು ಯಾರೂ ಇದ್ದಿಲ್ಲವೆ? ಭಕ್ತಜನರ ಮುಖ್ಯಸ್ಥರು ತಿರುಮಲೆ ತಾತಯ್ಯಗಳಂತೆ ಜೈನ ಜನರ ಮುಖ್ಯಸ್ಥರೂ ಆ ಧರ್ಮದ ಪರಿಪಾಲಕರೇ - ಜೈನಗುರುಗಳೇ - ಆಗಿರಬೇಕಿತ್ತು. ಇದು ವಿಚಾರಣೀಯ. ಈ ಬುಸವಿಶೆಟ್ಟಿ ಯಾವ ಗುರುಗಳ ಶಿಷ್ಯ? ಈ ವಿವರ ಇಲ್ಲಿ ಬರಬೇಕಿತ್ತು.

ಆಗಲೇ ಸೂಚಿಸಿದ ಹಾಗೆ ಎರಡು ಶಾಸನಗಳು ಒಂದು ಇಮ್ಮಡಿ ಹರಿಹರರಾಯನ ಮರಣವನ್ನು ಸೂಚಿಸುವ ಮತ್ತು ಇನ್ನೊಂದು ಇಮ್ಮಡಿ ದೇವರಾಯನ ಮರಣವನ್ನು ಸೂಚಿಸುವುದು ಮಗುದೊಂದು ಅದರದೆ ಪ್ರತಿಯಾದ ಶಾಸನ ಇವು ಶ್ರವಣಬೆಳಗೊಳದ ಆಚಿಯಕ್ಕನ (ಅಕ್ಕನ) ಬಸದಿಯಲ್ಲಿವೆ. ಅಕ್ಕನ ಬಸದಿಯೆಂದು ಪ್ರಸಿದ್ಧವಾದ ಈ ಬಸದಿಯನ್ನು ಶಿವಭಕ್ತನೆಂದು ಪ್ರಸಿದ್ಧನಾದ, ಜಗನ್ನಾಥ ವಿಜಯ ಕರ್ತೃವಾದ ರುದ್ರಭಟ್ಟನಿಗೆ ಆಶ್ರಯವನ್ನಿತ್ತ ಚಂದ್ರಮೌಳಿಯಣ್ಣ ಮಂತ್ರಿಯ ಪತ್ನಿ ಆಚಿಯಕ್ಕ ಕಟ್ಟಿಸಿದುದು. ಈ ಬಸದಿಯಲ್ಲಿ ಆಚಿಯಕ್ಕನು ಬಸದಿಯ ಜೊತೆಗೆ ಒಂದು ಸುಂದರವಾದ ಶಾಸನವನ್ನು ಬರೆಯಿಸಿ ನೆಡಿಸಿದ್ದಾಳೆ. ಎದುರಿಗೆ ಇಂತಹ ಒಂದು ಆದರ್ಶಯುತ ಕೆಲಸ - ಮಾದರಿ ಇರುವಾಗಲೂ ಆ ಶಾಸನದ ಹಿಂದೆ ಗೋಡೆಯಲ್ಲಿನ ಗಗ್ಗರಿಯಕಲ್ಲ (ಕಟಿಬಂಧದ ಕಲ್ಲಿ)ನಲ್ಲಿ ಸಣ್ಣ ಅಕ್ಷರಗಳಲ್ಲಿ ಕೆತ್ತಿದೆ. ಶಾಸನದ ಒಕ್ಕಣೆ ಇಂತಿದೆ:

1 ತಾರಣ ಸಂವತ್ಸರದ ಭಾದ್ರಪದ ಬಹುಳ ದಶಮಿಯೂ

2 ಸೋಮವಾರದಲು ಹರಿಹರರಾಯನು ಸ್ವಸ್ಥನಾದನು[11]

ಸಾಗರದಿಂದ ಸಾಗರದವರೆಗೆ ಹಬ್ಬಿದ ಸಾಮ್ರಾಜ್ಯದ ಒಡೆಯನಿಗೆ ಇಷ್ಟು ಚಿಕ್ಕಶಾಸನ, ಅದೂ ಯಾರೋ ಕಟ್ಟಿಸಿದ ಬಸದಿಯಲ್ಲಿ ! ಅಂತೆಯೆ ಇದನ್ನು ನಾನು ರಾಜಶಾಸನವೆಂದು ಹೇಳಲಾರೆ ಆದರೆ ಇದು ಆತನು "ಸ್ವಸ್ಥನಾದ" ಸಂಗತಿಯ ಬಗ್ಗೆ ಸಂದೇಹವನ್ನೂ ಪಡಲಾರೆ. ಯಾರೋ ಆತನಿಗೆ ಬೇಕಾದವರು ತಮಗೆ ಸಾಧ್ಯವಿದ್ದ ರೀತಿಯಲ್ಲಿ ಶಾಸನವನ್ನು ಹಾಕಿಸಿದ್ದಾರೆ ಅಷ್ಟೇ; ಹರಿಹರ (II) ಕ್ರಿ.ಶ. 1404, ಆಗಸ್ಟ 30ರಂದು ನಿಧನ ಹೊಂದಿದನು.

ಹರಿಹರರಾಯನ ಮರಣವನ್ನು ತಿಳಿಸಿದ ಶಾಸನದ ಕೆಳಗೆಯೆ ಅತಿ ಚಿಕ್ಕ ಚಿಕ್ಕ ಅಕ್ಷರಗಳಲ್ಲಿ ಇಮ್ಮಡಿ ದೇವರಾಯನ ಮರಣವನ್ನು ತಿಳಿಸುವ ಶಾಸನ ಬರೆಸಹೋಗಿ ಅಲ್ಲಿ ಸ್ಥಳ ಸಾಲದೆಂದು ಮನದಟ್ಟಾಗಿ ಅದನ್ನು ಹಾಗೆಯೆ ಅಪೂರ್ಣವಾಗಿ ನಿಲ್ಲಿಸಿ ಬಿಟ್ಟಿದ್ದಾರೆ:

1 ಕ್ಷಯಾಖ್ಯ ಶಕವತ್ಸರೇ ದ್ವಿತಯಯುಕ್ತ ವೈಶಾಖಕೇ ಮಹೀತನ

2 ವಾರಕೇ ಯು[12]

ಈ ಸಂಗತಿಯನ್ನು ತಿಳಿಸುವ ಸಂಪೂರ್ಣ ಶಾಸನ ಅಲ್ಲಿಂದ ಸ್ವಲ್ಪ ಎಡಕ್ಕೆ ಸರಿದರೆ ಬಸದಿಗೆ ಬರುವ ಯಾತ್ರಿಕರ ಸದರಿಗೇ ಗೋಡೆಯ ಮೇಲೆ (ಅಕ್ಷರಗಳು ಸ್ವಲ್ಪ) ಸ್ಫುಟವಾಗಿ ಕಾಣಿಸುತ್ತವೆ. ಆ ಬಸದಿಯ ಮಹಾದ್ವಾರದ ಎದುರಿಗೆ ಗೋಡೆಯ ಮೇಲೆ ಅಕ್ಷರಗಳು ಯಾತ್ರಿಕನಿಗೆ ಕಣ್ಣುಕೋರೈಸುವಂತಿವೆ:

1 ಕ್ಷಯಾಹ್ವಯಕುವತ್ಸರೇ ದ್ವಿತಿಯಯುಕ್ತ ವೈಶಾಖಕೇ

2 ಮಹೀತನಯ ವಾರಕೇ ಯುತಬಲಕ್ಷ ಪಕ್ಷೇತರೇ । ಪ್ರ

3 ತಾಪನಿಧಿ ದೇವರಾಟ್ಸಲಯಮಾಪ ಹಂತಾ ಸಮೋ

4 ಚತುರ್ದ್ದಶದಿನೇ ಕಥಂ ಪಿತೃಪತೇ ನಿವಾರ್ಯಾ ಗತಿಃ ॥[13]

[ಕುವರ್ಷವಾದ 'ಕ್ಷಯ' ಸಂವತ್ಸರದಲ್ಲಿ ನಿಜ ವೈಶಾಖ ಮಾಸದ ಬಹುಳ 14 ದಿವಸ ಮಂಗಳವಾರದಂದು ಪ್ರತಾಪನಿಧಿ ದೇವರಾಯನು ಪಿತೃಲೋಕಕ್ಕೆ ಪ್ರಯಾಣ ಬೆಳಸಿದನು (ಇಲ್ಲಿನ ದಿನಾಂಕ ಕ್ರಿ.ಶ. 1446, ಕ್ಷಯ, ವೈಶಾಖ ಬಹುಳ 14, ಮಂಗಳವಾರಕ್ಕೆ ಅತ್ಯಂತ ಸಮರ್ಪಕವಾಗಿ ಹೊಂದುತ್ತದೆ).]

ಇಷ್ಟೆಲ್ಲ ಹೇಳಿದ ಮೇಲೂ ಇದನ್ನು ಕೂಡ ಹರಿಹರರಾಯನ ಮರಣ ಶಾಸನದಂತೆ ರಾಜಶಾಸನವೆಂದು ಸ್ವೀಕರಿಸುವಂತಿಲ್ಲ. ಈ ಶಾಸನವನ್ನೂ ಆತ್ಮೀಯರಾರೊ ಹಾಕಿಸಿದ್ದಾರೆ.

ಮಂಗಾಯಿ ಬಸದಿಯಲ್ಲಿ ಸದ್ಯ ಎಂಟು ಶಾಸನಗಳು ದೊರಕಿದ್ದು ಆರು ಶಾಸನಗಳು ವಿಜಯನಗರದ ಸಂಗಮ ಮನೆತನದೊಂದಿಗೆ ಸಂಬಂಧ ಹೊಂದಿವೆ. ಈ ಆರರಲ್ಲೂ ತೇದಿ ವಿವರಗಳಿಲ್ಲ. ಹೀಗಾಗಿ ವಿದ್ವಾಂಸರಿಗೆ ಇದುವರೆಗೆ ಇಲ್ಲಿ ಬಂದಿರುವ ಸಂಗತಿಗಳನ್ನು ಸರಿಯಾಗಿ ವಿವರಿಸಲು ಆಗಿಲ್ಲ. ಉದಾ:

ಶ್ರವಣಬೆಳಗೊಳ ಸಂಪುಟದ ಶಾಸನ 457ರಲ್ಲಿ ಶಾಂತಿತೀರ್ಥಂಕರ ಬಿಂಬದ ಪೀಠದಲ್ಲಿ ಬರೆದಿರುವ ಶಾಸನ ಇಂತಿದೆ:

1 ಶ್ರೀಮತ್ಪಂಡಿತಾಚಾರ್ಯ್ಯ ಗುಡ್ಡಿ ದೇವರಾಯ ಮ

2 ಹಾರಾಯರ ರಾಣಿ ಭೀಮಾದೇವಿ ಮಾಡ್ಸಿದ ಶಾನ್ತಿನಾಥ ಸ್ವಾಮಿ ಶ್ರೀ[14]

ಇಲ್ಲಿ ಬಂದಿರುವ 'ಭೀಮಾದೇವಿ' ರಾಣಿಯನ್ನು ದಿ. ಆರ್. ನರಸಿಂಹಾಚಾರ್ಯರು ಒಂದನೆಯ ದೇವರಾಯನ ಹೆಂಡತಿ ಎಂದು ಗುರುತಿಸಿದ್ದರೆ[15] "History of Karnataka" ಪುಸ್ತಕದಲ್ಲಿ ಅದರ ಕರ್ತೃಗಳಾದ ಡಾ. ಪಿ.ಬಿ.ಡಿ., ಎಸ್.ಎಚ್.ಆರ್ ಮತ್ತು ಬಿ.ಆರ್.ಗೋ. ಇಮ್ಮಡಿ ದೇವರಾಯನ (ಕ್ರಿ.ಶ. 1424-1446) ಹೆಂಡತಿಯೆಂದು ಗುರುತಿಸಿದ್ದಾರೆ.[16] ಈ ತಾಯಿ ಯಾರ ಪತ್ನಿ?

ಈ ದಿಸೆಯಲ್ಲಿ ಇಲ್ಲಿನದೇ ಆದ ಪಾರ್ಶ್ವನಾಥ ಬಿಂಬದ ಮೇಲೆ ಇರುವ ಶಾಸನ ಇನಿತು ಬೆಳಕು ಬೀರುತ್ತದೆ. ಅದು ಹೀಗಿದೆ:

1 ಶ್ರೀ ಮೂಲಸಂಗದ ದೇಸಿಯಗಣದ ಪೊ

2 ಸ್ತಕಗಛದ ಅರ್ಹಣನ್ದಿದೇವರಗುಡ್ಡ ಶ್ರೀನ


3 ಯಹರ ಪ್ರಧಾನಸೇನಾಧಿಕಾರಿ ಶ್ರೀಕರ

4 ಣದ ಬಮುಚಯ ಮಾಡಿಸಿದ ಬಸದಿ[17]

'ಬಮುಚಯ' ಇದು 'ಬಯಚಯ', ಇನ್ನು ಈ ವ್ಯಕ್ತಿ 'ಪ್ರಧಾನ ಸೇನಾಧಿಕಾರಿ' ಎಂದಿರುವುದರಿಂದ ಈತ ಒಬ್ಬ ದಂಡನಾಯಕ ಎಂದರೆ ತಪ್ಪಲ್ಲ. ಹುಳ್ಳಪ್ಪ ಮೊದಲಾದವರನ್ನು ಜ್ಞಾಪಿಸಿಕೊಂಡರೆ ಬಮುಚಯ/ಬಯಚಯ ವ್ಯಕ್ತಿಯೂ ದಂಡನಾಯಕನೇ. ಈ ಸಂದರ್ಭದಲ್ಲಿ ನಮಗೆ ದೊಡ್ಡಬೆಟ್ಟದ ಮೇಲಿರುವ ಶಾಸನ ಬಹಳ ಮಹತ್ವದ್ದಾಗಿದೆ. ಆದೆಂದರೆ ಶಾಸನ ಸಂಖ್ಯೆ 357. ಈ ಶಾಸನವನ್ನು ಇರುಗಪ ದಂಡನಾಯಕನು ತನ್ನ ಗುರುಗಳಾದ ಶ್ರುತಮುನಿಗಳು ಗೊಮ್ಮಟೇಶ್ವರನ ಅಖಂಡ ಪೂಜೆಗೆ ಬೆಳಗುಳ ಗ್ರಾಮವನ್ನೂ, ಆತನೇ ಕಟ್ಟಿಸಿದ ಕೆರೆಯನ್ನೂ, ಗದ್ದೆ ಭೂಮಿಯನ್ನೂ ಮತ್ತು ತೋಟವನ್ನೂ ದಾನಪಡೆದ ಸಂದರ್ಭದಲ್ಲಿ ಬರೆಯಿಸಿದ್ದಾನೆ. ಇದರ ಕಾಲ ಕ್ರಿ.ಶ. 1422 (ಶಾ.ಶ. 1344, ಶುಭಕೃತ್, ಕಾರ್ತಿಕ ಮಾಸ, ಶು.1, ಸೋ). ಈ ಇರುಗಪ ದಂಡನಾಯಕ ತನ್ನ ವಂಶ ಚರಿತ್ರೆಯ ಬಗ್ಗೆ ಶಾಸನದ ಆರಂಭದಲ್ಲಿ ಇನಿತು ಹೇಳಿದ್ದಾನೆ:

1 ಶ್ರೀಮತ್ಪರಮಗಂಭೀರಸ್ಯಾದ್ವಾದಾಮೋಘಲಾಂಛನಂ ಜೀ
2 ಯ್ಯಾತ್ತ್ರೈಲೋಕ್ಯನಾಥಸ್ಯ ಶಾಸನಂ ಜಿನಶಾಸನಂ ॥
3 ಶ್ರೀಬುಕ್ಕರಾಯಸ್ಯ ಬಭೂವ ಮಂತ್ರೀ ಶ್ರೀ ಬೈಚದಂಡೇಶ್ವ
4 ರ ನಾಮಧೇಯಃ । ನೀತಿರ್ಯದೀಯಾ ನಿಖಿಲಾಭಿನಂದ್ಯಾ ನಿಃ
5 ಶೇಷಯಾಮಾಸ ವಿಪಕ್ಷಲೋಕಂ ॥ ದಾನ ಚೇತ್ಕಥಯಾಮಿ ಲು
6 ಬ್ಧಪದವೀಂ ಗಾಹೇತ ಸಂತಾನಕೋ ವೈದಗ್ಧಿಂ ಯದಿ ಸಾ ಬೃಹಸ್ಪತಿ
7 ಕಥಾ ಕುತ್ರಾಪಿ ಸಂಲೀಯತೇ । ಕ್ಷಾಂತಿಂ ಚೇದನಪಾಯಿನೀಂ ಜಡ
8 ತಯಾ ಸ್ಪೃಶ್ಯೇತ ಸರ್ವ್ವಂ ಸಹಾ ಸ್ತೋತ್ರಂ ಬೈಚಪದಂಡನೇತುರವ
9 ನೌ ಶಕ್ಯಂ ಕವಿನಾಂ ಕಥಂ ॥ ತಸ್ಮಾದಜಾಯಂತ ಜಗದ್ವಯಂತಃ ಪು
10 ತ್ರಾಸ್ತ್ರಯೋ ಭೂಷಿತಚಾರುಶೀಲಾಃ । ಯೈರ್ಭೂಷಿತೋ
11 ಜಾಯತ ಮಧ್ಯಲೋಕೋ ರತ್ನೈಸ್ತ್ರಿಭಿರ್ಜ್ಜೈನ ಇವಾಪವ
12 ರ್ಗ್ಗಃ ॥ ಯಿರುಗಪದಂಡನಾಥಮಥ ಬುಕ್ಕಣಮಪ್ಯನು
13 ಜೌ ಸ್ವಮಹಿಮಸಂಪದಾ ವಿರಚಯನ್ ಸುತರಾಂ ಪ್ರಥಿ
14 ತೌ । ಪ್ರತಿಭಟಕಾಮಿನೀ ಪೃಥುಪಯೋಧರಹಾರಹರೋ
15 ಮಹಿತಗುಣೋಭವದ್ಜಗತಿ ಮಂಗಪದಂಡಪತಿಃ ॥ ದಾಕ್ಷ
16 ಣ್ಯ ಪ್ರಥಮಾಸ್ಪದಂ ಸುಚರಿತಸ್ಯೈಕಾಸ್ರಯಸ್ಸತ್ಯವಾ
17 ಗಾಧಾರಸ್ಸತತಂ ವದಾನ್ಯಪದನೀಸಂಚಾರ ಜಂಘಾಲ
18 ಕಃ ಧರ್ಮ್ಮೋಪಪ್ಲುತರುಃ ಕ್ಷ್ಮಾಕುಲಗೃಹಂ ಸೌಜನ್ಯಸಂಕೇ
19 ತಭೂಃ ಕೀರ್ತ್ತಿಂ ಮಂಗಪದಂಡಪೋಯಮತನೋ
20 ಜ್ಜೈನಾಗಮಾನುವ್ರತಃ ॥ ಜಾನಕೀತ್ಯಭವದಸ್ಯ ಗೇಹಿನೀ
21 ಚಾರುಶೀಲಗುಣಭೂಷಣೋಜ್ವಲಾ । ಜಾ
22 ನಕೀವ ತನುವೃತ್ತಮಧ್ಯಮಾ ರಾಘವಸ್ಯ ರಮಣೀ
23 ಯತೇಜಸಃ ॥ ಆಸ್ತಾಂ ತಯೋರಸ್ತಮಿತಾರಿವರ್ಗ್ಗೌ ಪು
24 ತ್ರೌ ಪವಿತ್ರೀಕೃತ ಧರ್ಮ್ಮಮಾರ್ಗ್ಗೌ । ಜಾಯಾನಭೂತ್ತತ್ರ
25 ಜಗದ್ವಿಜೇತಾ ಭವ್ಯಾಗ್ರಣೀರ್ಬೈಚಪದಂಡನಾಥಃ ॥ ಇ
26 ರುಗಪದಂಡಾಧಿಪತಿಸ್ತಸ್ಯಾವರಜಸ್ಸಮಸ್ತ
27 ಗುಣಶಾಲೀ । ಯಶ್ಯಯಶಶ್ಚಂದ್ರಿಕಯಾ ಮೀಲಂತಿ ದಿ
28 ವಾಪ್ಯರಾತಿ ಮುಖಪದ್ಮಾಃ ॥ .... ಇತ್ಯಾದಿ.[18]

ಇಲ್ಲಿನ ವಂಶ ವಿವರವನ್ನು ರೇಖೆಯ ಮೂಲಕ ಹೀಗೆ ಕೊಡಬಹುದು.



'ಬೈಚಪ' ಇದನ್ನು 'ಬಯಚಪ' ಎಂದೂ ಬರೆದಿರುವುದು ಬೇರೆಡೆ ಕಂಡುಬಂದಿದೆ. 'ಬೈ' ಬಯ್ > ಬಯ ಆಗುವುದೂ ಲೋಕರೂಢಿಯೆ. ಈ ಹಿನ್ನೆಲೆಯಲ್ಲಿ ಮಂಗಾಯಿ ಬಸದಿಯ ಶಾಸನದ ಬಯಚಪ ಹಾಗೂ ಈ ಬೈಚಪ ಒಂದೇ ಆಗಿರಲು ಸಾಧ್ಯವಿದೆ. ಬಯಚಪ (ಬೈಚಪ) ಹಾಗೂ ಇರುಗಪ ಇಬ್ಬರೂ ಒಂದನೆಯ ದೇವರಾಯ (ಕ್ರಿ.ಶ. 1406-1422) ದೊರೆಯ ದಂಡನಾಯಕರಾಗಿದ್ದ ಕಾರಣ ಅವರ ಕಾಲದಲ್ಲಿ ಕಟ್ಟಲಾದ ಮಂಗಾಯಿ ಬಸದಿ ಹಾಗೂ ಅಲ್ಲಿನ ವ್ಯಕ್ತಿಗಳು ಒಂದನೆಯ ದೇವರಾಯನ ಆಳ್ವಿಕೆಯ ಕಾಲದಲ್ಲಿ ಇದ್ದವರಾಗುತ್ತಾರೆ. ಅರ್ಥಾತ್ ಭೀಮಾದೇವಿಯೂ ಮತ್ತು ಮಂಗಾಯಿಯೂ ಒಂದನೆಯ ದೇವರಾಯನ ಕಾಲದಲ್ಲಿ ಇದ್ದವರಾಗುತ್ತಾರೆ. ಭೀಮಾದೇವಿ ಆತನ ಪತ್ನಿ ಆಗುತ್ತಾಳೆ. ದಿವಂಗತ ನರಸಿಂಹಾಚಾರ್ಯರ ಗುರುತಿಸುವಿಕೆ ಸರಿಯಾಗಿದೆಯೆಂದು ತೋರುತ್ತದೆ.

ಸದ್ಯ ಸಂಗಮ ಮನೆತನದವರಿಗೆ ಇಷ್ಟಾದರೂ ಸಂಬಂಧಗಳು ಇದ್ದದ್ದು ಕಂಡರೆ ಆ ಮುಂದೆ ಬಂದ ರಾಜಮನೆತನಗಳ ಸಂಬಂಧ ಶ್ರವಣಬೆಳಗೊಳದ ಜೊತೆಗೆ ಅಷ್ಟಾಗಿ ಇದ್ದದ್ದು ಕಂಡು ಬಂದಿಲ್ಲ.

ಟಿಪ್ಪಣಿಗಳು

1. ದೇವತೆಗಳು (ಶಿವ, ವಿಷ್ಣು, ದೇವೀ) ಜನರ ಜೊತೆಗೆ ಬಂದ ಹಾಗೆ ನದಿಗಳ ಹೆಸರುಗಳೂ ದಕ್ಷಿಣಕ್ಕೆ ಬಂದವು. ಗಂಗೆ ಗೋದಾವರಿಯಾದಳು (ಗೌತಮಿಗಂಗಾ). ಯಮುನಾ ಅಥವಾ ಕೃಷ್ಣಾ, ಕೃಷ್ಣಾ ಹೆಸರಿನಲ್ಲಿ ರಾರಾಜಿಸಿದಳು. ಕೃಷ್ಣಾ/ಯಮುನಾ ಇವು ಒಂದೇ ಹೆಸರಿನ ನದಿಯೆಂಬುದು ಭಾಗವತದ ಕಾಲದಿಂದಲೇ ಪ್ರಚಲಿತವಾಗಿದೆ:

   ವಿಲೋಕ್ಯದೂಷಿತಾಂ ಕೃಷ್ಣಾಂ ಕೃಷ್ಣಃ ಕೃಷ್ಣಾಹಿನಾವಿಭುಃ ।
   ತಸ್ಯಾ ವಿಶುದ್ಧಿಮನ್ವಿಚ್ಛನ್ ಸರ್ಪಂ ತಮುದವಾಸಯತ್ ॥
   —ಭಾಗವತ, ಅಧ್ಯಾಯ-16, ಪದ್ಯ 1

   ಈಗ - ಕೃಷ್ಣಾ ಕಾವೇರೀ ಎರಡು ಮಹಾನದಿಗಳ ಮಧ್ಯದ ಸ್ವಲ್ಪ ಭಾಗದಲ್ಲಿ ಕರ್ನಾಟಕ ಸ್ವಲ್ಪಭಾಗದಲ್ಲಿ ಆಂಧ್ರರಾಜ್ಯಗಳಿವೆ. ಆಂಧ್ರ ಕೃಷ್ಣಾ ಗೋದಾವರಿಗಳನ್ನು ಒಳಗೊಂಡಿದೆ. ಕಾವೇರೀ 'ಕವೇರಜಾ' ಎಂದರೆ ಬ್ರಹ್ಮಪುತ್ರಾದ ಇನ್ನೊಂದು ಹೆಸರು.

2. *S.I.I.*, Vol. IX, pt.1, No. 80.

3. ಕಟವಪ್ರ > ಕಳ್ಬಪ್ಪು > ಕಬ್ಬಪ್ಪು ಆಗಿದೆ. ಕೆಲವರು ತಿಳಿದಂತೆ ಕನ್ನಡದಿಂದ ಸಂಸ್ಕೃತೀಕರಣಗೊಂಡಿಲ್ಲ. ಕನ್ನಡವೆ ಮೊದಲು ಎಂದು ಹೇಳುವುದಾದರೆ ಅಲ್ಲಿ ಜನವಸತಿ ಇತ್ತೆಂದು ಹೇಳಬೇಕಾಗುತ್ತದೆ. ಹಾಗೆ ಹೇಳುವುದಾದರೆ 'ಚಿಕ್ಕಬೆಟ್ಟ' ಹಾಗೂ 'ದೊಡ್ಡಬೆಟ್ಟ' ಶಬ್ದಗಳು ಅಂಕಿತ ನಾಮಗಳು (ಅನ್ವರ್ಥಕ ನಾಮಗಳೂ ಸಹ !) ಅಡ್ಡ ಬರುತ್ತವೆ.

4. *Ep.Car.*, Vol. II (R 1973), No. 99, p. 70.

5. ಇಲ್ಲಿನ ಸಂಗತಿಗಳು ಇತ್ತೀಚಿಗೆ ಪರಿಷ್ಕರಣಗೊಂಡಿವೆ. *Ep.Car.*, Vol. II (R 1973), No. 38, p. 14. ಅಳಿಸಿ ಹೋಗಿರುವ ಒಂದು ಅಕ್ಷರವನ್ನು 'ಣ' ಎಂದೇ ತುಂಬಿಕೊಂಡು ಓದಬೇಕಾಗುತ್ತದೆ.

6. ಅದೇ ಶಾಸನ ಸಂಪುಟ, ಶಾಸನ ಸಂ. 114, ಪು.74.

7. *Ep.Car.*, Vol. IV (R 1977), K.R.Pet. No. 50, p. 37.

8. *Ep.Car.*, Vol. II (R 1973), No. 352, pp. 203-204.

9. *ಅದೇ,* ಶಾಸನ ಸಂ. 357, 441, 445-446, 467, 475.

10. *Ep.Car.*, Vol. II (1973), No. 447, pp. 273-74; ರಾಜಶಾಸನಗಳಾಗಿದ್ದರೆ ಅವುಗಳನ್ನು ತುಂಬಾ ಚೆನ್ನಾಗಿ ಕೆತ್ತಿಸಿ ನೆಡಿಸುತ್ತಿದ್ದರು.

11. *Ep.Car.*, Vol. II (1973), No. 446, p. 273. ಈ ಶಾಸನದ ಕಾಲ: ಸಂವತ್ಸರ ತಾರಣ, ಭಾದ್ರಪದ ಬ. 10, ಸೋಮವಾರ. ಇದು ಕ್ರಿ.ಶ. 1414 ಆಗಸ್ಟ 30ಕ್ಕೆ ಹೊಂದುತ್ತದೆ. ಆದರೆ ಅಂದು ಸೋಮವಾರ ಇರದೆ ಶನಿವಾರ ಇದ್ದಿತು.

12. (a) *Ep.Car.*, Vol. II (1973), No. 447, pp. 273-74. ಶಕವರ್ಷ ಕ್ಷಯ, ನಿಜ ವೈಶಾಖ ಬಹುಳ 14, ಮಂಗಳವಾರ - ಇಲ್ಲಿಗೆ ಶಾಸನ ನಿಂತು ಬಿಟ್ಟದೆ ! ಇದಕ್ಕೆ ಎರಡು ಕಾರಣಗಳನ್ನು ಹೇಳಬಹುದು:

    (1) ಬರೆಯಲಿಕ್ಕೆ ಕಲ್ಲಿನಲ್ಲಿ ಹೆಚ್ಚಿಗೆ ಜಾಗವೇ ಇಲ್ಲ - ಇನ್ನು

    (2) ಬರೆಯುವ ಪಠ್ಯ (text) ಪದ್ಯವಾಗಿದ್ದು ಪ್ರಸ್ತುತ ಶಾಸನದಲ್ಲಿ ಎರಡನೆಯ ಪಂಕ್ತಿಯಲ್ಲಿ ಛಂದೋಭಂಗವಾಗಿದೆ.

    (b) ಹೇಮಕೂಟದಲ್ಲಿ ಒಂದು ಚಿಕ್ಕ ಶಾಸನ ಸಿಕ್ಕಿದೆಯೆಂದು ಡಾ. ಸಿ.ಎಸ್. ಪಾಟೀಲರು ತಿಳಿಸಿದರು.

13. *Ep.Car.*, Vol. II (1973), No. 445, p. 273.

14. *ಅದೇ,* No. 467, p. 283.

15. (a) *ಅದೇ,* ನೋಡಿ: ಪೀಠಿಕೆ, ಪು. lx; xc.

    (b) *Ep.Car.*, Vol. II (1923, R.N.), Introduction, p. 64.

16. *History of Karnataka* (Dr. P.B. Desai, Dr. S.H. Ritti and Dr. B.R. Gopal), p. 371 (2nd Ed. 1981).

17. *Ep.Car.*, Vol. II (1973), No. 467, p. 283.

18. *ಅದೇ,* ಶಾಸನ ಸಂಖ್ಯೆ: 357, ಪು. 209-10.